ಬುಧವಾರ, ನವೆಂಬರ್ 6, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 307 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂನ ಅಭಿವೃದ್ಧಿಯಲ್ಲಿ ಬಾವಲಿಗಳ ಬುದ್ಧಿಮತ್ತೆ ನೆರವಾಗುತ್ತಿದೆಯಂತೆ



ಆಳ-ಅಗಲ
ಡಿಜಿಟಲ್ ಅರೆಸ್ಟ್ ವಿನೂತನ ಸುಲಿಗೆ
ಕೆನಡಾದಲ್ಲಿ ತೀವ್ರಗಾಮಿಗಳಿಗೆ ರಾಜಕೀಯ ನೆಲೆ: ಜೈಶಂಕರ್ 7
ಮದರಸಾ ಕಾಯ್ದೆ ನ್ಯಾಯಸಮ್ಮತ: 'ಸುಪ್ರೀಂ' 11

ಸೆನ್ಸೆಕ್ಸ್	ನಿಫ್ಟಿ	₹/$
79,476	24,213	84.09



ಸುರಂಗ ರಸ್ತೆ: ಜನವರಿಗೆ ಟೆಂಡರ್

18 ಕಿ.ಮೀ ಉದ್ದ
ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ

₹750 ಕೋಟಿ
ಪ್ರತಿ ಕಿ.ಮೀ ಸುರಂಗ ರಸ್ತೆಗೆ ವೆಚ್ಚ

2025ರ ಜನವರಿ
ಸುರಂಗ ರಸ್ತೆ ನಿರ್ಮಾಣಕ್ಕೆ ಟೆಂಡರ್ ಆಹ್ವಾನ

ಬೆಂಗಳೂರು: ನಗರದಲ್ಲಿ ಸುರಂಗ ರಸ್ತೆ ನಿರ್ಮಾಣ ಮಾಡಲು ಚೀನಾ ತಯಾರಿಕೆಯ ಸುರಂಗ ಕೊರೆಯುವ ಯಂತ್ರಗಳನ್ನು (ಟಿಬಿಎಂ) ಬಳಸಲು ಉದ್ದೇಶಿಸಲಾಗಿದ್ದು, ಜನವರಿಯಲ್ಲಿ ಯೋಜನೆಗೆ ಟೆಂಡರ್ ಆಹ್ವಾನಿಸಲು ಬಿಬಿಎಂಪಿ ಯೋಜಿಸಿದೆ. ಅಲ್ಲದೆ, ಯೋಜನೆ ವೆಚ್ಚವೂ ಅಧಿಕವಾಗಿದೆ.

ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೆ ಆರು ಪಥಗಳ ಸುರಂಗ ರಸ್ತೆಯನ್ನು ನಿರ್ಮಿಸುವ ಯೋಜನೆ ಹೊಂದಿದ್ದು, ಇದರಲ್ಲಿ ಎರಡು ರಸ್ತೆಗಳನ್ನು ಬಿಎಂಟಿಸಿ ಬಸ್‌ಗಳಿಗೇ ಮೀಸಲಿಡಲು ನಿರ್ಧರಿಸಲಾಗಿದೆ. ಎಲೆಕ್ಟ್ರಿಕ್ ಬಸ್‌ಗಳಿಗೆ ಮಾತ್ರ ಸಂಚರಿಸಲು ಅವಕಾಶ ನೀಡಲಾಗುತ್ತದೆ. ಅಲ್ಲದೆ, ವಾಣಿಜ್ಯ ಉದ್ದೇಶ ಮಳಿಗೆಗಳು, ಮಾಲ್‌ಗಳು, ಬಹುಮಹಡಿ ಪಾರ್ಕಿಂಗ್ ಕಟ್ಟಡಗಳನ್ನೂ ನಿರ್ಮಿಸುವ ಉದ್ದೇಶ ಹೊಂದಲಾಗಿದೆ.

ಒಂದು ಕಿ.ಮೀ ಸುರಂಗ ರಸ್ತೆ ₹450 ಕೋಟಿ ವೆಚ್ಚವಾಗಬಹುದು ಎಂದು ಈ ಹಿಂದೆ ಯೋಜಿಸಲಾಗಿತ್ತು. ಆದರೆ, ಬಿಬಿಎಂಪಿ ಮೂರು ತಿಂಗಳಲ್ಲಿ ಪೂರ್ಣಗೊಳಿಸಿರುವ ಡಿಪಿಆರ್ ಪ್ರಕಾರ, ಒಂದು ಕಿ.ಮೀ ಸುರಂಗ ರಸ್ತೆಗೆ ₹600 ಕೋಟಿಯಿಂದ ₹750 ಕೋಟಿವರೆಗೆ ವೆಚ್ಚವಾಗಲಿದೆ.

ಸುರಂಗ ರಸ್ತೆ ಯೋಜನೆಗೆ ಸುಮಾರು 56 ಎಕರೆ ಭೂಸ್ವಾಧೀನದ ಅಗತ್ಯವಿದ್ದು, ಇದರಲ್ಲಿ ಶೇ 50ರಷ್ಟು ಭೂಮಿಯನ್ನು ಮರುಬಳಕೆ ಮಾಡಿಕೊಳ್ಳಲಾಗುತ್ತದೆ. ವಾಣಿಜ್ಯ ಉದ್ದೇಶದ ಜೊತೆಗೆ ಸುರಂಗ ರಸ್ತೆ ಮೇಲಿನ ಸೌಂದರ್ಯೀಕರಣಕ್ಕೆ ಉಪಯೋಗಿಸಿಕೊಳ್ಳಲು ಚಿಂತಿಸಲಾಗಿದೆ.

ಸುರಂಗ ರಸ್ತೆ ಯೋಜನೆಯನ್ನು ನಾವು ಇನ್ನು ಆರು ತಿಂಗಳಲ್ಲಿ ಪ್ರಾರಂಭಿಸಲು ನಿರ್ಧರಿಸಿದ್ದೇವೆ
ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

3Bನೇ ಪುಟ ನೋಡಿ

● ಆರ್. ಮಂಜುನಾಥ್

ನಗರದ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಎರಡು ಬೃಹತ್ ಯೋಜನೆಗಳಿಗೆ ಬಿಬಿಎಂಪಿ ಹಾಗೂ ಬಿಡಿಎ ಅಂತಿಮ ರೂಪ ನೀಡಿವೆ. ಸುರಂಗ ರಸ್ತೆ ಮೂಲಕ ನಗರದ ಕೇಂದ್ರ ಭಾಗದಲ್ಲಿ ಸುಗಮ ಸಂಚಾರಕ್ಕೆ ಬಿಬಿಎಂಪಿ ಅಣಿಯಾಗಿದ್ದರೆ, ಬಹು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಪೆರಿಫೆರಲ್ ವರ್ತುಲ ರಸ್ತೆಗೆ ಹೊಸ ಹೆಸರು ನೀಡಿ, ಯೋಜನೆ ಅನುಷ್ಠಾನಗೊಳಿಸಲು ಬಿಡಿಎ ಸಜ್ಜಾಗಿದೆ.

ಬ್ಯುಸಿನೆಸ್ ಕಾರಿಡಾರ್‌ಗೆ ಹುಡ್ಕೊ ಸಾಲ

ಬೆಂಗಳೂರು: ನಗರದ ಹೊರ ವಲಯದಲ್ಲಿ 73 ಕಿಲೋ ಮೀಟರ್ ಉದ್ದದ 'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್' ನಿರ್ಮಾಣಕ್ಕೆ ಸಂಪೂರ್ಣ ಸಾಲ ನೀಡಲು ಹುಡ್ಕೊ ಸಮ್ಮತಿಸಿದೆ.

ಭೂಸ್ವಾಧೀನದಿಂದಾಗಿಯೇ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಯೋಜನೆಗೆ ಅಂತಿಮ ರೂಪ ನೀಡಲಾಗುತ್ತಿದೆ. ಭೂಸ್ವಾಧೀನಕ್ಕಾಗಿ ವಿಶೇಷ ಪ್ಯಾಕೇಜ್ ರೂಪಿಸಲಾಗುತ್ತಿದ್ದು, ಬಿಡಿಎ ಕಾಯ್ದೆ ಹಾಗೂ ಇತ್ತೀಚಿನ ಭೂಸ್ವಾಧೀನ ಪರಿಹಾರ ಮೊತ್ತದ ಮಧ್ಯೆ ಪರಿಹಾರ ಮೊತ್ತವನ್ನು ನಿಗದಿಪಡಿಸಲು ಯೋಜಿಸಲಾಗುತ್ತಿದೆ.

ಪೆರಿಫೆರಲ್ ವರ್ತುಲ ರಸ್ತೆ ಎನ್ನಲಾಗುತ್ತಿದ್ದ ಯೋಜನೆಯನ್ನು 'ಬೆಂಗಳೂರು ಬ್ಯುಸಿನೆಸ್ ಕಾರಿಡಾರ್' ಎಂದು ಹೆಸರಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲು ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ) ಸ್ಥಾಪಿಸಲಾಗಿದ್ದು, ಅದಕ್ಕೆ ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರು ಅಧ್ಯಕ್ಷರಾಗಿದ್ದಾರೆ.

3Bನೇ ಪುಟ ನೋಡಿ

₹27 ಸಾವಿರ ಕೋಟಿ
ಬ್ಯುಸಿನೆಸ್ ಕಾರಿಡಾರ್ ವೆಚ್ಚ

2,400 ಎಕರೆ
ಭೂಸ್ವಾಧೀನಕ್ಕೆ ಅಂತಿಮ ಅಧಿಸೂಚನೆ

3 ವರ್ಷ
ಯೋಜನೆ ಮುಗಿಸಲು ಗಡುವು

ಎಲ್ಲ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಬ್ಯುಸಿನೆಸ್ ಕಾರಿಡಾರ್‌ಗೆ ಇನ್ನು ಆರು ತಿಂಗಳಲ್ಲಿ ಟೆಂಡರ್ ಕರೆಯಲಾಗುತ್ತದೆ
ಎಲ್.ಕೆ. ಅತೀಕ್, ಅಧ್ಯಕ್ಷ, ಎಸ್‌ಪಿವಿ

ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠದಿಂದ 7:2ರ ಬಹುಮತದ ತೀರ್ಪು

ಖಾಸಗಿ ಸ್ವತ್ತು ಸಮುದಾಯದ್ದಲ್ಲ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಖಾಸಗಿ ಒಡೆತನದಲ್ಲಿರುವ ಎಲ್ಲ ಸಂಪನ್ಮೂಲಗಳನ್ನು ಸಾರ್ವಜನಿಕ ಬಳಕೆಗಾಗಿ ಸರ್ಕಾರ ಸ್ವಾಧೀನಪಡಿಸಿಕೊಳ್ಳುವಂತಿಲ್ಲ. ಆದರೆ, ಸಮುದಾಯದ ವಶದಲ್ಲಿರುವ ಭೌತಿಕ ರೂಪದ ಸಂಪನ್ಮೂಲಗಳನ್ನು ಜನಸಮೂಹದ ಒಳಿತಿಗಾಗಿ ಸ್ವಾಧೀನಕ್ಕೆ ಪಡೆಯಬಹುದು ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು 7:2ರ ಬಹುಮತದ ತೀರ್ಪನ್ನು ಮಂಗಳವಾರ ನೀಡಿದೆ.

ಖಾಸಗಿ ಒಡೆತನದಲ್ಲಿರುವ ಎಲ್ಲ ಸ್ವತ್ತುಗಳನ್ನು ಸಮುದಾಯದ ಭೌತಿಕ ಸಂಪತ್ತು ಎಂಬುದಾಗಿ ಪರಿಗಣಿಸಲಾಗದು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಹೇಳಿದೆ.

'ಈ ವಿಚಾರವಾಗಿ, ಕರ್ನಾಟಕ ಸರ್ಕಾರ ವರ್ಸಸ್ ರಂಗನಾಥ ರೆಡ್ಡಿ ಪ್ರಕರಣದಲ್ಲಿ (1977) ನ್ಯಾಯಮೂರ್ತಿ ಕೃಷ್ಣ ಅಯ್ಯರ್ ನೇತೃತ್ವದ ಪೀಠವು ನೀಡಿದ್ದ ತೀರ್ಪು ನಿರ್ದಿಷ್ಟವಾದ ಆರ್ಥಿಕ ಮತ್ತು ಸಮಾಜವಾದಿ ಸಿದ್ಧಾಂತದಿಂದ ಪ್ರೇರಿತವಾಗಿತ್ತು' ಎಂದು ಪೀಠ ಅಭಿಪ್ರಾಯಪಟ್ಟಿದೆ.

'ಖಾಸಗಿ ಒಡೆತನದಲ್ಲಿರುವ ಎಲ್ಲ ಸಂಪನ್ಮೂಲಗಳನ್ನು ಸರ್ಕಾರ ಸ್ವಾಧೀನಕ್ಕೆ ಪಡೆದುಕೊಳ್ಳಬಹುದು' ಎಂದು ನ್ಯಾಯಮೂರ್ತಿ ಅಯ್ಯರ್ ನೇತೃತ್ವದ ಪೀಠವು ಆಗ ತೀರ್ಪು ನೀಡಿತ್ತು.

ಪೀಠದಲ್ಲಿದ್ದ ಇತರ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್, ಜೆ.ಬಿ. ಪರ್ದೀವಾಲಾ, ಮನೋಜ್ ಮಿಶ್ರಾ, ರಾಜೇಶ್ ಬಿಂದಲ್, ಸತೀಶ್ಚಂದ್ರ ಶರ್ಮಾ ಹಾಗೂ ಆಗಸ್ಟಿನ್ ಜಾರ್ಜ್ ಮಸೀಹ್ ಅವರ ಪರವಾಗಿ ಬಹುಮತದ ತೀರ್ಪನ್ನು ಸಿಜೆಐ ಚಂದ್ರಚೂಡ್ ಬರೆದಿದ್ದಾರೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನಾ ಹಾಗೂ ಸುಧಾಂಶು ಧುಲಿಯಾ ಅವರು ಭಿನ್ನತೀರ್ಪು ನೀಡಿದ್ದಾರೆ.

11ನೇ ಪುಟ ನೋಡಿ

ನ್ಯಾಯಪೀಠ ಹೇಳಿದ್ದೇನು?

- ಎಲ್ಲ ಖಾಸಗಿ ಸ್ವತ್ತುಗಳು ಸಮುದಾಯದ ಸಂಪನ್ಮೂಲಗಳು ಎಂದು ಹೇಳುವುದು ಸರಿಯಲ್ಲ
- ಆರ್ಥಿಕ ನೀತಿಯೊಂದರ ನಿರೂಪಣೆ ಸುಪ್ರೀಂ ಕೋರ್ಟ್‌ನ ಕೆಲಸವಲ್ಲ. ಜನರೇ ಆಯ್ಕೆ ಮಾಡಿದ ಸರ್ಕಾರ ವಿವಿಧ ಆರ್ಥಿಕ ನೀತಿಯನ್ನು ಅಳವಡಿಸಿಕೊಂಡಿದೆ
- ವ್ಯಕ್ತಿಗಳು ಹೊಂದಿರುವ ಎಲ್ಲ ಸಂಪನ್ಮೂಲಗಳನ್ನು ಸಮುದಾಯದ ಸ್ವತ್ತುಗಳು ಎಂದು ಪರಿಗಣಿಸುವುದು ಸಂವಿಧಾನದ ತತ್ವವನ್ನೇ ಬುಡಮೇಲು ಮಾಡುತ್ತದೆ
- 1960 ಹಾಗೂ 1970ರಲ್ಲಿ ಸಮಾಜವಾದಿ ಅರ್ಥ ವ್ಯವಸ್ಥೆಗೆ ಒತ್ತು ನೀಡಲಾಗಿತ್ತು. ಆದರೆ, 1990ರಿಂದ ಸ್ಥಿತ್ಯಂತರ ಕಂಡುಬಂದಿದ್ದು, ಮಾರುಕಟ್ಟೆ ಬಗ್ಗೆ ಒಲವು ಹೊಂದಿದ ಅರ್ಥವ್ಯವಸ್ಥೆ ಪ್ರಾಮುಖ್ಯ ಪಡೆದಿದೆ
- ಕಳೆದ 30 ವರ್ಷಗಳಿಂದೀಚೆಗೆ ದೇಶ ಅಳವಡಿಸಿಕೊಂಡಿರುವ ಕ್ರಿಯಾಶೀಲ ಆರ್ಥಿಕ ನೀತಿಯು ಭಾರತವನ್ನು ವಿಶ್ವದಲ್ಲಿಯೇ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ಶಕ್ತಿಯನ್ನಾಗಿ ರೂಪಿಸಿದೆ

'ಅಯ್ಯರ್ ಕುರಿತ ಹೇಳಿಕೆ ಅನಪೇಕ್ಷಿತ'

ತೀರ್ಪು ಪ್ರಕಟಿಸುವ ವೇಳೆ, ಹಿಂದಿನ ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಕುರಿತು ಸಿಜೆಐ ಚಂದ್ರಚೂಡ್ ನೀಡಿದ ಹೇಳಿಕೆಗೆ ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನಾ ಹಾಗೂ ಸುಧಾಂಶು ಧುಲಿಯಾ ಅವರು ಆಕ್ಷೇಪ ವ್ಯಕ್ತಪಡಿಸಿದರು.

'ಸಿಜೆಐ ಅವರ ಅಭಿಪ್ರಾಯಗಳು ಅನಪೇಕ್ಷಿತ ಹಾಗೂ ಸಮರ್ಥನೀಯವಲ್ಲ' ಎಂದು ನ್ಯಾಯಮೂರ್ತಿ ನಾಗರತ್ನಾ ಹೇಳಿದರೆ, 'ಸಿಜೆಐ ಅವರು ಇಂಥ ಹೇಳಿಕೆಯನ್ನು ತಪ್ಪಿಸಬಹುದಿತ್ತು' ಎಂದು ನ್ಯಾಯಮೂರ್ತಿ ಧುಲಿಯಾ ಹೇಳಿದರು.

'ಖಾಸಗಿ ಸ್ವತ್ತುಗಳ ಪ್ರಕರಣ ಕುರಿತು ಆಗ ತೀರ್ಪು ನೀಡಿದ್ದ ನ್ಯಾಯಮೂರ್ತಿ ಅಯ್ಯರ್ ಅವರ ಸಿದ್ಧಾಂತವು ವಿಶಾಲವಾದ ಮತ್ತು ಹೊಂದಿಕೊಳ್ಳಬಲ್ಲ ಗುಣಲಕ್ಷಣ ಹೊಂದಿರುವ ಸಂವಿಧಾನಕ್ಕೆ ಅನ್ಯಾಯ ಮಾಡಿತ್ತು' ಎಂದು ಸಿಜೆಐ ಹೇಳಿದ್ದರು.

ನಾಗರತ್ನಾ ಅವರು 130 ಪುಟಗಳ ಪ್ರತ್ಯೇಕ ತೀರ್ಪು ನೀಡಿದ್ದು, 'ಆರ್ಥಿಕ ನೀತಿ ನಿರೂಪಣೆ ಮಾಡುವುದು ನ್ಯಾಯಾಲಯದ ಕೆಲಸವಲ್ಲ. ಆದರೆ, ಆರ್ಥಿಕ ಪ್ರಜಾಪ್ರಭುತ್ವವೊಂದರ ಬುನಾದಿಗೆ ಬೇಕಾದಂತಹ ಚೌಕಟ್ಟು ರಚನೆಗೆ ನೆರವು ನೀಡುವುದಾಗಿದೆ. ಹೀಗಾಗಿ ನ್ಯಾಯಮೂರ್ತಿ ಅಯ್ಯರ್ ಅವರ ಸಿದ್ಧಾಂತವು ಸಂವಿಧಾನಕ್ಕೆ ಅಪಚಾರವೆಸಗಿಲ್ಲ' ಎಂದು ಹೇಳಿದ್ದಾರೆ.

11ನೇ ಪುಟ ನೋಡಿ

ಓಡು ಓಡು ಓಡಲೇ...
ಹಾವೇರಿ ತಾಲ್ಲೂಕಿನ ಕೇರಿಮತ್ತಿಹಳ್ಳಿ ಗ್ರಾಮದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಮಂಗಳವಾರ ಆಯೋಜಿಸಲಾಗಿದ್ದ ಕೊಬ್ಬರಿ ಹೋರಿ ಬೆದರಿಸುವ ಸ್ಪರ್ಧೆಯಲ್ಲಿ ಓಡುತ್ತಿದ್ದ ಹೋರಿಯನ್ನು ಹಿಡಿಯಲು ಯುವಕರು ಹರಸಾಹಸಪಟ್ಟರು
ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ರಾಜ್ಯ ಮದ್ಯ ಮಾರಾಟಗಾರರ ಸಂಘದ ಆರೋಪ

'ಅಬಕಾರಿ ಇಲಾಖೆ ಭ್ರಷ್ಟರ ಕೂಪ'

ಪ್ರಜಾವಾಣಿ ವಾರ್ತೆ

ಮೈಸೂರು: 'ಅಬಕಾರಿ ಇಲಾಖೆಯಲ್ಲಿ ನೂರಾರು ಕೋಟಿ ರೂಪಾಯಿ ಲೆಕ್ಕದಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದು, ಸಚಿವ ಆರ್.ಬಿ. ತಿಮ್ಮಾಪುರ ಇದರ ಮೂಲ ಪುರುಷ. ಇಲಾಖೆಯ ಅಧಿಕಾರಿಗಳೇ ಈ ಮಾತು ಹೇಳುತ್ತಿದ್ದಾರೆ' ಎಂದು ರಾಜ್ಯ ಮದ್ಯ ಮಾರಾಟಗಾರರ ಸಂಘದ ಅಧ್ಯಕ್ಷ ಗುರುಸ್ವಾಮಿ ದೂರಿದರು.

ಇಲ್ಲಿ ಮಂಗಳವಾರ ಮಾತನಾಡಿದ ಅವರು, 'ಸಚಿವರಿಗೆ ಲಂಚ ಕೊಟ್ಟು ಬಂದಿದ್ದೇವೆ ಎಂದು ಅಧಿಕಾರಿಗಳೇ ನೇರವಾಗಿ ಹೇಳುತ್ತಿದ್ದಾರೆ. ಸಚಿವರಿಗೆ, ಆಯುಕ್ತರಿಗೆ, ಸೂಪರಿಂಟೆಂಡೆಂಟ್, ಸ್ಕ್ವಾಡ್, ಸಿಬ್ಬಂದಿಗೆ ಇಂತಿಷ್ಟು ಲಂಚ ನಿಗದಿ ಮಾಡಿಕೊಂಡಿದ್ದಾರೆ' ಎಂದರು.

'ಪ್ರತಿ ಅಂಗಡಿಯಿಂದ ಪ್ರತಿ ತಿಂಗಳಿಗೆ ಅಧಿಕಾರಿಗಳಿಗೆ ಇಂತಿಷ್ಟು ಎಂದು ಹಣ ಕೊಡಬೇಕಿದೆ. ಲೈಸೆನ್ಸ್ ನವೀಕರಣ ಇಲ್ಲವೇ ವರ್ಗಾವಣೆ, ಹೆಸರು ಬದಲಾವಣೆಗೂ ಹಣ ಪಡೆಯಲಾಗುತ್ತಿದೆ. ಇಲಾಖೆಯಲ್ಲಿ ಮೊದಲಿನಿಂದಲೂ ಭ್ರಷ್ಟಾಚಾರ ಇದೆಯಾದರೂ ಇತ್ತೀಚಿನ ದಿನಗಳಲ್ಲಿ ಇದು ವಿಪರೀತವಾಗಿದೆ. ಇದೆಲ್ಲದರ ಪರಿಣಾಮ ಪರವಾನಗಿದಾರರಿಗೆ ತೊಂದರೆ ಎದುರಾಗಿದೆ. ಸನ್ನದುದಾರರು ಯಾರೂ ಬದುಕುವ ಪರಿಸ್ಥಿತಿಯಲ್ಲಿ ಇಲ್ಲ' ಎಂದು ದೂರಿದರು.

'ಅಬಕಾರಿ ಇಲಾಖೆ ಭ್ರಷ್ಟಾಚಾರದ ಬಗ್ಗೆ ಅಜಿತ್ ಎಂಬುವರು ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಈ ಹಗರಣದಲ್ಲಿ ಸಚಿವರ ಪಿ.ಎ., ಪಿ.ಎಸ್.ಗಳೂ ಇದ್ದಾರೆ. ಎಲ್ಲರೂ ಒಂದೇ ಕಡೆ ಸೇರಿ ಇದನ್ನು ನಡೆಸುತ್ತಿದ್ದಾರೆ. ಸಚಿವರು ಲಂಚ ಪಡೆದ ಪರಿಣಾಮ, ಅಧಿಕಾರಿಗಳು ಸಚಿವರ ಹೆಸರು ಹೇಳಿಕೊಂಡು ಇನ್ನಷ್ಟು ಲಂಚ ಪಡೆಯುತ್ತಿದ್ದಾರೆ. ಇದನ್ನು ಪ್ರಶ್ನಿಸಿದರೆ ಪರವಾನಗಿ ವಿಚಾರದಲ್ಲಿ, ಸ್ಟಾಕ್ ವಿಚಾರದಲ್ಲಿ ನಮಗೆ ತೊಂದರೆ ನೀಡುತ್ತಾರೆ' ಎಂದರು.

20ರಂದು ಬಂದ್‌ಗೆ ಕರೆ: 'ಇಲಾಖೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ರಾಜ್ಯ ಸರ್ಕಾರಕ್ಕೆ ದೂರು ನೀಡಿದ್ದೇವೆ. ನ.20ರಂದು ಮದ್ಯದಂಗಡಿಗಳ ಬಂದ್‌ಗೆ ತೀರ್ಮಾನಿಸಿದ್ದೇವೆ. ಅಷ್ಟರೊಳಗೆ ಸಿದ್ದರಾಮಯ್ಯ ನಮ್ಮ ಸಮಸ್ಯೆಗಳನ್ನು ಸರಿಪಡಿಸಬೇಕು. ಇಲ್ಲದಿದ್ದರೆ ಬಂದ್ ನಡೆಯಲಿದೆ. ಸಂಘವು ಮುಂದಿನ ದಿನಗಳಲ್ಲಿ ರಾಜ್ಯಪಾಲರು ಹಾಗೂ ಸಿಬಿಐಗೆ ದೂರು ನೀಡಲಿದೆ' ಎಂದರು.

ವರ್ಗಾವಣೆ ಮಾಡಿಲ್ಲ: ತಿಮ್ಮಾಪುರ

ಹುಬ್ಬಳ್ಳಿ: 'ಅಬಕಾರಿ ಇಲಾಖೆಯಲ್ಲಿ ಯಾವುದೇ ವರ್ಗಾವಣೆ ಮಾಡಿಲ್ಲ. ಅಧಿಕಾರಿಗಳಿಗೆ ಬಡ್ತಿ ನೀಡಲಾಗಿದೆ. ಅದು ಸಹಜ ಪ್ರಕ್ರಿಯೆ' ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

ಇಲಾಖೆಯ ಹಿರಿಯ ಅಧಿಕಾರಿಗಳ ವರ್ಗಾವಣೆಗೆ ಕೋಟ್ಯಂತರ ರೂಪಾಯಿ ಹಣ ಪಡೆದ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಅವರು, 'ನಾನು ಕೋಟ್ಯಂತರ ರೂಪಾಯಿ ಹಣ ನೋಡಿಲ್ಲ. ಯಾರಾದರೂ ಇದ್ದರೆ ತೋರಿಸಿ' ಎಂದರು.

ಮುಡಾ ಪ್ರಕರಣ: ಸಿಬಿಐ ತನಿಖೆ ಕೋರಿದ ಅರ್ಜಿ

ಸಿ.ಎಂ.ಗೆ ನೋಟಿಸ್: ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧದ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಹಾಗೂ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಮೈಸೂರಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸ್ನೇಹಮಯಿ ಕೃಷ್ಣ ಪರ ಹಾಜರಾಗಿದ್ದ ಹಿರಿಯ ವಕೀಲ ಕೆ.ಜಿ. ರಾಘವನ್, 'ಈ ಪ್ರಕರಣದ ಫಲಿತಾಂಶ ಅಂತಿಮವಾಗಿ ಏನೇ ಹೊರಹೊಮ್ಮಿದರೂ ಸರಿಯೇ, ಆದರೆ, ಸಾರ್ವಜನಿಕರ ವಿಶ್ವಾಸ ಉಳಿಸಿಕೊಂಡು ತನಿಖೆ ನಡೆಸಬೇಕಾದ ಜರೂರತ್ತಿದೆ. ಆದ್ದರಿಂದ, ಪ್ರಕರಣದ ತನಿಖೆಯನ್ನು ಸಿಬಿಐ ತೆಕ್ಕೆಗೆ ವರ್ಗಾಯಿಸಲು ಆದೇಶಿಸಬೇಕು' ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಪ್ರಕರಣದ ಪ್ರತಿವಾದಿಗಳಾದ ಕೇಂದ್ರ ಗೃಹ ಸಚಿವಾಲಯದ ಕಾರ್ಯದರ್ಶಿ, ರಾಜ್ಯ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಸಿಬಿಐ ನಿರ್ದೇಶಕ, ಮೈಸೂರು ಜಿಲ್ಲಾ ಲೋಕಾಯುಕ್ತ ಎಸ್‌ಪಿ, ರಾಜ್ಯ ಡಿಜಿ–ಐಜಿಪಿ, ಲೋಕಾಯುಕ್ತ ಎಡಿಜಿಪಿ, ವಿಜಯನಗರ ಪೊಲೀಸ್ ಇನ್‌ಸ್ಪೆಕ್ಟರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ.ಪಾರ್ವತಿ, ಮಲ್ಲಿಕಾರ್ಜುನ ಸ್ವಾಮಿ ಮತ್ತು ಜೆ.ದೇವರಾಜು ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

'ಪ್ರಕರಣಕ್ಕೆ ಸಂಬಂಧಿಸಿ ಲೋಕಾಯುಕ್ತ ಇದೇ 25ರವರೆಗೆ ನಡೆಸುವ ತನಿಖೆಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ಲೋಕಾಯುಕ್ತಕ್ಕೆ ತಾಕೀತು ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.

ಸಿಬಿಐ ಪರ ಪಿ.ಪ್ರಸನ್ನ ಕುಮಾರ್, ರಾಜ್ಯ ಸರ್ಕಾರದ ಪರ, ರಾಜ್ಯದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ನೋಟಿಸ್ ಪಡೆದರು. ಪ್ರಕರಣದ ಮೊದಲ ಆರೋಪಿ ಸಿದ್ದರಾಮಯ್ಯ ಅವರನ್ನು ಹೊರತುಪಡಿಸಿ ಉಳಿದೆಲ್ಲಾ ಆರೋಪಿಗಳಿಗೆ ತುರ್ತು ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ.

ಸಿಎಂ ವಿಚಾರಣೆ ಇಂದು: ಬಂದೋಬಸ್ತ್

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಡಾ ಪ್ರಕರಣದಲ್ಲಿ ಬುಧವಾರ (ನ.6) ಇಲ್ಲಿನ ಲೋಕಾಯುಕ್ತ ಎಸ್.ಪಿ. ಕಚೇರಿಯಲ್ಲಿ ವಿಚಾರಣೆಗೆ ಹಾಜರಾಗಲಿದ್ದು, ಕಚೇರಿ ಸುತ್ತಮುತ್ತ ಪೊಲೀಸರು ಬಂದೋಬಸ್ತ್ ಕಲ್ಪಿಸಿದ್ದಾರೆ.

ಅವರು ಬೆಳಿಗ್ಗೆ 9.30ಕ್ಕೆ ನಗರಕ್ಕೆ ಬರಲಿದ್ದಾರೆ. ಲೋಕಾಯುಕ್ತ ಎಸ್.ಪಿ. ಟಿ.ಜೆ. ಉದೇಶ್ ನೇತೃತ್ವದ ತಂಡವು ಅವರನ್ನು ವಿಚಾರಣೆ ನಡೆಸಲಿದೆ.

ವಿಚಾರಣೆಯ ಕಾರಣ ಡಿ. ಸುಬ್ಬಯ್ಯ ರಸ್ತೆಯ ಲೋಕಾಯುಕ್ತ ಕಚೇರಿ ಸುತ್ತಮುತ್ತ ಪೊಲೀಸರು ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದಾರೆ. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ದೇವರಾಜ ಪೊಲೀಸ್ ಠಾಣೆಯಲ್ಲಿ ಅಧಿಕಾರಿಗಳ ಜೊತೆ ಮಂಗಳವಾರ ಸಂಜೆ ಸಭೆ ನಡೆಸಿ, ಬಂದೋಬಸ್ತ್ ವ್ಯವಸ್ಥೆಯನ್ನು ಪರಿಶೀಲಿಸಿದರು.

ಎಚ್‌ಡಿಕೆ, ನಿಖಿಲ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತ ವಿಶೇಷ ತನಿಖಾ ದಳದ (ಎಸ್‌ಐಟಿ) ಮುಖ್ಯಸ್ಥ, ಎಡಿಜಿಪಿ ಚಂದ್ರಶೇಖರ್ ಅವರಿಗೆ ಬೆದರಿಕೆಯೊಡ್ಡಿದ ಆರೋಪದ ಅಡಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ಅವರ ವಿರುದ್ಧ ಸಂಜಯನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಚಂದ್ರಶೇಖರ್ ಅವರು ಹಿಂದೆ ಮೂವರ ವಿರುದ್ಧ ದೂರು ಸಲ್ಲಿಸಿದ್ದರು. ಆಗ ಪೊಲೀಸರು ಎನ್‌ಸಿಆರ್ ದಾಖಲಿಸಿಕೊಂಡಿದ್ದರು. 42ನೇ ಎಸಿಎಂಎಂ ನ್ಯಾಯಾಲಯ ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಆದೇಶಿಸಿದ ಬೆನ್ನಲ್ಲೇ ಎಫ್‌ಐಆರ್ ದಾಖಲಾಗಿದೆ.

ಕುಮಾರಸ್ವಾಮಿ

ನಿಖಿಲ್

ಸುರೇಶ್ ಬಾಬು

5ನೇ ಪುಟ ನೋಡಿ

ನಾನು ಸುದ್ದಿಗೋಷ್ಠಿ ಮಾಡಿದೆ ಎಂದು, ನಿಖಿಲ್ ಅದಕ್ಕೆ ಪೂರಕವಾಗಿ ಹೇಳಿಕೆ ನೀಡಿದರೆಂದು ದಾಖಲಿಸಿರುವ ಎಫ್‌ಐಆರ್ ಹಾಸ್ಯಾಸ್ಪದ, ದುರುದ್ದೇಶಪೂರಿತ. ಇಂತಹ ನೂರು ಎಫ್‌ಐಆರ್ ದಾಖಲಾದರೂ ಧೃತಿಗೆಡಲ್ಲ
ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

'ನಿರ್ಮಲ ತುಂಗಭದ್ರಾ' ಅಭಿಯಾನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಶೃಂಗೇರಿ: ತುಂಗಾ ಮತ್ತು ಭದ್ರಾ ನದಿಗಳ ಒಡಲು ಮಲಿನಗೊಳ್ಳುತ್ತಿರುವುದರ ವಿರುದ್ಧ ಜನಜಾಗೃತಿ ಮೂಡಿಸಲು ಏರ್ಪಡಿಸಿರುವ 'ನಿರ್ಮಲ ತುಂಗಭದ್ರಾ ಅಭಿಯಾನ'ದ ಅಂಗವಾಗಿ ಬುಧವಾರ (ನ.6) ಶೃಂಗೇರಿ ಶಾರದಾ ಪೀಠದಿಂದ ಪಾದಯಾತ್ರೆ ಪ್ರಾರಂಭಗೊಳ್ಳಲಿದೆ.

ಈ ಅಭಿಯಾನದ ಮೊದಲ ಹಂತವು ನ.14ರಂದು ದಾವಣಗೆರೆ ಜಿಲ್ಲೆಯ ಹರಿಹರದಲ್ಲಿರುವ ತುಂಗಭದ್ರಾ ನದಿ ದಡದಲ್ಲಿ ಮುಕ್ತಾಯವಾಗಲಿದ್ದು, ನ.15ರಂದು ಅಲ್ಲಿ ಬಹಿರಂಗ ಸಮಾವೇಶ ನಡೆಯಲಿದೆ.

ಎರಡನೇ ಹಂತದಲ್ಲಿ ಕೊಪ್ಪಳ ಜಿಲ್ಲೆಯ ಕಿಷ್ಕಿಂದೆವರೆಗೆ ಪಾದಯಾತ್ರೆ ನಡೆಸಲಾಗುವುದು. ಎರಡೂ ಹಂತಗಳಲ್ಲಿ ಪಾದಯಾತ್ರಿಕರು 430 ಕಿ.ಮೀ. ಕ್ರಮಿಸಲಿದ್ದಾರೆ. ಬುಧವಾರ ಬೆಳಿಗ್ಗೆ 9 ಗಂಟೆಗೆ ಶಾರದಾ ಪೀಠದ ಭಾರತೀತೀರ್ಥ ಸ್ವಾಮೀಜಿ ಪಾದಯಾತ್ರೆಗೆ ಚಾಲನೆ ನೀಡುವರು ಎಂದು ಅಭಿಯಾನದ ಮುಖಂಡ ಎ.ಎಸ್. ನಯನ ತಿಳಿಸಿದರು.

ಅಭಿಯಾನದ ಅಂಗವಾಗಿ ಪಟ್ಟಣದ ವಿ.ಆರ್. ಗೌರೀಶಂಕರ ಸಭಾಂಗಣದಲ್ಲಿ ಜನಜಾಗೃತಿ ಸಭೆಯು ಶಾಸಕ ಟಿ.ಡಿ. ರಾಜೇಗೌಡರ ಅಧ್ಯಕ್ಷತೆ ನಡೆಯಲಿದೆ. ಅಭಿಯಾನದ ಮೂಲಕ ನದಿಯ ಶುದ್ಧತೆ ಮತ್ತು ಪಾವಿತ್ರ್ಯ ಕಾಪಾಡಲು ಜಾಗೃತಿ ಮೂಡಿಸಲಾಗುವುದು ಎಂದರು.

ಮಾದಾವರಕ್ಕೆ ಮೆಟ್ರೊ ಕೇಂದ್ರ ಅಸ್ತು 3B
ಉಪಚುನಾವಣೆ ಸಿ.ಎಂ–ಡಿಸಿಎಂ ಪ್ರಚಾರ 5
ಗೋಧಿ ಹಿಟ್ಟು ₹2.50 ತುಟ್ಟಿ, ಅಕ್ಕಿ ₹5 ತುಟ್ಟಿ 10

ಚಿನಕುರುಳಿ
ಪ್ರಕಾಶ್ ಶೆಟ್ಟಿ

ಕಚೇರಿಯಲ್ಲೇ ಎಸ್‌ಡಿಎ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ತಹಶೀಲ್ದಾರ್ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ರುದ್ರಣ್ಣ ಯಡವಣ್ಣವರ (35) ಅವರುಮಂಗಳವಾರ ಬೆಳಿಗ್ಗೆ ತಹಶೀಲ್ದಾರ್ ಮೇಜಿನ ಎದುರೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರುದ್ರಣ್ಣ

'ನನ್ನ ಸಾವಿಗೆ ತಹಶೀಲ್ದಾರ್ ಬಸವರಾಜ ನಾಗರಾಳ, ಇನ್ನೊಬ್ಬ ಅಧಿಕಾರಿ ಅಶೋಕ ಕಬ್ಬಲಿಗೇರ ಮತ್ತು ಸೋಮು ಎಂಬ ವ್ಯಕ್ತಿಯೇ ನೇರ ಕಾರಣ. ನಮ್ಮ ಕಚೇರಿಯಲ್ಲಿ ತುಂಬ ಅನ್ಯಾಯ ನಡೆಯುತ್ತಿದೆ. ದಯವಿಟ್ಟು ಎಲ್ಲರೂ ಹೋರಾಡಿ' ಎಂದು ರುದ್ರಣ್ಣ ಅವರು ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ವಾಟ್ಸ್‌ಆ್ಯಪ್ ಗ್ರೂಪಿನಲ್ಲಿ ಸಂದೇಶ ಹಾಕಿದ್ದಾರೆ. ಅದರೊಂದಿಗೆ ವರ್ಗಾವಣೆ ಆದೇಶ ಪ್ರತಿಯನ್ನೂ ಹಂಚಿಕೊಂಡಿದ್ದಾರೆ.

6ನೇ ಪುಟ ನೋಡಿ

ಸಚಿವರ ಆಪ್ತ ತಪ್ಪು ಮಾಡಿರಬಹುದು. ಅದಕ್ಕೂ ಸಚಿವರಿಗೂ ಏನು ಸಂಬಂಧ? ಪ್ರಕರಣದ ತನಿಖೆ ನಡೆಯಲಿ. ಸತ್ಯಾಂಶ ಹೊರ ಬರುವವರೆಗೆ ಕಾಯೋಣ
ಸತೀಶ ಜಾರಕಿಹೊಳಿ
ಜಿಲ್ಲಾ ಉಸ್ತುವಾರಿ ಸಚಿವ

ಲಕ್ಷ್ಮಿ ಹೆಬ್ಬಾಳಕರ ವಜಾ ಮಾಡಿ: ಅಶೋಕ

ಬೆಂಗಳೂರು: ರುದ್ರಣ್ಣ ಅವರ ಆತ್ಮಹತ್ಯೆಗೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ವರ್ಗಾವಣೆ ದಂಧೆಯೇ ಕಾರಣ ಎಂಬ ಅನುಮಾನವಿದ್ದು, ಅವರನ್ನು ಸಂಪುಟದಿಂದ ವಜಾ ಮಾಡಿ, ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ.

ಆರ್.ಅಶೋಕ

'ನಿಮ್ಮ ಸರ್ಕಾರದ ಭ್ರಷ್ಟಾಚಾರದ ದಾಹಕ್ಕೆ ಇನ್ನೆಷ್ಟು ಪ್ರಾಮಾಣಿಕ ಅಧಿಕಾರಿಗಳು ಬಲಿಯಾಗಬೇಕು' ಎಂದು ಅವರು 'ಎಕ್ಸ್' ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ. ರುದ್ರಣ್ಣ ಅವರು ಸಾವನ್ನಪ್ಪಿರುವ ಪ್ರಕರಣವೂ ಸೇರಿ ಕಳೆದ 17 ತಿಂಗಳಲ್ಲಿ ಭ್ರಷ್ಟಾಚಾರಕ್ಕೆ ಬಲಿಯಾದ ನಾಲ್ಕನೇ ಪ್ರಕರಣವಾಗಿದೆ. ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ಯಾವ ಪರಾಕಾಷ್ಠೆ ತಲುಪಿದೆ ಎನ್ನುವುಕ್ಕೆ ಮತ್ತೊಂದು ನಿದರ್ಶನ ಎಂದು ಹೇಳಿದ್ದಾರೆ.

ಠಾಣೆ ಎದುರು ಪ್ರತಿಭಟನೆ: ಲಿಂಗಾಯತ ಸಮುದಾಯದ 69 ಮಂದಿ ಬಂಧನ

ಪರಿಶಿಷ್ಟ ಜಾತಿಯವರ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೀದರ್: ಭಾಲ್ಕಿ ತಾಲ್ಲೂಕಿನ ಚಳಕಾಪೂರ ಗ್ರಾಮದ ಹನುಮಾನ ದೇವರ ಜಾತ್ರೆಯಲ್ಲಿ ಭಾಗವಹಿಸಿದ್ದಕ್ಕೆ ಪರಿಶಿಷ್ಟ ಜಾತಿಗೆ ಸೇರಿದ ಹಲವರ ಮೇಲೆ ಹಲ್ಲೆ ನಡೆಸಿ, ನಿಂದಿಸಿದ ಪ್ರಕರಣ ಸಂಬಂಧ ಲಿಂಗಾಯತ ಸಮುದಾಯದ 69 ಜನರನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಭಾನುವಾರ (ನ.3) ಹನುಮಾನ ದೇವರ ಜಾತ್ರಾ ಮಹೋತ್ಸವದ ಮೆರವಣಿಗೆಯ ಸಂದರ್ಭದಲ್ಲಿ ಘಟನೆ ಜರುಗಿದೆ. ಹಲ್ಲೆಗೊಳಗಾದವರ ಜತೆಗೆ ಪರಿಶಿಷ್ಟ ಜನಾಂಗದವರು ಸೋಮವಾರ (ನ.4) ಖಟಕಚಿಂಚೋಳಿ ಠಾಣೆ ಎದುರು ಪ್ರತಿಭಟನೆ ನಡೆಸಿದ ನಂತರ ಲಿಂಗಾಯತ ಸಮುದಾಯದ 73 ಜನರ ವಿರುದ್ಧ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ದೌರ್ಜನ್ಯ ನಡೆಸಿರುವವರ ಬಂಧನಕ್ಕೆ ಆಗ್ರಹಿಸಿ ಪರಿಶಿಷ್ಟ ಜಾತಿಯವರು ಭಾಲ್ಕಿ ತಾಲ್ಲೂಕಿನ ಖಟಕಚಿಂಚೋಳಿ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು

ಈ ಪೈಕಿ 69 ಜನರನ್ನು ಮಂಗಳವಾರ ಬಂಧಿಸಲಾಗಿದೆ.

'ಜಾತ್ರೆಗೆ ಹೋದಾಗ ನಮ್ಮನ್ನು ತಡೆದು ಹೀಯಾಳಿಸಿದ್ದಾರೆ. ನಂತರ ಪರಿಶಿಷ್ಟ ಜಾತಿ ಜನರಿರುವ ಓಣಿಗಳಿಗೆ ನುಗ್ಗಿ ಹಲ್ಲೆ ನಡೆಸಿದ್ದಾರೆ. ಮಹಿಳೆಯರು, ಯುವಕರನ್ನು ಮನಬಂದಂತೆ ಥಳಿಸಿದ್ದರಿಂದ ಗಂಭೀರ ಗಾಯಗಳಾಗಿವೆ' ಎಂದು ದೂರಿನಲ್ಲಿ ಹೇಳಲಾಗಿದೆ.

'ಗ್ರಾಮದೊಳಗೆ ನೀವು ಬರುವಂತಿಲ್ಲ. ಗ್ರಾಮದ ಮಳಿಗೆಗಳಿಗೂ ನೀವು ಬರಬಾರದು ಎಂದು ಹೆದರಿಸಿದ್ದಾರೆ' ಎಂದೂ ಆರೋಪಿದ್ದಾರೆ.

ಘಟನೆ ನಂತರ ಗ್ರಾಮದಲ್ಲಿ ಪರಿಸ್ಥಿತಿ ಉದ್ವಿಗ್ನಗೊಂಡಿದ್ದು ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದೆ.

100 ಜನರ ವಿರುದ್ಧ ಪ್ರತಿ ದೂರು

ಪರಿಶಿಷ್ಟ ಜಾತಿಯವರೇ ಮೊದಲು ಜಗಳಕ್ಕಿಳಿದು ಹಲ್ಲೆ ನಡೆಸಿದ್ದಾರೆ ಎಂದು ಲಿಂಗಾಯತರು ನೂರು ಜನ ಪರಿಶಿಷ್ಟರ ವಿರುದ್ಧ ಪ್ರತಿ ದೂರು ಸಲ್ಲಿಸಿದ್ದಾರೆ.

ಘಟನೆಗೆ ಸಂಬಂಧ ಕರ್ತವ್ಯ ಲೋಪ ಎಸಗಿದ ಆರೋಪದ ಮೇರೆಗೆ ಖಟಕಚಿಂಚೋಳಿ ಠಾಣೆಯ ಪಿಎಸ್‌ಐ ರಾಚಯ್ಯ ಮಠಪತಿ, ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತುಗೊಳಿಸಲಾಗಿದೆ ಎಂದು ಪೊಲೀಸ್ ಮೂಲಗಳು ಖಚಿತಪಡಿಸಿವೆ.

‘ಕನ್ನಡ ಡಿಂಡಿಮ ಉತ್ಸವ’ ಇದೇ 10ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ನಾಡಪರ ಸಂಘಟನೆಗಳ ಸಮ್ಮಿಲನದ ವತಿಯಿಂದ ನವೆಂಬರ್ 10ರಂದು ‘ಕನ್ನಡ ಡಿಂಡಿಮ ಉತ್ಸವ’ವನ್ನು ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂತೋಷ ಭಾರತಿ ಸ್ವಾಮೀಜಿ, ವೈದ್ಯನಾಥೇಶ್ವರ ಸ್ವಾಮಿಯ ರಾಜ ಪಲ್ಲಕ್ಕಿ ಮತ್ತು ಭುವನೇಶ್ವರಿ ದೇವಿಗೆ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪುಷ್ಪಾರ್ಚನೆ ಮಾಡುವ ಮೂಲಕ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ಮೈಸೂರು ದಸರಾ ಉತ್ಸವದಂತೆ ಭುವನೇಶ್ವರಿ ದೇವಿಯ ರಥೋತ್ಸವವೂ ನಡೆಯಲಿದ್ದು, ಬಳ್ಳಾರಿ ರಸ್ತೆಯ ಅರಮನೆ ಮೈದಾನದಿಂದ ವಿಧಾನಸೌಧ-ದವರೆಗೆ ಭುವನೇಶ್ವರಿ ದೇವಿಯ ತೇರನ್ನು ಎಳೆಯಲಾಗುತ್ತದೆ’ ಎಂದರು.

‘ಕುವೆಂಪು ಅವರಿಗೆ ಮರಣೋತ್ತರವಾಗಿ ‘ಡಿಂಡಿಮ ಪ್ರಶಸ್ತಿ’ಯನ್ನು ನೀಡಲಾಗುತ್ತಿದ್ದು, ಕುವೆಂಪು ಅವರ ಪುತ್ರಿ ತಾರಿಣಿ ಚಿದಾನಂದ್ ಅವರು ಪ್ರಶಸ್ತಿ ಸ್ವೀಕರಿಸಲಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕ ಮಂಥರ್ ಗೌಡ, ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ (ಬಿಡಿಎ) ಎನ್.ಎ. ಹ್ಯಾರಿಸ್, ಕಾಡುಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಮ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮನೋವೈದ್ಯಕೀಯ ಸೇವೆ ಪಡೆಯಲು ಸಹಕಾರಿ • ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯಿಂದ ಅಭಿವೃದ್ಧಿ

ಮಾನಸಿಕ ಸ್ವಾಸ್ಥ್ಯಕ್ಕೆ ‘ಟೆಲಿ ಮನಸ್’ ಆ್ಯಪ್

• ವರುಣ ಹೆಗಡೆ

ಬೆಂಗಳೂರು: ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಹಾಗೂ ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಪರಿಹಾರೋಪಾಯ ಕಂಡುಕೊಳ್ಳಲು ಸಹಕಾರಿಯಾದ ‘ಟೆಲಿ ಮನಸ್’ ಸಹಾಯವಾಣಿಯಡಿ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಈ ಸಹಾಯವಾಣಿಯನ್ನು ನಿರ್ವಹಣೆ ಮಾಡುತ್ತಿದ್ದು, ವಿವಿಧ ರೀತಿಯ ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ಉಚಿತವಾಗಿ ಸಮಾಲೋಚನೆ ನಡೆಸಲಾಗುತ್ತಿದೆ. ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿ-ಬಿ) ಈ ಸಹಾಯವಾಣಿಗೆ ತಾಂತ್ರಿಕ ನೆರವು ಒದಗಿಸುತ್ತಿದೆ. ದೇಶದ ವಿವಿಧೆಡೆಯಿಂದ ಈ ಸಹಾಯವಾಣಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುವುದರಿಂದ ಐಐಐಟಿ-ಬಿ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದೆ. ಮಾನಸಿಕ ಯೋಗಕ್ಷೇಮ ಉತ್ತೇಜಿಸುವ ಮತ್ತು ಮಾನಸಿಕ ಆರೋಗ್ಯದ ಸುತ್ತಲಿನ ಮೂಢನಂಬಿಕೆ ಹೋಗಲಾಡಿಸುವ ಗುರಿ ಆ್ಯಪ್ ಅಭಿವೃದ್ಧಿಯ ಹಿಂದಿದೆ.

ಮಾನಸಿಕ ಆರೋಗ್ಯ ಸಮಸ್ಯೆ ಹಾಗೂ ಒತ್ತಡಕ್ಕೆ ಒಳಗಾದವರಿಗೆ ನೆರವಾಗಲು ನಿಮ್ಹಾನ್ಸ್ 2022ರಲ್ಲಿ ‘ಟೆಲಿ ಮನಸ್’ ಉಚಿತ ಸಹಾಯವಾಣಿ ‘14416’ ಪ್ರಾರಂಭಿಸಿತ್ತು. ಈ ಸಹಾಯವಾಣಿಗೆ ಈವರೆಗೆ 15 ಲಕ್ಷಕ್ಕೂ ಅಧಿಕ ಕರೆಗಳು ಬಂದಿವೆ. ವಾರದ ಎಲ್ಲ ದಿನಗಳು 24 ಗಂಟೆಗಳೂ ದೂರವಾಣಿ ಕರೆಗಳನ್ನು 20 ಭಾಷೆಗಳಲ್ಲಿ ಸ್ವೀಕರಿಸಲಾಗುತ್ತಿದೆ. ಆ್ಯಪ್‌ನಲ್ಲಿ ಕೂಡ ದೂರವಾಣಿ ಕರೆಯ ಆಯ್ಕೆ ನೀಡಲಾಗಿದೆ. ಈ ಆ್ಯಪ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ.

ಸಿದ್ಧ ಮಾಹಿತಿ ಲಭ್ಯ: ಆ್ಯಪ್‌ನಲ್ಲಿ ದೂರವಾಣಿ ಸಂಖ್ಯೆ, ಹೆಸರು ಹಾಗೂ ಅಗತ್ಯ ವಿವರವನ್ನು ನಮೂದಿಸಿದ ಬಳಿಕ ವಿವಿಧ ಆಯ್ಕೆಗಳು ತೆರೆದುಕೊಳ್ಳಲಿವೆ. ಮಾನಸಿಕ ಸ್ವಾಸ್ಥ್ಯಕ್ಕೆ ಸಂಬಂಧಿಸಿದಂತೆ ಯೋಗ, ವ್ಯಾಯಾಮ, ಆಹಾರ ಪಥ್ಯ (ಡಯಟ್), ನಿದ್ದೆಗೆ ಸಂಬಂಧಿಸಿದಂತೆ ಅಗತ್ಯ ಸಲಹೆಗಳು ದೊರೆಯಲಿವೆ. ಮಾನಸಿಕ ಸ್ವಾಸ್ಥ್ಯದ ಬಗ್ಗೆ ವಿವರಗಳೂ ಲಭ್ಯವಾಗಲಿವೆ. ಆರ್ಥಿಕ, ಕೌಟುಂಬಿಕ, ಪರೀಕ್ಷೆ ಸೇರಿ ವಿವಿಧ ರೀತಿಯ ಒತ್ತಡಗಳ ನಿರ್ವಹಣೆ ಬಗ್ಗೆಯೂ ಸಲಹೆ ಸೂಚನೆಗಳನ್ನು ನೀಡಲಾಗಿದೆ. ಮಾನಸಿಕ ಅನಾರೋಗ್ಯದ ಲಕ್ಷಣಗಳು ಹಾಗೂ ಅವುಗಳನ್ನು ಗುರುತಿಸುವ ಬಗೆಯ ಮಾಹಿತಿಯನ್ನೂ ಆ್ಯಪ್ ಒಳಗೊಂಡಿದೆ. ಸ್ವಯಂ ಮೌಲ್ಯಮಾಪನ, ಮಿದುಳಿಗೆ ಸವಾಲೊಡ್ಡುವ ಆಟಗಳೂ ಸೇರಿ ಮಾನಸಿಕ ಆರೋಗ್ಯಕ್ಕೆ ಸಹಕಾರಿಯಾದ ವಿವಿಧ ಆಯ್ಕೆಗಳಿವೆ.

‘ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಈ ಆ್ಯಪ್ ನೆರವಾಗಲಿದೆ. ವಿವಿಧ ರೀತಿಯ ಮಾಸಿಕ ಸಮಸ್ಯೆಗಳನ್ನು ಎದುರಿಸುತ್ತಿರುವವರಿಗೆ ಸಿದ್ಧ ಪರಿಕರಗಳನ್ನು ಒದಗಿಸಲಾಗಿದ್ದು, ನಿಮ್ಹಾನ್ಸ್‌ನ ಆಪ್ತ ಸಮಾಲೋಚಕ ರೊಂದಿಗೆ ದೂರವಾಣಿ ಹಾಗೂ ವಿಡಿಯೊ ಕರೆಯ ಮೂಲಕ ಸಮಾಲೋಚನೆ ನಡೆಸುವ ಅವಕಾಶವನ್ನೂ ಒದಗಿಸಲಾಗಿದೆ’ ಎಂದು ಐಐಐಟಿ-ಬಿ ಇ-ಆರೋಗ್ಯ ಸಂಶೋಧನಾ ವಿಭಾಗದ ಮುಖ್ಯಸ್ಥ ಪ್ರೊ.ಟಿ.ಕೆ. ಶ್ರೀಕಾಂತ್ ತಿಳಿಸಿದರು.

‘ಟೆಲಿ ಮನಸ್’ ಆ್ಯಪ್‌ನ ಮುಖಪುಟ

ಮಕ್ಕಳು, ವೃದ್ಧರಿಗೂ ಸಲಹೆ

ಮಕ್ಕಳು, ಹದಿಹರೆಯದವರು, ಮಹಿಳೆಯರು ಹಾಗೂ ವೃದ್ಧರಿಗೆ ಮಾನಸಿಕ ಸ್ವಾಸ್ಥ್ಯಕ್ಕೆ ಸಂಬಂಧಿಸಿದಂತೆ ಸಲಹೆಗಳ ಆಯ್ಕೆಯನ್ನು ಪ್ರತ್ಯೇಕವಾಗಿ ನೀಡಲಾಗಿದೆ. ನಿಗದಿತ ವರ್ಗದವರು ತಮ್ಮ ಆಯ್ಕೆ ಕ್ಲಿಕ್ಕಿಸಿದಲ್ಲಿ ಅಗತ್ಯ ಸಲಹೆಗಳು ತೆರೆದುಕೊಳ್ಳಲಿವೆ. ಮಕ್ಕಳು ಸೇರಿ ವಿವಿಧ ವರ್ಗದವರು ಯಾವ ರೀತಿ ಒತ್ತಡ ನಿರ್ವಹಣೆ ಮಾಡಬೇಕು? ಮಾನಸಿಕ ಅನಾರೋಗ್ಯ ಸಮಸ್ಯೆ ಗುರುತಿಸುವುದು ಹೇಗೆ? ಸಮಸ್ಯೆ ಇರುವವರನ್ನು ಯಾವ ರೀತಿ ನೋಡಿಕೊಳ್ಳಬೇಕು ಎನ್ನುವುದೂ ಸೇರಿ ಹಲವು ಪ್ರಶ್ನೆಗಳಿಗೆ ಉತ್ತರ ಒದಗಿಸಲಾಗಿದೆ. ಯೋಗ ಮತ್ತು ಮಾನಸಿಕ ಆರೋಗ್ಯ ಸೇರಿ ಮನೋವೈದ್ಯಕೀಯ ವಿಭಾಗಕ್ಕೆ ಸಂಬಂಧಿಸಿದ ವಿವಿಧ ಲೇಖನಗಳು ಆ್ಯಪ್‌ನಲ್ಲಿ ಲಭ್ಯ ಇವೆ.

ವೈದ್ಯಕೀಯ ಸಂಸ್ಥೆಗಳ ಮಾಹಿತಿ

ಮನೋವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದಂತೆ ರಾಜ್ಯವಾರು ವೈದ್ಯಕೀಯ ಸಂಸ್ಥೆಗಳ ಮಾಹಿತಿಯನ್ನೂ ಒದಗಿಸಲಾಗಿದೆ. ನಿರ್ದಿಷ್ಟ ರಾಜ್ಯದ ಆಯ್ಕೆಯನ್ನು ಕ್ಲಿಕ್ಕಿಸಿದ ಬಳಿಕ ವೈದ್ಯಕೀಯ ಸಂಸ್ಥೆಗಳ ವಿಳಾಸ ಸಹಿತ ವಿವರ ತೆರೆದುಕೊಳ್ಳಲಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ನಿಮ್ಹಾನ್ಸ್ ಸೇರಿ 23 ವೈದ್ಯಕೀಯ ಸಂಸ್ಥೆಗಳ ವಿವರ ಒದಗಿಸಲಾಗಿದೆ.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 24/ಎಂವೈಎಸ್/2024 ದಿನಾಂಕ : 28-10-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	**ಸಬ್‌ವರ್ಕ್-1 :** ಸಹಾಯಕ ವಿಭಾಗೀಯ ಇಂಜಿನಿಯರ್ / ಸಕಲೇಶಪುರ ಉಪ ವಿಭಾಗ : ಸ್ಕೇಲಿಂಗ್, ರಾಕ್ ಬೋಲ್ಟಿಂಗ್, ಶಾಟ್‌ಕ್ರೀಟ್, ವೈರ್ ಮೆಷ್, ಆರ್‌ಆರ್‌ಎಸ್, ಗ್ರೌಟಿಂಗ್ ಮತ್ತು ಡ್ರೈನೇಜ್ ವಿಧಾನದಿಂದ ಎಡಕುಮರಿ – ಶಿರಿಬಾಗಿಲು ನಿಲ್ದಾಣದ ನಡುವೆ ಕಿಮೀ. 77/100-600 ನಲ್ಲಿ ಸುರಂಗ ಸಂ.31ರ ಅನ್‌ಲೈನ್ಡ್ ಭಾಗದ ಮತ್ತು ಶಿರಿಬಾಗಿಲು – ಸುಬ್ರಹ್ಮಣ್ಯ ರೋಡ್ ನಿಲ್ದಾಣದ ನಡುವೆ ಕಿ.ಮೀ. 88/100-400 ನಲ್ಲಿ ಸುರಂಗ ಸಂ.51ರ ಪುನಃಸ್ಥಾಪನೆ. **ಸಬ್‌ವರ್ಕ್-2 :** ಸಹಾಯಕ ವಿಭಾಗೀಯ ಇಂಜಿನಿಯರ್ / ಸಕಲೇಶಪುರ ಉಪ ವಿಭಾಗ : ಸ್ಕೇಲಿಂಗ್, ರಾಕ್ ಬೋಲ್ಟಿಂಗ್, ಶಾಟ್‌ಕ್ರೀಟ್, ವೈರ್ ಮೆಷ್, ಆರ್‌ಆರ್‌ಎಸ್, ಗ್ರೌಟಿಂಗ್ ಮತ್ತು ಡ್ರೈನೇಜ್ ವಿಧಾನದಿಂದ ಶಿರಿಬಾಗಿಲು – ಸುಬ್ರಹ್ಮಣ್ಯ ರೋಡ್ ನಿಲ್ದಾಣದ ನಡುವೆ ಕಿ.ಮೀ. 88/100-400 ನಲ್ಲಿ ಸುರಂಗ ಸಂ.51ರ ಅನ್‌ಲೈನ್ಡ್ ಭಾಗದ ಪುನಃಸ್ಥಾಪನೆ.	ರೂ. 11,34,03,459/-
2	ಸಹಾಯಕ ವಿಭಾಗೀಯ ಇಂಜಿನಿಯರ್ / ಸಕಲೇಶಪುರ ಉಪ ವಿಭಾಗ : ಸಕಲೇಶಪುರ – ಸುಬ್ರಹ್ಮಣ್ಯ ರೋಡ್ ಸೆಕ್ಷನ್‌ನಲ್ಲಿ ಗಟಾರದೊಳಗೆ ಬಲ್ಲಾಸ್ಟ್ ಉರುಳಿ ಬೀಳುವುದನ್ನು ತಡೆಯಲು ಸೈಡ್ ಡ್ರೈನ್ ಗೋಡೆಗಳನ್ನು ಎತ್ತರಿಸುವುದು, ಹಾಲಿ ಇರುವ ಡ್ರೈನ್ ಗೋಡೆಗಳ ಸವೆದ ಬೆಡ್ ಮತ್ತು ಉಜ್ಜಿಹೋದ ಬೇಸ್‌ಗೆ ದುರಸ್ತಿಗಳು, ಹಾನಿಗೊಳಗಾದ ಸೈಡ್ ಡ್ರೈನ್‌ಗಳಿಗೆ ದುರಸ್ತಿಗಳು.	ರೂ. 3,23,23,865/-
3	ಸಹಾಯಕ ವಿಭಾಗೀಯ ಇಂಜಿನಿಯರ್ / ಸಕಲೇಶಪುರ ಉಪ ವಿಭಾಗ : ಹಾಸನ – ಸಕಲೇಶಪುರ ಮತ್ತು ಸುಬ್ರಹ್ಮಣ್ಯ ರೋಡ್-ಪಡೀಲ್ ಸೆಕ್ಷನ್‌ನಲ್ಲಿ ಗಟಾರದೊಳಗೆ ಬಲ್ಲಾಸ್ಟ್ ಉರುಳಿ ಬೀಳುವುದನ್ನು ತಡೆಯಲು ಸೈಡ್ ಡ್ರೈನ್ ಗೋಡೆಗಳನ್ನು ಎತ್ತರಿಸುವುದು, ಹಾಲಿ ಇರುವ ಡ್ರೈನ್ ಗೋಡೆಗಳ ಸವೆದ ಬೆಡ್ ಮತ್ತು ಉಜ್ಜಿಹೋದ ಬೇಸ್‌ಗೆ ದುರಸ್ತಿಗಳು, ಹಾನಿಗೊಳಗಾದ ಸೈಡ್ ಡ್ರೈನ್‌ಗಳಿಗೆ ದುರಸ್ತಿಗಳು.	ರೂ. 2,91,99,554/-
4	ಹಾಸನ – ಮಂಗಳೂರು ಜಂಕ್ಷನ್ ಸೆಕ್ಷನ್‌ನ ಸೇತುವೆ ಸಂ. 118 (ಹೇಮಾವತಿ), 400 (ಕುಮಾರಧಾರಾ), 597 (ನೇತ್ರಾವತಿ), ಮೈಸೂರು – ಅರಸೀಕೆರೆ ಸೆಕ್ಷನ್‌ನ ಸೇತುವೆ ಸಂ. 242 (ಕಾವೇರಿ) ಮತ್ತು ಸೇತುವೆ ಸಂ. 264 (ಲಕ್ಷ್ಮಣತೀರ್ಥ) ಒಟ್ಟು 5 ಸಂಖ್ಯೆಗಳಲ್ಲಿ ಭಾರತೀಯ ಟ್ರ್ಯಾಕ್ ನಿರ್ವಹಣಾ ವ್ಯವಸ್ಥೆಯೊಂದಿಗೆ ಸಮೀಕರಣಗೊಳಿಸಿ ಆಟೋಮೇಟೆಡ್ ವಾಟರ್ ಲೆವೆಲ್ ಗೇಜ್‌ನ ನಿರ್ವಹಣೆ (ಒಂದು ವರ್ಷಕ್ಕಾಗಿ).	ರೂ. 14,14,500/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21-11-2024 ರಂದು 11:00 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/541/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25 ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ, ಮೈಸೂರು

South Western Railway - SWR | sw_railways | SWRRLY | SWRRLY

ಆರೋಪಿತ ವ್ಯಕ್ತಿಯ ಹಾಜರಾತಿ ಅವಶ್ಯಕತೆ ಕುರಿತಾದ ಘೋಷಣೆ

ಸಿಆರ್‌ಪಿಸಿ ಸೆಕ್ಷನ್ 82 ನೋಡಿರಿ

ಅದಾಗ್ಯೂ, ನನ್ನ ಎದುರು ದಾಖಲಾಗಿರುವ ದೂರಿನಲ್ಲಿ **ಸೈಯದ್ ಆರಿಫುದ್ದೀನ್, ಮೆ. ಎಸ್.ಬಿ. ಟೈಲ್ಸ್ ಅಂಡ್ ಸ್ಯಾನಿಟರಿ ಮಾಲೀಕ, ವಿಳಾಸ** 6-9-84/1, ಪಿಲ್ಲರ್ ನಂ. 271 ಎದುರು, ಅತ್ತಾಪುರ, ರಿನ್ ಶಿವರಾಮಪಲ್ಲಿ, ರಾಜೇಂದ್ರನಗರ, ಕರ್ನಾಟಕ-500052 ಎಂಬ ವ್ಯಕ್ತಿಯು **ದೆಹಲಿಯ ಆನಂದ ವಿಹಾರ ಪೊಲೀಸ್ ಠಾಣೆಯಲ್ಲಿ ಎನ್‌ಐ ಆಕ್ಟ್ ಸೆಕ್ಷನ್ 138 ಅಡಿಯಲ್ಲಿನ ಮಿಸಲೇನಿಯಸ್ ನಂ. 377/20ರ** ಪ್ರಕರಣದಲ್ಲಿ ಪಾಲ್ಗೊಂಡಿದ್ದಾನೆ (ಅಥವಾ ಪಾಲ್ಗೊಂಡಿರುವ ಶಂಕೆಯಲ್ಲಿ) ಎಂಬ ಅಪರಾಧದ ಆರೋಪದಲ್ಲಿದ್ದು, ಸದರಿ ಪ್ರಕರಣವು ಬಂಧನ ವಾರಂಟ್ ಹೊರಡಿಸುವ ಹಂತಕ್ಕೆ ತಲುಪಿರುತ್ತದೆ ಮತ್ತು ಈ ಕಾರಣದಿಂದಾಗಿ, ಸದರಿ ಆರೋಪಿತ **ಸೈಯದ್ ಆರಿಫುದ್ದೀನ್, ಮೆ. ಎಸ್.ಬಿ. ಟೈಲ್ಸ್ ಅಂಡ್ ಸ್ಯಾನಿಟರಿ ಮಾಲೀಕ,** ಎಂಬ ವ್ಯಕ್ತಿಯು ಪತ್ತೆಯಾಗಿಲ್ಲದಿರುವುದರಿಂದ, ನನಗೆ ತಿಳಿದಿರುವ ಪ್ರಕಾರ ಸದರಿ ಆರೋಪಿತ **ಸೈಯದ್ ಆರಿಫುದ್ದೀನ್, ಮೆ. ಎಸ್.ಬಿ. ಟೈಲ್ಸ್ ಅಂಡ್ ಸ್ಯಾನಿಟರಿ ಮಾಲೀಕ,** ಎಂಬ ವ್ಯಕ್ತಿಯು ತಲೆಮರೆಸಿಕೊಂಡಿದ್ದಾನೆ (ಅಥವಾ ಸದರಿ ವಾರಂಟ್ ಸ್ವೀಕರಿಸುವದರಿಂದ ತನ್ನನ್ನು ತಾನು ಅಡಗಿಸಿಕೊಂಡಿದ್ದಾನೆ);

ಈ ಘೋಷಣೆಯ ಮೂಲಕ ತಿಳಿಸುವುದು ಏನೆಂದರೆ, ಸದರಿ **ಸೈಯದ್ ಆರಿಫುದ್ದೀನ್, ಮೆ. ಎಸ್.ಬಿ. ಟೈಲ್ಸ್ ಅಂಡ್ ಸ್ಯಾನಿಟರಿ ಮಾಲೀಕ,** ಎಂಬ ವ್ಯಕ್ತಿಯು **ದೆಹಲಿಯ ಆನಂದ ವಿಹಾರ ಪೊಲೀಸ್ ಠಾಣೆಯಲ್ಲಿ ಎನ್‌ಐ ಆಕ್ಟ್ ಸೆಕ್ಷನ್ 138ರ ಅಡಿಯಲ್ಲಿನ ಮಿಸಲೇನಿಯಸ್ ನಂ. 377/20** ರಲ್ಲಿ ಆರೋಪಿತ ವ್ಯಕ್ತಿಯಾಗಿದ್ದು, ಈತನು ಸದರಿ ನ್ಯಾಯಾಲಯದ ಎದುರು **06.12.2024** ರೊಳಗೆ ಹಾಜರಾಗಿ ಉತ್ತರ ಸಲ್ಲಿಸುವುದು ಅವಶ್ಯವಾಗಿರುತ್ತದೆ.

ಆದೇಶದ ಮೇರೆಗೆ
ಶ್ರೀಮತಿ. ಇಸ್ರಾ ಜೈದಿ
ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಪ್ರಥಮ ದರ್ಜೆ
(ಮಹಿಳಾ ನ್ಯಾಯಾಲಯ)-02, ಕೊಠಡಿ ಸಂ. 60, 3ನೇ ಮಹಡಿ,
ಶಹದರಾ ಜಿಲ್ಲೆ, ಕರ್ಕರದೂಮ ನ್ಯಾಯಾಲಯಗಳು, ದೆಹಲಿ

DP/14625/SHD/2024
(Court Matter)

ಕಂದಕದಲ್ಲಿ ಬಿದ್ದು ಕಾಡಾನೆ ಸಾವು

ಪ್ರಜಾವಾಣಿ ವಾರ್ತೆ

ಕುಂಸಿ (ಶಿವಮೊಗ್ಗ ಜಿಲ್ಲೆ): ಸಮೀಪದ ವೀರಗಾರನ ಬೈರಿನಕೊಪ್ಪದ ಕಂದಕದಲ್ಲಿ ಬಿದ್ದು ಕಾಡಾನೆಯೊಂದು ಮೃತಪಟ್ಟಿದ್ದು, ಮಂಗಳವಾರ ಬೆಳಕಿಗೆ ಬಂದಿದೆ.

30ರಿಂದ 35 ವರ್ಷದ ಗಂಡು ಆನೆ ಕಾಲುಗಳಿಗೆ ತೀವ್ರ ಪೆಟ್ಟಾಗಿ ಎದ್ದು ಹೋಗಲಾರದೇ ಮೃತಪಟ್ಟಿದೆ. ಅದು ಮೃತಪಟ್ಟು ಎರಡು ದಿನಗಳಾಗಿರಬಹುದು ಎಂದು ಜಿಲ್ಲಾ ಅರಣ್ಯಾಧಿಕಾರಿ ಪ್ರಸನ್ನಕುಮಾರ್ ಪಟಗಾರ್ ತಿಳಿಸಿದ್ದಾರೆ. ಕಾಡಾನೆಗಳು ಪುರದಾಳು ಗ್ರಾಮವೂ ಒಳಗೊಂಡಂತೆ ಸುತ್ತಮುತ್ತ ಇರುವ ರೈತರ ಜಮೀನುಗಳಿಗೆ ನುಗ್ಗಿ ಬೆಳೆ ನಾಶ ಮಾಡುತ್ತಿದ್ದವು.

‘ಆದರೆ, ಈ ಭಾಗದಲ್ಲಿ ಆನೆಗಳು ಓಡಾಡಿದ ಬಗ್ಗೆ ನಮಗೆ ಮಾಹಿತಿಯೇ ಇರಲಿಲ್ಲ’ ಎಂದು ತಿಳಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳು, ‘ಆನೆ ಸತ್ತಿರುವ ಪ್ರದೇಶದ ಹಿಂಭಾಗದಲ್ಲಿ ತಂತಿ ಬೇಲಿ ಕಂಡುಬಂದಿದೆ. ಈ ತಂತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಬೇಕಿದೆ. ಮರಣೋತ್ತರ ಪರೀಕ್ಷೆ ನಂತರವೇ ಸಾವಿನ ನಿಖರತೆ ಬಗ್ಗೆ ತಿಳಿಯಲಿದೆ’ ಎಂದು ಹೇಳಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇಸಿಎನ್-ಟಿಆರ್‌ಡಿ-03-2024-ಆರ್‌ಟಿ
ದಿನಾಂಕ : 30-10-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಸಿಎನ್ / ನೈಋತ್ಯ ರೈಲ್ವೆ ವ್ಯಾಪ್ತಿಯ ತೊಳಹುಣಸೆ ಯಾರ್ಡ್‌ನಲ್ಲಿ ಓಹೆಚ್‌ಇ ಮಾರ್ಪಾಡು, ಹಾವೇರಿ, ಕೊಡಗನೂರು ಮತ್ತು ಸಾಸಲು ಇಲ್ಲಿ ಪಾದಚಾರಿ ಮೇಲ್ಸೇತುವೆಗಾಗಿ ಅತಿಕ್ರಮಣಗಳ ನಿವಾರಣೆ ಮತ್ತು ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಇತರ ಯಾವುದೇ ಚಿಕ್ಕ ಓಹೆಚ್‌ಇ ಮಾರ್ಪಾಡು ಕಾಮಗಾರಿ.	ರೂ. 2,57,22,410.47

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 19-11-2024 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ ನಿರ್ಮಾಣ / ಬೆಂಗಳೂರು ದಂಡು

ಪಿಯುಬಿ/545/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR | SWRRLY | SWRRLY

ಬೆಸ್ಕಾಂಗೆ ‘ಚಾರ್ಜ್ ಇಂಡಿಯಾ 2024 ಎಕ್ಸಲೆನ್ಸ್’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಸಮಾರಂಭದಲ್ಲಿ ಬೆಸ್ಕಾಂ ಪರವಾಗಿ ಇವಿ ಮತ್ತು ಎಸ್‌ಜಿ ವಿಭಾಗದ ಸಹಾಯಕ ಪ್ರಧಾನ ವ್ಯವಸ್ಥಾಪಕ ವಿಜಯ್ ರಾವ್ ಅವರು ಪ್ರಶಸ್ತಿ ಸ್ವೀಕರಿಸಿದರು

ಬೆಂಗಳೂರು: ಎಲೆಕ್ಟ್ರಿಕ್ ವಾಹನಗಳ (ಇವಿ) ಬಳಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಉತ್ತಮ ಚಾರ್ಜಿಂಗ್ ಮೂಲಸೌಕರ್ಯ ಕಲ್ಪಿಸಿರುವ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ (ಬೆಸ್ಕಾಂ) ‘ಚಾರ್ಜ್ ಇಂಡಿಯಾ 2024 ಎಕ್ಸಲೆನ್ಸ್’ ಪ್ರಶಸ್ತಿ ಸಂದಿದೆ.

ಇ-ಮೊಬಿಲಿಟಿ ಸಂಸ್ಥೆ ಇತ್ತೀಚೆಗೆ ಆಯೋಜಿಸಿದ್ದ ಸಮಾರಂಭದಲ್ಲಿ ಬೆಸ್ಕಾಂಗೆ ‘ಚಾರ್ಜ್ ಇಂಡಿಯಾ 2024 ಎಕ್ಸಲೆನ್ಸ್’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬಿಎಂಟಿಸಿ, ಇ.ವಿ ಚಾರ್ಜಿಂಗ್ ಸೇವೆ ಒದಗಿಸುವ ಖಾಸಗಿ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಇ.ವಿ ಉದ್ಯಮದ ಪ್ರಮುಖರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

'ಸುಸ್ಥಿರ ಮತ್ತು ಶುದ್ಧ ಇಂಧನ ಬಳಕೆ ವಿಚಾರದಲ್ಲಿ ರಾಜ್ಯ ಸರ್ಕಾರದ ಬದ್ಧತೆಗೆ ಸಂದ ಪ್ರಶಸ್ತಿ ಇದು. ಖಾಸಗಿ ಪ್ರಾಬಲ್ಯಕ್ಕೆ ಅವಕಾಶ ಕೊಡೆದೇ, ಇ.ವಿ ಬಳಕೆದಾರರಿಗೆ ಕಡಿಮೆ ವೆಚ್ಚದಲ್ಲಿ ಚಾರ್ಜಿಂಗ್ ಮೂಲಸೌಕರ್ಯ ಒದಗಿಸುವಲ್ಲಿ ನಮ್ಮ ರಾಜ್ಯ ಮೊದಲ ಸ್ಥಾನದಲ್ಲಿದೆ. ಇದು ಹೆಮ್ಮೆಯ ಸಂಗತಿ’ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಪ್ರತಿಕ್ರಿಯಿಸಿದ್ದಾರೆ.

‘ಸಾರ್ವಜನಿಕ- ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ರಾಜ್ಯದಾದ್ಯಂತ ಸುಮಾರು 2,500 ಹೊಸ ಇ.ವಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆ’ ಇದೆ ಎಂದು ಅವರು ತಿಳಿಸಿದ್ದಾರೆ.

‘ರಾಜ್ಯದಲ್ಲಿ ಇ.ವಿ ಚಾರ್ಜಿಂಗ್ ಮೂಲಸೌಕರ್ಯವನ್ನು ಕಲ್ಪಿಸುವ ನೋಡೆಲ್ ಏಜೆನ್ಸಿಯಾಗಿರುವ ಬೆಸ್ಕಾಂಗೆ ಪ್ರಶಸ್ತಿ ಸಂದಿರುವುದು ಹೆಮ್ಮೆ ಸಂಗತಿ. ಇದು ನಮ್ಮ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಸಂತಸ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ, ದೇಶದಲ್ಲೇ ಅತಿ ಹೆಚ್ಚು ಸಾರ್ವಜನಿಕ ಎಲೆಕ್ಟ್ರಿಕ್ ವಾಹನ ಚಾರ್ಜಿಂಗ್ ಕೇಂದ್ರಗಳನ್ನು ಹೊಂದಿರುವ ರಾಜ್ಯವಾಗಿದೆ. ರಾಜ್ಯದಲ್ಲಿ ಒಟ್ಟು 5,765 ಇ.ವಿ ಚಾರ್ಜಿಂಗ್ ಸ್ಟೇಷನ್‌ಗಳಿವೆ. 3,728 ಚಾರ್ಜಿಂಗ್ ಕೇಂದ್ರಗಳನ್ನು ಹೊಂದಿರುವ ಮಹಾರಾಷ್ಟ್ರ, ಎರಡನೇ ಸ್ಥಾನದಲ್ಲಿದೆ. ಉತ್ತರ ಪ್ರದೇಶ-1,989 ಮತ್ತು ದೆಹಲಿಯಲ್ಲಿ 1,941 ಚಾರ್ಜಿಂಗ್ ಸ್ಟೇಷನ್‌ಗಳಿದ್ದು, ನಂತರದ ಸ್ಥಾನದಲ್ಲಿವೆ.

ದೇಶದ ಪ್ರಮುಖ ನಗರಗಳಿಗೆ ಹೋಲಿಸಿದರೆ, ಬೆಂಗಳೂರಿನಲ್ಲಿ ಇ.ವಿ ಬಳಕೆದಾರರ ಸಂಖ್ಯೆ ಹೆಚ್ಚು. ಇದಕ್ಕೆ ಪೂರಕವಾಗಿ ಸರ್ಕಾರ, ಬೆಂಗಳೂರು ನಗರ ಜಿಲ್ಲೆಯಲ್ಲಿ 4,462 ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ಆರಂಭಿಸಿದೆ.

ಗಾಯಕ ಆನಂದಗೆ ಸನ್ಮಾನ

‘ಇಂಚರ’ ಸುಗಮ ಸಂಗೀತ ಸಂಸ್ಥೆ ವತಿಯಿಂದ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾಶ್ರೀ ಗೌರವ ಪಡೆದ ಗಾಯಕ ಆನಂದ ಮಾದಲಗೆರೆ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷ ಹಿ.ಚಿ. ಬೋರಲಿಂಗಯ್ಯ, ಸಂಯೋಜಕ ಮೃತ್ಯುಂಜಯ ದೊಡ್ಡವಾಡ, ಶ್ರೀನಿವಾಸ್ ಮತ್ತು ಇಂಚರ ಪ್ರವೀಣ್ ಕುಮಾರ್, ಬೈರಮಂಗಲ ರಾಮೇಗೌಡ ಉಪಸ್ಥಿತರಿದ್ದರು

ನಗರದಲ್ಲಿ ಇಂದು

‘ಅಧಿಯತ್’ ರೋಹಿಣಿ ಭಾಟೆ ಸ್ಮರಣಾರ್ಥ ಕಥಕ್ ನೃತ್ಯ ಪ್ರದರ್ಶನ: ಅತಿಥಿ: ಮೈಸೂರು ಬಿ. ನಾಗರಾಜ್, ಕಥಕ್ ನೃತ್ಯ ಪ್ರದರ್ಶನ: ಸುನಿಲ್ ಸುಂಕರಾ, ನಂದಿನಿ ಕೆ. ಮೆಹ್ತಾ, ಅಕ್ಷತಾ ಎಂ, ಆಯೋಜನೆ: ರಿದ್ದಂ ಕಥಕ್ ಸ್ಕೂಲ್, ಸ್ಥಳ: ಸೇವಾ ಸದನ 14ನೇ ಕ್ರಾಸ್, ಮಲ್ಲೇಶ್ವರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಇ-ಶ್ರಮ: ಕಾರ್ಮಿಕರಿಗೆ ಬಿಪಿಎಲ್ ವಿತರಣೆ

ಬೆಂಗಳೂರು: ಇ-ಶ್ರಮ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿರುವ ಎಲ್ಲ ಕಾರ್ಮಿಕರಿಗೆ ಬಿಪಿಎಲ್ (ಆದ್ಯತಾ ಪಡಿತರ ಚೀಟಿ) ಚೀಟಿ ವಿತರಣೆ ಕಾರ್ಯಕ್ಕೆ ಆಹಾರ ಇಲಾಖೆ ಚಾಲನೆ ನೀಡಿದೆ.

ಇ-ಶ್ರಮದಲ್ಲಿ ನೋಂದಾಯಿತ ಕಾರ್ಮಿಕರಿಗೆ ಬಿಪಿಎಲ್ ಚೀಟಿ ವಿತರಣೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿತ್ತು. ಈ ಪ್ರಕಾರ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಈ ಕಾರ್ಯವನ್ನು ಆರಂಭಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

ಅರ್ಹ ಮತ್ತು ಇ-ಶ್ರಮದಲ್ಲಿ ನೋಂ-ದಾಯಿಸಿಕೊಂಡಿರುವ ಕಾರ್ಮಿಕರು ತಮ್ಮ ಹತ್ತಿರದ ಆಹಾರ ಇಲಾಖೆಯ ಕಚೇರಿಯನ್ನು ಸಂಪರ್ಕಿಸಬೇಕು ಎಂದು ಇಲಾಖೆ ಸೂಚಿಸಿದೆ. ಹೆಚ್ಚಿನ ಮಾಹಿತಿಗೆ ಶುಲ್ಕರಹಿತ ದೂರವಾಣಿ ಸಂಖ್ಯೆ:1800-425-9339 ಅಥವಾ ಇಲಾಖೆಯ ಸಹಾಯವಾಣಿ 1967ಕ್ಕೆ, ಕೆಲಸದ ದಿನಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 5ರ ಒಳಗೆ ಕರೆ ಮಾಡಬಹುದು.

Wonderla Holidays Limited

WONDERLA PARKS AND RESORTS

Registered Office : 28th K.M., Mysore Road, Bengaluru 562 109; Ph: 080-22010311/322/333
Fax 080-22010324 Website: www.wonderla.com; E-mail: mail.blr@wonderla.com
CIN:L55101KA2002PLC031224

STATEMENT OF UNAUDITED FINANCIAL RESULTS FOR THE QUARTER AND SIX MONTHS ENDED 30th SEPTEMBER 2024 (₹in lakhs except EPS data)

SL. No.	Particulars	Quarter ended			Six months ended		Year ended
		30th September 2024	30th June 2024	30th September 2023	30th September 2024	30th September 2023	31st March 2024
		(Unaudited)	(Unaudited)	(Unaudited)	(Unaudited)	(Unaudited)	(Audited)
1	Total Income from Operations (net)	7,122.59	17,746.89	8,140.51	24,869.48	27,167.27	50,602.52
2	Net Profit for the period (before Tax, Exceptional and/or Extraordinary items)	(1,209.21)	8,347.96	1,848.83	7,138.75	13,070.49	21,132.20
3	Net Profit for the period before tax (after Exceptional and/or Extraordinary items)	(1,209.21)	8,347.96	1,848.83	7,138.75	13,070.49	21,132.20
4	Net Profit for the period after tax (after Exceptional and/or Extraordinary items)	1,471.85	6,324.18	1,352.14	7,796.03	9,799.50	15,796.13
5	Total Comprehensive Income for the period [Comprising Profit for the period (after tax) and Other Comprehensive Income / (Loss) (after tax)]	1,453.09	6,281.02	1,365.71	7,734.11	9,741.82	15,750.27
6	Equity Share Capital (Paid Up)	5,657.34	5,657.34	5,657.34	5,657.34	5,657.34	5,657.34
7	Earnings per share (face value of Rs.10/- each) (for continuing and discontinued operations) :						
	Basic:	2.60	11.18	2.39	13.78	17.32	27.93
	Diluted:	2.59	11.14	2.39	13.73	17.32	27.84

Notes:
1. The above financial results for the quarter and six months ended 30 September 2024 have been reviewed by the Audit Committee and approved by the Board of Directors at their meeting held on 05 November 2024. The results for the quarter and six months ended 30 September 2024 have been reviewed by the statutory auditors of the Company and the statutory auditors have issued an unmodified conclusion in respect of the same.
2. The Statement has been prepared in accordance with Indian Accounting Standards ('Ind AS') prescribed under section 133 of the Companies Act, 2013 read with the relevant rules thereunder and in terms of SEBI (Listing Obligations and Disclosure Requirements) Regulations, 2015, as amended.
3. The Finance Act, 2024 amended Section 112 of the Income Tax Act, 1961 to reduce the rate of taxation on long-term capital gains arising from the transfer of long-term capital assets to 12.5%, and to withdraw the benefit of indexation for any transfers of capital assets made after 23 July 2024. Consequent to such amendment, the Company has accounted for deferred tax credit amounting to Rs. 2,408 lakhs attributable to fair value of freehold land during the current quarter.

Place: Bengaluru
Date: 05.11.2024

For Wonderla Holidays Limited
Sd/-
Arun K. Chittilappilly - Managing Director

KIRLOSKAR ELECTRIC COMPANY LIMITED

REGD OFFICE: No.19, 2nd Main Road, Peenya 1st Stage, Phase-1, Peenya, Bengaluru - 560 058.
Phone no: 080-28397256; **Fax:** 080-28396727; **Website:** www.kirloskarelectric.com
Email: investors@kirloskarelectric.com; **CIN:** L31100KA1946PLC000415

Extract of Statement of Unaudited Financial Results for the Quarter and Six Months Ended September 30, 2024

(₹. in Lakhs)

Sr. No.	Particulars	STANDALONE					CONSOLIDATED				
		Quarter ended			Half Year ended	Year ended	Quarter ended			Half Year ended	Year ended
		Sept 30 2024	June 30 2024	Sept 30 2023	Sept 30 2024	March 31 2024	Sept 30 2024	June 30 2024	Sept 30 2023	Sept 30 2024	March 31 2024
		Unaudited	Unaudited	Unaudited	Unaudited	Audited	Unaudited	Unaudited	Unaudited	Unaudited	Audited
1	Total income from operations	16,351	13,440	14,617	29,791	56,528	16,351	13,445	14,618	29,796	56,534
2	Net Profit / (Loss) for the period (before Tax, Exceptional and/or Extraordinary items)	(472)	227	566	(245)	1,517	(486)	200	532	(286)	1,408
3	Net Profit / (Loss) for the period before tax (after Exceptional and/or Extraordinary Items)	523	227	566	750	1,517	509	200	532	709	1,408
4	Net Profit / (Loss) for the period after tax (after Exceptional and/or Extraordinary Items)	523	227	566	750	1,517	509	193	532	702	1,408
5	Total Comprehensive Income for the period [comprising Profit / (Loss) for the period (after tax) and Other Comprehensive Income (after tax)]	3,351	231	567	3,582	(839)	3,337	197	533	3,534	(948)
6	Equity Share Capital	6,641	6,641	6,641	6,641	6,641	6,641	6,641	6,641	6,641	6,641
7	Reserves (excluding revaluation reserves as shown in the Balance Sheet of previous year)	NA	NA	NA	NA	NA	NA	NA	NA	NA	NA
8	Earnings Per Share (EPS) (₹.)										
	(a) Basic EPS before extra ordinary items (not annualised)	0.79	0.34	0.85	1.13	2.28	0.77	0.29	0.80	1.06	2.12
	(b) Diluted EPS before extra ordinary items (not annualised)	0.79	0.34	0.85	1.13	2.28	0.77	0.29	0.80	1.06	2.12
	(c) Basic EPS after extra ordinary items (not annualised)	0.79	0.34	0.85	1.13	2.28	0.77	0.29	0.80	1.06	2.12
	(d) Diluted EPS after extra ordinary items (not annualised)	0.79	0.34	0.85	1.13	2.28	0.77	0.29	0.80	1.06	2.12

NOTE:
1. The above unaudited standalone and consolidated financial results have been reviewed by the Audit Committee and approved by the Board of Directors in their meeting held on November 05, 2024.
2. The standalone and consolidated financial results of the Company for the quarter and six months ended September 30, 2024 have been subject to limited review by its Statutory auditors.
3. The above is an extract of the detailed format of the unaudited financial results for the quarter and six months ended September 30, 2024 filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015 as amended. The full format of the unaudited financial results are available on the stock exchange websites. (www.bseindia.com, www.nseindia.com) and also on the company's website (http://www.kirloskarelectric.com/investors/investors-information/financial.html)

Place : Bengaluru
Date : November 05, 2024

Sd/-
(Vijay R Kirloskar)
Executive Chairman

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123.
ಇ-ಮೇಲ್: nelamangala.pa@gmail.com Phone: 9663046622

ಸಂಖ್ಯೆ: ನೆಯೋಪ್ರಾ:CLU:39:2024-25 ದಿನಾಂಕ: 30-10-2024

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13-02-2007 ರನ್ವಯ **ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಇಮಚೇನಹಳ್ಳಿ** ಗ್ರಾಮವು “ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ” ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ:01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **“ವ್ಯವಸಾಯ”** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ‘ಕೈಗಾರಿಕೆ’** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ “ವ್ಯವಸಾಯ” ವಲಯದಿಂದ **“ಕೈಗಾರಿಕೆ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು ಶ್ರೀ / ಶ್ರೀಮತಿ	ತಾಲ್ಲೂಕು/ಹೋಬಳಿ/ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಎಲ್.ಎಸ್.ಪ್ರಕಾಶ್.ಬಿನ್ ಲೇಟ್ ಸಿದ್ದಗಂಗಯ್ಯ	ನೆಲಮಂಗಲ / ಸೋಂಪುರ / ಇಮಚೇನಹಳ್ಳಿ	17/3	02-14 (00-03ಗುಂಟೆ ಎ ಖರಾಬು ಸೇರಿ)	ವ್ಯವಸಾಯ	ಕೈಗಾರಿಕೆ
		ಒಟ್ಟು	02-14		

ಷರಾ:- ಪ್ರಶ್ನಿತ ಜಮೀನುಗಳಲ್ಲಿ **ಕೈಗಾರಿಕೆ** ಚಟುವಟಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಸದರಿ ಚಟುವಟಿಕೆಯಿಂದಾಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಸಾರ್ವಜನಿಕರಿಗೆ ಉದ್ಯೋಗಾವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **“ವ್ಯವಸಾಯ ವಲಯದಿಂದ ಕೈಗಾರಿಕೆ ಉದ್ದೇಶಕ್ಕೆ”** ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾಪ್ರ/2919/2024-25

ರಾಜ್ಯ, ಹೊರರಾಜ್ಯದಲ್ಲಿ ಆರೋಪಿ ವಿರುದ್ಧ 150ಕ್ಕೂ ಹೆಚ್ಚು ಪ್ರಕರಣ ದಾಖಲು

ವಿಲಾಸಿ ಜೀವನದಿಂದ ನಷ್ಟ: ಕಳ್ಳನಾದ ಉದ್ಯಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯೊಬ್ಬ ವಿಲಾಸಿ ಜೀವನ ನಡೆಸಲು ಹೋಗಿ ಆರ್ಥಿಕ ಸಂಕಷ್ಟಕ್ಕೀಡಾಗಿ ಸರಗಳ್ಳತನಕ್ಕೆ ಇಳಿದು ಜೈಲು ಸೇರಿದ್ದಾನೆ. ಧಾರವಾಡ ಜಿಲ್ಲೆಯ ಕೋಳಿವಾಡದ ವಿಶ್ವನಾಥ್(40) ಬಂಧಿತ ಆರೋಪಿ.

ಆರೋಪಿಯಿಂದ ₹24.15 ಲಕ್ಷ ಮೌಲ್ಯದ 310 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ಆರೋಪಿ ವಿರುದ್ಧ ಬೆಂಗಳೂರು, ಧಾರವಾಡ, ಹೈದರಾಬಾದ್ ಸೇರಿದಂತೆ ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ 150ಕ್ಕೂ ಹೆಚ್ಚು ಕಳ್ಳತನ ಪ್ರಕರಣಗಳು ದಾಖಲಾಗಿವೆ. ಎಂಟು ವರ್ಷಗಳ ಹಿಂದೆ ವಿಶ್ವನಾಥ್ ನಷ್ಟಕ್ಕೆ ಒಳಗಾಗಿದ್ದ. ಅದಾದ ಮೇಲೆ ಕಳ್ಳತನಕ್ಕೆ ಇಳಿದಿದ್ದ ಎಂದು ಪೊಲೀಸರು ಹೇಳಿದರು.

ಬನಶಂಕರಿ ಮೂರನೇ ಹಂತದಲ್ಲಿ ವಾಸವಾಗಿದ್ದ ರಾಜಶೇಖರ್ ಎಂಬುವವರ ಮನೆಗೆ ಆರೋಪಿ ಹೋಗಿದ್ದ. ರಾಜಶೇಖರ್ ಅವರ ಬಗ್ಗೆ ಮನೆಯವರಲ್ಲಿ ವಿಚಾರಿಸಿದ್ದ. ಅವರು ಮೈಸೂರಿನಲ್ಲಿದ್ದಾರೆ ಎಂದು ಮನೆಯವರು ಹೇಳಿದ್ದರು. ಆಗ ವಿಶ್ವನಾಥ್, ಮೈಸೂರಿನ ಮನೆಯ ವಿಳಾಸ ಕೊಡುವಂತೆ ಕೇಳಿಕೊಂಡಿದ್ದ.

ವಿಶ್ವನಾಥ್

ನಂತರ, ಮಹಿಳೆ ಮನೆಯೊಳಗೆ ಬನ್ನಿ ಎಂದು ಕರೆದೊಯ್ಯುತ್ತಿದ್ದಂತೆಯೇ 40 ಗ್ರಾಂ ಚಿನ್ನದ ಸರ ಕಸಿದುಕೊಂಡು ಪರಾರಿ ಆಗಿದ್ದ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಉದ್ಯಮಿಯ ಕೃತ್ಯ ಬಯಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಲಾರಿ ವ್ಯವಹಾರದಲ್ಲಿ ನಷ್ಟವಾದ ಮೇಲೆ ಆರೋಪಿ ಸರಗಳ್ಳತನಕ್ಕೆ ಇಳಿದಿದ್ದ. ಬೇರೆಯವರ ಹೆಸರಿನಲ್ಲಿ ಆನ್‌ಲೈನ್ ಮೂಲಕ ಹಳೇ ಬೈಕ್ ಖರೀದಿಸುತ್ತಿದ್ದ. ವಾಯುವಿಹಾರಕ್ಕೆ ತೆರಳುತ್ತಿದ್ದ ಮಹಿಳೆಯರನ್ನೇ ಗುರಿಯಾಗಿಸಿ ಸರ ಕಸಿದು ಪರಾರಿ ಆಗುತ್ತಿದ್ದ. ಕದ್ದ ಚಿನ್ನಾಭರಣವನ್ನು ಚಿನ್ನದ ಅಂಗಡಿಗಳಿಗೆ ಮಾರಾಟ ಮಾಡುತ್ತಿದ್ದ. ಬಂದ ಹಣದಿಂದ ಗೋವಾಕ್ಕೆ ತೆರಳಿ ಮೋಜು-ಮಸ್ತಿ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಕದ್ದ ಚಿನ್ನಾಭರಣವನ್ನು ಹೊಸೂರು ರಸ್ತೆಯ ಗಾರ್ವೆಬಾವಿ ಪಾಳ್ಯದಲ್ಲಿ ನೆಲಸಿದ್ದ ಸ್ನೇಹಿತನ ಮನೆಯಲ್ಲಿ, ಸ್ನೇಹಿತನಿಗೆ ತಿಳಿಯದಂತೆ ಅಡಗಿಸಿಟ್ಟಿದ್ದ. ವಿಚಾರಣೆ ವೇಳೆ ನೀಡಿದ ಮಾಹಿತಿ ಮೇರೆಗೆ ತೆರಳಿ 80 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಕಾಲಿಗೆ ಗುಂಡೇಟು: 2018ರಲ್ಲಿ ಆರೋಪಿ ವಿರುದ್ಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಪ್ರಕರಣವೊಂದು ದಾಖಲಾಗಿತ್ತು. ವಿಶ್ವನಾಥ್ ಕಾಲಿಗೆ ಗುಂಡು ಹೊಡೆದು ಬಂಧಿಸಲಾಗಿತ್ತು. ನಂತರ, ಜಾಮೀನು ಪಡೆದು ಜೈಲಿನಿಂದ ಹೊರಬಂದ ಬಳಿಕ ಮತ್ತೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಬಾಡಿ ವಾರಂಟ್ ಪಡೆದು ವಿಚಾರಣೆ: ಅ.11ರಂದು ಆರೋಪಿಯನ್ನು ಹೈದರಾಬಾದ್‌ನ ಚೈತನ್ಯಪುರಿ ಠಾಣೆ ಪೊಲೀಸರು ಪ್ರಕರಣವೊಂದರ ಸಂಬಂಧ ಬಂಧಿಸಿದ್ದರು. ಆ ಮಾಹಿತಿ ಆಧರಿಸಿ ಬಾಡಿ ವಾರಂಟ್ ಪಡೆದು ಆರೋಪಿಯನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಗೊತ್ತಾಗಿದೆ.

70 ಲಾರಿಗಳ ಮಾಲೀಕ

ಅಪರಾಧ ಸುದ್ದಿ

ಕೋಳಿವಾಡದಲ್ಲಿ 70 ಲಾರಿಗಳ ಮಾಲೀಕನಾಗಿದ್ದ ವಿಶ್ವನಾಥ್, ಗಣಿಗಾರಿಕೆ ವ್ಯವಹಾರ ಮಾಡುತ್ತಿದ್ದ. ಶೋಕಿ ಜೀವನಕ್ಕೆ ಒಳಗಾಗಿ ಕೋಟ್ಯಂತರ ರೂಪಾಯಿ ಆಸ್ತಿ ಕಳೆದುಕೊಂಡಿದ್ದ. ಬಳಿಕ ಕುಟುಂಬದಿಂದ ದೂರವಾಗಿ, ಜೀವನ ನಿರ್ವಹಣೆ ಹಾಗೂ ಶೋಕಿ ಜೀವನ ಮುಂದುವರಿಸಲು ಸರ ಕಳವು ಮಾಡುತ್ತಿದ್ದ ಎಂದು ತನಿಖೆಯಿಂದ ಗೊತ್ತಾಗಿದೆ.

ಬೈಕ್ ಸ್ಪರ್ಧೆಯಲ್ಲಿ ಭಾಗಿ

'ವಿಶ್ವನಾಥ್ ರಾಷ್ಟ್ರ ಮಟ್ಟದ ಬೈಕ್ ರೈಡರ್ ಸಹ ಆಗಿದ್ದ. ಹಲವು ಬೈಕ್ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ. ಸರ ಕಳವು ಮಾಡುವುದಕ್ಕೂ ಮೊದಲು ಪ್ರವೇಶ ಮತ್ತು ನಿರ್ಗಮನ ರಸ್ತೆಗಳ ಬಗ್ಗೆ ಪೂರ್ಣ ಮಾಹಿತಿ ತಿಳಿದುಕೊಳ್ಳುತ್ತಿದ್ದ. ಸರ ಕಸಿದು ಕೆಲವೇ ಕ್ಷಣಗಳಲ್ಲಿ ಪರಾರಿ ಆಗುತ್ತಿದ್ದ' ಎಂದು ಪೊಲೀಸರು ಹೇಳಿದರು.

ಸಾಲ ಕೊಡಿಸಿ ₹62 ಲಕ್ಷ ವಂಚನೆ

ಕಲಬುರಗಿ: ನಗರದ ಆಟೊ ಚಾಲಕರೊಬ್ಬರಿಗೆ 'ಎ 4' ಅಳತೆಯ ಕಾಗದ ವ್ಯವಹಾರದ ಆಮಿಷವೊಡ್ಡಿದ್ದ ಗುಂಪೊಂದು, ಬ್ಯಾಂಕ್‌ನಲ್ಲಿ ಸಾಲ ಕೊಡಿಸಿದ್ದ ₹54 ಲಕ್ಷ ಸೇರಿ ಒಟ್ಟು ₹62.33 ಲಕ್ಷ ವಂಚಿಸಿದ ಆರೋಪದಡಿ ಐವರ ವಿರುದ್ಧ ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಹಾಬಜಾರ್‌ನ ಆಟೊ ಚಾಲಕ ನಾಗರಾಜ ಜಾಧವ ವಂಚನೆಗೆ ಒಳಗಾದವರು. ಜ್ಞಾನಮೂರ್ತಿ ಹಿರೇಮಠ, ಸಚಿನ್ ಬಿ. ನಂದ್ಯಾಳ, ಕಲಾವತಿ, ಸತೀಶ ಜಾಮಗೊಂಡ ಮತ್ತು ಸರೋಜಿನಿ ಜಾಮಗೊಂಡ ವಂಚಿಸಿದ ಆರೋಪಿಗಳು.

ನಾಗರಾಜಗೆ ಪರಿಚಯಸ್ಥನಾದ ಜ್ಞಾನಮೂರ್ತಿ ಅವರು ಎ-4 ಸೈಜ್ ಪೇಪರ್ ವ್ಯಾಪಾರಿಯಾಗಿದ್ದರು. ತನ್ನಂತೆ ಪೇಪರ್ ವ್ಯಾಪಾರ ಮಾಡುವಂತೆ ನಾಗರಾಜ ಅವರ ಮನವೊಲಿಸಿದ್ದರು. ಯಂತ್ರೋಪಕರಣಗಳ ಖರೀದಿಗೆ ಕೇಂದ್ರ ಸರ್ಕಾರದ ಎಂಎಸ್‌ಎಂಇ ಸಾಲ ಕೊಡಿಸುವುದಾಗಿ ನಂಬಿಸಿದ್ದರು. ಖಾಸಗಿ ಬ್ಯಾಂಕ್‌ವೊಂದರಿಂದ ₹ 54 ಲಕ್ಷ ಸಾಲ ಕೊಡಿಸಿ, ₹8.33 ಲಕ್ಷ ಜಮೆ ಮಾಡಿಕೊಂಡು ಒಟ್ಟು ₹62.33 ಲಕ್ಷ ಯಂತ್ರಗಳ ಖರೀದಿಗೆಂದು ಎಸ್.ಬಿ. ಇಂಡಸ್ಟ್ರಿ ಮಾಲೀಕ ಸಚಿನ್ ಖಾತೆಗೆ ವರ್ಗಾಯಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸಚಿನ್ ಅವರು ಕಲಾವತಿ ಪ್ಯಾಕಿಂಗ್ ಬಾಕ್ಸ್ ಫರ್ಮ್ ಮಾಲೀಕರಾದ ಕಲಾವತಿ ಖಾತೆಗೆ ಹಣ ಹಾಕಿದ್ದರು. ಆರೇಳು ತಿಂಗಳಾದರೂ ಯಂತ್ರೋಪಕರಣ ಬಾರದೆ ಇದ್ದಾಗ, ಕಲಾವತಿ ಬಳಿ ತೆರಳಿ ವಿಚಾರಿಸಿದ್ದರು. ಸತೀಶ್ ಹಾಗೂ ಸರೋಜಿನಿ ಅವರಿಗೆ ಕೇಳುವಂತೆ ಸೂಚಿಸಿದ್ದರು. ಸತೀಶ್ ಹಾಗೂ ಸರೋಜಿನಿಯನ್ನು ಕೇಳಿದಾಗ, 'ನಮ್ಮ ಖಾತೆಗಳಿಗೆ ಯಾವುದೇ ಹಣ ಬಂದಿಲ್ಲ. ನಮ್ಮ ಬಳಿ ಪದೇ ಪದೇ ಬರಬೇಡಿ' ಎಂದು ನಾಗರಾಜ ಅವರನ್ನು ಬೆದರಿಸಿ ಕಳುಹಿಸಿದ್ದರು ಎಂದು ಮಾಹಿತಿ ನೀಡಿದ್ದಾರೆ.

ಟ್ಯಾಂಕ್‌ನಲ್ಲಿ ಹಸುಗೂಸಿನ ಶವ

ಪ್ರಜಾವಾಣಿ ವಾರ್ತೆ

ಆನೇಕಲ್: ತೊಟ್ಟಿಲಲ್ಲಿದ್ದ ಒಂದೂವರೆ ತಿಂಗಳ ಹೆಣ್ಣು ಹಸುಗೂಸು ಮನೆ ಮೇಲಿನ ಸಿಂಟೆಕ್ಸ್ ಟ್ಯಾಂಕ್‌ನಲ್ಲಿ ಶವವಾಗಿ ಪತ್ತೆಯಾಗಿದೆ. ಸೂರ್ಯಸಿಟಿ ಪೊಲೀಸ್ ಠಾಣೆ ವ್ಯಾಪ್ತಿ ಇಗ್ಗಲೂರು ಗ್ರಾಮದಲ್ಲಿ ಸೋಮವಾರ ಈ ಘಟನೆ ನಡೆದಿದೆ. ಹಸುಗೂಸನ್ನು ಪರಿಚಿತರೇ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ಮೃತ ಹಸುಗೂಸು ಮನು ಮತ್ತು ಹರ್ಷಿತಾ ದಂಪತಿ ಮಗು. ಒಂದೂವರೆ ವರ್ಷದ ಹಿಂದೆ ಇವರ ವಿವಾಹವಾಗಿತ್ತು. ಈ ದಂಪತಿಗೆ ಕಳೆದ ಒಂದೂವರೆ ತಿಂಗಳ ಹಿಂದೆ ಮಗು ಜನಿಸಿತ್ತು. ಏಳು ತಿಂಗಳಿಗೆ ಮಗು ಜನಿಸಿದ್ದರಿಂದ ಕಳೆದ ಒಂದು ತಿಂಗಳಿಗೂ ಹೆಚ್ಚು ಕಾಲ ಆಸ್ಪತ್ರೆಯಲ್ಲಿತ್ತು. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ಮೇಲೆ ಡಿಸ್‌ಚಾರ್ಜ್ ಮಾಡಲಾಗಿತ್ತು.

ಸೋಮವಾರ ಮಧ್ಯಾಹ್ನ ಹರ್ಷಿತಾ ಶೌಚಾಲಯಕ್ಕೆ ಹೋಗಿ ಬರುವಷ್ಟರಲ್ಲಿ ತೊಟ್ಟಿಲಲ್ಲಿದ್ದ ಮಗು ಕಾಣೆಯಾಗಿತ್ತು. ಕುಟುಂಬ ಸದಸ್ಯರು ಮಗುವಿಗಾಗಿ ಹುಡುಕಾಟ ನಡೆಸಿದ್ದರು. ನಂತರ ಸೂರ್ಯಸಿಟಿ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಹುಡುಕಾಟ ನಡೆಸಿದಾಗ ಮನೆ ಮೇಲಿನ ಸಿಂಟೆಕ್ಸ್ ಟ್ಯಾಂಕ್‌ನಲ್ಲಿ ಮಗು ಶವವಾಗಿ ಪತ್ತೆಯಾಗಿದೆ.

ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕನ್ನಡ ಸಂಘರ್ಷ ಸಮಿತಿಯ ಮಾಜಿ ಅಧ್ಯಕ್ಷ ರಾಮಣ್ಣ ಎಚ್‌. ಕೋಡಿಹೊಸಹಳ್ಳಿ ಅವರಿಗೆ 'ಕನ್ನಡಪರ ಹೋರಾಟರತ್ನ ದತ್ತಿ ಪ್ರಶಸ್ತಿ'ಯನ್ನು ಸಾಹಿತಿ ಪಿ.ವಿ. ನಾರಾಯಣ ಅವರು ಪ್ರದಾನ ಮಾಡಿದರು. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ದತ್ತಿ ಪ್ರಶಸ್ತಿ ಸಂಸ್ಥಾಪಕರಾದ ವಿ. ರಾಣಿ ಗೋವಿಂದರಾಜು, ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಗೌರವ ಕಾರ್ಯದರ್ಶಿ ಶಾಂತರಾಜು ಉಪಸ್ಥಿತರಿದ್ದರು

ಕಲಬುರಗಿಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತೀರ್ಪು

ಬಾಲಕಿ ಮೇಲೆ ಅತ್ಯಾಚಾರ: 35 ವರ್ಷ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪ ಸಾಬೀತಾಗಿದ್ದರಿಂದ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ರಾಯಕೋಡ ಗ್ರಾಮದ ಮಹೇಶ ಮಲ್ಲಪ್ಪ ತಳವಾರ (26) ಎಂಬಾತನಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ(-ಪೋಕ್ಸೊ)ವು 35 ವರ್ಷ ಜೈಲು ಶಿಕ್ಷೆ ಹಾಗೂ ₹ 39 ಸಾವಿರ ದಂಡ ವಿಧಿಸಿದೆ.

ಸೇಡಂ ತಾಲ್ಲೂಕಿನ ಮುಧೋಳ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರ ಬಾಲಕಿಯ ಮೇಲೆ ಮಹೇಶ 2019ರ ಡಿಸೆಂಬರ್ 15ರಂದು ಅತ್ಯಾಚಾರ ಎಸಗಿದ್ದ. ಮಹೇಶನಿಗೆ ಈಗಾಗಲೇ ಮದುವೆಯಾಗಿದ್ದರೂ ಬಾಲಕಿಯನ್ನು ಪುಸಲಾಯಿಸಿ ಅತ್ಯಾಚಾರ ಎಸಗಿದ್ದ. ಬಾಲಕಿಯೊಂದಿಗೆ ತಾನಿರುವ ಚಿತ್ರಗಳನ್ನು ಮಹೇಶ, ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ. ಬಾಲಕಿಗೆ ಪ್ರೇಮಪತ್ರಗಳನ್ನೂ ಬರೆದಿದ್ದ ಎಂದು ಪೋಷಕರು ಮುಧೋಳ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಮುಧೋಳ ಸಿಪಿಐಗಳಾದ ಜಗದೀಶ ಕೆ.ಜಿ. ಹಾಗೂ ಸಂದೀಪ್ ಸಿಂಗ್ ಪಿ. ಮುರುಗೋಡ ಅವರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಅವರು ಪೋಕ್ಸೊ ಕಾಯ್ದೆಯಡಿ ಅಪರಾಧಿಗೆ 35 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿದರು.

ಸಂತ್ರಸ್ತ ಬಾಲಕಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ₹7 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರ ಬಿ. ತುಪ್ಪದ ವಾದ ಮಂಡಿಸಿದ್ದರು.

ಶೌಚಾಲಯದಲ್ಲಿ ಮೊಬೈಲ್ ಇಟ್ಟು ಮಹಿಳೆಯರ ದೃಶ್ಯ ಸೆರೆ

ಬೆಂಗಳೂರು: ಜಯದೇವ ಆಸ್ಪತ್ರೆಯ ಶೌಚಾಲಯದಲ್ಲಿ ಮೊಬೈಲ್ ಫೋನ್ ಇಟ್ಟು ಮಹಿಳೆಯರ ಖಾಸಗಿ ಅಂಗಾಂಗ ದೃಶ್ಯಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತಿದ್ದ ಆರೋಪಿಯನ್ನು ತಿಲಕ್‌ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಯದೇವ ಆಸ್ಪತ್ರೆಯ ವಾರ್ಡ್ ಹೆಲ್ಪರ್ ಯಲ್ಲಾಲಿಂಗ ಬಂಧಿತ ಆರೋಪಿ.

ಜಯದೇವ ಆಸ್ಪತ್ರೆಯಲ್ಲಿ ಐದು ವರ್ಷದಿಂದ ವಾರ್ಡ್ ಹೆಲ್ಪರ್ ಆಗಿ ಕೆಲಸ ಮಾಡುತ್ತಿರುವ ಮಹಿಳೆಯೊಬ್ಬರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಅಕ್ಟೋಬರ್ 31ರಂದು ಬೆಳಿಗ್ಗೆ 8.30ರ ಸುಮಾರಿಗೆ ಮಹಿಳೆ ಆಸ್ಪತ್ರೆಗೆ ಬಂದು ಕೆಲಸ ಮಾಡುತ್ತಿದ್ದರು. ಆಸ್ಪತ್ರೆಯ ನೆಲಮಹಡಿಯಲ್ಲಿ ಇರುವ ಶೌಚಾಲಯಕ್ಕೆ ಮಹಿಳೆ ತೆರಳಿದ್ದರು. ಶೌಚಾಲಯದ ಗೋಡೆಯ ಮೇಲೆ ಮೊಬೈಲ್ ಪತ್ತೆಯಾಗಿತ್ತು. ಆ ಮೊಬೈಲ್ ಪರಿಶೀಲಿಸಿದಾಗ ಆಕೆಯ ಖಾಸಗಿ ಅಂಗಾಂಗವಿದ್ದ ವಿಡಿಯೊ ರೆಕಾರ್ಡ್ ಆಗಿತ್ತು. ಆ ಮೊಬೈಲ್ ತೆಗೆದುಕೊಂಡು ಮಹಿಳೆ ಹೊರಗೆ ಬಂದಿದ್ದರು. ಅದೇ ವೇಳೆ ಆರೋಪಿ ಬಂದು, ಮೊಬೈಲ್ ಕೊಡುವಂತೆ ಕೇಳಿಕೊಂಡಿದ್ದ. ಅದೇ ಸಮಯಕ್ಕೆ ಆಸ್ಪತ್ರೆಯ ಬೇರೆ ಬೇರೆ ವಿಭಾಗದ ಸಿಬ್ಬಂದಿ ಸ್ಥಳಕ್ಕೆ ಬಂದು ಆರೋಪಿಯನ್ನು ಹಿಡಿದುಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ. ಮಹಿಳೆಯರ ಖಾಸಗಿ ಅಂಗಾಂಗ ಸೆರೆ ಹಿಡಿಯಲು ಶೌಚಾಲಯದ ಗೋಡೆಯಲ್ಲಿ ಮೊಬೈಲ್ ಇಟ್ಟಿದ್ದಾಗಿ ಹೇಳಿಕೆ ನೀಡಿದ್ದಾನೆ. ಮೊಬೈಲ್ ಪರಿಶೀಲನೆ ನಡೆಸಲಾಗಿದ್ದು, ಹಲವು ವಿಡಿಯೊಗಳು ಅದರಲ್ಲಿ ಇದ್ದವು' ಎಂದು ಪೊಲೀಸರು ಹೇಳಿದರು.

ಅಮಾನತು: ಯಲ್ಲಾಲಿಂಗ ಅವರು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು. ದೂರು ದಾಖಲಾದ ಬಳಿಕ ಸಂಸ್ಥೆಯ ಪೋಷ್ ಸಮಿತಿ ಎದುರು ಅವರನ್ನು ವಿಚಾರಣೆಗೆ ಒಳಪಡಿಸಿ, ಅಮಾನತು ಮಾಡಲಾಗಿದೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿಚಕ್ರ ವಾಹನ ಕಳ್ಳತನ: ಆರು ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಅಪಾರ್ಟ್‌ಮೆಂಟ್, ಮನೆಗಳ ಎದುರು ಹಾಗೂ ರಸ್ತೆ ಬದಿಯಲ್ಲಿ ನಿಲುಗಡೆ ಮಾಡುವ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಗಳನ್ನು ಮೈಕೋ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನ್ಯೂ ಗುರಪ್ಪನಪಾಳ್ಯದ ನಿವಾಸಿ ಸಮೀರುದ್ದೀನ್(22), ಬಿಟಿಎಂ ಎರಡನೇ ಹಂತದ ನಿವಾಸಿ ಪಿ.ಆದೀಶ್(21), ಬೇಗೂರಿನ ಶಾಬಾದ್ ಖಾನ್(27), ಮೈಲಸಂದ್ರದ ಹನುಮೇಶ್(19), ಬೆಂಗಳೂರು ಗ್ರಾಮಾಂತರ ಜಿಲ್ಲೆ ಆನೇಕಲ್ ತಾಲ್ಲೂಕಿನ ಸರ್ಜಾಪುರದ ನಿವಾಸಿ ಎಂ.ಚಂದನ್(19) ಹಾಗೂ ಆಡುಗೋಡಿಯ ಅಂಬೇಡ್ಕರ್ ನಗರದ ಬೃಂದಾವನ ಗಾರ್ಡನ್ ನಿವಾಸಿ ಆರ್. ಅಶೋಕ್ ಬಂಧಿತ ಆರೋಪಿಗಳು. ಎಲ್ಲರೂ ಸ್ನೇಹಿತರಾಗಿದ್ದರೂ ಒಟ್ಟಾಗಿ ಕಳ್ಳತನ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಬಂಧಿತರಿಂದ ₹11.60 ಲಕ್ಷ ಮೌಲ್ಯದ ವಿವಿಧ ಕಂಪನಿಯ 29 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

'ಬಿಳೇಕಳ್ಳಿಯ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿಗಳ ಬಂಧನದಿಂದ ಮೈಕೋ ಲೇಔಟ್, ಮಡಿವಾಳ, ಎಸ್‌ಜಿ ಪಾಳ್ಯ, ತಿಲಕ್‌ನಗರ, ಜೆ.ಪಿ. ನಗರ ಸೇರಿದಂತೆ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ 17 ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳು ಪತ್ತೆ ಆಗಿವೆ' ಎಂದು ಪೊಲೀಸರು ಹೇಳಿದರು.

ವ್ಹೀಲಿಗೆ ಬಳಕೆ: ಕಳ್ಳತನ ಮಾಡಿದ ದ್ವಿಚಕ್ರ ವಾಹನಗಳನ್ನು ವ್ಹೀಲಿ ಮಾಡಲು ಆರೋಪಿಗಳು ಬಳಸುತ್ತಿದ್ದರು. ಕೆಲವು ಬೈಕ್‌ಗಳನ್ನು ಮಾರಾಟ ಮಾಡುತ್ತಿದ್ದರು ಎಂದಿದ್ದಾರೆ.

ಫುಡ್ ಡೆಲಿವರಿ ಸೋಗಿನಲ್ಲಿ ಲ್ಯಾಪ್‌ಟಾಪ್ ಕಳವು

ಬೆಂಗಳೂರು: ಪೇಯಿಂಗ್ ಗೆಸ್ಟ್‌ಗಳಿಗೆ(ಪಿ.ಜಿ) ನುಗ್ಗಿ ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಫೋನ್ ಕಳವು ಮಾಡುತ್ತಿದ್ದ ಆರೋಪಿಯನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ಆಂಧ್ರಪ್ರದೇಶದ ನವೀನ್ ರೆಡ್ಡಿ(30) ಬಂಧಿತ.

ಆರೋಪಿಯಿಂದ ₹10 ಲಕ್ಷ ಮೌಲ್ಯದ, ವಿವಿಧ ಕಂಪನಿಗಳ 16 ಲ್ಯಾಪ್‌ಟಾಪ್ ಹಾಗೂ ನಾಲ್ಕು ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

'ಬಿ.ಎಸ್ಸಿ ಕಂಪ್ಯೂಟರ್ ಸೈನ್ಸ್ ಪದವಿ ಪಡೆದಿದ್ದ ನವೀನ್ ರೆಡ್ಡಿ, ಉದ್ಯೋಗ ಅರಸಿ ಬೆಂಗಳೂರಿಗೆ ಬಂದಿದ್ದ. ಬೆಳ್ಳಂದೂರಿನಲ್ಲಿ ಬಾಡಿಗೆ ಮನೆಯಲ್ಲಿ ನೆಲಸಿದ್ದ. ಫುಡ್ ಡೆಲಿವರಿ ಬಾಯ್ ಆಗಿ ಕೆಲಸ ಮಾಡಿಕೊಂಡಿದ್ದ. ಇತ್ತೀಚೆಗೆ ಪಿ.ಜಿಗೆ ಫುಡ್ ಡೆಲಿವರಿ ಸೋಗಿನಲ್ಲಿ ಹೋಗಿ, ಯಾರೂ ಇಲ್ಲದ ವೇಳೆ ಲ್ಯಾಪ್‌ಟಾಪ್ ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದ' ಎಂದು ಪೊಲೀಸರು ತಿಳಿಸಿದರು.

ಆರೋಪಿಯ ಬಳಿ 16 ಲ್ಯಾಪ್‌ಟಾಪ್‌ಗಳು ಪತ್ತೆ ಆಗಿದ್ದವು. ವಿಚಾರಣೆ ನಡೆಸಿದಾಗ ಆರೋಪಿ ಲ್ಯಾಪ್‌ಟಾಪ್ ಕಳ್ಳತನ ಮಾಡಿರುವುದಾಗಿ ಹೇಳಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

₹1.37 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಕೇರಳದಿಂದ ಮಾದಕ ವಸ್ತು ತಂದು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದಿಂದ ಡ್ರಗ್ಸ್ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೇರಳದ ನವನೀತ್ ಹಾಗೂ ಶಾನಿಲ್ ಬಾಬು ಬಂಧಿತರು.

ಬಂಧಿತರಿಂದ 975 ಗ್ರಾಂ ಎಂಡಿಎಂಎ ಕ್ರಿಸ್ಟಲ್, 407 ಗ್ರಾಂ ಕೊಕೇನ್, ಎರಡು ತೂಕದ ಯಂತ್ರ, ಎರಡು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹1.37 ಕೋಟಿ ಎಂಬುದಾಗಿ ಅಂದಾಜಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ವಿಲ್ಸನ್ ಗಾರ್ಡನ್‌ನ 10ನೇ ಕ್ರಾಸ್‌ನಲ್ಲಿ ಇರುವ ಹೊಂಬೇಗೌಡ ಆಟದ ಮೈದಾನದಲ್ಲಿ ಆರೋಪಿಯೊಬ್ಬ ಡ್ರಗ್ಸ್ ಮಾರಾಟ ಮಾಡುತ್ತಿರುವ ಬಗ್ಗೆ ಪೊಲೀಸ್ ಬಾತ್ಮೀದಾರರೊಬ್ಬರು ಮಾಹಿತಿ ನೀಡಿದ್ದರು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಅದೇ ಸ್ಥಳದಲ್ಲಿ ಒಬ್ಬ ಆರೋಪಿಯನ್ನು ಬಂಧಿಸಲಾಯಿತು. ಆತನಿಂದ 110 ಗ್ರಾಂ ನಿಷೇಧಿತ ಮಾದಕ ವಸ್ತು ಜಪ್ತಿ ಮಾಡಿಕೊಳ್ಳಲಾಗಿತ್ತು. ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಏಳು ದಿನಗಳು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯದಲ್ಲಿ ಮತ್ತೊಬ್ಬ ಆರೋಪಿ ಭಾಗಿ ಆಗಿರುವ ಸುಳಿವು ನೀಡಿದ್ದ' ಎಂದು ಪೊಲೀಸರು ಹೇಳಿದರು.

'ಮತ್ತೊಬ್ಬ ಆರೋಪಿಯನ್ನು ಪ್ರಸನ್ನ ದೇವಸ್ಥಾನ ಬಳಿ ವಶಕ್ಕೆ ಪಡೆದು ಬಂಧಿಸಲಾಯಿತು. ಈತನಿಂದ 407 ಗ್ರಾಂ ಕೊಕೇನ್, 865 ಗ್ರಾಂ ಎಂಡಿಎಂಎ ಕ್ರಿಸ್ಟಲ್, ಒಂದು ಮೊಬೈಲ್ ಫೋನ್ ವಶಕ್ಕೆ ಪಡೆದುಕೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಆರೋಪಿಗಳು ಕೇರಳದಿಂದ ನಗರಕ್ಕೆ ಡ್ರಗ್ಸ್ ತಂದು ಮಾರಾಟ ಮಾಡುತ್ತಿದ್ದರು. ನಗರದಲ್ಲಿ ಕೆಲವು ದಿನ ವಾಸ್ತವ್ಯ ಮಾಡಿ ಗ್ರಾಹಕರಿಗೆ ಡ್ರಗ್ಸ್ ಪೂರೈಸುತ್ತಿದ್ದರು. ತಂದ ಡ್ರಗ್ಸ್ ಖಾಲಿಯಾದ ಮೇಲೆ ಮತ್ತೆ ಕೇರಳಕ್ಕೆ ತೆರಳುತ್ತಿದ್ದರು. ಹಲವು ತಿಂಗಳಿಂದ ಇದೇ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

ರೌಡಿಶೀಟರ್ ಸೇರಿ ಐವರ ಸೆರೆ

ಬೆಂಗಳೂರು: ಮನೆಗಳ ಬಾಗಿಲಿಗೆ ಹಾಕಲಾಗಿದ್ದ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡುತ್ತಿದ್ದ ರೌಡಿಶೀಟರ್, ಆತನ ಪತ್ನಿ ಸೇರಿದಂತೆ ಐವರನ್ನು ಪೀಣ್ಯ ಪೊಲೀಸರು ಬಂಧಿಸಿದ್ದಾರೆ.

ಬ್ಯಾಡರಹಳ್ಳಿಯ ಮಾಣಿಕ್ಯ(26), ರೌಡಿಶೀಟರ್ ಗೌತಮ್ ಶೆಟ್ಟಿ(30), ಆತನ ಪತ್ನಿ ಶಿಬಾ(28), ಸಹಚರರಾದ ದಯಾನಂದ್(27) ಮತ್ತು ನರಸಿಂಹ(28) ಬಂಧಿತರು.

ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ

ಆರೋಪಿಗಳಿಂದ ₹21 ಲಕ್ಷ ಮೌಲ್ಯದ 325 ಗ್ರಾಂ ಚಿನ್ನಾಭರಣ, ಒಂದು ಕೆ.ಜಿ 800 ಗ್ರಾಂ ಬೆಳ್ಳಿಯ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳು ಎಚ್‌ಎಂಟಿ ಲೇಔಟ್‌ನ ಮನೆಯ ಬೀಗ ಒಡೆದು ಒಳ ನುಗ್ಗಿ ಚಿನ್ನಾಭರಣ ದೋಚಿ ಪರಾರಿ ಆಗಿದ್ದರು. ಮನೆ ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಕದ್ದ ಚಿನ್ನಾಭರಣಗಳನ್ನು ಹಣಕಾಸು ಸಂಸ್ಥೆ ಹಾಗೂ ಚಿನ್ನಾಭರಣ ಅಂಗಡಿಗಳಲ್ಲಿ ಅಡಮಾನ ಇಡುತ್ತಿದ್ದರು. ಆ ಚಿನ್ನವನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಗೌತಮ್ ಶೆಟ್ಟಿ ಮಾಗಡಿ ರಸ್ತೆ ಠಾಣೆಯ ರೌಡಿಶೀಟರ್ ಆಗಿದ್ದಾನೆ. ಆತನ ಪತ್ನಿ ಶಿಬಾ ಪತಿ ಕೃತ್ಯಗಳಿಗೆ ಸಹಕಾರ ನೀಡುತ್ತಿದ್ದಳು. ಆರೋಪಿ ಮಾಣಿಕ್ಯನ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಹತ್ತಕ್ಕೂ ಹೆಚ್ಚು ಕಳವು ಪ್ರಕರಣಗಳು ದಾಖಲಾಗಿವೆ' ಎಂದು ಪೊಲೀಸರು ತಿಳಿಸಿದರು.

ಗುಜರಾತ್‌ನ ಪ್ರತಿಷ್ಠೆಗೆ ಕಳಂಕ ಆರೋಪ: ಎಫ್‌ಐಆರ್

ಅಹಮದಾಬಾದ್: ಗುಜರಾತ್ ರಾಜ್ಯದ ಪ್ರತಿಷ್ಠೆಗೆ 'ಕಳಂಕ' ತರುವ ವಿಡಿಯೊ ಪೋಸ್ಟ್ ಮಾಡುವ ಮೂಲಕ ತಪ್ಪು ಮಾಹಿತಿ ಹರಡಿದ ಆರೋಪದಲ್ಲಿ ಅಹಮದಾಬಾದ್ ಪೊಲೀಸರ ಸೈಬರ್ ಸೆಲ್ ಘಟಕವು 'ಎಕ್ಸ್' ಬಳಕೆದಾರರೊಬ್ಬರ ವಿರುದ್ಧ ಎಫ್‌ಐಆರ್ ದಾಖಲಿಸಿದೆ.

'ಮಿಸ್ ಪಾಯಲ್ ಗುಪ್ತಾ' ಎಂಬ ಹೆಸರಿನ 'ಎಕ್ಸ್' ಖಾತೆ ಹೊಂದಿರುವ ಪಾಯಲ್ ಗುಪ್ತಾ ಎಂಬಾಕೆ ವಿರುದ್ಧ ಪ್ರಕರಣ ದಾಖಲಾಗಿದೆ. ತಾನು ಬೆಂಗಳೂರಿನ ನಿವಾಸಿ ಎಂದು ಪಾಯಲ್ ಅವರು ತಮ್ಮ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಯನ್ನು ಆಸ್ಪತ್ರೆಗೆ ಕರೆತರಲಾಯಿತು. ಆದರೆ ಅಲ್ಲಿ ಸ್ಥಳದ ಅಭಾವದಿಂದ ಚಿಕಿತ್ಸೆ ಸಿಗದೆ ನೆಲದಲ್ಲೇ ಒದ್ದಾಡಿ ಪ್ರಾಣ ಬಿಟ್ಟಿದ್ದಾರೆ. ಇದು ಗುಜರಾತ್‌ನ ವಿಡಿಯೊ' ಎಂಬ ಅಡಿಬರಹದೊಂದಿಗೆ ವಿಡಿಯೊ ಪೋಸ್ಟ್ ಮಾಡಿದ್ದ ಪಾಯಲ್, ಬಳಿಕ ಅದನ್ನು ಅಳಿಸಿಹಾಕಿದ್ದರು.

ಆದರೆ ವಿಡಿಯೊ ಗಮನಿಸಿದ್ದ ಗುಜರಾತ್ ಗೃಹ ಸಚಿವ ಹರ್ಷ ಸಂಘವಿ ಅವರು ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಿದ್ದರು.

ಪೋಸ್ಟ್ ಮಾಡಿರುವ ವಿಡಿಯೊ ಗುಜರಾತ್‌ನದ್ದು ಅಲ್ಲ. ಅದು ಛತ್ತೀಸ್‌ಗಢದ ಬಿಲಾಸಪುರದ್ದು ಎಂದು ಎಫ್‌ಐ-ಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಸಚಿವ ತಿಮ್ಮಾಪುರ ವಜಾಕ್ಕೆ ಸುನಿಲ್ ಕುಮಾರ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಬಕಾರಿ ಸಚಿವ ಆರ್. ಬಿ.ತಿಮ್ಮಾಪುರ ಅವರು ವರ್ಗಾವಣೆ, ಲೈಸನ್ಸ್‌ಗೆ ಕಾಸು ಮತ್ತು ಸನ್ನದುದಾರರಿಂದ ತಿಂಗಳ ವಸೂಲಿ ಮೂಲಕ ವರ್ಷಕ್ಕೆ ₹500 ಕೋಟಿ ಸಂಗ್ರಹಿಸುತ್ತಿದ್ದಾರೆ ಎಂದು ಮದ್ಯ ಮಾರಾಟಗಾರರ ಸಂಘವು ಆರೋಪಿಸಿದೆ. ಆದ್ದರಿಂದ ಸಚಿವರನ್ನು ಸಂಪುಟದಿಂದ ವಜಾಗೊಳಿಸಬೇಕು' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ಒತ್ತಾಯಿಸಿದ್ದಾರೆ.

'ಹಲೋ ಅಪ್ಪಾ. . ಎಂಬಲ್ಲಿಂದ ಪ್ರಾರಂಭವಾದ ರಾಜ್ಯ ಸರ್ಕಾರದ ವರ್ಗಾವಣೆ ವ್ಯವಹಾರ ಈಗ ಅಬಕಾರಿ ಸಚಿವ ತಿಮ್ಮಾಪುರವರೆಗೆ ಬಂದು ನಿಂತಿದೆ' ಎಂದು ಅವರು ಆರೋಪಿಸಿದ್ದಾರೆ.

'ಸಿದ್ದರಾಮಯ್ಯ ಅವರೇ 'ಮಂತ್ರಿ ಕಲೆಕ್ಟರ್' ತಿಮ್ಮಾಪುರ ಅವರನ್ನು ಸಂಪುಟದಿಂದ ಕಿತ್ತೊಗೆಯುತ್ತೀರೋ ಅಥವಾ ವರಿಷ್ಠರ ರಾಜಸ್ವ ಕೊರತೆ ನೀಗಿಸಲು ಪಾಲು ಕೇಳುತ್ತೀರೋ' ಎಂದು ಪ್ರಶ್ನಿಸಿದ್ದಾರೆ.

ರೈತರ ಆಸ್ತಿ ಕಬಳಿಕೆ ಷಡ್ಯಂತ್ರ: ವಕ್ಫ್ ಆಸ್ತಿ ಒತ್ತುವರಿ ನೆಪದಲ್ಲಿ ರಾಜ್ಯದ ರೈತರ ಭೂಮಿ ಕಬಳಿಸಲು ಸರ್ಕಾರ ಮುಂದಾಗಿದ್ದು ಆಕಸ್ಮಿಕವೂ ಅಲ್ಲ, ಕಣ್ತಪ್ಪಿನ ಕಾರ್ಯವೂ ಅಲ್ಲ. ಇದೊಂದು ವ್ಯವಸ್ಥಿತ ಷಡ್ಯಂತ್ರ ಎಂದು ಸುನಿಲ್‌ಕುಮಾರ್ ಆರೋಪಿಸಿದರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಐ.ಟಿ.ಐ ಎಂಪ್ಲಾಯೀಸ್ ಯೂನಿಯನ್ ಇವರ ಮಾಲೀಕತ್ವದಲ್ಲಿರುವ ಮತ್ತು ವಾರ್ಡ್ ನಂ. 93, ವಸಂತನಗರ, ಎಸ್.ಆರ್.ಟಿ. ರೋಡ್, ವಸಂತನಗರ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು ವಿಳಾಸದಲ್ಲಿರುವ (ಹಳೆಯ ನಂ. 15 ಮತ್ತು ಹೊಸ ನಂ. 18) ಮತ್ತು ಮುನಿಸಿಪಲ್ ನಂ. 18/2, ಪಿಐಡಿ ನಂ. 78-61-18/2 ಹೊಂದಿರುವ 1423.1810 ಚದರ ಮೀಟರ್/ 15319 ಚದರ ಅಡಿಗಳು ಸ್ವತ್ತನ್ನು ಖರೀದಿಸಲು ಉದ್ದೇಶಿಸಿರುತ್ತಾರೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:

ಪೂರ್ವಕ್ಕೆ: ಡಾ. ಪಟೇಲ್ ರವರಿಗೆ ಸಂಬಂಧಿತ ಸ್ವತ್ತು ಮತ್ತು ಹಳೆಯ ನಂ. 15, ಹೊಸ ನಂ. 18 ಹೊಂದಿರುವ ಸ್ವತ್ತು;
ಪಶ್ಚಿಮಕ್ಕೆ: ನಂ. 17 ಹೊಂದಿರುವ ಸ್ವತ್ತು, ಕನ್ನಿಂಗ್‌ಹ್ಯಾಮ್ ರಸ್ತೆ;
ಉತ್ತರಕ್ಕೆ: ಖಾಸಗಿ ಸ್ವತ್ತು;
ದಕ್ಷಿಣಕ್ಕೆ: ಕನ್ನಿಂಗ್‌ಹ್ಯಾಮ್ ರಸ್ತೆ.

ಈ ಮೇಲ್ಕಂಡ ಮಾಲೀಕರು, ಸದರಿ ಷೆಡ್ಯೂಲ್ ಸ್ವತ್ತು ಯಾವುದೇ ಚಾಲ್ತಿ ಅಥವಾ ಹಳೆಯ ಅಧಿಕೃತ ಋಣಭಾರಗಳಿಗೆ ಒಳಪಟ್ಟಿರುವುದಿಲ್ಲ, ಇನ್ನಿತರರ ಲೀನ್ ಅಥವಾ ಚಾರ್ಜ್‌ಗೆ ಒಳಪಟ್ಟಿರುವುದಿಲ್ಲ ಹಾಗೂ ಇದಕ್ಕೆ ಸಂಬಂಧಿಸಿದಂತೆ ಅಥವಾ ಸದರಿ ಷೆಡ್ಯೂಲ್ ಸ್ವತ್ತುಗೆ ಸಂಬಂಧಿತ ಮಾಲೀಕರು ಹೊರಡಿಸಿರುವ ಯಾವುದೇ ಅಧಿಕೃತ ಮಾರಾಟ ಒಪ್ಪಂದಗಳಾಗಲಿ ಇರುವುದಿಲ್ಲ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿಯು ಸದರಿ ಸ್ವತ್ತಿಗೆ ಪ್ರತಿಯಾಗಿ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಅಥವಾ ಕ್ಲೇಮ್ ಹೊಂದಿದ್ದಲ್ಲಿ, ಆದರೆ ಯಾವುದೇ ಋಣಭಾರಕ್ಕೆ ಸೀಮಿತವಾಗಿರದೆ ಚಾರ್ಜ್, ಅಡಮಾನ ಅಥವಾ ಲೀನ್ ಮೂಲಕ ಅಥವಾ ಮಾರಾಟ ಒಪ್ಪಂದಕ್ಕೆ ಪಕ್ಷಗಾರರಾಗಿ ಅಥವಾ ಸದರಿ ಷೆಡ್ಯೂಲ್ ಸ್ವತ್ತಿನಲ್ಲಿ ಅಥವಾ ಸ್ವತ್ತಿನ ಯಾವುದೇ ಭಾಗದಲ್ಲಿ ಕ್ಲೇಮ್ ಹೊಂದಿದ್ದರೆ, ಅಂತಹವರು ಈ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ ತಮ್ಮ ಕ್ಲೇಮ್‌ಗಳನ್ನು ದಾಖಲಾತಿ ಪುರಾವೆಗಳ ಸಮೇತ ನಮಗೆ ಸಲ್ಲಿಸಬೇಕು, ಇಲ್ಲವಾದಲ್ಲಿ, ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಋಣಭಾರಗಳ, ಚಾರ್ಜ್‌ಗಳು ಅಥವಾ ಲೀನ್ ಅಥವಾ ಇನ್ಯಾವುದೇ ಅಧಿಕೃತ ಮತ್ತು ಪೂರಕ ಒಡಂಬಡಿಕೆಗಳು ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ.

ಸಹಿ/-
ಶಿಲ್ಪಾ ಗೌತಮ್, ವಕೀಲರು
ಕಿಂಗ್ & ಪಾರ್ಟ್ನರ್ಸ್, ವಕೀಲರು

ಸ್ಥಳ: ಬೆಂಗಳೂರು
ದಿನಾಂಕ: 06/11/2024

ನಂ. 48. ಲ್ಯಾವೆಲ್ಲೆ ರೋಡ್, ಬೆಂಗಳೂರು 560001, ಫೋನ್ ನಂ. 080 22212341/42.

NECC DAY

ದಿವಂಗತ ಡಾ. ಬಿ. ವಿ. ರಾವ್
(1935-1996)

ಇವರ 89ನೇ ಜನ್ಮ ವಾರ್ಷಿಕೋತ್ಸವ ದಿನವಾದ ಇಂದು, ಭಾರತೀಯ ಕುಕ್ಕುಟ ಉದ್ಯಮವನ್ನು ಒಂದು ಅತ್ಯಾಧುನಿಕ, ತಂತ್ರಜ್ಞಾನ ಚಾಲಿತ, ವೈಜ್ಞಾನಿಕ ರೂಪದ ಉದ್ಯಮವನ್ನಾಗಿ ಪುನಃ ರೂಪಿಸಿದ, ಭಾರತೀಯ ಕುಕ್ಕುಟ ಉದ್ಯಮದ ಜನಕರಾದ ಪದ್ಮಶ್ರೀ ಡಾ. ಬಿ.ವಿ. ರಾವ್ ಅವರಿಗೆ ನಮ್ಮ ನಮನಗಳನ್ನು ಸಲ್ಲಿಸುತ್ತಿದ್ದೇವೆ. ಇದೇ ಸಂದರ್ಭದಲ್ಲಿ ಭಾರತವನ್ನು ವಿಶ್ವದಲ್ಲಿಯೇ ನಂ. 1 ಕುಕ್ಕುಟೋದ್ಯಮ ರಾಷ್ಟ್ರವನ್ನಾಗಿಸಬೇಕೆಂಬ ಅವರ ಕನಸನ್ನು ನನಸಾಗಿಸುವ ನಿಟ್ಟಿನಲ್ಲಿ ನಮ್ಮನ್ನು ನಾವು ಸಮರ್ಪಿಸಿಕೊಳ್ಳುತ್ತಿದ್ದೇವೆ.

"My Egg, My Price, My Life"

NECC
ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿ
(Non-Government Public Charitable Trust)

ಡಿಸಿಸಿ ಬ್ಯಾಂಕ್: ಹಣ ದುರುಪಯೋಗ, ಮೂವರು ವ್ಯವಸ್ಥಾಪಕರ ಅಮಾನತು

ಬ್ಯಾಂಕ್ ಸಿಇಒ ವಿರುದ್ಧವೂ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕ್‌ನ ವಿವಿಧ ಶಾಖೆಗಳಲ್ಲಿ ನಡೆದಿರುವ ಹಣ ದುರುಪಯೋಗ, ವಂಚನೆ ದೂರಿನ ಸಂಬಂಧ ಮೂವರು ವ್ಯವಸ್ಥಾಪಕರನ್ನು ಅಮಾನತುಗೊಳಿಸಲಾಗಿದೆ.

ಕೋಲಾರ ಶಾಖೆ ಅಮರೇಶ್ ಎಂ., ಕೆಜಿಎಫ್ ಶಾಖೆ ವ್ಯವಸ್ಥಾಪಕರಾಗಿದ್ದ ಗಿರೀಶ್ ಜಿ.ಎನ್. ಹಾಗೂ ಚಿಂತಾಮಣಿ ಶಾಖೆ ವ್ಯವಸ್ಥಾಪಕರಾಗಿದ್ದ ನಾಗರಾಜ್ ಜಿ. ಅಮಾನತುಗೊಂಡವರು. ಒಟ್ಟು ₹9.87ಕೋಟಿ ಅವ್ಯವಹಾರ ನಡೆದಿರುವುದು ಗೊತ್ತಾಗಿದೆ. ಚಂಚಿಮಲೆಯ ಮುನೀಶ್ ಎಂಬುವರ ದೂರಿನ ಮೇಲೆ ಬ್ಯಾಂಕ್‌ನ ಆಂತರಿಕ ಪರಿವೀಕ್ಷಣಾ ಅಧಿಕಾರಿಗಳು ವಿಚಾರಣೆ ನಡೆಸಿ ನೀಡಿದ ವರದಿಯಲ್ಲೂ ಹಣ ದುರುಪಯೋಗ ಆಗಿರುವ ಉಲ್ಲೇಖವಿದೆ.

ಡಿಸಿಸಿ ಬ್ಯಾಂಕ್‌ನ ಚಿಂತಾಮಣಿ ಶಾಖೆಯಲ್ಲಿ ₹2.24 ಕೋಟಿ ವಂಚನೆ ಹಾಗೂ ಅವ್ಯವಹಾರ ಆರೋಪ ಸಂಬಂಧ ಬ್ಯಾಂಕ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಬಿ.ಎನ್. ಶೀಲಾ ವಿರುದ್ಧವೂ ಚಿಂತಾಮಣಿ ತಾಲ್ಲೂಕಿನ ಬಟ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಪ್ರಕರಣದಲ್ಲಿ ನಾಗರಾಜ್ ಜಿ. ಹಾಗೂ ಮಾಜಿ ಮೇಲ್ವಿಚಾರಕ ಸಂತೋಷ್ ಕೆ. ಪ್ರಮುಖ ಆರೋಪಿಗಳು. ಇವರಲ್ಲದೇ, ಬೊಮ್ಮೆಪಲ್ಲಿ, ಅಂಕಾಲಮಡುಗು, ಯನಮಲಪಾಡಿ ವ್ಯವಸಾಯ ಸೇವಾ ಸಹಕಾರ ಸಂಘಗಳ ಕಾರ್ಯನಿರ್ವಹಣಾಧಿಕಾರಿಗಳ ವಿರುದ್ಧವೂ ಎಫ್‌ಐಆರ್ ದಾಖಲಾಗಿತ್ತು.

ಸ್ವಸಹಾಯ ಸಂಘಗಳ ಸಾಲವನ್ನು ವಸೂಲಾತಿ ಆಧಾರದ ಮೇಲೆ ಬಡ್ಡಿ ಸಹಾಯಧನ ಪಡೆಯಲು ಅವಕಾಶವಿದೆ. ಚಿಂತಾಮಣಿ ಶಾಖೆ ಅಧಿಕಾರಿಗಳು ಸರ್ಕಾರದಿಂದ ಬರಬೇಕಾದ ಬಡ್ಡಿ ಬಾಬತ್ತು ಎಂಬ ನಕಲಿ ಖಾತೆ ಸೃಷ್ಟಿಸಿ, ವಸೂಲಾತಿ ತೋರಿಸಿ 2021ರ ಅ.29ರಿಂದ 2022ರ ಫೆ.4ರ ಅವಧಿಯಲ್ಲಿ ₹2.24 ಕೋಟಿ ಬಡ್ಡಿ ತೆಗೆದುಕೊಂಡಿದ್ದಾರೆ. ಇದು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿದ್ದು, ಆದೇಶದ ಸ್ಪಷ್ಟ ಉಲ್ಲಂಘನೆಯಾಗಿದೆ. ಬ್ಯಾಂಕ್‌ನ ಆಂತರಿಕ ಪರಿವೀಕ್ಷಣಾಧಿಕಾರಿ ವರದಿಯಲ್ಲೂ ಈ ಅಂಶದ ಉಲ್ಲೇಖವಿದೆ ಎಂದು ದೂರು ದಾಖಲಾಗಿತ್ತು.

‘ಚಿಂತಾಮಣಿ ಶಾಖೆಯಲ್ಲಿ ಬೇನಾಮಿ ಸ್ವಸಹಾಯ ಸಂಘಗಳನ್ನು ರಚಿಸಿ ಸಾಲವನ್ನು ಪಡೆದು, ಆ ಸಂಘಗಳ ವಸೂಲಿಗೆ ಬ್ಯಾಂಕ್‌ನ ಬಂಡವಾಳವನ್ನು ಬಳಸಿ ದುರುಪಯೋಗಪಡಿಸಿಕೊಂಡಿದ್ದಾರೆ’ ಎಂದು ತಳಗವಾರದ ಟಿ.ಎಸ್.ಪ್ರತಾಪ್ ಕುಮಾರ್ ಎಂಬುವವರು ದೂರು ನೀಡಿದ್ದರು.

‘ಪ್ರಕರಣದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಬ್ಯಾಂಕ್‌ನ ಸಿಇಒ ಶೀಲಾ ಕ್ರಮ ವಹಿಸಿಲ್ಲ. ಪ್ರಕರಣ ಬೆಳಕಿಗೆ ಬಂದ ತಕ್ಷಣ ಪೊಲೀಸ್ ಠಾಣೆಗೆ ದೂರು ನೀಡಿಲ್ಲ. ಪ್ರಕರಣದಲ್ಲಿ ಭಾಗಿಯಾದ ನೌಕರರನ್ನು ಅಮಾನತು ಮಾಡದೆ ಸಾಕ್ಷ್ಯ ನಾಶ ಮಾಡಲು ಸಹಕರಿಸಿ ನಬಾರ್ಡ್ ನಿಯಮ ಉಲ್ಲಂಘಿಸಿದ್ದಾರೆ. ನಂತರ ನೋಟಿಸ್ ನೀಡಿದ್ದು, ಹಣ ವಾಪಸಾಗಿಲ್ಲ’ ಎಂದೂ ದೂರಿದ್ದರು.

ಕೋಲಾರ ಶಾಖೆಯಲ್ಲಿ 2017ರಿಂದ 2021ನೇ ಸಾಲಿನವರೆಗೆ ₹1.5ಕೋಟಿ ದುರುಪಯೋಗ ನಡೆದಿದೆ ಎಂಬುದಾಗಿ ಚಂಚಿಮಲೆ ಮುನೀಶ್ ದೂರು ನೀಡಿದ್ದರು. ಬ್ಯಾಂಕ್‌ನ ಆಂತರಿಕ ಪರಿವೀಕ್ಷಣಾ ತಂಡ ಈ ಸಂಬಂಧ ವರದಿ ಸಲ್ಲಿಸಿದೆ. ಈ ಪ್ರಕರಣದಲ್ಲಿ ಶಾಖೆ ವ್ಯವಸ್ಥಾಪಕ ಅಮರೇಶ್ ಅವರನ್ನು ಅಮಾನತುಗೊಳಿಸಲಾಗಿದೆ.

ಕೆಜಿಎಫ್ ಶಾಖೆಯಲ್ಲಿ 2020ರಿಂದ 2022ರ ಅವಧಿಯಲ್ಲಿ ನಡೆದಿದೆ ಎನ್ನಲಾದ ₹4.17ಕೋಟಿ ಅವ್ಯವಹಾರ ಸಂಬಂಧ ವ್ಯವಸ್ಥಾಪಕ ಗಿರೀಶ್ ಅವರನ್ನು ಅಮಾನತುಗೊಳಿಸಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲೆ ಗುಂಡಿಬಂಡೆ ಶಾಖೆಯಲ್ಲಿ 2023–24ನೇ ಸಾಲಿನಲ್ಲಿ ₹1.96 ಕೋಟಿ ಅವ್ಯವಹಾರ ನಡೆದಿರುವ ಸಂಬಂಧ ನೌಕರರಾದ ಸುವರ್ಣಮೂರ್ತಿ ಹಾಗೂ ಅನಿಲ್ ಕುಮಾರ್ ಮೇಲೆ ಎಫ್‌ಐಆರ್ ದಾಖಲಾಗಿದೆ. ಅವರನ್ನೂ ಹಿಂದೆ ಅಮಾನತುಗೊಳಿಸಲಾಗಿತ್ತು.

ಹಣಕಾಸಿನ ಅವ್ಯವಹಾರ ಸಂಬಂಧ ಪ್ರತಿಕ್ರಿಯೆ ಪಡೆಯಲು ಡಿಸಿಸಿ ಬ್ಯಾಂಕ್‌ನ ಆಡಳಿತಾಧಿಕಾರಿ ಬಿ.ಕೆ.ಸಲೀಂ ಅವರ ಮೊಬೈಲ್ ಸಂಖ್ಯೆಗೆ ಕರೆ ಮಾಡಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ. ಸಿಇಒ ಶೀಲಾ ಪ್ರತಿಕ್ರಿಯಿಸಿ, ಮೂವರನ್ನು ಅಮಾನತುಗೊಳಿಸಿರುವುದನ್ನು ಖಚಿತಪಡಿಸಿದರು.

‘ಡಿಸಿಸಿ ಬ್ಯಾಂಕ್‌ನಲ್ಲಿ ಕಳೆದ 10 ವರ್ಷಗಳಿಂದ ದೊಡ್ಡ ಮಟ್ಟದಲ್ಲಿ ಅವ್ಯವಹಾರ ನಡೆದಿದೆ. ಹಲವರನ್ನು ರಕ್ಷಿಸಲಾಗಿದೆ. ಇದರಿಂದ ಬ್ಯಾಂಕ್‌ಗೆ ಭಾರಿ ಆರ್ಥಿಕ ನಷ್ಟ ಉಂಟಾಗಿದೆ. ನಬಾರ್ಡ್ ಹಾಗೂ ಆರ್‌ಬಿಐ ಸುತ್ತೋಲೆ ಉಲ್ಲಂಘಿಸಲಾಗಿದೆ. ಶೀಲಾ ಹಾಗೂ ಸಲೀಂ ಕರ್ತವ್ಯಲೋಪ ಎಸಗಿದ್ದಾರೆ’ ಎಂದು ದೂರುದಾರ ಮುನೀಶ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಾಂಶಗಳು

- ಒಟ್ಟು ₹9.87 ಕೋಟಿ ಅವ್ಯವಹಾರ ಆರೋಪ
- ಚಿಂತಾಮಣಿ ಶಾಖೆಯಲ್ಲಿ ₹2.24ಕೋಟಿ ವಂಚನೆ ದೂರು, ಎಫ್‌ಐಆರ್
- ಬ್ಯಾಂಕ್‌ನ ಆಂತರಿಕ ಪರಿವೀಕ್ಷಣಾಧಿಕಾರಿಗಳ ವರದಿಯಲ್ಲಿ ಉಲ್ಲೇಖ

ಬ್ಯಾಂಕ್‌ನ ಹಣ ದುರುಪಯೋಗ ಪ್ರಕರಣದಲ್ಲಿ 16 ನೌಕರರು ಭಾಗಿ ಆಗಿದ್ದು, ಕೇವಲ ಮೂವರನ್ನು ಅಮಾನತುಗೊಳಿಸಿದ್ದಾರೆ. ಸಿಇಒ, ಆಡಳಿತಾಧಿಕಾರಿ ವೈಫಲ್ಯ ಎದ್ದು ಕಾಣುತ್ತಿದೆ

ಮುನೀಶ್ ಡಿ. ದೂರುದಾರ, ಕೋಲಾರ

ಸಾಲಮನ್ನಾ; ₹11 ಕೋಟಿ ವಂಚನೆ

2018-19 ನೇ ಸಾಲಿನಲ್ಲಿ ರಾಜ್ಯ ಸರ್ಕಾರ ರೂಪಿಸಿದ್ದ ಅಲ್ಪಾವಧಿ ಬೆಳೆ ಸಾಲ ಮನ್ನಾ ಯೋಜನೆ ಸಂಬಂಧ ಡಿಸಿಸಿ ಬ್ಯಾಂಕ್‌ನ ಚಿಂತಾಮಣಿ ಶಾಖೆಯಲ್ಲಿ ರೈತರ ಹೆಸರಲ್ಲಿ ನಕಲಿ ದಾಖಲೆ ಸೃಷ್ಟಿಸಿ ₹11ಕೋಟಿ ವಂಚಿಸಿದ್ದರ ಬಗ್ಗೆ ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಯು ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಿಸದೆ ಬ್ಯಾಂಕ್‌ಗೆ ನಷ್ಟ ಉಂಟು ಮಾಡಿರುವ ವ್ಯಕ್ತಿಗಳೊಂದಿಗೆ ಶಾಮೀಲಾಗಿದೆ ಎಂದು ಆರೋಪಿಸಿ ತಳಗವಾರ ಗ್ರಾಮದ ಟಿ.ಎಸ್.ಪ್ರತಾಪ್ ಎಂಬುವವರು ಶಾಖಾ ವ್ಯವಸ್ಥಾಪಕ ಜಿ.ಚಂದ್ರಶೇಖರ್ ಮತ್ತು ಇತರರ ವಿರುದ್ಧ ದೂರು ನೀಡಿದ್ದರು.

ಈ ಸಂಬಂಧ ತನಿಖೆ ನಡೆಸಿದ್ದ ಬ್ಯಾಂಕ್‌ನ ಸಿಇಒ ಶೀಲಾ, ಚಿಂತಾಮಣಿ ಶಾಖೆಯಲ್ಲಿ ಯಾವುದೇ ರೀತಿ ಹಣ ದುರ್ಬಳಕೆ ಆಗಿಲ್ಲವೆಂದೂ ಹಾಗೂ ಸಾಲಮನ್ನಾದ ₹11ಕೋಟಿ ಮೊತ್ತವು ನೇರವಾಗಿ ರೈತರ ಖಾತೆಗಳಿಗೆ ಜಮೆ ಆಗಿದೆ ಎಂದೂ ಈಚೆಗೆ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ವಿವರಣೆ ನೀಡುವಂತೆ ಡಿಸಿಸಿ ಬ್ಯಾಂಕ್‌ಗೆ ರಾಜ್ಯ ಸರ್ಕಾರ ಸೂಚನೆ ನೀಡಿತ್ತು. ಈ ಕಾರಣಕ್ಕಾಗಿ ಪ್ರಕರಣ ಸಂಬಂಧ 2018-19ರಿಂದ ಇಲ್ಲಿವರೆಗೆ ಬ್ಯಾಂಕ್‌ನ ಆಂತರಿಕ ಪರಿವೀಕ್ಷಣಾಧಿಕಾರಿಗಳು ಮತ್ತು ಸಹಕಾರ ಇಲಾಖೆ ಅಧಿಕಾರಿಗಳು ಕೈಗೊಂಡ ಕ್ರಮಗಳ ಕ್ರೋಡೀಕೃತ ವರದಿಯನ್ನು ಅವರು ಸರ್ಕಾರಕ್ಕೆ ನೀಡಿದ್ದರು.

ಬೆಂಗಳೂರು ಕಂಬಳಕ್ಕೆ ದಿನ ನಿಗದಿಯಾಗಿಲ್ಲ: ಎಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರಿನಲ್ಲಿ ಕಂಬಳ ಆಯೋಜನೆಗೆ ಇನ್ನೂ ದಿನಾಂಕ ನಿಗದಿಪಡಿಸಿಲ್ಲ. ಆದರೆ, ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳದಲ್ಲಿ ಇದೇ 17ಕ್ಕೆ ಕಂಬಳ ನಡೆಯಲಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

‘ಬೆಂಗಳೂರು ಮಹಾನಗರದಲ್ಲಿ ಕಂಬಳ ಆಯೋಜಿಸಲು ಬೆಂಗಳೂರು ಕಂಬಳ ಸಮಿತಿಗೆ ಅನುಮತಿ ನೀಡದಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ‘ಪೀಪಲ್ ಫಾರ್ ದಿ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್’ (ಪೆಟಾ) ಸ್ವಯಂ ಸೇವಾ ಸಂಸ್ಥೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, ಈ ಕುರಿತಂತೆ ನ್ಯಾಯಪೀಠಕ್ಕೆ ವಿವರಿಸಿದರು. ಅಂತೆಯೇ, ಅರ್ಜಿದಾರರ ಪರ ವಕೀಲರು ಪಿಲಿಕುಳದಲ್ಲಿ ಪ್ರಾಣಿ ಸಂಗ್ರಹಾಲಯದ ಬಳಿಯಲ್ಲೇ ಕಂಬಳ ನಡೆಸುವುದಕ್ಕೆ ವ್ಯಕ್ತಪಡಿಸಿದ ಆಕ್ಷೇಪವನ್ನು ಅಲ್ಲಗಳೆದರಲ್ಲದೆ, ‘ಪಿಲಿಕುಳದಲ್ಲಿ ಕಳೆದ 15-20 ವರ್ಷಗಳಿಂದ ಕಂಬಳ ನಡೆಸಿಕೊಂಡು ಬರಲಾಗುತ್ತಿದೆ’ ಎಂದು ನ್ಯಾಯಪೀಠಕ್ಕೆ ಮನದಟ್ಟು ಮಾಡಿದರು.

ಅರ್ಜಿದಾರರ ಪರ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ, ‘ದಕ್ಷಿಣ ಕನ್ನಡ ಜಿಲ್ಲೆ ಅಥವಾ ಪಿಲಿಕುಳದಲ್ಲಿ ಕಂಬಳ ಆಯೋಜಿಸಲು ನಮ್ಮ ಆಕ್ಷೇಪವಿಲ್ಲ. ಆದರೆ, ಪಿಲಿಕುಳದಲ್ಲಿ ಮೃಗಾಲಯದ ಪಕ್ಕದಲ್ಲೇ ಕಂಬಳ ಸ್ಪರ್ಧೆ ಆಯೋಜಿಸಲಾಗುತ್ತಿರುವುದಕ್ಕೆ ಆಕ್ಷೇಪವಿದೆ. ಸ್ವತಃ ಮೃಗಾಲಯದ ನಿರ್ದೇಶಕರು ಜಿಲ್ಲಾಧಿಕಾರಿಗೆ ಪತ್ರ ಬರೆದು ಕಂಬಳದ ಸಂದರ್ಭದಲ್ಲಿ ಉಂಟಾಗುವ ಕೂಗಾಟದಿಂದ ಬೇರೆ ಪ್ರಾಣಿಗಳಿಗೆ ತೊಂದರೆ ಆಗುತ್ತದೆ ಎಂದು ಹೇಳಿದ್ದಾರೆ. ಇದನ್ನು ನಾವೂ ಅನುಮೋದಿಸುತ್ತೇವೆ’ ಎಂದರು.

ಇದೇ ವೇಳೆ ಬೆಂಗಳೂರು ಕಂಬಳ ಸಮಿತಿ ಪರ ವಕೀಲ ಬಿ.ವಿನೋದ್ ಕುಮಾರ್, ಅರ್ಜಿಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಈ ಬಗ್ಗೆ ಆಕ್ಷೇಪಣೆಗಳಿದ್ದರೆ ಸಲ್ಲಿಸಿ’ ಎಂದು ಅರ್ಜಿದಾರರು ಮತ್ತು ಪ್ರತಿವಾದಿಗಳಿಗೆ ಸೂಚಿಸಿ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Flat

HRBR Layout

3 BHK Apartment Fully Furnished. Mathews Isaac, Apt 302, Jeeja A.H. Residency behind Shoba Store, HRBR II Stage, 4th G Main near Sena Vihar. Interested parties Call: +91 7909249712 for appointment to see the flat. Price around 2.5 Cr. Negotiable. Brokers Excuse.

Sites

Rajajinagar

RAJAJINAGAR 35X45 BDA old house west facing 17th main near Karur bank 28000/- 9739732433

JOB OPPORTUNITIES

Multiple Vacancy

WANTED
1) Require Accountant 8-10 year of Experience
2) Cashier Experience with Knowledge of Tally.
3) Branch Manager 5 Years Of Experience.
Salary 20000 to 40000
Laxmi Gold Palace Malleshwaram Bengaluru
914 868 9355

Teachers/ Professors

WANTED EXPERIENCED Mathematics Teacher Female/ Male for High School. Walk-in Interview. Salary 20000-25000. New Oxford English School, 6th Cross, Gandhinagar,Bangalore-9. Contact immediately. 080-22261590/ 9880718533

Walk-in

WALK-IN INTERVIEW
Multicrore, fast growing all India Pharmaceutical Company, Leader in Skin Care, requires BUSINESS EXECUTIVES for their Bangalore, Mangalore & Davanagere Hq's. Fresh B.Sc. | B.Pharma Graduates or MBA Candidates with up to one year of sales experience (age below 26 years) may apply. Monthly Salary & Allowance Rs. 30,000 plus Attractive Incentives (Average Emoluments up to Rs. 6 Lakhs/Annum).
Interview to be held on 12th and 13th November 2024, Timing: 10 am - 5 pm
Venue: Zion - A Luxurious Hotel, 31, 5th Main Rd, Gandhi Nagar, Bangalore, Karnataka - 560009.
Interview to be held on 14th November 2024, Timing: 10 am - 5 pm
Venue: AJ Grand Hotel, 14-7-965, Near K. R. Road, Karangalpady, Mangalore, Karnataka - 575003.
For Information and Application Contact:
Mr. Vishwanath (RBM): 8861308649
Mr. Raghavendra (RBM): 8105990999
Mr. Kiran Kumar (RBM): 9886312659
Mr. Shivanand (RBM): 9916688334
Email: karnatakajobs@hhpharma.com
Scan QR to apply
HEGDE & HEGDE PHARMACEUTICA LLP
Office No. 16-19, 1st Floor, Free Press House, 215 Nariman Point, Mumbai-400021 www.hhpharma.com

Wanted

SURIE POLEX
URGENT REQUIREMENT
OFFICE ASSISTANCE (Female)
Good Communication Skill & Basic Computer Knowledge
M/s SURIE POLEX INDUSTRIES Pvt. Ltd
17/40, 6th Cross, B.G. Road, B'lore-30
Mob: 93419 69809

WANTED FEMALE Office Assistant Qulification any Degree, Good Communication Skills English, Hindi in around Rajajinagar: 9108458798/ 9845579620

Marketing & Sales

LOOKING FOR a Sales Executive for Bangalore market for a Delhi based Seafood Company. The Company is in the business of selling food products including imported fish & seafood and meat products to HoReCa segment. Preferably candidates with 1-2 years of experience in sales of Food products to HoReCa. Candidate should be active and mobile on the ground owning either a bike or a car. Minimum educational qualification required is graduation. Candidate should be based out of Bangalore. Remuneration is upto Rs.25,000 + incentives. Contact number: +91-9811707532/ +91-9319300273

Security & Detectives

A LEADING Company engaged from past 28 YEARS in providing SECURITY & HOUSE KEEPING SERVICES, is looking for following Category persons with past experience: (1) AREA GENERAL MANAGER- Bangalore South (2) AREA FIELD OFFICER'S- Bangalore South & Electronic City (3) TRAINING OFFICER -2 Nos. (4) FIELD OFFICER- Housekeeping Services (5) SECURITY OFFICERS- Electronic City & Thanisandra (6) EXPERIENCED LADY SALES COORDINATOR- for Corporate office. Location: BTM 2nd Stage. (7) LADY COMPUTER OPERATOR. Location: BTM 2nd Stage. Candidates can Contact Director: 9900596738 or email resume to: info@networkda.com

General

WANTED MALE staff with computer knowledge to Balija Sangha near Attiguppe Metro contact: 9448476465/8088384110

WANTED INCHARGE to take care of farm land preferably knowledge of farming staying in & around Mandya. Good salary call 9632449277

WANTED DTP OPERATORS knowing Corel Draw, MARKETING EXECUTIVES for Printing Press, Sarakki, J.P.Nagar. Call- 9972999959

CONNECT

INVESTMENT
WE ARE LEADING GOOD DEVELOPERS WITH GOOD BRAND DOING APARTMENTS /VILLAS/LAYOUT PROJECTS FROM PAST 50 YEARS. WE HAVE DONE/DOING PLENTY OF PROJECTS. NOW WE REQUIRE ABOUT 100 TO 300 CRORES ON INTEREST WITH SECURITY OR ON JOINT VENTURES FOR NEW FAST SALEABLE PROJECTS WITH GOOD PROFIT IF YOU HAVE GOT READY FUNDS YOU CAN JOIN WITH US WITH 100% SAFETY OF YOUR FUNDS.
PLEASE CALL 98451 31515
OR MAIL developersdirector@gmail.com

HOTEL MANAGER, HOUSE KEEPING MANAGER, CASHIER-CUM- RECEPTIONIST: With experience in hotel industry. Contact: 9964982607 (SHIVU)

PERSONAL

Change of Name

I, SACHIN Naik, S/o. Dhakya Naik, aged 31 years, R/at No. 23 Rallis Colony 6th A Main 6th Cross Veerasagar Road Tirumala Nagar Attur Layout Yalahanka Bangalore North-560064, have changed my son's name from Dhanvin S Naik to Dhanviin S Naiik., vide affidavit dated 5/11/2024 before Notary V. Rangaramu Bangalore

I, APPORVA_C D/o.Late Chandraiah R/o#303 Sri_Nidhi Plaza Apartment, 3rd H Cross,Mallesh Palya Bangalore East Bangalore-560075 have_changed my Name_to APOORVA C vide`affidavit dated:9.10.2024 before`Notary Gangaraju.BN. Bengaluru

I,JEETEN R PATEL Residing`at Flat`No.P-1, 5th Floor, Tirumala_Lotus Apts., B.G.Road, Gottigere, Bengaluru-560083 have`changed my`Minor daughter Name`from AYESHA_J_PATEL to_AISHA PATEL Vide`Affidavit Dtd:04.11.2024 Sworn`Before Notary A.S.Narayana Reddy, Bangalore

CHANGE OF NAME
I, SANTOSH CHANABASAPPA HONAGUDI R/o #46, Bilwa, 13th 'A' Cross, Bhuvaneshwari Nagar, Hebbal, Kempapura, Bangalore North- 560024 have changed my minor son's name from NEIL to NEIL SANTOSH HONNAGUDI for all his future purposes Vide affidavit Dated: 5.11.2024. Sworn before Notary R.R. Patil, Belagavi.

I, SACHIN Naik, S/o. Dhakya Naik, aged 31 years, R/at No. 23, Rallis Colony 6th A Main 6th Cross Veerasagar Road Tirumala Nagar Attur Layout Yalahanka Bangalore North-560064, have changed my daughter's name from Dhruthi S Naik to Dhruthii S Naiik., vide affidavit dated 5/11/2024, before Notary V. Rangaramu Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD Classifieds More value, more impact ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
*Conditions apply
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036

ಪಿಎಫ್‌ಐಗೆ ಹಣ ಸಂಗ್ರಹ: ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆ ಕಾರ್ಯಕರ್ತ ಎಂದು ನನ್ನ ಮಗನನ್ನು ಭಯೋತ್ಪಾದನೆ ಕೃತ್ಯಗಳಲ್ಲಿ ಭಾಗಿಯಾಗಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದ್ದು, ಕೆ.ಜಿ.ಹಳ್ಳಿ ಠಾಣಾ ಪೊಲೀಸರು ನಮ್ಮ ಮನೆಯಿಂದ ವಶಪಡಿಸಿಕೊಂಡಿರುವ ಒಟ್ಟು ₹14 ಲಕ್ಷಕ್ಕೂ ಹೆಚ್ಚಿನ ಮೊತ್ತವನ್ನು ಬಿಡುಗಡೆ ಮಾಡಲು ಆದೇಶಿಸಬೇಕು’ ಎಂದು ಕೋರಿ ಆರೋಪಿಯ ತಂದೆ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿರುವ ಹೈಕೋರ್ಟ್, ಅರ್ಜಿದಾರರಿಗೆ ₹10 ಸಾವಿರ ದಂಡ ವಿಧಿಸಿದೆ.

ಆರೋಪಿ ಶೇಖ್ ಇಜಾಜ್ ಅಲಿ ತಂದೆಯಾದ ಶೇಖ್ ಸಾದಿಕ್ ಅಲಿ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್.ಮುದಗಲ್ ಮತ್ತು ನ್ಯಾಯಮೂರ್ತಿ ವಿಜಯಕುಮಾರ ಎ.ಪಾಟೀಲ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಆರೋಪಿಯ ಕೃತ್ಯಗಳೇನು ಎಂಬುದನ್ನು ಪ್ರಾಸಿಕ್ಯೂಷನ್, ವಿಚಾರಣಾ ನ್ಯಾಯಾಲಯದಲ್ಲಿ ಸಾಬೀತುಪಡಿಸಲಿದ್ದು, ಈ ಅರ್ಜಿ ವಜಾಗೊಳಿಸಬೇಕು’ ಎಂಬ ಎನ್‌ಐಎ ಪರ ವಕೀಲ ಪಿ.ಪ್ರಸನ್ನ ಕುಮಾರ್ ಕೋರಿಕೆಯನ್ನು ಮಾನ್ಯ ಮಾಡಿರುವ ನ್ಯಾಯಪೀಠ, ಅರ್ಜಿ ವಜಾಗೊಳಿಸಿ ಅರ್ಜಿದಾರರಿಗೆ ದಂಡ ವಿಧಿಸಿದೆ.

ಪ್ರಕರಣವೇನು?: ‘ಸಮಾಜಘಾತುಕ ಶಕ್ತಿಗಳಿಗೆ ಸಹಾಯ ಮಾಡಲು ಮತ್ತು ಇದಕ್ಕಾಗಿ ಪಿಎಫ್‌ಐ ಹಣ ಶೇಖರಿಸುತ್ತಿದೆ’ ಎಂಬ ಆರೋಪದಡಿ ಶೇಖ್ ಇಜಾಜ್ ಅಲಿಗೆ ಸೇರಿದ ಕಲಬುರಗಿ ಮನೆಯ ಮೇಲೆ ಕೆ.ಜಿ.ಹಳ್ಳಿ ಠಾಣಾ ಪೊಲೀಸರು 2022ರ ಸೆಪ್ಟೆಂಬರ್ 22ರಂದು ದಾಳಿ ನಡೆಸಿದ್ದರು. ಭಯೋತ್ಪಾದನೆ ಕೃತ್ಯ ಎಸಗಲು ವಿವಿಧ ಮೂಲಗಳಿಂದ ಸಂಗ್ರಹಿಸಿದ್ದರು ಎನ್ನಲಾದ ₹14,37,600 ಮೊತ್ತವನ್ನು ಜಪ್ತಿ ಮಾಡಿದ್ದರು. ನಂತರ ಶೇಖ್ ಇಜಾಜ್‌ರನ್ನು ಬಂಧಿಸಿ, ದೂರು ದಾಖಲಿಸಿದ್ದರು.

ಈ ಹಿನ್ನೆಲೆಯಲ್ಲಿ ಆರೋಪಿಯ ತಂದೆ ಸಾದಿಕ್ ಅಲಿ, ‘ನಾನು ಹೂ-ಹಣ್ಣು ವ್ಯಾಪಾರ ಮಾಡಿ ಸಂಪಾದಿಸಿದ್ದ ₹14,37,600 ಮೊತ್ತವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಹಣವನ್ನು ಬಿಡುಗಡೆ ಮಾಡಲು ಆದೇಶಿಸಬೇಕು’ ಎಂದು ಕೋರಿದ್ದರು. ಈ ಅರ್ಜಿಯನ್ನು ಸಿಟಿ ಸಿವಿಲ್ ಕೋರ್ಟ್‌ನ 49ನೇ ಸೆಷನ್ಸ್ ನ್ಯಾಯಾಲಯ 2023ರ ಡಿಸೆಂಬರ್ 16ರಂದು ವಜಾಗೊಳಿಸಿತ್ತು.

ಬಿಎಫ್‌ಸಿ ಪಂದ್ಯದ ಟಿಕೆಟ್ ದರ ಕಡಿತ

ಬೆಂಗಳೂರು: ಬಿಎಫ್‌ಸಿ ತಂಡವು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಆಡಲಿರುವ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯಗಳಿಗೆ ಟಿಕೆಟ್ ದರದಲ್ಲಿ ಕಡಿತ ಮಾಡುವುದಾಗಿ ಘೋಷಿಸಿದೆ.

ಬಿಎಫ್‌ಸಿ ಇದೇ 8ರಂದು ನಾರ್ತ್ ಈಸ್ಟ್ ಯುನೈಟೆಡ್ ತಂಡವನ್ನು ಇಲ್ಲಿ ಎದುರಿಸಲಿದ್ದು, ಈ ಪಂದ್ಯದಿಂದಲೇ ಐದು ಸ್ಟ್ಯಾಂಡ್‌ಗಳ ಟಿಕೆಟ್ ದರ ಕಡಿತವಾಗಲಿದೆ. ಡಿ.7ರಂದು ಕೇರಳ ಬ್ಲಾಸ್ಟರ್ಸ್ ವಿರುದ್ಧದ ಸೆಣಸಾಟವನ್ನು ಹೊರತುಪಡಿಸಿ, ಈ ಋತುವಿನ ಉಳಿದ ಎಲ್ಲ ತವರಿನ ಪಂದ್ಯಗಳಿಗೆ ಇದು ಅನ್ವಯವಾಗಲಿದೆ.

ಪಶ್ಚಿಮ ಪ್ಲಾಟಿನಂ ಸ್ಟ್ಯಾಂಡ್‌ಗೆ ₹499, ವೈಟ್ ಗೋಲ್ಡ್ ಮತ್ತು ಪ್ಯೂಮಾ ಸ್ಟ್ಯಾಂಡ್‌ಗಳಿಗೆ ₹ 349, ಪೂರ್ವ ಭಾಗದ ಕೆಳಗಿನ ಎ ಸ್ಟ್ಯಾಂಡ್‌ಗೆ ₹299 ಮತ್ತು ಉತ್ತರ ಭಾಗದ ಮೇಲಿನ ಸ್ಟ್ಯಾಂಡ್‌ಗೆ ₹99 ಟಿಕೆಟ್ ದರ ಪರಿಷ್ಕರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2024ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಶೇಕಡ 90ಕ್ಕಿಂತ ಹೆಚ್ಚುಗಳಿಸಿದ ತಿಗಳ ಜನಾಂಗದ (ಅಗ್ನಿವಂಶ ಕ್ಷತ್ರಿಯ) ವಿದ್ಯಾರ್ಥಿಗಳು ಡಿಸೆಂಬರ್ 10ರೊಳಗೆ ಅರ್ಜಿ ಸಲ್ಲಿಸಬಹುದು. ವಿಳಾಸ: ಕರ್ನಾಟಕ ತಿಗಳರ ವಿದ್ಯಾಭಿವೃದ್ಧಿ ಸಂಘ, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10 ಮಾಹಿತಿಗೆ 080–23200608, 080–23153078 ಸಂಪರ್ಕಿಸಬಹುದು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ನೈಸ್ ಭೂ ಸಂತ್ರಸ್ತರ ರೈತರ ಹೋರಾಟ ಸಮಿತಿ ಸದಸ್ಯರು ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ.

ನೈಸ್ ಸಂಸ್ಥೆ ಪರ ಡಿಕೆಶಿ ನೀಡಿದ್ದ ಹೇಳಿಕೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ಸಂಸ್ಥೆಯ ಪರ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೀಡಿರುವ ಹೇಳಿಕೆಯನ್ನು ಕೂಡಲೇ ಹಿಂಪಡೆಯಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ, ನೈಸ್ ಭೂ ಸಂತ್ರಸ್ಥರ ರೈತರ ಹೋರಾಟ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

‘ಬಿಎಂಐಸಿ ಯೋಜನೆಯಲ್ಲಿ ನೈಸ್ ಸಂಸ್ಥೆಯ ಪಾಲುದಾರಿಕೆಯನ್ನು ರದ್ದುಗೊಳಿಸಬೇಕು. ನೈಸ್ ಸಂಸ್ಥೆಯ ಭೂಸ್ವಾಧೀನ ಹಾಗೂ ರಸ್ತೆ ನಿರ್ಮಾಣದ ಹಗರಣವನ್ನು ತನಿಖೆಗೊಳಪಡಿಸಿ, ಕಾನೂನು ಕ್ರಮ ಕೈಗೊಳ್ಳಬೇಕು. ರೈತರ ಗಮನಕ್ಕೆ ಬಾರದಂತೆ ಭೂಸ್ವಾಧೀನ ಮಾಡಿಕೊಂಡಿರುವ ಎಲ್ಲ ಪ್ರಕರಣಗಳನ್ನು ರದ್ದುಪಡಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ನೈಸ್ ಅಕ್ರಮದ ಕುರಿತು ಸದನ ಸಮಿತಿ ಮತ್ತು ಸಂಪುಟ ಉಪಸಮಿತಿಗಳ ಶಿಫಾರಸುಗಳನ್ನು ಯಥಾವತ್ತಾಗಿ ಜಾರಿಗೊಳಿಸಬೇಕು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ನೈಸ್ ಸಂಸ್ಥೆ ಜೊತೆ ಸೇರಿ ದರೋಡೆ ಮಾಡಿರುವ ಎಲ್ಲ ಹೆಚ್ಚುವರಿ ಭೂಮಿಯನ್ನು ಹಿಂಪಡೆದುಕೊಳ್ಳಬೇಕು. ಟೋಲ್ ಸಂಗ್ರಹಿಸುತ್ತಿರುವ ರಸ್ತೆಗೆ ಭೂಮಿ ಕಳೆದುಕೊಂಡ ರೈತರಿಗೆ ಹೆಚ್ಚಿನ ಪರಿಹಾರ ಹಾಗೂ ನಿವೇಶನ ನೀಡಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಟಿ. ಯಶವಂತ, ಸದಸ್ಯೆ ಜೆ. ಗಾಯತ್ರಿ, ಬೆಂಗಳೂರು ನಗರ ಜಿಲ್ಲಾ ಘಟಕದ ನೈಸ್ ಭೂ ಸಂತ್ರಸ್ತರ ರೈತರ ಹೋರಾಟ ಸಮಿತಿಯ ಅಧ್ಯಕ್ಷ ಎನ್. ವೆಂಕಟಚಲಯ್ಯ, ಪ್ರಧಾನ ಕಾರ್ಯದರ್ಶಿ ವೆಂಕಟಚಲಪ್ಪ, ಖಜಾಂಚಿ ಉಮಾಶಂಕರ್ ಸೇರಿದಂತೆ ನೂರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಪ್ರಾಧ್ಯಾಪಕ ಕಿರಣ್ ಗಾಜನೂರು ಅಭಿಮತ

‘ಕನ್ನಡಿಗರಿಗೆ ಮೀಸಲಾತಿ ಕ್ರಮ ಸಂವಿಧಾನಬದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವ ಕ್ರಮ ಸಂವಿಧಾನಬದ್ಧವಾದುದು. ಈ ಸಂಬಂಧ ರಾಜ್ಯ ಸರ್ಕಾರದ್ದು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ನಡೆಯಾಗಿತ್ತು’ ಎಂದು ಪ್ರಾಧ್ಯಾಪಕ ಕಿರಣ್ ಗಾಜನೂರು ಹೇಳಿದರು.

ಬಂಡಾಯ ಸಾಹಿತ್ಯ ಸಂಘಟನೆಯು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ವಿಚಾರಗೋಷ್ಠಿಯಲ್ಲಿ, ‘ಕರ್ನಾಟಕ ಮತ್ತು ಉದ್ಯೋಗ ನೀತಿ’ ಕುರಿತು ಅವರು ಮಾತನಾಡಿದರು. ‘ನಮ್ಮದು ಕೇಂದ್ರೀಕೃತ ಒಕ್ಕೂಟ ವ್ಯವಸ್ಥೆ ಅಥವಾ ಅರೆ ಒಕ್ಕೂಟ ವ್ಯವಸ್ಥೆ. ಇಲ್ಲಿ ರಾಜ್ಯಗಳು ಕೆಲವು ವಿಶಿಷ್ಟ ಸಮಸ್ಯೆಗಳನ್ನು ಎದುರಿಸುತ್ತವೆ. ಕರ್ನಾಟಕದಲ್ಲಿ ಸ್ಥಳೀಯರ ಉದ್ಯೋಗಕ್ಕೆ ಸಂಬಂಧಿಸಿದಂತೆ ಇಂತಹ ಸಮಸ್ಯೆ ಇದೆ’ ಎಂದರು.

‘ಖಾಸಗಿ ಕ್ಷೇತ್ರದಲ್ಲೂ ಸ್ಥಳೀಯರಿಗೆ ಉದ್ಯೋಗ ಒದಗಿಸಲು ರಾಜ್ಯ ಸರ್ಕಾರ ಮಸೂದೆ ಸಿದ್ಧಪಡಿಸಿದೆ. ಅದರಲ್ಲಿ ಸ್ಥಳೀಯರು ಅಥವಾ ಕನ್ನಡಿಗರು ಯಾರು ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿದೆ. ಆ ವ್ಯಾಖ್ಯಾನದ ಪ್ರಕಾರ ಸರ್ಕಾರದ ನಡೆ ಕಾನೂನುಬದ್ಧವೇ ಆಗಿದೆ’ ಎಂದರು.

ಮಾನವ ಬಂಧುತ್ವ ವೇದಿಕೆಯ ಸಂಚಾಲಕ ಎ.ಬಿ.ರಾಮಚಂದ್ರಪ್ಪ ಮಾತನಾಡಿ, ‘ಇಂದಿನ ಬಹುರಾಷ್ಟ್ರೀಯ ಕಂಪನಿಗಳು ‘ಆಧುನಿಕ ಅಗ್ರಹಾರ’ಗಳಂತೆ ಕಾಣುತ್ತವೆ. ಅವು ಸರ್ಕಾರದ ನೀತಿಗಳನ್ನು ನಿಯಂತ್ರಿಸುತ್ತಿವೆ’ ಎಂದರು.

‘ಕರ್ನಾಟಕ ಮತ್ತು ಶಿಕ್ಷಣ ವ್ಯವಸ್ಥೆ’ ಕುರಿತು ಮಾತನಾಡಿದ ಶಿಕ್ಷಣ ತಜ್ಞ ಬಿ.ಶ್ರೀಪಾದ ಭಟ್, ‘ದೇಶದ ಶಿಕ್ಷಣ ವ್ಯವಸ್ಥೆಯು ಈಗ ಬಲಿಷ್ಠ ಸಮುದಾಯಗಳ ನಿಯಂತ್ರಣದಲ್ಲಿ ಇವೆ. ಪರಿಣಾಮವಾಗಿ ಶಿಕ್ಷಣ ಖಾಸಗೀಕರಣ ವ್ಯಾಪಕವಾಗುತ್ತಿದ್ದು, ಸರ್ಕಾರಿ ಶಾಲಾ–ಕಾಲೇಜುಗಳ ಸ್ಥಿತಿ ಬಿಗಡಾಯಿಸುತ್ತಿವೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಸ್ವಾತಂತ್ರ್ಯ ಬಂದಾಗ ದೇಶದಾದ್ಯಂತ ಒಟ್ಟು 19 ವಿಶ್ವವಿದ್ಯಾಲಯಗಳು ಇದ್ದವು. ಈಗ ವಿಶ್ವವಿದ್ಯಾಲಯಗಳ ಸಂಖ್ಯೆ 1,000ಕ್ಕೂ ಹೆಚ್ಚು. ಆದರೆ ಶಿಕ್ಷಣದ ಗುಣಮಟ್ಟ ಮಾತ್ರ ಏರಿಕೆಯಾಗಿಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿನ ಸಮಸ್ಯೆಗಳಿಗೆ ಹಲವು ಮಜಲುಗಳಿವೆ. ಇಲ್ಲಿನ ಶಿಕ್ಷಣ ನೀತಿ ಎಂಬುದು ಸರ್ಕಾರದ ನೀತಿ ಆಗಿದೆಯೇ ಹೊರತು, ಜನರನ್ನು ಒಳಗೊಂಡು ರೂಪಿತವಾದ ಸಾರ್ವಜನಿಕ ನೀತಿಯಲ್ಲ. ಶಿಕ್ಷಣದ ಗುಣಮಟ್ಟ ಸುಧಾರಣೆಯ ಬಗ್ಗೆ ಚರ್ಚೆ ನಡೆಯುವುದೇ ಇಲ್ಲ. ಅಧ್ಯಾಪಕರು ವೈಚಾರಿಕ ಚಿಂತನೆಗಳನ್ನು ರೂಪಿಸುವುದೇ ಇಲ್ಲ’ ಎಂದರು.

‘ಬಂಡಾಯ ಸಾಹಿತ್ಯ ಸಂಘಟನೆ’ ಆಯೋಜಿಸಿದ್ದ ವಿಚಾರಗೋಷ್ಠಿಯಲ್ಲಿ (ಎಡದಿಂದ) ಕಿರಣ್ ಗಾಜನೂರು, ಎ.ಬಿ.ರಾಮಚಂದ್ರಪ್ಪ ಮತ್ತು ಶ್ರೀಪಾದ ಭಟ್ ಮಾತುಕತೆಯಲ್ಲಿ ತೊಡಗಿದ್ದರು ಪ್ರಜಾವಾಣಿ ಚಿತ್ರ

‘ಸಮ್ಮೇಳನದಲ್ಲಿ ರಾಜಕೀಯ ಚರ್ಚೆ ಆಗಲಿ’

‘ದೇವಿ ಕುರುಬತಿ’ ಕಾದಂಬರಿ ಬಿಡುಗಡೆ ಕಾರ್ಯಕ್ರಮ: ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆಶಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರಾಜಕೀಯದ ಬಗ್ಗೆಯೂ ಚರ್ಚೆಗೆ ಅವಕಾಶ ಕಲ್ಪಿಸಬೇಕು’ ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆಶಯ ವ್ಯಕ್ತಪಡಿಸಿದರು.

ಸೃಷ್ಟಿ ಪಬ್ಲಿಕೇಷನ್ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಶುಭದಾ ಎಚ್.ಎನ್. ಅವರ ‘ದೇವಿ ಕುರುಬತಿ’ ಕಾದಂಬರಿ ಬಿಡುಗಡೆ ಮಾಡಿ, ಮಾತನಾಡಿದರು.

‘ಸಾಹಿತ್ಯ ಸಮ್ಮೇಳನದಲ್ಲಿ ರಾಜಕೀಯ ಹೊರತುಪಡಿಸಿ ಎಲ್ಲ ಕ್ಷೇತ್ರಗಳ ಬಗ್ಗೆಯೂ ಚರ್ಚೆಗಳಾಗುತ್ತವೆ. ಸಮ್ಮೇಳನ ನಡೆಸಲು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಮುಖ್ಯಮಂತ್ರಿ ಅವರ ಮನೆಯ ಮುಂದೆ ಕಾದು, ಹಣ ಪಡೆದುಕೊಳ್ಳುತ್ತಾರೆ. ಆದರೆ, ಸಮ್ಮೇಳನದಲ್ಲಿ ರಾಜಕೀಯದ ಬಗ್ಗೆ ಚರ್ಚೆಗೆ ಒಪ್ಪುವುದಿಲ್ಲ. ಹಣ ನೀಡುವ ಸಿ.ಎಂ ರಾಜಕಾರಣಿಯಲ್ಲವೇ? ಪರಿಷತ್ತಿನ ಇಬ್ಬಂದಿ ನೀತಿಯೇ ಹಲವು ಸಮಸ್ಯೆಗೆ ಕಾರಣವಾಗುತ್ತಿದೆ’ ಎಂದರು.

ಕಾರ್ಯಕ್ರಮದಲ್ಲಿ ‘ದೇವಿ ಕುರುಬತಿ’ ಕಾದಂಬರಿಯಲ್ಲಿನ ಪಾತ್ರಗಳನ್ನು ಕಲಾವಿದರು ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರ

ಲೇಖಕ ವಸುಧೇಂದ್ರ, ‘ಸಾಹಿತ್ಯ ಏಕೆ ಬೇಕು ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿದೆ. ಎದೆಯ ದನಿಯ ಸತ್ಯವನ್ನು ಕಥೆ, ಕಾದಂಬರಿಗಳು ಹೇಳುತ್ತವೆ. ಈ ಸತ್ಯವನ್ನು ಶಾಸಕಾಂಗ, ನ್ಯಾಯಾಂಗವೂ ಹೇಳುವುದಿಲ್ಲ. ಆದ್ದರಿಂದ ಎಲ್ಲ ಕಾಲದಲ್ಲಿ ಕಥೆ, ಕಾದಂಬರಿಗಳು ಅತ್ಯಗತ್ಯ. ಕಥೆಗಳನ್ನು ಬಿಟ್ಟರೆ ಸಮಾಜದ ನೈತಿಕತೆ ಕುಸಿಯುತ್ತದೆ. ಎದೆಯ ದನಿ ಅರ್ಥ ಮಾಡಿಕೊಂಡು ಬರೆಯುವ ಸಾಹಿತ್ಯ ಅಗತ್ಯ’ ಎಂದು ಅಭಿಪ್ರಾಯಪಟ್ಟರು.

‘ಭವಿಷ್ಯವನ್ನು ಕಟ್ಟಿಕೊಳ್ಳಲು ಇತಿಹಾಸ ತಿಳಿದಿರಬೇಕು. ಆದರೆ, ಇತ್ತೀಚೆಗೆ ವೈಭವೀಕರಿಸಿದ ಇತಿಹಾಸವನ್ನು ಮಾತ್ರ ಸ್ವೀಕರಿಸಲಾಗುತ್ತಿದೆ. ನಿಜವಾದ ಇತಿಹಾಸವು ನಮ್ಮ ಸೋಲು ಮತ್ತು ಯಶಸ್ಸನ್ನು ಗಮನಿಸಬೇಕು’ ಎಂದು ಹೇಳಿದರು.

ಅನುವಾದಕ ಕೆ.ನಲ್ಲತಂಬಿ, ‘ಸಾಹಿತ್ಯವು ಮನಸ್ಸನ್ನು ಮೃದು ಮಾಡಿ, ಜೀವನ ಕಟ್ಟಿಕೊಳ್ಳಲು ನೆರವಾಗಬೇಕು. ಪ್ರಕೃತಿ, ಸಹ ಮಾನವರು ಹಾಗೂ ನಮ್ಮೊಳಗಿನ ದ್ವಂದ್ವದ ಜತೆಗೆ ಸಹಬಾಳ್ವೆ ಮಾಡುವುದನ್ನು ಕಲಿಸಬೇಕು’ ಎಂದರು.

ಲೇಖಕ ಸಂತೋಷಕುಮಾರ ಮೆಹೆಂದಳೆ, ‘ಕನ್ನಡದಲ್ಲಿ ಕಳೆದ ವರ್ಷ 8 ಸಾವಿರ ಪುಸ್ತಕಗಳು ಬಿಡುಗಡೆಯಾಗಿವೆ. ಆದರೆ, ಬಹುತೇಕರಿಗೆ ಅವುಗಳಲ್ಲಿ ಎರಡು ಕೃತಿಗಳ ಶೀರ್ಷಿಕೆಯೂ ನೆನಪಿನಲ್ಲಿ ಉಳಿದಿಲ್ಲ. ಓದುಗ ಹಣ ನೀಡಿ ಪುಸ್ತಕಗಳನ್ನು ಕೊಂಡುಕೊಳ್ಳುವುದರಿಂದ ಗುಣಮಟ್ಟದ ಪುಸ್ತಕ ನೀಡುವ ಬದ್ಧತೆ ಲೇಖಕನಿಗೆ ಇರಬೇಕು. ಸಾಹಿತ್ಯ ಕ್ಷೇತ್ರದಲ್ಲಿ ವೃತ್ತಿಪರತೆ ಬರಬೇಕು’ ಎಂದು ಹೇಳಿದರು.

ಈಜಿಪ್ಟ್ ರಾಣಿ ಅನೆಪ್ ಕುರಿತ ಈ ಕಾದಂಬರಿಯ ಪಾತ್ರಗಳ ಕಿರು ಪರಿಚಯವನ್ನು ಕಲಾವಿದರು ಅಭಿನಯದ ಮೂಲಕ ಪ್ರಸ್ತುತಪಡಿಸಿದರು.

ವಿಟಿಯು ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿನಿ ಕೃತಿಕ ಸೆಂಥಿಲ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಏಟ್ರಿಯಾ: 627 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ 2022–24ನೇ ಬ್ಯಾಚ್‌ನಲ್ಲಿ ವಿವಿಧ ವಿಷಯಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸಿದ 627 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಇದೇ ವೇಳೆ, ನಾಲ್ಕು ಚಿನ್ನದ ಪದಕಗಳನ್ನು ಪಡೆಯುವ ಮೂಲಕ ವಿಟಿಯು ಪ್ರಥಮ ರ್‍ಯಾಂಕ್ ಪಡೆದ ಮಾಹಿತಿ ವಿಜ್ಞಾನ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಕೃತಿಕ ಸೆಂಥಿಲ್ ಮತ್ತು 10ನೇ ರ್‍ಯಾಂಕ್ ಪಡೆದ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ವರುಣ್ ರಾಜ್.ಪಿ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಅಲ್ಥೆಮ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ನಿರ್ದೇಶಕ ಪ್ರಸಾದ್ ರೋಡಗಿ, ‘ಭಾರತವು ಆರ್ಥಿಕತೆಯಲ್ಲಿ ದಾಪುಗಾಲು ಹಾಕುತ್ತಿರುವ ಸಂದರ್ಭದಲ್ಲಿ ಪದವೀಧರರು ಸಮಸ್ಯೆ ಪರಿಹರಿಸುವ ಕೌಶಲಗಳೊಂದಿಗೆ ಉದ್ಯೋಗ ಪಡೆಯಲು ಮುಂದಾಗಬೇಕು. ಮಾತ್ರವಲ್ಲ, ನಿರಂತರ ಕಲಿಕೆಯ ಗುಣಗಳನ್ನು ಅಳವಡಿಸಿಕೊಂಡು ದೇಶದ ಅಭಿವೃದ್ಧಿಗೆ ಕೊಡುಗೆ ನೀಡಲು ಸಿದ್ಧರಾಗಬೇಕು’ ಎಂದು ತಿಳಿಸಿದರು.

ಏಟ್ರಿಯಾ ಸಮೂಹ ಸಂಸ್ಥೆಯ ಅಧ್ಯಕ್ಷ ಸಿ.ಎಸ್.ಸುಂದರ್‌ರಾಜು ಮಾತನಾಡಿದರು. ಫಿಡೆಲಿಟಿ ಇನ್ವೆಸ್ಟ್‌ಮೆಂಟ್‌ನ ನಿರ್ದೇಶಕ ಶಿಶಿರ್ ನಾಗೇಂದ್ರಪ್ಪ, ಏಟ್ರಿಯಾ ಸಮೂಹ ಸಂಸ್ಥೆಯ ಟ್ರಸ್ಟಿ ಕೆ.ನಾಗರಾಜು, ಪ್ರಾಂಶುಪಾಲ ಡಾ.ರಾಜೇಶ.ಎಸ್, ಉಪಪ್ರಾಂಶುಪಾಲರಾದ ನಳಿನಾಕ್ಷಿ ಎನ್. ಮತ್ತಿತರರು ಉಪಸ್ಥಿತರಿದ್ದರು.

ಮಾದಾವರಕ್ಕೆ ಮೆಟ್ರೊ: ಕೇಂದ್ರ ಅಸ್ತು

ಬೆಂಗಳೂರು: ನಮ್ಮ ಮೆಟ್ರೊ ಹಸಿರು ಮಾರ್ಗದ ವಿಸ್ತರಿತ ಪ್ರದೇಶ ನಾಗಸಂದ್ರ-ಮಾದಾವರ ನಡುವೆ ವಾಣಿಜ್ಯ ಸಂಚಾರ ಆರಂಭಿಸಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಯಾವುದೇ ಶಿಷ್ಟಾಚಾರಕ್ಕೆ ಕಾಯದೇ ಸಾಂಕೇತಿಕವಾಗಿ ಉದ್ಘಾಟನೆ ಮಾಡಿ, ರೈಲು ಸಂಚಾರ ಆರಂಭಿಸುವಂತೆ ಸೂಚನೆ ಬಂದಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

'ಮಾದಾವರಕ್ಕೆ ವಾಣಿಜ್ಯ ಸಂಚಾರ ಆರಂಭಿಸಲು ಕೇಂದ್ರ ಸರ್ಕಾರ ತಿಳಿಸಿದೆ. ಭದ್ರತಾ ಸಿಬ್ಬಂದಿ ನಿಯೋಜನೆ, ಟಿಕೆಟ್ ನೀಡುವ ವ್ಯವಸ್ಥೆ, ರೈಲು ಸಂಚಾರದ ವೇಳಾಪಟ್ಟಿ ತಯಾರಿ ಸಹಿತ ಎಲ್ಲ ತಯಾರಿಗಳನ್ನು ಮಾಡಿ ಎರಡು-ಮೂರು ದಿನಗಳಲ್ಲಿ ಸಂಚಾರ ಆರಂಭಿಸಲಾಗುವುದು' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಇಂದೇ ಆರಂಭ- ಸಂಸದ: ಸಾರ್ವಜನಿಕರ ಅನುಕೂಲ ಗಮನದಲ್ಲಿ ಇರಿಸಿಕೊಂಡು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಗಸಂದ್ರ-ಮಾದಾವರ ನಡುವೆ ರೈಲು ಸಂಚಾರ ಆರಂಭಿಸಲು ಅನುಮತಿ ನೀಡಿದ್ದಾರೆ. ಬುಧವಾರ ಸಾರ್ವಜನಿಕ ಸೇವೆಗೆ ತೆರೆದುಕೊಳ್ಳಲಿದೆ' ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿಕೆ ನೀಡಿದ್ದಾರೆ.

ಬ್ಯುಸಿನೆಸ್ ಕಾರಿಡಾರ್‌ಗೆ ಹುಡ್ಕೊ ಸಾಲ



ಒಂದನೇ ಪುಟದಿಂದ...

‘ಬ್ಯುಸಿನೆಸ್ ಕಾರಿಡಾರ್’ ಯೋಜನೆಗೆ ಸರ್ಕಾರದ ಖಾತರಿ ಮೂಲಕ ಸಾಲ ಪಡೆದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವತಿಯಿಂದ ನಿರ್ಮಿಸಲು ನಿರ್ಧರಿಸಲಾಗಿದೆ. ಈ ಯೋಜನೆಗೆ ವಸತಿ ಮತ್ತು ನಗರಾಭಿವೃದ್ಧಿ ಕಾರ್ಪೊರೇಷನ್ (ಹುಡ್ಕೊ) ಶೇ 9ರಷ್ಟು ಬಡ್ಡಿದರದಲ್ಲಿ ಸಂಪೂರ್ಣ ಸಾಲ ನೀಡಲು ಸಮ್ಮತಿಸಿದೆ. ಬಡ್ಡಿ ಕಡಿಮೆ ಮಾಡಲು ಮಾತುಕತೆ ನಡೆಯುತ್ತಿದೆ. ಇದಲ್ಲದೆ ಇನ್ನೂ ಎರಡು ಸಂಸ್ಥೆಗಳೊಂದಿಗೆ ಮಾತುಕತೆ ನಡೆಯುತ್ತಿದ್ದು, 15 ದಿನಗಳಲ್ಲಿ ಅಂತಿಮವಾಗಲಿದೆ’ ಎಂದು ಎಲ್.ಕೆ. ಅತೀಕ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಯೋಜನೆಗೆ 2,600 ಎಕರೆ ಭೂಸ್ವಾಧೀನ ಮಾಡಬೇಕಾಗಿದ್ದು, ಅದರಲ್ಲಿ 200 ಎಕರೆ ಸರ್ಕಾರದ ಸಂಸ್ಥೆಗಳಾಗಿದ್ದು, ಅದನ್ನು ಹಸ್ತಾಂತರಿಸಿಕೊಳ್ಳಲಾಗಿದೆ. ಉಳಿದ ಭೂಮಿಗಾಗಿ ರೈತರು ಹಾಗೂ ಭೂಮಾಲೀಕರೊಂದಿಗೆ ಮಾತುಕತೆ ನಡೆಸಿ, ಅವರಿಗೆ ಸಮಾಧಾನವಾಗುವ ರೀತಿಯಲ್ಲಿ ಪರಿಹಾರ ನೀಡಿ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಲಾವುದು ಎಂದರು.

ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲು ಎಂಟು ಕೆಎಎಸ್ ಅಧಿಕಾರಿಗಳನ್ನು ಸರ್ಕಾರ ನಿಯೋಜಿಸಿದೆ. ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧತೆ ಆರಂಭಿಸಲಾಗಿದೆ. ಎಲ್ಲ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಇನ್ನಾರು ತಿಂಗಳಲ್ಲಿ ಟೆಂಡರ್ ಕರೆಯಲಾಗುತ್ತದೆ. ಕಾಮಗಾರಿ ಆರಂಭವಾದ ಮೂರು ವರ್ಷದಲ್ಲಿ ಯೋಜನೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ಮಾಹಿತಿ ನೀಡಿದರು.

ವಾಣಿಜ್ಯ ಪ್ರದೇಶ: ‘100 ಮೀಟರ್ ಕಾರಿಡಾರ್ ನಿರ್ಮಿಸಲು ಹಿಂದೆ ಯೋಜಿಸಲಾಗಿದೆ. ಅದರಂತೆಯೇ ಭೂಸ್ವಾಧೀನವಾಗಲಿದೆ. ಬ್ಯುಸಿನೆಸ್ ಕಾರಿಡಾರ್‌ನಲ್ಲಿ ಎರಡೂ ಬದಿ ವಾಣಿಜ್ಯ ಉದ್ದೇಶಕ್ಕೆ ಭೂಮಿಯನ್ನು ನೀಡಲು ಉದ್ದೇಶಿಸಲಾಗಿದೆ. 50 ಮೀಟರ್‌ನಲ್ಲಿ ಆರು ಪಥ ನಿರ್ಮಿಸಲಾಗುತ್ತದೆ. ಉಳಿದ ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಮಾರಾಟ ಮಾಡಲಾಗುತ್ತದೆ’ ಎಂದು ಅತೀಕ್ ಹೇಳಿದರು.

‘ಯೋಜನೆಯ ವೆಚ್ಚದಲ್ಲಿ ಶೇ 60ರಷ್ಟು ಹಣ ಭೂಸ್ವಾಧೀನಕ್ಕೇ ಬೇಕಾಗುತ್ತದೆ. ಹೀಗಾಗಿ ಟೋಲ್ ಸಂಗ್ರಹದಿಂದ ಮಾತ್ರ ಸಾಲ ತೀರಿಸಲು ಸಾಧ್ಯವಿಲ್ಲ. ಹೀಗಾಗಿ, ಕಾರಿಡಾರ್‌ನ ಎರಡೂ ಬದಿಯ ಜಾಗವನ್ನು ಮಾರಾಟ ಮಾಡಲಾಗುತ್ತದೆ’ ಎಂದರು.

ಬ್ಯುಸಿನೆಸ್ ಕಾರಿಡಾರ್ ಮಾರ್ಗ

ತುಮಕೂರು ರಸ್ತೆಯ ಮಾದನಾಯಕಹಳ್ಳಿ ಬಳಿಯ ನೈಸ್ ಜಂಕ್ಷನ್ ಸಮೀಪದಿಂದ ಆರಂಭವಾಗುವ ಬ್ಯುಸಿನೆಸ್ ಕಾರಿಡಾರ್ ಹೆಸರುಘಟ್ಟ ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಬಳ್ಳಾರಿ ರಸ್ತೆ, ಹೆಣ್ಣೂರು, ಹಳೇ ಮದ್ರಾಸ್ ರಸ್ತೆ, ವೈಟ್‌ಫೀಲ್ಡ್, ಚನ್ನಸಂದ್ರ, ಸರ್ಜಾಪುರ ರಸ್ತೆ ಮಾರ್ಗವಾಗಿ ಹೊಸೂರು ರಸ್ತೆ ತಲುಪಲಿದೆ.

ಹೆಸರಘಟ್ಟ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ವೈಟ್‌ಫೀಲ್ಡ್, ಹೊಸೂರು ರಸ್ತೆಗಳಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್ ಹಾಗೂ 395 ಸಣ್ಣ ಜಂಕ್ಷನ್‌ಗಳ ಮೇಲೆ ಪಿಆರ್‌ಆರ್ ಹಾದುಹೋಗಲಿದೆ. ಜಾರಕಬಂಡೆ ಕೆರೆ, ತಿರುಮೇನಹಳ್ಳಿ ಕೆರೆ, ಚಿನ್ನಗಾನಹಳ್ಳಿ ಕೆರೆ, ಗುಂಜೂರು ಕೆರೆ, ಚಿಕ್ಕತೋಗೂರು ಕೆರೆಗಳ ಮೇಲೆ ಸೇರಿದಂತೆ ಒಟ್ಟು 16 ಮೇಲ್ಸೇತುವೆಗಳನ್ನು ನಿರ್ಮಿಸುವ ಯೋಜನೆ ಇದೆ.

ಸುರಂಗ ರಸ್ತೆ: ಜನವರಿಗೆ ಟೆಂಡರ್

ಒಂದನೇ ಪುಟದಿಂದ...

‘ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಯೋಜನೆ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದ್ದು, ಶೇ 70ರಷ್ಟು ವೆಚ್ಚವನ್ನು ಖಾಸಗಿ ಗುತ್ತಿಗೆದಾರರು ಭರಿಸುವಂತೆ ಯೋಜನೆ ರೂಪಿಸಲಾಗಿದೆ. ಉಳಿದ ಶೇ 30ರಷ್ಟು ಹಣವನ್ನು ಬಿಬಿಎಂಪಿ ಹಣಕಾಸು ಸಂಸ್ಥೆಗಳಿಂದ ಪಡೆಯಲು ಯೋಜಿಸಿದೆ’ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

‘ಭಾರತ ಮತ್ತು ಚೀನಾದ ಸಂಬಂಧ ಉತ್ತಮಗೊಳ್ಳುತ್ತಿದ್ದು, ಟಿಬಿಎಂಗಳನ್ನು ಚೀನಾದಿಂದ ನೇರವಾಗಿ ಆಮದು ಮಾಡಿಕೊಳ್ಳಲು ಯೋಜಿಸಲಾಗುತ್ತಿದೆ. ಯೂರೋಪಿನ ಟಿಬಿಎಂಗಳ ಬದಲು ಚೀನಾ ಟಿಬಿಎಂಗಳನ್ನು ಬಳಸಿದರೆ ಯೋಜನೆಯ ವೆಚ್ಚ ಶೇ 10ರಷ್ಟು ಕಡಿಮೆಯಾಗಲಿದೆ. ಈ ಯೋಜನೆಯನ್ನು ನಾವು ಇನ್ನು ಆರು ತಿಂಗಳಲ್ಲಿ ಪ್ರಾರಂಭಿಸಲು ನಿರ್ಧರಿಸಿದ್ದೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧವಾಗಿದ್ದು, ಜನವರಿಯಲ್ಲಿ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ. ಎಲ್ಲರೂ ಅಚ್ಚರಿಯಿಂದ ನೋಡು ವಂತಹ ರೀತಿಯಲ್ಲಿ ಸುರಂಗ ರಸ್ತೆಯನ್ನು ವಿಶ್ವಮಟ್ಟದಲ್ಲಿ ನಿರ್ಮಿಸಲು ಯೋಜಿಸಲಾಗಿದೆ.

ಎಲ್ಲ ರೀತಿಯ ಸೌಲಭ್ಯಗಳನ್ನೂ ಈ ರಸ್ತೆಯಲ್ಲಿ ಒದಗಿಸಲಾಗುತ್ತದೆ’ ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರು ತಿಳಿಸಿದರು.

ಪ್ರವೇಶ–ನಿರ್ಗಮನಕ್ಕೆ ‘ಪಾಯಿಂಟ್’

ಹೆಬ್ಬಾಳ ಕೆರೆಯ ಮುಂಭಾಗದಿಂದ ಉತ್ತರ–ದಕ್ಷಿಣ ಸುರಂಗ ರಸ್ತೆ ಕಾರಿಡಾರ್ ಆರಂಭವಾಗಿ, ಕೇಂದ್ರೀಯ ರೇಷ್ಮೆ ಮಂಡಳಿಯವರೆಗೆ ಸಾಗಲಿದೆ. ಕೆರೆಯ ಮುಂಭಾಗ ವಾಹನಗಳ ಪ್ರವೇಶ ಹಾಗೂ ನಿರ್ಗಮನಕ್ಕೆ ಅವಕಾಶವಿರುತ್ತದೆ. ಇದಾದ ನಂತರ, ಹೆಬ್ಬಾಳ ಪಶುವೈದ್ಯ ಆಸ್ಪತ್ರೆ ಬಳಿ ವಾಹನಗಳ ನಿರ್ಗಮನ ಮತ್ತು ಪ್ರವೇಶಕ್ಕಾಗಿ ‘ಪಾಯಿಂಟ್’ ನಿರ್ಮಿಸಲಾಗುತ್ತದೆ. ಮೇಖ್ರಿ ವೃತ್ತದ ಅರಮನೆ ಮೈದಾನ, ಗಾಲ್ಫ್ ಮೈದಾನ ಮತ್ತು ಮಹಾರಾಣಿ ಕಾಲೇಜು, ಲಾಲ್ ಬಾಗ್ ಬಳಿಯಲ್ಲಿ ‘ಪಾಯಿಂಟ್’ ನಿರ್ಮಿಸಲು ಸದ್ಯಕ್ಕೆ ಯೋಜಿಸಲಾಗಿದೆ. ಸರ್ಜಾಪುರ ರಸ್ತೆ ಹಾಗೂ ಹೊರ ವರ್ತುಲ ರಸ್ತೆ ಕಡೆಯಲ್ಲೂ ಪ್ರವೇಶ, ನಿರ್ಗಮನ ನೀಡಲು ಉದ್ದೇಶಿಸಲಾಗಿದೆ.

ಅಂಗವಿಕಲ ನೌಕರರಿಗೆ ಸಿಎಸ್ ಭರವಸೆ

ಬೆಂಗಳೂರು: ‘ಗ್ರೂಪ್ ‘ಎ’ ಮತ್ತು ಗ್ರೂಪ್ ‘ಬಿ’ ವೃಂದದ ಸರ್ಕಾರಿ ನೌಕರರಿಗೆ ಮುಂಬಡ್ತಿ ನೀಡುವಾಗ, ಅಂಗವಿಕಲ ನೌಕರರಿಗೆ ಮೀಸಲಾತಿ ನೀಡಲು ತುರ್ತಾಗಿ ಕ್ರಮಕೈಗೊಳ್ಳಲಾಗುವುದು’ ಎಂದು ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ನಿಯೋಗಕ್ಕೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಭರವಸೆ ನೀಡಿದರು.

ಸಂಘದ ಗೌರವಾಧ್ಯಕ್ಷ ರೇಣುಕಾರಾಧ್ಯ, ರಾಜ್ಯ ಘಟಕದ ಅಧ್ಯಕ್ಷ ಆರ್. ಇಂದ್ರೇಶ್, ಕಾರ್ಯದರ್ಶಿಗಳಾದ ಸದಾನಂದ ಆಚಾರ್ಯ ಮತ್ತು ರಾಮಣ್ಣ ನೇತೃತ್ವದ ನಿಯೋಗವು ಮುಖ್ಯ ಕಾರ್ಯದರ್ಶಿ ಅವರನ್ನು ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಿತು.

‘ಸುಪ್ರೀಂ ಕೋರ್ಟ್ ಆದೇಶದಂತೆ ಅಂಗವಿಕಲ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲು ನೀಡಲು ಕ್ರಮ ಕೈಗೊಳ್ಳಲಾಗುವುದು’ ಎಂದೂ ಅವರು ಭರವಸೆ ನೀಡಿದರು.

ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ‘7ನೇ ವೇತನ ಆಯೋಗದ ಶಿಫಾರಸಿನಂತೆ, ಅಂಗವಿಕಲರಿಗೆ ಶೇ 6ರಷ್ಟು ಪ್ರಯಾಣ ಭತ್ಯೆ ನೀಡಲು ಹಾಗೂ ಇತರ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಶೀಘ್ರವೇ ಆದೇಶ ಹೊರಡಿಸಲಾಗುವುದು’ ಎಂದರು.

ಯಲಹಂಕ: 9,10ರಂದು ಕಡಲೇಕಾಯಿ ಪರಿಷೆ

ಪ್ರಜಾವಾಣಿ ವಾರ್ತೆ

ಯಲಹಂಕ: ವೆಂಕಟಾಲದಲ್ಲಿರುವ ಅಭಯ ಮಹಾಗಣಪತಿ ದೇವಾಲಯದ 12ನೇ ವಾರ್ಷಿಕೋತ್ಸವದ ಪ್ರಯುಕ್ತ ನವೆಂಬರ್ 9 ಮತ್ತು 10ರಂದು ಕಡಲೇಕಾಯಿ ಪರಿಷೆಯನ್ನು ಆಯೋಜಿಸಲಾಗಿದೆ.

ಪರಿಷೆಯಲ್ಲಿ ಕಡಲೇಕಾಯಿಯನ್ನು ರಾಶಿ ಹಾಕಿ ವ್ಯಾಪಾರ ಮಾಡುವ ಪ್ರತಿಯೊಬ್ಬರಿಗೂ ದೇವಸ್ಥಾನದ ವತಿಯಿಂದ ₹500 ವಿತರಿಸಲಾಗುವುದು. ಅಲ್ಲದೆ ವ್ಯಾಪಾರಿಗಳಿಗೆ ಕಾಫಿ, ತಿಂಡಿ ಹಾಗೂ ಊಟದ ವ್ಯವಸ್ಥೆ ಮಾಡಲಾಗುವುದು ಎಂದು ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಕೆಂಪೇಗೌಡ ತಿಳಿಸಿದ್ದಾರೆ.

ಕಡಲೇಕಾಯಿ ಪರಿಷೆಯಲ್ಲಿ ಗೃಹೋಪಯೋಗಿ ವಸ್ತುಗಳು, ಕೃತಕ

ಆಭರಣಗಳು, ಮಕ್ಕಳ ಆಟಿಕೆಗಳು, ಮಣ್ಣಿನಿಂದ ತಯಾರಿಸಿದ ಮಡಕೆ-ಕುಡಿಕೆಗಳು, ಅಲಂಕಾರಿಕ ವಸ್ತುಗಳು, ತಿಂಡಿ-ತಿನಿಸುಗಳ ಮಾರಾಟವೂ ನಡೆಯಲಿದೆ. ಮಕ್ಕಳು ಮತ್ತು ಪೋಷಕರ ಮನರಂಜನೆಗಾಗಿ, ಜಾಯಿಂಟ್ ವೀಲ್, ಡ್ಯಾಶಿಂಗ್ ಕಾರ್, ಪುಟಾಣಿ ರೈಲು ಮತ್ತಿತರ ಆಟಗಳಿಗೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಮಾಹಿತಿಗಾಗಿ-99801 96440, 9632365956 ಸಂಪರ್ಕಿಸಬಹುದು.

ನಾಗಮಂಗಲ ಗಲಭೆ: ₹76 ಲಕ್ಷ ಪರಿಹಾರ

• ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಜಿಲ್ಲೆಯ ನಾಗಮಂಗಲ ಪಟ್ಟಣದಲ್ಲಿ ಸೆ.11ರಂದು ಗಣೇಶ ಮೂರ್ತಿ ವಿಸರ್ಜನೆ ಮೆರವಣಿಗೆ ಸಂದರ್ಭ ನಡೆದಿದ್ದ ಕೋಮು ಗಲಭೆಯಲ್ಲಿ ಹಾನಿಗೊಳಗಾದ ಅಂಗಡಿ ಮಾಲೀಕರು ಮತ್ತು ಬಾಡಿಗೆದಾರರಿಗೆ ನಷ್ಟ ಪರಿಹಾರ ನೀಡಲು ರಾಜ್ಯ ಸರ್ಕಾರ ₹76.45 ಲಕ್ಷ ಮೊತ್ತವನ್ನು ಮಂಜೂರು ಮಾಡಿದೆ.

ಮಂಡ್ಯ ಜಿಲ್ಲಾಧಿಕಾರಿಯು ₹24.55 ಲಕ್ಷವನ್ನು ‘ಲೆಕ್ಕಶೀರ್ಷಿಕೆಯಡಿ ಲಭ್ಯವಿರುವ ಅನುದಾನ’ದಲ್ಲಿ ವಿತರಿಸಲು ಮಂಜೂರಾತಿ ನೀಡಲಾಗಿದೆ ಹಾಗೂ ಬಾಕಿ ₹51.90 ಲಕ್ಷವನ್ನು ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಬಿಡುಗಡೆಗೊಳಿಸಲು ಅನುಮೋದನೆ ನೀಡಲಾಗಿದೆ. ಈ ಅನುದಾನ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸುವಂತೆಯೂ ಜಿಲ್ಲಾಧಿಕಾರಿಗೆ ಒಳಾಡಳಿತ ಇಲಾಖೆಯ (ಕಾನೂನು ಮತ್ತು ಸುವ್ಯವಸ್ಥೆ) ಅಧೀನ ಕಾರ್ಯದರ್ಶಿ ಸೂಚಿಸಿದ್ದಾರೆ.

‘ಗಲಭೆಯಲ್ಲಿ 26 ಕಟ್ಟಡಗಳಿಗೆ ಹಾನಿಯಾಗಿದ್ದು, ಅಂದಾಜು ನಷ್ಟ ₹1.38 ಕೋಟಿ ಹಾಗೂ ಅಂಗಡಿಗಳಲ್ಲಿನ ಸರಕು ಸಾಮಗ್ರಿಗಳಿಗೆ ಹಾನಿಯಾದ ಅಂದಾಜು ನಷ್ಟ ₹1.18 ಕೋಟಿ ಸೇರಿ ₹2.66 ಕೋಟಿ ನಷ್ಟವಾಗಿದೆ’ ಎಂದು ಜಿಲ್ಲಾಡಳಿತ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಎಸ್ಪಿ, ಉಪವಿಭಾಗಾಧಿಕಾರಿ, ತಹಶೀಲ್ದಾರ್, ಪುರಸಭೆ ಮುಖ್ಯಾಧಿಕಾರಿ ಹಾಗೂ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಒಳಗೊಂಡ ತಂಡವು ಹಾನಿಯ ವಿವರವನ್ನು ಕಲೆ ಹಾಕಿ, ಮೌಲ್ಯಮಾಪನ ವರದಿ ಸಿದ್ಧಪಡಿಸಿತ್ತು.

ಪರಿಹಾರ ಮೊತ್ತದ ವಿವರ: ‘ವ್ಯಕ್ತಿ ಮೃತಪಟ್ಟರೆ ₹5 ಲಕ್ಷ, ವ್ಯಕ್ತಿ ಶಾಶ್ವತ ಅಂಗವಿಕಲನಾದರೆ ₹2 ಲಕ್ಷ, ತಾತ್ಕಾಲಿಕ ಅಂಗವಿಕಲನಾದರೆ ₹1 ಲಕ್ಷ, ತೀವ್ರ ಗಾಯಗೊಂಡರೆ ₹50 ಸಾವಿರ, ಉತ್ಕೃಷ್ಟ ಶಾಶ್ವತ ಕಟ್ಟಡ ನಾಶಗೊಂಡರೆ ₹1 ಲಕ್ಷ, ಕಚ್ಚಾ ಅಥವಾ ಪಕ್ಕಾ ಮನೆ ನಾಶಗೊಂಡರೆ ₹50 ಸಾವಿರ ಹಾಗೂ ವಾಹನ, ಬೆಳೆ, ಗೃಹೋಪಯೋಗಿ ಉಪಕರಣ, ಅಂಗಡಿ, ಚರಾಸ್ತಿ ನಾಶಗೊಂಡ ಸಂದರ್ಭದಲ್ಲಿ ₹15 ಸಾವಿರದಿಂದ ₹30 ಸಾವಿರದವರೆಗೆ ಪರಿಹಾರ ನೀಡಬಹುದು’ ಎಂಬ ಮಾರ್ಗಸೂಚಿ ಇದೆ ಎನ್ನುತ್ತಾರೆ ಅಧಿಕಾರಿಗಳು.

ನಾಲ್ವರು ಪೊಲೀಸರ ತಲೆದಂಡ

ನಾಗಮಂಗಲ ಗಲಭೆಗೆ ಸಂಬಂಧಿಸಿದಂತೆ ಕರ್ತವ್ಯಲೋಪ ಆರೋಪದ ಮೇರೆಗೆ ನಾಗಮಂಗಲ ಡಿವೈಎಸ್ಪಿ ಸುಮಿತ್, ಇನ್‌ಸ್ಪೆಕ್ಟರ್ ಅಶೋಕ್‌ಕುಮಾರ್, ಪಿಎಸ್‌ಐ ಬಿ.ಜೆ.ರವಿ ಹಾಗೂ ಗುಪ್ತಚರ ವಿಭಾಗದ ಕಾನ್‌ಸ್ಟೆಬಲ್ ರಮೇಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು. ಗಲಭೆ ಪ್ರಕರಣದಲ್ಲಿ ಪೊಲೀಸರು 55 ಆರೋಪಿಗಳನ್ನು ಬಂಧಿಸಿದ್ದರು. ಮಂಡ್ಯದ ಸ್ಥಳೀಯ ನ್ಯಾಯಾಲಯ ಸೆ.27ರಂದು ಜಾಮೀನು ನೀಡಿತ್ತು.

ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ವೇತನ ತಾರತಮ್ಯ ಸಲ್ಲದು –ಸುಪ್ರೀಂ

ನವದೆಹಲಿ (ಪಿಟಿಐ): ನೇಮಕಾತಿಯ ಮೂಲದ ಆಧಾರದ ಮೇಲೆ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ವೇತನದಲ್ಲಿ ತಾರತಮ್ಯ ಎಸಗುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ಜಿಲ್ಲಾ ನ್ಯಾಯಾಲಯಗಳಿಂದ ನೇಮಕ ಮಾಡುವ ಜೊತೆಗೆ, ವಕೀಲರ ಸಂಘಗಳಿಂದಲೂ ಪದೋನ್ನತಿ ನೀಡಿ ನೇಮಕ ಮಾಡಲಾಗುತ್ತದೆ.

ನೇಮಕಾತಿ ಆಧಾರತದಲ್ಲಿ ವೇತನದಲ್ಲಿ ತಾರತಮ್ಯ ಮಾಡುವುದು ಏಕರೂಪತೆಯ ಪ್ರಜ್ಞೆಗೆ ವಿರುದ್ಧವಾಗಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಪಟ್ನಾ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ವೇತನದಲ್ಲಿ ತಾರತಮ್ಯವಾಗಿದೆ ಎಂದು ಕೋರಿದ್ದ ಅರ್ಜಿಗಳ ವಿಚಾರಣೆ ವೇಳೆ ‘ಸುಪ್ರೀಂ’ ಈ ಮಾತು ಹೇಳಿದೆ.

ಸಿ.ಎಂ ವಿರುದ್ಧ ಇಂದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಿ ಲೋಕಾಯುಕ್ತ ಪೊಲೀಸ್ ವಿಚಾರಣೆ ಎದುರಿಸಬೇಕು’ ಎಂದು ಆಗ್ರಹಿಸಿ ಬಿಜೆಪಿ ನಗರ ಹಾಗೂ ಗ್ರಾಮಾಂತರ ಘಟಕದಿಂದ ಇಲ್ಲಿನ ರಾಮಸ್ವಾಮಿ ವೃತ್ತದಲ್ಲಿ ನ.6ರಂದು ಬೆಳಿಗ್ಗೆ 10ಕ್ಕೆ ಪ್ರತಿಭಟನೆ ಆಯೋಜಿಸಲಾಗಿದೆ.

‘ಆರೋಪಿ ರಕ್ಷಣೆಯ ಪ್ರಶ್ನೆಯೇ ಇಲ್ಲ’

ಬೆಂಗಳೂರು: ‘ಕೆಂಗೇರಿಯಲ್ಲಿ ಸಂಭವಿಸಿದ ಅಪಘಾತ ಪ್ರಕರಣದಲ್ಲಿ ಯಾವುದೇ ಊಹಾಪೋಹಗಳಿಗೆ ಆಸ್ಪದವಿಲ್ಲ. ಆರೋಪಿಯ ರಕ್ಷಣೆಯ ಪ್ರಶ್ನೆಯೇ ಇಲ್ಲ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಹೇಳಿದರು.

ನ.2ರಂದು ಸಂಜೆ ಕೆಂಗೇರಿ ಬಸ್ ನಿಲ್ದಾಣದ ಬಳಿ ಬೆಂಜ್ ಕಾರಿನಿಂದ ಸಂಭವಿಸಿದ್ದ ಅಪಘಾತದಲ್ಲಿ ಪಾದಚಾರಿ ಸಂಧ್ಯಾ (30) ಅವರು ಮೃತಪಟ್ಟಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ, ಕಾರು ಚಾಲಕ ಧನುಷ್ ಎಂಬಾತನನ್ನು ಬಂಧಿಸಲಾಗಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಎಂದು ತಿಳಿಸಿದರು.

ಡಿಸೆಂಬರ್‌ನಲ್ಲಿ ರಾಜ್ಯಮಟ್ಟದ ವೈಜ್ಞಾನಿಕ ಸಮ್ಮೇಳನ

ಕೆ.ಆರ್.ಪುರ: ‘ರಾಜ್ಯಮಟ್ಟದ ನಾಲ್ಕನೇ ವೈಜ್ಞಾನಿಕ ಸಮ್ಮೇಳನವನ್ನು ಡಿ. 28– 29ರಂದು ಬಾಗಲೂರು ವಿಜೆ ಇಂಟರ್‌ನ್ಯಾಷನಲ್ ಶಾಲಾ ಮೈದಾನದಲ್ಲಿ ಆಯೋಜಿಸಲಾಗುತ್ತಿದೆ’ ಎಂದು ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಹುಲಿಕಲ್ ನಟರಾಜ್ ತಿಳಿಸಿದರು.

ನಾಗವಾರದ ಎಸ್.ವಿ.ಎನ್ ಶಾಲಾ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ದೊಡ್ಡಬಳ್ಳಾಪುರದ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಹಾಗೂ ಬೆಂಗಳೂರು ಶೈಕ್ಷಣಿಕ ಜಿಲ್ಲೆ ಮತ್ತು ಕರ್ನಾಟಕ ರಾಜ್ಯ ಖಾಸಗಿ ಶಾಲಾ ಕಾಲೇಜು ಆಡಳಿತ ಮಂಡಳಿಗಳ ಒಕ್ಕೂಟ, ಕರ್ನಾಟಕ ರಾಜ್ಯ ಮಾನವ ಬಂಧುತ್ವ ವೇದಿಕೆ ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ಸಹಯೋಗದಲ್ಲಿ ನಡೆಯಲಿದೆ ಎಂದು ಹೇಳಿದರು.

ಸಮ್ಮೇಳನದ ಸರ್ವಾಧ್ಯಕ್ಷರಾಗಿ ನಟಿ ಉಮಾಶ್ರೀ ಆಯ್ಕೆಯಾಗಿದ್ದಾರೆ. ವಿವಿಧ ಪ್ರದರ್ಶನ ಇರಲಿದೆ. ರಾಜ್ಯ ಮಟ್ಟದ 10 ಜನರಿಗೆ ಜೀವಮಾನ ಶ್ರೇಷ್ಠ ಸಾಧನ ಪ್ರಶಸ್ತಿ, ರಾಜ್ಯದ 37 ಜನರಿಗೆ ಹೆಚ್.ಎನ್.ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ 30 ಸಾವಿರಕ್ಕೂ ಹೆಚ್ಚು ಶಾಲಾ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸುವರು. ಎಂದು ಅವರು ಮಾಹಿತಿ ನೀಡಿದರು.

ಕೆ.ಆರ್.ಪುರ: ಕಣ್ಣೂರು ಗ್ರಾ.ಪಂ ವ್ಯಾಪ್ತಿಯ ನಿವಾಸಿಗಳ ಆಗ್ರಹ

ನಿವೇಶನಕ್ಕೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ನಿವೇಶನಕ್ಕೆ ಆಗ್ರಹಿಸಿ ಕಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಿವಾಸಿಗಳು ಹೊಸೂರು ಬಂಡೆ ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು.

‘ಹಲವು ವರ್ಷಗಳಿಂದ ನಿವೇಶನಕ್ಕೆ ಹೋರಾಟ ಮಾಡುತ್ತಿದ್ದೇವೆ. ಆದರೂ ಅಧಿಕಾರಿಗಳು, ಜನ ಪ್ರತಿನಿಧಿಗಳು ಸ್ಪಂದಿಸುತ್ತಿಲ್ಲ. ನಿವೇಶನ ಒದಗಿಸುವವರೆಗೂ ಹೋರಾಟ ನಿರಂತರವಾಗಿ ನಡೆಸುತ್ತೇವೆ’ ಎಂದು ಪ್ರತಿಭಟನಾನಿರತರು ಹೇಳಿದರು.

‘ನಿವೇಶನರಹಿತ ಬಡವರು ಸರ್ಕಾರಿ ಜಾಗದಲ್ಲಿ ಸಣ್ಣದಾಗಿ ಸೂರು ನಿರ್ಮಿಸಿಕೊಳ್ಳಲು ಅಧಿಕಾರಿಗಳು ವಿರೋಧಿಸುತ್ತಿದ್ದಾರೆ. ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಪೊಲೀಸರ ಮೂಲಕ ಬಡವರ ಮೇಲೆ ದೌರ್ಜನ್ಯ ಎಸಗುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಬಡವರಿಗೆ ನಿವೇಶನ ಕಲ್ಪಿಸಲು 2012ರಲ್ಲಿ ಕಣ್ಣೂರು ಗ್ರಾಮದ ಸರ್ವೆ ನಂ. 50ರಲ್ಲಿ ಎಂಟು ಎಕರೆ ಭೂಮಿಯನ್ನು ಮೀಸಲಿಡಲಾಗಿದೆ. ಆದರೆ ಈವರೆಗೆ ಯಾವುದೇ ರೀತಿಯ ಪ್ರಕ್ರಿಯೆ ನಡೆದಿಲ್ಲ’ ಎಂದು ಗ್ರಾಮ ಪಂಚಾಯಿತಿ ಸದಸ್ಯ ನಂಜೇಗೌಡ ಹೇಳಿದರು.

‘ಕಣ್ಣೂರು ಗ್ರಾಮದಲ್ಲಿ ಆಶ್ರಯ ಯೋಜನೆಗೆ ಮೀಸಲಿಟ್ಟ ಭೂಮಿಯನ್ನು ಬಲಾಢ್ಯರು ಕಬಳಿಸುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ಪೂರ್ವ ತಾಲ್ಲೂಕು ಉಪಾಧ್ಯಕ್ಷ ವೆಂಕಟರೆಡ್ಡಿ ಆರೋಪಿಸಿದರು.

ಕಣ್ಣೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸೂರು ಬಂಡೆ ಗ್ರಾಮದಲ್ಲಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು

ನಿಧನ ವಾರ್ತೆ

ಜನಪದ ಗಾಯಕಿ ಶಾರದಾ ಸಿನ್ಹ



ಶಾರದಾ ಸಿನ್ಹ

ನವದೆಹಲಿ (ಪಿಟಿಐ): ಜನಪ್ರಿಯ ಜನಪದ ಗಾಯಕಿ ಶಾರದಾ ಸಿನ್ಹ (72) ಅವರು ಮಂಗಳವಾರ ರಾತ್ರಿ ‘ಏಮ್ಸ್’ನಲ್ಲಿ ನಿಧನರಾದರು.

‘ಕಾರ್ತಿಕ್ ಮಾಸ್ ಇಜೋರಿಯಾ’, ‘ಕೋಯಲ್ ಬಿನ್’ ತರಹದ ಜನಪದ ಗೀತೆಗಳು, ‘ಗ್ಯಾಂಗ್ಸ್ ಆಫ್ ವಸೇಪುರ್’ ಹಿಂದಿ ಸಿನಿಮಾದ ‘ತಾರ್ ಬಿಜಿಲಿ’, ‘ಹಮ್ ಆಪ್ಕೆ ಹೈ ಕೌನ್’ ಚಿತ್ರದ ‘ಬಾಬುಲ್’ ಹಾಡುಗಳ ಗಾಯನದಿಂದ ಶಾರದಾ ಅವರು ಛಾಪು ಮೂಡಿಸಿದ್ದರು.

ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದರು. ಭೋಜಪುರಿ, ಮೈಥಿಲಿ ಭಾಷೆಯ ಜನಪದ ಗೀತೆಗಳನ್ನು ಹಾಡುತ್ತಿದ್ದರು. ಮಯೋಮಿಯಾ ಸಮಸ್ಯೆಯಿಂದ ಬಳಲುತ್ತಿದ್ದರು. ಕೆಲಕಾಲ ಕೃತಕ ಉಸಿರಾಟ ವ್ಯವಸ್ಥೆ ಕಲ್ಪಿಸಲಾಗಿತ್ತು.

‘ಬಿಹಾರಿ ಕೋಕಿಲಾ’ ವಿಶೇಷಣದಿಂದ ಅಭಿಮಾನಿಗಳು ಕರೆಯುತ್ತಿದ್ದರು.

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/50/2023–24 ದಿನಾಂಕ: 05–11–2024

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಸೋಂಪುರ–2 ಹೋಬಳಿ, ಹೆಗ್ಗುಂದ** ಗ್ರಾಮವು **“ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ”** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **“ವ್ಯವಸಾಯ”** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ‘ವಸತಿ’** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **‘ವ್ಯವಸಾಯ’** ವಲಯದಿಂದ **‘ವಸತಿ’** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು/ ಹೋಬಳಿ/ ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1) ಶ್ರೀ ವಾಸು. ಹೆಚ್. ಬಿನ್ ಲೇಟ್ ಡಿ. ಹನುಮಂತಯ್ಯ 2) ಶ್ರೀ ಷಣ್ಮುಖ ಬಿನ್ ಮಲ್ಲಿಕಯ್ಯ 3) ಶ್ರೀ ವೆಂಕಟೇಶ್. ಟಿ.ಎಲ್. ಬಿನ್ ಲಕ್ಷ್ಮಣಯ್ಯ. ಟಿ.ಸಿ. 4) ಶ್ರೀ ಹನುಮಂತರಾಯಪ್ಪ ಬಿನ್ ಲೇಟ್ ರಂಗಪ್ಪ	ನೆಲಮಂಗಲ/ ಸೋಂಪುರ–2/ ಹೆಗ್ಗುಂದ	186/2	00-23	ವ್ಯವಸಾಯ	ವಸತಿ
		186/3	00-20		
		186/4	00-20		
		186/5	01-28		
		186/6	01-28		
		186/7	01-28		
		ಒಟ್ಟು	06-27		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **“ವ್ಯವಸಾಯ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛೆಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/2921/ಅಡ್ವರ್ಟೋರ್/2024–25

ತಂತ್ರಜ್ಞಾನ





ಬಾವಲಿಗಳ ಜಿಪಿಎಸ್ ಬುದ್ಧಿ

ನೇಸರ ಕಾಡನಕುಪ್ಪೆ

ಈ ಸನ್ನಿವೇಶವನ್ನು ಕಲ್ಪಿಸಿಕೊಳ್ಳಿ. ನೀವಿರುವ ಜಾಗದಲ್ಲಿ ವಿದ್ಯುತ್ ದೀಪವಿಲ್ಲ; ಬೆಳದಿಂಗಳೂ ಇಲ್ಲ. ನಿಮ್ಮ ಮನೆಯಿಂದ ಕತ್ತಲೆಯ ಹೊತ್ತಿನಲ್ಲಿ ಸುಮಾರು ಮೂರು ಕಿಲೋಮೀಟರ್ ಸಂಪೂರ್ಣ ಅಂಧಕಾರದಲ್ಲಿ ಕ್ರಮಿಸುತ್ತೀರಿ. ವಾಪಸ್ ಹೋಗಬೇಕು ಎಂದರೆ ಅದು ಸಾಧ್ಯವೇ? ಅದು ಅಸಾಧ್ಯ ತಾನೇ? ಆದರೆ, ಅದು ಬಾವಲಿಗಳಿಗೆ ಸಾಧ್ಯ. ಮೊದಲನೆಯದಾಗಿ ಕತ್ತಲಿನಲ್ಲಿ ಸಂಚಾರ ಆರಂಭಿಸಲೇ ನಮಗೆ ಸಾಧ್ಯವಾಗದು. ಇನ್ನು ವಾಪಸಾಗುವ ಮಾತೆಲ್ಲಿ ಬಂದಿತು?

ಆದರೆ, ಬಾವಲಿಗಳು ತಮ್ಮಲ್ಲಿ ಅಡಗಿರುವ 'ಎಕೊಲೊಕೇಟಿಂಗ್' ('ಪ್ರತಿಫಲನ ಜಾಗಪತ್ತೆ') ಸಾಮರ್ಥ್ಯದಿಂದ ಎಲ್ಲಿಂದ ಎಲ್ಲಿಗೆ ಬೇಕಾದರೂ ಕ್ರಮಿಸುವ ಶಕ್ತಿಯನ್ನು ತಂತ್ರಜ್ಞಾನವನ್ನಾಗಿ ಬದಲಿಸುವ ಸಂಶೋಧನೆಯನ್ನು ಜರ್ಮನಿಯ ಕಾನ್‌ಸ್ಟಾನ್ಸ್ ಜರ್ಮನಿ ವಿಶ್ವವಿದ್ಯಾಲಯದ ಗುಂಪು ನಡವಳಿಕೆ ಸುಧಾರಿತ ಕೇಂದ್ರದ ವಿಜ್ಞಾನಿಗಳು ಸಂಶೋಧಿಸಿದ್ದಾರೆ. ಈ ತಂತ್ರಜ್ಞಾನದಿಂದ 'ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ'ಗೆ ಹೊಸ ಆಯಾಮವೇ ಸಿಗಲಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ.

ಬಾವಲಿಗಳು ಈಗಾಗಲೇ ಅನೇಕ ತಂತ್ರಜ್ಞಾನ ಸಂಶೋಧನೆಗೆ ಸ್ಫೂರ್ತಿಯಾಗಿವೆ. ಉದಾಹರಣೆಗೆ, ಸಾಗರದಾಳದಲ್ಲಿ ಬಳಸುವ 'ಸೋನಾರ್' ವ್ಯವಸ್ಥೆ. ಡಾಲ್ಫಿನ್‌ಗಳು ಸಹ ಇದೇ ಶಕ್ತಿಯನ್ನು ಹೊಂದಿವೆ. ಅಂದರೆ, ಬಾವಲಿಗಳು ಅಥವಾ ಡಾಲ್ಫಿನ್‌ಗಳು ಹೊರಡಿಸುವ 'ಅಲ್ಟ್ರಾಸೋನಿಕ್' ಶಬ್ದವು ಬಹುದೂರ ಸಂಚರಿಸಿ ವಾಸಪಾಗುತ್ತವೆ. ಈ ವಾಪಸಾಗುವ ಶಬ್ದವನ್ನು ಗ್ರಹಿಸುವ ಸಾಮರ್ಥ್ಯ ಜೀವಸಂಕುಲದಲ್ಲಿ ಬಾವಲಿ, ಡಾಲ್ಫಿನ್ ರೀತಿಯ ಕೆಲವೇ ಜೀವಿಗಳಿಗೆ ಇರುವುದು. 1915ರಲ್ಲಿ ನೌಕಾ ವಾಸ್ತುಶಿಲ್ಪತಜ್ಞ ಲೂಯಿಸ್ ನಿಕ್ಸನ್ ಈ ತಂತ್ರಜ್ಞಾನವನ್ನು ಕಂಡುಹಿಡಿದ. ಆ ತಂತ್ರಜ್ಞಾನವನ್ನು ಇಂದಿಗೂ ಜಲಾಂತರ್ಗಾಮಿ ನೌಕೆಗಳಲ್ಲಿ ಬಳಸಲಾಗುತ್ತಿದೆ. ಹೆಚ್ಚಾಗಿ ಭೂಮಿಯೊಳಗಿನ ಅಥವಾ ಸಾಗರದೊಳಗಿನ ಸೈನ್ಯದಿಂದ ಶಬ್ದಬಳಕೆ ಅಥವಾ ಪತ್ತೆ ಇದರ ಹೂರಣ. ಆದರೆ, ಸೋನಾರ್ ಭೂಮಿಯ ಮೇಲೂ ಬಳಕೆಯಾಗಬೇಕು ಎಂಬ ವಾದ ಮೊದಲಿನಿಂದಲೂ ಇದೆ. ಆದರೆ, ಭೂಮಿಯ ಮೇಲೆ 'ರೇಡಾರ್' ಹಾಗೂ 'ಲೇಸರ್' ಆಧಾರಿತ ನ್ಯಾವಿಗೇಷನ್ ವ್ಯವಸ್ಥೆ ಇರುವ ಕಾರಣ, ಸೋನಾರ್ ಬಳಕೆ ಅಷ್ಟಾಗಿ ಪ್ರಚಲಿತವಾಗಲಿಲ್ಲ. ಆದರೆ, ಗುಂಪು ನಡವಳಿಕೆ ಸುಧಾರಿತ ಕೇಂದ್ರದ ವಿಜ್ಞಾನಿಗಳು ಈ ವಾದವನ್ನು ಭಿನ್ನವಾಗಿಯೇ ವ್ಯಾಖ್ಯಾನಿಸಿದ್ದಾರೆ. ಅಂದರೆ, ಈ ಬಗೆಯ ತಂತ್ರಜ್ಞಾನಗಳನ್ನು ಕೇವಲ ಸೇನೆಯ ಬಳಕೆಗೆ ಮೀಸಲು ಮಾಡದೇ ನಾಗರಿಕ ಬಳಕೆಗೂ ಬಳಸಬಹುದೇ ಎಂಬ ಚಿಂತನೆ. 20 ಕಿಲೋಹರ್ಟ್ಸ್ ಕಂಪನಾಂಕಕ್ಕಿಂತಲೂ ಹೆಚ್ಚಿನ ಶಬ್ದಗಳನ್ನು ಆಲಿಸುವ ಶಕ್ತಿ ಮನುಷ್ಯನಿಗೆ ಇಲ್ಲ. ಇವನ್ನೇ 'ಅಲ್ಟ್ರಾಸೋನಿಕ್' ಶಬ್ದವೆಂದು ಕರೆಯುವುದು. ಈ ಬಗೆಯ ಶಬ್ದಗಳನ್ನು ವೈದ್ಯಕೀಯ ಕ್ಷೇತ್ರದಲ್ಲಿ ಬಳಸಲಾಗುತ್ತದೆ. ಉದಾಹರಣೆಗೆ, ಅಲ್ಟ್ರಾಸೌಂಡ್ ಇಮೇಜಿಂಗ್. ಶಬ್ದದಿಂದ ದೇಹದೊಳಗಿನ ಅಂಗಗಳ ಚಿತ್ರಗಳನ್ನೂ ನೋಡಲು ಸಾಧ್ಯ ಎಂಬ ವಿಶೇಷ ತಂತ್ರಜ್ಞಾನವಿದು. ಶಸ್ತ್ರಚಿಕಿತ್ಸೆ, ಫಿಸಿಯೋಥೆರಪಿಯಂಥ ಕ್ಷೇತ್ರಗಳಲ್ಲೂ ಇದರ ಬಳಕೆ ಇದೆ. ಈ ಬಗೆಯ ಶಬ್ದಗಳ ನಿಖರತೆ ಹೆಚ್ಚು. ಅಂದರೆ, ಈ ಬಗೆಯ ಶಬ್ದಗಳು ಚಲಿಸುವ ಕಂಪನಾಂಕ ನಷ್ಟವಾಗುವುದಿಲ್ಲ. ಅಂದರೆ, ಅವು ಚಲಿಸುತ್ತಿರುವ ಅಡೆತಡೆಗಳು ಉಂಟಾದರೆ ಅವು ಪ್ರತಿಫಲವಾಗಿ ವಾಪಸಾಗುವಾಗ ಪೂರ್ಣ ಪ್ರಮಾಣದಲ್ಲಿ ತಲುಪುತ್ತವೆ. ಈ ತಂತ್ರಜ್ಞಾನವನ್ನು ಗುಂಪು ನಡವಳಿಕೆ ಸುಧಾರಿತ ಕೇಂದ್ರದ ವಿಜ್ಞಾನಿ ಆಯಾ ಗೋಲ್ಡ್‌ಸ್ಟೀನ್ ನೇತೃತ್ವದ ತಂಡವು ಜಿಪಿಎಸ್‌ಗೆ ಅಳವಡಿಸಿದೆ. ಈ ಸಂಶೋಧನೆಯನ್ನು ಪ್ರತಿಷ್ಠಿತ 'ಸೈನ್ಸ್' ನಿಯತಕಾಲಿಕೆಯಲ್ಲಿ ಪ್ರಕಟಿಸಿದೆ.

ಏನಿದು ತಂತ್ರಜ್ಞಾನ?

ಇಸ್ರೇಲಿನ ಹುಲಾ ಕಣಿವೆಯಲ್ಲಿ ಮಾತ್ರ ಸಿಗುವ 'ಕ್ಹುಲ್ಸ್ ಬಾವಲಿ'ಗಳನ್ನು ಈ ಸಂಶೋಧನೆಗೆ ಬಳಸಿಕೊಳ್ಳಲಾಗಿದೆ. ಇವು ಗಾತ್ರದಲ್ಲಿ ತೀರಾ ಸಣ್ಣವಿದ್ದು, ಕೇವಲ 6 ಗ್ರಾಂ ತೂಗುತ್ತವೆ. ಈ ಕಣಿವೆಗಳು ಎಷ್ಟು ಆಳವಾಗಿವೆ ಎಂದರೆ, ರಾತ್ರಿಯಿರಲಿ, ಹಗಲಿನಲ್ಲೂ ಸೂರ್ಯನ ಬೆಳಕು ತಾಗುವುದಿಲ್ಲ. ಈ ಬಾವಲಿಗಳು ಗುಂಪು ಸಂವಹನ ನಡೆಸುತ್ತಾ, ತಾವು ಹೊರಡಿಸುವ ಅಲ್ಟ್ರಾಸೌಂಡ್ ಶಬ್ದಗಳ ಪ್ರತಿಫಲನವನ್ನು ಗಮನಿಸಿ ಸುಮಾರು 3 ಕಿಲೋಮೀಟರ್ ದೂರವನ್ನು ಕ್ರಮಿಸಿ ವಾಪಸಾಗುವುದನ್ನು ಆಯಾ ಗೋಲ್ಡ್‌ಸ್ಟೀನ್ ಅವರ ತಂಡವು ಸುಮಾರು 2 ವರ್ಷಗಳ ಕಾಲ ಅತಿ ಸೂಕ್ಷ್ಮವಾಗಿ ಗಮನಿಸಿದೆ.

ಇವರ ಈ ಸಂಶೋಧನೆಯನ್ನು ಎರಡು ಪ್ರಮುಖ ವಿಚಾರಗಳನ್ನು ವಿಜ್ಞಾನಿಗಳು ಕಲಿತುಕೊಂಡಿದ್ದಾರೆ. ಅಲ್ಟ್ರಾಸೌಂಡ್ ಶಬ್ದಗಳ ಪ್ರತಿಫಲನವನ್ನು ಗ್ರಹಿಸಿ ಸಂಚರಿಸುವ ಗುಣ ಒಂದಾದರೆ, ಬಾವಲಿಗಳ ನಡುವೆ ನಡೆಯುವ ಗುಂಪು ಸಂವಹನ ಕ್ರಿಯೆ. ಇದನ್ನು 'ಕಲೆಕ್ಟಿವ್ ಇಂಟೆಲಿಜೆನ್ಸ್' ('ಗುಂಪುಬುದ್ಧಿಮತ್ತೆ') ಎಂದು ಕರೆಯಲಾಗುತ್ತದೆ. ಈ ಎರಡೂ ಸಾಮರ್ಥ್ಯವನ್ನು ಬಳಸಿಕೊಂಡು ಅತ್ಯಂತ ನಿಖರವಾಗಿ ತಾವು ತಲುಪಬಹುದಾದ ಜಾಗವನ್ನು ಈ ಬಾವಲಿಗಳು ತಲುಪುತ್ತವೆ ಎಂಬ ವಿಚಾರ ತಿಳಿದಿದೆ. ಇದೇ ಸಾಮರ್ಥ್ಯದಿಂದಾಗಿ ಕೇವಲ 3 ಕಿಲೋಮೀಟರ್ ದೂರ ಮಾತ್ರವಲ್ಲದೇ, ಅದನ್ನು ಗುಂಪು ಬುದ್ಧಿಮತ್ತೆಯ ಸಹಾಯದಿಂದ ಹಲವು ಕಿಲೋಮೀಟರ್‌ಗಳವರೆಗೂ ವಿಸ್ತರಿಸಬಹುದಾದ ಜಾಲವನ್ನೂ ಈ ಬಾವಲಿಗಳು ಸೃಷ್ಟಿಸಿಕೊಳ್ಳುವ ಸಾಮರ್ಥ್ಯ ಪತ್ತೆಯಾಗಿದೆ.

ಬಾವಲಿಗಳ ಈ ಸಾಮರ್ಥ್ಯ ನಮಗೆ ಸ್ಫೂರ್ತಿಯಾಗಿದೆ ಎಂದು ವಿಜ್ಞಾನಿ ಆಯಾ ಹೇಳಿದ್ದಾರೆ. 'ಬಯೋ ಮಿಮಿಕ್ರಿ' ('ಜೈವಿಕ ನಕಲು') ಈಗಾಗಲೇ ಲೆಕ್ಕವಿಲ್ಲದಷ್ಟು ತಂತ್ರಜ್ಞಾನಗಳ ಸಂಶೋಧನೆಗೆ ಅನುವು ಮಾಡಿಕೊಟ್ಟಿದೆ. ಬಾವಲಿಗಳ ಈ ಗುಣವನ್ನು ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂಗೆ ಅಳವಡಿಸಿ ನಿಖರ ಜಾಗವನ್ನು ಪತ್ತೆಮಾಡಬಹುದಾಗಿದೆ. ಹಾಲಿ ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ ಉಪಗ್ರಹ ಆಧಾರಿತವಾಗಿ ನಡೆಯುತ್ತಿದೆ. ಅದಕ್ಕೆ ಇಂಟರ್ನೆಟ್ ಸಂಪರ್ಕ ಇರಲೇಬೇಕೆಂದೇನೂ ಇಲ್ಲ. ಆದರೆ, ಇಂಟರ್ನೆಟ್ ಇದ್ದರೆ ಬಳಕೆ ಹೆಚ್ಚು ಸುಧಾರಿತವಾಗಿ ಇರುತ್ತದೆ. ಈ ಹೊಸ ತಂತ್ರಜ್ಞಾನವಿದ್ದರೆ, ಉಪಗ್ರಹ ಆಧಾರಿತ ತಂತ್ರಜ್ಞಾನವೇ ಇರುವುದಿಲ್ಲ ಎನ್ನುವುದು ವಿಜ್ಞಾನಿಗಳ ವಾದ.

ಅಂದರೆ, ವಾಹನಗಳಲ್ಲಿ ಈ ಹೊಸ ಸೋನಾರ್ ಸಾಧನವನ್ನು ಅಳವಡಿಸಿ ಅಲ್ಟ್ರಾಸೌಂಡ್ ಹೊರಡಿಸುವಂತೆ ಮಾಡುವುದು. ಈ ಶಬ್ದವು ಪ್ರತಿಫಲಿಸಿ ಮರಳಿದಾಗ ಅದರ ಮೂಲಕ ಸ್ಥಳಗಳನ್ನು ಗ್ರಹಿಸುವುದು. ಜೊತೆಗೆ, ಈ ತಂತ್ರಜ್ಞಾನವು ಗುಂಪು ಬುದ್ಧಿಮತ್ತೆಯನ್ನೂ ಹೊಂದಿರುವ ಕಾರಣ, ಒಂದು ಸಂಪರ್ಕ ಜಾಲ ಸೃಷ್ಟಿಯಾಗುತ್ತದೆ. ಅದರ ಮೂಲಕ ಸ್ಥಳಪತ್ತೆಯ ವ್ಯಾಪ್ತಿಯನ್ನು ಹೆಚ್ಚಿಸುವುದು. ಇದಕ್ಕೆ ಉಪಗ್ರಹ ಅಥವಾ ಇಂಟರ್ನೆಟ್ ಎರಡೂ ಬೇಡ ಎನ್ನುವುದು ವಿಜ್ಞಾನಿಗಳ ವಾದ. ಆದರೂ, ಈ ತಂತ್ರಜ್ಞಾನಕ್ಕೆ ಕೆಲವು ಮಿತಿಗಳಿವೆ. ಜನಸಂಖ್ಯೆ ಹೆಚ್ಚಿರುವ ದೇಶಗಳಲ್ಲಿ ವಾಹನಗಳ ಸಂಖ್ಯೆಯೂ ಹೆಚ್ಚಿದ್ದು, ಈ ತಂತ್ರಜ್ಞಾನ ಕೆಲಸ ಮಾಡಬಹುದು. ಆದರೆ, ಜನಸಂಖ್ಯೆ ಹಾಗೂ ವಾಹನ ಸಂಖ್ಯೆ ವಿರಳವಾಗಿರುವ ಸ್ಥಳಗಳಲ್ಲಿ ಈ ತಂತ್ರಜ್ಞಾನ ನಿಖರವಾಗಿ ಕಾರ್ಯನಿರ್ವಹಿಸಬಹುದೇ ಎಂಬ ವಿಮರ್ಶೆ ಈಗಾಗಲೇ ಹೊರಬಿದ್ದಿದೆ. ಈಗಾಗಲೇ ಚಾಲ್ತಿಯಲ್ಲಿ ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ ಜೊತೆಗೆ, ಇದೊಂದು ಹೆಚ್ಚುವರಿ ತಂತ್ರಜ್ಞಾನವಾಗಿ ಸೇರ್ಪಡೆಯಾಗುವುದು ಸೂಕ್ತ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ❖

ರೋಗಿಗಳಿಗೆ ವರವಾಗುತ್ತಿರುವ 'ಎಐ'

ಅಮೃತೇಶ್ವರಿ ಬಿ.

ಕೃತಕ ಬುದ್ಧಿಮತ್ತೆ ಹಾಗೂ ಯಾಂತ್ರಿಕ ಕಲಿಕೆಯು ಜಗತ್ತಿನ ಮೂಲೆಮೂಲೆಗೂ ತನ್ನ ಬಾಹುಗಳನ್ನು ಚಾಚಿರುವುದು ಈಗ ಸಾಮಾನ್ಯ ವಿಷಯ. ಅಂತೆಯೇ ವೈದ್ಯಕೀಯ ಕ್ಷೇತ್ರದಲ್ಲಿ ತನ್ನ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ, ಈ ಕೃತಕ ಬುದ್ಧಿಮತ್ತೆ. ಯಾವುದೋ ಆರೋಗ್ಯ ಸಮಸ್ಯೆಯನ್ನು ಗುಣಪಡಿಸಿಕೊಳ್ಳಲೆಂದು ಆಸ್ಪತ್ರೆಗೆ ಹೋಗಿ ದಾಖಲಾದಾಗ ಆ ಕಾಯಿಲೆ ವಾಸಿಯಾದರೆ ಅದುವೇ ಪುಣ್ಯ. ಇರುವ ಒಂದು ಕಾಯಿಲೆಯನ್ನು ಗುಣಪಡಿಸಿಕೊಳ್ಳಲು ಹೋಗಿ ಮತ್ತೊಂದು ಸಮಸ್ಯೆಯನ್ನು ಆಹ್ವಾನಿಸಿ ಕರೆತಂದರೆ ಅದೊಂದು ಪಜೀತಿಯೇ ಸರಿ. ಆದರೆ ಇತ್ತೀಚೆಗೆ ಆಸ್ಪತ್ರೆಗೆ ದಾಖಲಾಗುವ ಪರಿಸ್ಥಿತಿ ಎದುರಾದಾಗ ಅಲ್ಲಿ ನಮಗೆ ಮತ್ತಾವುದೋ ಸೋಂಕು ತಗಲುವುದು ಸಾಮಾನ್ಯವಾಗಿ ನಿರೀಕ್ಷಿತವಾಗಿಬಿಟ್ಟಿದೆ. ಇದನ್ನು 'ನೋಸೋಕೋಮಿಯಲ್ ಇನ್‌ಫೆಕ್ಷನ್' ಎನ್ನುತ್ತೇವೆ. ಇನ್ನು, ಒಂದು ಕಾಯಿಲೆಗೆ ಚಿಕಿತ್ಸೆ ತೆಗೆದುಕೊಳ್ಳುತ್ತಿರುವಾಗ, ಆ ಕಾಯಿಲೆಗೆ ಕಾರಣವಾದ ರೋಗಾಣುಗಳು ಔಷಧಗಳ ವಿರುದ್ಧವೇ ಹೋರಾಡುವ ಶಕ್ತಿ ಬೆಳೆಸಿಕೊಂಡುಬಿಟ್ಟರೆ? ಇಂತಹ ಪ್ರಕರಣಗಳೂ ಇವೆ. ಅದನ್ನು 'ಆ್ಯಂಟಿಮೈಕ್ರೋಬಿಯಲ್ ರೆಸಿಸ್ಟೆನ್ಸ್' ಎನ್ನುತ್ತೇವೆ. ಇವೆರಡೂ ಸಮಸ್ಯೆಗಳು ಸದ್ಯ ಜಾಗತಿಕವಾಗಿ ತಲೆದೋರಿರುವ ಗಂಭೀರ ಆರೋಗ್ಯ ಸಮಸ್ಯೆಗಳ ಪಟ್ಟಿಯಲ್ಲಿರುವಂಥವು. ಇವೆರಡೇ ಕಾಯಿಲೆಗಳಿಂದ ವರ್ಷದಲ್ಲಿ ಜಾಗತಿಕವಾಗಿ ಸುಮಾರು ಹನ್ನೆರಡು ಲಕ್ಷ ಸಾವುಗಳು ಸಂಭವಿಸುತ್ತಿವೆಯಂತೆ!

ಇಂತಹ ಪರಿಸ್ಥಿತಿಗಳಲ್ಲಿ ತೀವ್ರ ನಿಗಾಘಟಕದಲ್ಲಿ ದಾಖಲಾಗಿರುವ ರೋಗಿಗಳ ರಕ್ತನಾಳದೊಳಗಿನ ಸೋಂಕು, ವೈದ್ಯರು ನೀಡುವ ಆ್ಯಂಟಿಬಯಾಟಿಕ್ ಅಥವಾ ಇನ್ನಿತರೆ ಚಿಕಿತ್ಸೆಗೆ ಹೀಗೆ ಪ್ರತಿರೋಧವೊಡ್ಡಿದರೆ 'ಸೆಪ್ಸಿಸ್' ಎನ್ನುವ ರಕ್ತನಂಜು ಉಂಟಾಗಬಹುದು. ಸೋಂಕು ಒಂದು ವೇಳೆ ಸೆಪ್ಸಿಸ್ ಹಂತಕ್ಕೆ ತಿರುಗಿದರೆ, ಬಹು ಅಂಗಾಂಗಗಳ ವೈಫಲ್ಯಕ್ಕೆ ಕಾರಣವಾಗಿ ಮಾರಣಾಂತಿಕವಾಗುವ ಸಾಧ್ಯತೆ ಬಹಳ ಹೆಚ್ಚಿದೆಯಂತೆ. ವ್ಯಕ್ತಿಯಿಂದ ವ್ಯಕ್ತಿಗೆ, ಅವರ ಜೀವನಶೈಲಿ, ಆಹಾರಪದ್ಧತಿ, ಆನುವಂಶೀಯತೆಯ ಆಧಾರದಮೇಲೆ ಆ್ಯಂಟಿಮೈಕ್ರೋಬಿಯಲ್ ರೆಸಿಸ್ಟೆನ್ಸ್ ಮಟ್ಟ ಬೇರೆಬೇರೆಯಾಗಿರುತ್ತದೆ. ಈ ಆ್ಯಂಟಿಮೈಕ್ರೋಬಿಯಲ್ ರೆಸಿಸ್ಟೆನ್ಸ್ ಬಗ್ಗೆ ತುರ್ತಾಗಿ ತಿಳಿದು ಬಂದರೆ ಚಿಕಿತ್ಸೆ ಸುಲಭ. ಈ ಕೆಲಸವನ್ನು ಕ್ಷಣಮಾತ್ರದಲ್ಲಿ ಮಾಡಿಮುಗಿಸಿಬಿಡುತ್ತದೆ, ಈ ಕೃತಕ ಬುದ್ಧಿಮತ್ತೆ! ಲಂಡನ್ನಿನ ಕಿಂಗ್ಸ್ ಕಾಲೇಜಿನ ಸಂಶೋಧಕರು ಈ ಹೊಸ ಮಾರ್ಗವನ್ನು ಪತ್ತೆಮಾಡಿದ್ದಾರಂತೆ.

ಪ್ರಸ್ತುತ ಪ್ರಯೋಗಾಲಯದ ತಂತ್ರಜ್ಞರು ಒಂದು ರೋಗಾಣುವಿನ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಕಲೆಹಾಕಲು ಏನಿಲ್ಲವೆಂದರೂ ನಾಲ್ಕರಿಂದ ಐದು ದಿನಗಳು ಬೇಕು. ಈ ಸಮಯಾಂತರದಲ್ಲಿ ರೋಗಿಗಳ ಸೋಂಕು ಮತ್ತಷ್ಟು ಉಲ್ಬಣಗೊಳ್ಳಬಹುದು. ಅದರಲ್ಲೂ ಐಸಿಯುಗಳಲ್ಲಿ ಗಂಭೀರ ಅನಾರೋಗ್ಯ ಸ್ಥಿತಿಯಲ್ಲಿರುವ ರೋಗಿಗಳ ಕಥೆಯಂತೂ ಇನ್ನೂ ಜಟಿಲ. ಆದರೆ ಅದನ್ನು ಪತ್ತೆಮಾಡಲು ಕೃತಕ ಬುದ್ಧಿಮತ್ತೆ ಮಾತ್ರ ಅಷ್ಟು ಸಮಯ ತೆಗೆದುಕೊಳ್ಳುವುದಿಲ್ಲ. ಅಷ್ಟೇ ಅಲ್ಲದೆ, ರೋಗಿಗಳ ಸೋಂಕಿನ ತೀವ್ರತೆಯನ್ನಾಧರಿಸಿ ಯಾರಿಗೆ ಮೊದಲು ಚಿಕಿತ್ಸೆ ನೀಡಬೇಕೆಂದೂ ತಿಳಿಸುತ್ತದಂತೆ. ಹಾಗಾಗಿ ಕೃತಕ ಬುದ್ಧಿಮತ್ತೆ ನೀಡುವ ಆಯಾ 'ಆ್ಯಂಟಿಮೈಕ್ರೋಬಿಯಲ್ ರೆಸಿಸ್ಟೆನ್ಸ್'ಗೆ ಸಂಬಂಧಿಸಿದ ಸಮಗ್ರ ಮಾಹಿತಿಯನ್ನಾಧರಿಸಿ ತುರ್ತು ನಿರ್ಧಾರಗಳನ್ನು ತೆಗೆದುಕೊಳ್ಳಬಹುದು; ಹಾಗೂ ಯಾವ ರೀತಿಯ ಆ್ಯಂಟಿಬಯಾಟಿಕ್‌ಗಳನ್ನು ಬಳಸಬಹುದೆಂದು ತಾಳೆ ಹಾಕಿ ರೋಗಿಯನ್ನು ಸೋಂಕಿನ ತೀವ್ರತೆಯಿಂದ ರಕ್ಷಿಸಬಹುದು ಎನ್ನುತ್ತಾರೆ, ಕಿಂಗ್ಸ್ ಕಾಲೇಜಿನ ಸಂಶೋಧಕರು.

ಐಸಿಯುಗೆ ದಾಖಲಾಗುವ ರೋಗಿಗಳು ಕೆಲವೊಮ್ಮೆ ಆ ರೋಗಾಣುವನ್ನು ಪತ್ತೆ ಮಾಡುವ ಮುಂಚೆಯೇ ಮರಣಿಸಬಹುದು. ಇಂತಹ ಪ್ರಕರಣಗಳನ್ನು ತಪ್ಪಿಸಲೆಂದು 'ಬ್ರಾಡ್ ಸ್ಪೆಕ್ಟ್ರಮ್ ಆ್ಯಂಟಿಬಯಾಟಿಕ್'ಗಳನ್ನು ವೈದ್ಯರು ನೀಡಲೇಬೇಕಾಗುತ್ತದೆ. ದುರದೃಷ್ಟವಶಾತ್ ಅವು ಒಳ್ಳೆಯ ಬ್ಯಾಕ್ಟೀರಿಯಾಗಳನ್ನೂ ಸಾಯಿಸಿಬಿಡುತ್ತವೆ. ಆಗ ರೋಗಾಣುಗಳು ಔಷಧಗಳಿಗೆ ಮತ್ತಷ್ಟು ಪ್ರತಿರೋಧವೊಡ್ಡಿ ಬೆಳೆದು ವೃದ್ಧಿಯಾಗಿಬಿಡುತ್ತವೆ. ಇಂತಹ ಗಂಭೀರ ಪರಿಸ್ಥಿತಿಗಳನ್ನು ತಪ್ಪಿಸಲು ಕೃತಕ ಬುದ್ಧಿಮತ್ತೆಯನ್ನು ವೈದ್ಯದಲ್ಲಿ ಬಳಸುವುದರಿಂದ ತುರ್ತಾಗಿ ರೋಗವನ್ನು ಪತ್ತೆ ಮಾಡುವುದಲ್ಲದೇ, ಸರಿಯಾದ ಆ್ಯಂಟಿಬಯಾಟಿಕ್‌ಗಳನ್ನೂ ಸೂಚಿಸುತ್ತವೆ. ಇದನ್ನು ಈಗಾಗಲೇ ಇಲಿಗಳ ಮೇಲೆ ಪ್ರಯೋಗಿಸಿ ಯಶಸ್ವಿಯಾಗಿದ್ದು, ಜಾಗತಿಕವಾಗಿ ಸುಮಾರು ಇಪ್ಪತ್ತು ಸಾವಿರ ರೋಗಿಗಳನ್ನು ಗುಣಪಡಿಸಲು ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಳ್ಳಲಾಗುತ್ತಿದೆಯಂತೆ.

ಮತ್ತೊಂದು ಸಾಮಾನ್ಯ ಹಾಗೂ ಗಂಭೀರ ಕಾಯಿಲೆಯೆಂದರೆ ಮಧುಮೇಹ - ಡಯಾಬಿಟಿಸ್ ಮೆಲ್ಲಿಟಸ್. ಇದು ಜಾಗತಿಕವಾಗಿ ವರ್ಷಕ್ಕೆ 50 ಕೋಟಿ ಜನರನ್ನು ಬಾಧಿಸಿದರೆ, ಸುಮಾರು 70 ಲಕ್ಷ ಜನರನ್ನು ಬಲಿ ಪಡೆಯುತ್ತಿದೆ. ಇನ್ಸುಲಿನ್ ಹಾರ್ಮೋನು ರಕ್ತದಲ್ಲಿನ ಸಕ್ಕರೆಯ ಅಂಶವನ್ನು ನಿಯಂತ್ರಿಸುವ ಸಾಮರ್ಥವನ್ನು ಕಳೆದುಕೊಂಡಾಗ ರಕ್ತದಲ್ಲಿ ಸಕ್ಕರೆಯ ಪ್ರಮಾಣ ಸಾಮಾನ್ಯಕ್ಕಿಂತ ಹೆಚ್ಚು ಅಥವಾ ಕಡಿಮೆಯಾದರೆ ಅದನ್ನು 'ಡಯಾಬಿಟಿಸ್ ಮೆಲ್ಲಿಟಸ್' ಎನ್ನುತ್ತೇವೆ. ಆಗ ಔಷಧಗಳ ಮೂಲಕ ಇನ್ಸುಲಿನ್ ಅನ್ನು ದೇಹಕ್ಕೆ ನೀಡಿ ರಕ್ತದ ಸಕ್ಕರೆಯ ಪ್ರಮಾಣವನ್ನು ನಿಯಂತ್ರಿಸಲಾಗುತ್ತಿದೆ ಎನ್ನುವುದು ನಮ್ಮೆಲ್ಲರಿಗೂ ತಿಳಿದ ವಿಷಯ. ಆದರೆ ಈ ವಿಧಾನದಿಂದ ನೈಜಸಮಯದಲ್ಲಿ ಬದಲಾವಣೆಗಳನ್ನು ದಾಖಲಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಲೋಪವನ್ನು ಸರಿಪಡಿಸಲು ಡೆನ್ಮಾರ್ಕ್, ಇಂಗ್ಲೆಂಡ್, ಚೆಕ್ ಗಣರಾಜ್ಯಮತ್ತು ಬ್ರಿಸ್ಟಲ್ ವಿಶ್ವವಿದ್ಯಾಲಯದ ಅಂತರರಾಷ್ಟ್ರೀಯ ತಂಡವೊಂದು ಸ್ಮಾರ್ಟ್ ಇನ್ಸುಲಿನ್ ಒಂದನ್ನು ಸಿದ್ಧಪಡಿಸಿದೆ. ಇದಕ್ಕೆ 'NNC2215' ಎಂದು ಹೆಸರಿಸಿದ್ದಾರೆ. ಈ 'ಸ್ಮಾರ್ಟ್ ಇನ್ಸುಲಿನ್'ನಲ್ಲಿ ಎರಡು ಘಟಕಗಳಿವೆಯಂತೆ. ಒಂದು ಸುರುಳಿಯಾಕಾರದ ಘಟಕ, ಮತ್ತೊಂದು ಗ್ಲೂಕೋಸ್‌ನಂತಿರುವ ಗ್ಲೂಕೋಸೈಡ್. ರಕ್ತದಲ್ಲಿ ಸಕ್ಕರೆ ಕಡಿಮೆಯಾದಾಗ, ಗ್ಲೂಕೋಸೈಡ್ ಆ ಸುರುಳಿಯೊಂದಿಗೆ ಜೋಡಿಸಿಕೊಳ್ಳುತ್ತದೆ. ಆಗ ಇನ್ಸುಲಿನ್ ನಿಷ್ಕ್ರಿಯವಾಗಿ ಸಕ್ಕರೆಯ ಪ್ರಮಾಣ ಇನ್ನಷ್ಟು ಕಡಿಮೆಯಾಗದಂತೆ ಜಾಗ್ರತೆಯನ್ನು ವಹಿಸುತ್ತದೆ. ಕ್ರಮೇಣ ನಾವು ಆಹಾರ ಸೇವಿಸಿದಾಗ ರಕ್ತದಲ್ಲಿ ಗ್ಲೂಕೋಸಿನ ಪ್ರಮಾಣ ಏರುತ್ತಿದ್ದಂತೆ ಅದು ಗ್ಲೂಕೋಸೈಡಿನ ಜಾಗವನ್ನು ಆಕ್ರಮಿಸುತ್ತದೆ. ಈ ಬದಲಾವಣೆ ಇನ್ಸುಲಿನ್ ಅನ್ನು ಪುನಃ ಸಕ್ರಿಯಗೊಳಿಸಿ ಸಕ್ಕರೆಯ ಪ್ರಮಾಣವನ್ನು ಹತೋಟಿಗೆ ತರುತ್ತದೆ. ಆದರೆ ಈ ಎರಡನೇ ಹಂತ ಅರ್ಥಾತ್, ಇನ್ಸುಲಿನ್ ಸಕ್ರಿಯವಾಗುವಾಗ ಹಂತಹಂತವಾಗಿ ಆಗದೆ, ಒಂದಿಷ್ಟು ಪ್ರಮಾಣದ ಗ್ಲೂಕೋಸ್ ಅನ್ನು ದಿಢೀರನೆ ಬಯಸುತ್ತದೆ. ಒಮ್ಮೆ ಸಕ್ರಿಯವಾಗಿಬಿಟ್ಟರೆ ಕ್ಷಿಪ್ರವಾಗಿ ಇನ್ಸುಲಿನ್ ಉತ್ಪಾದನೆ ಶುರುವಾಗಿಬಿಡುತ್ತದೆ. ಇದು ನಿಧಾನಗತಿಯಲ್ಲಿ ಹಂತಹಂತವಾಗಿ ನಡೆದರೆ ಒಳಿತು. ಹಾಗಾಗಿ ಈ ದೋಷದ ಮೇಲೆ ಇನ್ನಷ್ಟು ಸಂಶೋಧನೆಯನ್ನು ಕೈಗೊಂಡಿರುವ ತಂಡ ಸದ್ಯದಲ್ಲೇ ಇದಕ್ಕೆ ಪರಿಹಾರವನ್ನು ಪತ್ತೆ ಮಾಡಲಿದೆಯಂತೆ.

ಒಟ್ಟಾರೆ, ಈ ಸ್ಮಾರ್ಟ್ ಯುಗದಲ್ಲಿ, ಮಾರಣಾಂತಿಕ ಸಮಸ್ಯೆಗಳನ್ನು ಹತ್ತಿಕ್ಕುವ ವೈದ್ಯಕೀಯ ಚಿಕಿತ್ಸಾ ವಿಧಾನಗಳನ್ನು ಕ್ಷಿಪ್ರವಾಗಿ ಸ್ಮಾರ್ಟ್ ಆಗಿಸುತ್ತಿರುವ ಕೃತಕ ಬುದ್ಧಿಮತ್ತೆಯ ಅನಿವಾರ್ಯತೆಯೂ ಇದೆಯೆಂದರೆ ತಪ್ಪಾಗದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಲೋಹಗಳು ಮತ್ತು ಅಲೋಹಗಳು

8) ಕ್ಷಾರ ಲೋಹಗಳನ್ನು ಹೆಸರಿಸಿ

ಉತ್ತರ:– ಲೀಥಿಯಂ, ಸೋಡಿಯಂ, ಪೊಟ್ಯಾಸಿಯಂ

9) ಕ್ಷಾರ ಲೋಹಗಳ ವಿಶಿಷ್ಟತೆಯನ್ನು ಬರೆಯಿರಿ

ಉತ್ತರ:– ಕ್ಷಾರ ಲೋಹಗಳು ತುಂಬಾ ಮೃದುವಾಗಿರುತ್ತವೆ. ಇವುಗಳನ್ನು ಚಾಕುವಿನಿಂದ ಕತ್ತರಿಸಬಹುದು. ಇವು ಕಡಿಮೆ ಸಾಂದ್ರತೆ ಮತ್ತು ಕಡಿಮೆ ಕರಗುವ ಬಿಂದುಗಳನ್ನು ಹೊಂದಿವೆ.

10) ಯಾವುದಕ್ಕೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು?

ಉತ್ತರ:– ಅಲ್ಯುಮಿನಿಯಂ ಆಕ್ಸೈಡ್, ಸತುವಿನ ಆಕ್ಸೈಡ್‌ಗಳಂಥ ಕೆಲವು ಲೋಹದ ಆಕ್ಸೈಡ್‌ಗಳು ಆಮ್ಲೀಯ ಹಾಗೂ ಪ್ರತ್ಯಾಮ್ಲೀಯ ಗುಣಗಳೆರಡನ್ನೂ ಪ್ರದರ್ಶಿಸುತ್ತವೆ. ಇಂತಹ ಲೋಹದ ಆಕ್ಸೈಡ್‌ಗಳು ಆಮ್ಲ ಮತ್ತು ಪ್ರತ್ಯಾಮ್ಲಗಳೆರಡರ ಜೊತೆಗೂ ಪ್ರತಿವರ್ತಿಸಿದಾಗ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತವೆ. ಇವುಗಳಿಗೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು.

11) ಸೋಡಿಯಂ ಮತ್ತು ಪೊಟ್ಯಾಸಿಯಂನಂಥ ಲೋಹಗಳನ್ನು ಸೀಮೆ ಎಣ್ಣೆಯಲ್ಲಿ ಯಾಕೆ ಸಂಗ್ರಹಿಸಿಡುತ್ತಾರೆ.

ಉತ್ತರ:– ಸೋಡಿಯಂ ಮತ್ತು ಪೊಟ್ಯಾಸಿಯಂನಂಥ ಲೋಹಗಳು ಗಾಳಿಗೆ ತೆರೆದಿಟ್ಟಾಗ ಕ್ಷಿಪ್ರವಾಗಿ ವರ್ತಿಸಿ ಬೆಂಕಿ ಹೊತ್ತಿಕೊಳ್ಳುತ್ತದೆ. ಆದ್ದರಿಂದ ಅವುಗಳನ್ನು ಸಂರಕ್ಷಿಸಲು ಮತ್ತು ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಳ್ಳುವುದನ್ನು ತಪ್ಪಿಸಲು ಸೀಮೆಎಣ್ಣೆಯಲ್ಲಿ ಸಂಗ್ರಹಿಸಿಡುತ್ತಾರೆ.

12) ಯಾವುದಕ್ಕೆ ಆನೋಡೀಕರಣ (anodising) ಎನ್ನುವರು.

ಉತ್ತರ:– ಅಲ್ಯುಮಿನಿಯಂನ ಮೇಲೆ ದಪ್ಪ ಆಕ್ಸೈಡ್ ಪದರವನ್ನು ಉಂಟು ಮಾಡುವ ಕ್ರಿಯೆಗೆ ಆನೋಡೀಕರಣ (anodising) ಎನ್ನುವರು.

13) ಲೋಹಗಳ ರಾಸಾಯನಿಕ ಗುಣಗಳನ್ನು ಬರೆಯಿರಿ

ಉತ್ತರ:– (1) ಬಹುತೇಕ ಎಲ್ಲಾ ಲೋಹಗಳು ಆಕ್ಸಿಜನ್‌ನ ಜೊತೆ ಸಂಯೋಗ ಹೊಂದಿದಾಗ ಆಯಾ ಲೋಹಗಳ ಆಕ್ಸೈಡ್‌ಗಳಾಗುತ್ತವೆ.

ಲೋಹ + ಆಕ್ಸಿಜನ್ → ಲೋಹದ ಆಕ್ಸೈಡ್

(1) ಬಹುತೇಕ ಎಲ್ಲಾ ಲೋಹಗಳು ಆಕ್ಸಿಜನ್‌ನ ಜೊತೆ ಸಂಯೋಗ ಹೊಂದಿದಾಗ ಆಯಾ ಲೋಹಗಳ ಆಕ್ಸೈಡ್‌ಗಳಾಗುತ್ತವೆ. ಉದಾಹರಣೆ ತಾಮ್ರವನ್ನು ಗಾಳಿಯಲ್ಲಿ ಕಾಸಿದಾಗ ಆಕ್ಸಿಜನ್ ಜೊತೆ ಸೇರಿ ತಾಮ್ರದ ಆಕ್ಸೈಡ್ ಆಗುತ್ತದೆ. ಇದು ಕಪ್ಪು ಆಕ್ಸೈಡ್.

$$2Cu + O_2 \rightarrow 2CuO$$

(ತಾಮ್ರ) (ತಾಮ್ರದ ಆಕ್ಸೈಡ್)

(2) ಎಲ್ಲಾ ಲೋಹಗಳು ಒಂದೇ ರೀತಿಯಾಗಿ ಆಕ್ಸಿಜನ್‌ನ ಜೊತೆ ವರ್ತಿಸುವುದಿಲ್ಲ

3) ಲೋಹಗಳು ನೀರಿನ ಜೊತೆ ಪ್ರತಿವರ್ತಿಸಿದಾಗ ಲೋಹದ ಆಕ್ಸೈಡ್ ಮತ್ತು ಹೈಡ್ರೋಜನ್ ಅನಿಲವನ್ನು ಬಿಡುಗಡೆ ಮಾಡುತ್ತವೆ. ಲೋಹದ ಆಕ್ಸೈಡ್‌ಗಳು ಪುನಃ ನೀರಿನಲ್ಲಿ ಕರಗಿ ಲೋಹದ ಹೈಡ್ರಾಕ್ಸೈಡ್‌ಗಳಾಗುತ್ತವೆ. ಆದರೆ ಎಲ್ಲಾ ಲೋಹಗಳು ನೀರಿನ ಜೊತೆ ಪ್ರತಿವರ್ತಿಸುವುದಿಲ್ಲ

4) ಪೊಟ್ಯಾಸಿಯಂ ಮತ್ತು ಸೋಡಿಯಂನಂಥ ಲೋಹಗಳು ಅತ್ಯಂತ ರಭಸವಾಗಿ ತಣ್ಣೀರಿನ ಜೊತೆ ಪ್ರತಿವರ್ತಿಸುತ್ತವೆ. ಸೋಡಿಯಂ ಮತ್ತು ಪೊಟ್ಯಾಸಿಯಂಗಳ ಪ್ರಕರಣದಲ್ಲಿ ಪ್ರತಿವರ್ತನೆಯು ಎಷ್ಟೊಂದು ತೀವ್ರ ಮತ್ತು ಬಹಿರುಷ್ಣಕವಾಗಿರುತ್ತದೆಂದರೆ ಬಿಡುಗಡೆಯಾದ ಹೈಡ್ರೋಜನ್ ಅನಿಲವು ತಕ್ಷಣವೇ ಹೊತ್ತಿಕೊಂಡು ಉರಿಯುತ್ತವೆ.

5) ನೀರಿನೊಂದಿಗೆ ಕ್ಯಾಲ್ಸಿಯಂನ ಪ್ರತಿವರ್ತನೆಯ ತೀವ್ರತೆ ಕಡಿಮೆ. ಬಿಡುಗಡೆಯಾಗುವ ಉಷ್ಣವು ಹೈಡ್ರೋಜನ್ ಹೊತ್ತಿಕೊಳ್ಳಲು ಸಾಕಾಗುವುದಿಲ್ಲ.

6) ತಣ್ಣೀರಿನೊಂದಿಗೆ ಮೆಗ್ನೀಸಿಯಂ ಪ್ರತಿವರ್ತಿಸುವುದಿಲ್ಲ. ಬಿಸಿ ನೀರಿನೊಂದಿಗೆ ಪ್ರತಿವರ್ತಿಸಿ ಮೆಗ್ನೀಸಿಯಂ ಹೈಡ್ರಾಕ್ಸೈಡ್ ಮತ್ತು ಹೈಡ್ರೋಜನ್ ಬಿಡುಗಡೆ ಮಾಡುತ್ತದೆ. ಹೈಡ್ರೋಜನ್ ಅನಿಲದ ಗುಳ್ಳೆಗಳು ಲೋಹದ ಮೇಲ್ಮೈಗೆ ಅಂಟಿಕೊಳ್ಳುವ ಕಾರಣ ಇದೂ ಕೂಡ ನೀರಿನ ಮೇಲೆ ತೇಲಲು ಪ್ರಾರಂಭಿಸುತ್ತದೆ.

ಅಲ್ಯುಮಿನಿಯಂ, ಕಬ್ಬಿಣ, ಮತ್ತು ಸತುವಿನಂಥ ಲೋಹಗಳು ತಣ್ಣನೆಯ ಅಥವಾ ಬಿಸಿ ನೀರಿನ ಜೊತೆ ಪ್ರತಿವರ್ತಿಸುವುದಿಲ್ಲ ಆದರೆ ಹಬೆಯ ಜೊತೆ ಪ್ರತಿವರ್ತಿಸಿ ಲೋಹದ ಆಕ್ಸೈಡ್ ಮತ್ತು ಹೈಡ್ರೋಜನ್‌ಗಳನ್ನು ಉಂಟುಮಾಡುತ್ತವೆ.

7) ಲೋಹಗಳು ಆಮ್ಲಗಳ ಜೊತೆ ಪ್ರತಿವರ್ತಿಸಿ ಲವಣ ಮತ್ತು ಹೈಡ್ರೋಜನ್ ಅನಿಲ ಉಂಟುಮಾಡುತ್ತವೆ

8) ರಾಸಾಯನಿಕವಾಗಿ ಕ್ರಿಯಾಪಟುತ್ವ ಹೊಂದಿದ ಧಾತುಗಳು ತಮಗಿಂತ ಕಡಿಮೆ ಕ್ರಿಯಾಪಟುತ್ವ ಹೊಂದಿದ ಧಾತುಗಳನ್ನು ಅವುಗಳ ದ್ರಾವಣ ಅಥವಾ ದ್ರವಿಸಿದ ಸಂಯುಕ್ತದಿಂದ ಸ್ಥಳಾಂತರಿಸುತ್ತವೆ.

14) ಯಾವುದನ್ನು ಖನಿಜ ಎನ್ನುವರು?

ಉತ್ತರ:– ಭೂತೊಗಟೆಯಲ್ಲಿ ನೈಸರ್ಗಿಕವಾಗಿ ದೊರೆಯುವ ಧಾತು ಅಥವಾ ಸಂಯುಕ್ತಗಳನ್ನು ಖನಿಜಗಳು ಎನ್ನುವರು

15) ಅಯಾನಿಕ ಸಂಯುಕ್ತಗಳ ಗುಣಲಕ್ಷಣಗಳನ್ನು ಬರೆಯಿರಿ

ಉತ್ತರ:– ಅಯಾನಿಕ ಸಂಯುಕ್ತಗಳ ಸಾಮಾನ್ಯ ಗುಣಲಕ್ಷಣಗಳು ಹೀಗಿವೆ

(i) **ಭೌತ ಸ್ಥಿತಿ** : ಅಯಾನಿಕ ಸಂಯುಕ್ತಗಳು ಘನವಸ್ತುಗಳಾಗಿದ್ದು, ಧನ ಮತ್ತು ಋಣ ಅಯಾನುಗಳ ನಡುವೆ ಇರುವ ಪ್ರಬಲ ಆಕರ್ಷಣ ಬಲದಿಂದಾಗಿ ಸ್ವಲ್ಪ ಮಟ್ಟಿಗೆ ಕಠಿಣವಾಗಿರುತ್ತವೆ. ಈ ಸಂಯುಕ್ತಗಳು ಸಾಮಾನ್ಯವಾಗಿ ಬಿಧುರವಾಗಿದ್ದು ಒತ್ತಡವನ್ನು ಹಾಕಿದಾಗ ಪುಡಿಯಾಗುತ್ತವೆ.

(ii) **ಕರಗುವ ಮತ್ತು ಕುದಿಬಿಂದುಗಳು** : ಅಯಾನಿಕ ಸಂಯುಕ್ತಗಳು ಹೆಚ್ಚಿನ ಕರಗುವ ಬಿಂದು ಮತ್ತು ಕುದಿಬಿಂದುಗಳನ್ನು ಹೊಂದಿವೆ. ಏಕೆಂದರೆ ಅಣುಗಳ ನಡುವಿನ ಪ್ರಬಲ ಅಯಾನಿಕ್ ಬಂಧವನ್ನು ಒಡೆಯಲು ಹೆಚ್ಚಿನ ಶಕ್ತಿ ಬೇಕಾಗುತ್ತದೆ.

(iii) **ವಿಲೀನತೆ** : ಅಯಾನಿಕ ಸಂಯುಕ್ತಗಳು ಸಾಮಾನ್ಯವಾಗಿ ನೀರಿನಲ್ಲಿ ವಿಲೀನವಾಗುತ್ತವೆ. ಮತ್ತು ಸಾವಯವ ದ್ರಾವಕಗಳಾದ ಸೀಮೆಎಣ್ಣೆ, ಪೆಟ್ರೋಲ್ ಇತ್ಯಾದಿಗಳಲ್ಲಿ ವಿಲೀನಗೊಳ್ಳುವುದಿಲ್ಲ.

(iv) **ವಿದ್ಯುದ್ವಾಹಕತೆ** : ಒಂದು ದ್ರಾವಣದ ಮೂಲಕ ವಿದ್ಯುತ್ತಿನ ಹರಿಯುವಿಕೆಯು ವಿದ್ಯುದಂಶಪೂರಿತ ಕಣಗಳ ಚಲನೆಯನ್ನು ಒಳಗೊಂಡಿದೆ. ಅಯಾನಿಕ ಸಂಯುಕ್ತದ ಜಲೀಯ ದ್ರಾವಣವು ಅಯಾನುಗಳನ್ನು ಹೊಂದಿದ್ದು ದ್ರಾವಣದ ಮೂಲಕ ವಿದ್ಯುತ್ ಹಾಯಿಸಿದಾಗ ಅವು, ವಿರುದ್ಧ ವಿದ್ಯುದ್ವಾರಗಳ ಕಡೆ ಚಲಿಸುತ್ತವೆ. ಘನಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ ಏಕೆಂದರೆ, ಘನವಸ್ತುಗಳ ಕಠಿಣ ರಚನೆಯಿಂದಾಗಿ ಅಯಾನುಗಳ ಚಲನೆ ಸಾಧ್ಯವಿಲ್ಲ. ಆದರೆ ದ್ರವಿಸಿದ ಸ್ಥಿತಿಯಲ್ಲಿ ಅಯಾನಿಕ ಸಂಯುಕ್ತಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುತ್ತವೆ. ಇದು ದ್ರವಿಸಿದ ಸ್ಥಿತಿಯಲ್ಲಿ ಸಾಧ್ಯವಾಗಲು ಕಾರಣವೇನೆಂದರೆ ವಿದ್ಯುದಂಶಪೂರಿತ, ವಿರುದ್ಧ ಅಯಾನುಗಳ ನಡುವಣ ವಿದ್ಯುದಾಕರ್ಷಣ ಬಲಗಳು ಉಷ್ಣತೆಗೆ ಒಡೆಯುತ್ತವೆ. ಹಾಗಾಗಿ ಅಯಾನುಗಳು ಸ್ವತಂತ್ರವಾಗಿ ಚಲಿಸುತ್ತವೆ ಮತ್ತು ವಿದ್ಯುತ್‌ಅನ್ನು ಹರಿಯಲು ಬಿಡುತ್ತವೆ.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

EVOLUTION

10. Which are the various steps involved in the origin of life?

Ans:- (……..Contd)

(8) The Earliest Cells (First Living Beings). They evolved about 3900-4000 million years back in soupy sea where temperature had gone below 50°C. Atmosphere continued to be reducing due to absence of oxygen.

Protocells collected more organic substances, formed cytoplasm or cellular machinery and became first living beings. The first living beings were **single celled prokaryotes.** They had naked DNA, protein forming machinery, mode of liberation of energy, its storage and utilization. The first living beings obtained organic substances from outside for building up their body and liberation of energy. They were thus **chemoheterotrophs** or organisms that obtain organic substances from outside for their nutrition. Respiration was anaerobic.



Formation of first living cell

Autotrophism

(9) Origin of Chemosynthesis - With the drop in temperature, non-biotic synthesis of new organic substances stopped. Availability of organic molecules decreased in oceans due to continued absorption by chemoheterotrophs. At this time some of the living beings developed the ability to synthesise organic substances from inorganic raw materials. Energy was provided by chemical reactions. Synthesis of organic food from inorganic raw materials with the help of chemical energy is called **chemosynthesis.** The organisms performing chemosynthesis are nutritionally independent and are called **chemoautotrophs.** Such a mode of nutrition occurs even now in certain bacteria, e.g., sulphate reducing bacteria, nitrifying bacteria, iron bacteria.

(10) Origin of Photosynthesis. It occurred with the evolution of light harvesting pigment molecule called **chlorophyll. Chlorophyll** has the ability to absorb light energy and change the same into chemical energy.

Photosynthesis is the process of synthesis of organic substances from inorganic raw materials with the help of light energy harvested by chlorophyll. Photosynthetic organisms are photoautotrophs.

The first photoautotrophs were bacteria. They performed **anoxygenic photosynthesis** where reducing power was obtained from sources other than water like H_2, H_2S, thiosulphate, organic substances. No oxygen was produced. The phenomenon evolved about 3800 million years back.

Oxygenic **photosynthesis** evolved about 3500 million years back in cyanobacteria or blue-green algae-like organisms. They started using water for obtaining reducing power. In the process, water was split up to release oxygen. Cyanobacteria or blue-green algae are represented in earliest known fossils, 2.9 billion years old from India and Australia. Slowly oxygen accumulated in the atmosphere and made it oxidizing.

Impact of Origin of Photosynthesis.

(i) It introduced a mechanism of regular inflow of energy in the biosphere.

(ii) It developed an alternate method of formation of organic matter when the original thermo electric process was coming to an end.

(iii) Photosynthesis provided for more rapid formation of organic matter and hence development of other methods of nutrition.

(iv) It evolved oxygen that made the atmosphere oxidizing.

Impact of Photosynthetic Evolution of Oxygen.

(i) It aerated water bodies that caused oxidation of many chemicals to make water clearer.

(ii) Oxygen passed into the atmosphere, accumulated there and changed the atmosphere from reducing to oxidizing.

(iii) It oxidised methane and ammonia to form carbon dioxide and nitrogen respectively.

$$4NH_3 + 3O_2 \rightarrow 2N_2 + 6H_2O$$

$$CH_4 + 2O_2 \rightarrow CO_2 + H_2O$$

(iv) CO_2 functioned as raw material for photosynthesis while nitrogen helped in neutralizing excessive oxidizing nature of oxygen,

(v) As the atmosphere became aerobic, some of the anaerobic organisms were killed, some developed protective mechanisms while others got modified.

(vi) Organisms evolved a new mode of respiration called aerobic respiration. It was better and more efficient as it released several times more energy than anaerobic respiration.

(vii) Aerobic respiration induced specialization in respiratory structures, photosynthetic structures and other cellular parts to form eucaryotes.

(Contd…..)

ಉಪಚುನಾವಣೆ: ಸಿ.ಎಂ– ಡಿಸಿಎಂ ಪ್ರಚಾರ

'ಬಿಜೆಪಿ ಕುಟುಂಬ ರಾಜಕಾರಣ'

ಪ್ರಜಾವಾಣಿ ವಾರ್ತೆ

ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲಂಬಾಣಿ ಮಹಿಳೆಯರ ನೃತ್ಯವನ್ನು ವೀಕ್ಷಿಸಿ ಅಭಿನಂದಿಸಿದರು

ಶಿಗ್ಗಾವಿ (ಹಾವೇರಿ ಜಿಲ್ಲೆ): 'ನೆಹರೂ ಕುಟುಂಬದ ಬಗ್ಗೆ ಬಿಜೆಪಿಯವರು ಟೀಕಿಸುತ್ತಾರೆ. ಕುಟುಂಬ ರಾಜಕಾರಣಕ್ಕೆ ಅವಕಾಶ ನೀಡಲ್ಲವೆಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಾರೆ. ಆದರೆ, ಬೊಮ್ಮಾಯಿ ಮಗ, ಯಡಿಯೂರಪ್ಪ ಅವರ ಇಬ್ಬರು ಮಕ್ಕಳು ಮತ್ತು ದೇವೇಗೌಡರ ಮಗ, ಸೊಸೆ ರಾಜಕೀಯದಲ್ಲಿದ್ದಾರೆ. ಇದು ಕುಟುಂಬ ರಾಜಕಾರಣ ವಲ್ಲವೇ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ತಾಲ್ಲೂಕಿನ ಚಂದಾಪುರದಲ್ಲಿ ಕಾಂಗ್ರೆಸ್ ಪ್ರಚಾರ ಕಾರ್ಯಕ್ರಮದಲ್ಲಿ ಮಾತ ನಾಡಿದ ಅವರು, 'ಶಿಗ್ಗಾವಿಯಲ್ಲಿ ಬೊಮ್ಮಾಯಿ ಮಗನಿಗೆ ಹಾಗೂ ಚನ್ನಪಟ್ಟಣದಲ್ಲಿ ದೇವೇಗೌಡರ ಮೊಮ್ಮಗನಿಗೆ ಟಿಕೆಟ್ ಕೊಟ್ಟಿದ್ದಾರೆ. ಕುಟುಂಬ ರಾಜಕಾರಣ ಬೇಡ ಎಂದರೆ ಟಿಕೆಟ್ ಏಕೆ ಕೊಟ್ಟರು? ನಾವು ಎಲ್ಲಿಯೂ ಕುಟುಂಬ ರಾಜಕಾರಣ ವಿರೋಧಿಸಿಲ್ಲ' ಎಂದರು.

'ನನ್ನ ಮೇಲೆ ಕಳಂಕ ತರಲು ಬಿಜೆಪಿ–ಜೆಡಿಎಸ್‌ನವರು ಯತ್ನಿಸಿದರು. 14 ನಿವೇಶನಕ್ಕಾಗಿ ಇಷ್ಟು ವರ್ಷ ನಾನು ರಾಜಕೀಯ ಮಾಡಬೇಕಾ? ಅರಿಶಿನ-ಕುಂಕುಮಕ್ಕೆಂದು ನನ್ನ ಬಾಮೈದ, ನನ್ನ ಪತ್ನಿಗೆ ಜಮೀನು ನೀಡಿದ್ದ. ಇದೇ ಜಮೀನಿನಲ್ಲಿ ಮುಡಾದವರು ನಿವೇಶನ ಮಾಡಿದರು. ಆಗ, ಕಾನೂನು ಪ್ರಕಾರವೇ ನನ್ನ ಪತ್ನಿಗೆ 14 ನಿವೇಶನ ಕೊಟ್ಟರು. ಇದು ತಪ್ಪಾ' ಎಂದರು.

ಬಸವರಾಜ ಬೊಮ್ಮಾಯಿ ಶಕುನಿಯೆಂದು ಎಲ್ಲರೂ ಹೇಳುತ್ತಾರೆ. ಸಿ.ಎಂ ಆಗಲು ಯಡಿಯೂರಪ್ಪಗೆ ಟಾಂಗ್ ಕೊಟ್ಟರು. ಅವರನ್ನು ರಾಜಕೀಯವಾಗಿ ಮುಗಿಸಲು ತಂತ್ರ ರೂಪಿಸಿದರು
ಸಿದ್ದರಾಮಯ್ಯ, ಮುಖ್ಯಮಂತ್ರಿ

ಉಪಮುಖ್ಯಮಂತ್ರಿಯನ್ನಾಗಿ ಮಾಡಿ ರಾಜಕೀಯವಾಗಿ ಬೆಳೆಸಿದ್ದ ದೇವೇಗೌಡರಿಗೆ ಕೈಕೊಟ್ಟು ಕಾಂಗ್ರೆಸ್‌ಗೆ ಹೋದ ಸಿದ್ದರಾಮಯ್ಯ ಅವರು ನಿಜವಾದ ಶಕುನಿ ಎಂದು ಜನರು ಹೇಳುತ್ತಾರೆ
ಬಸವರಾಜ ಬೊಮ್ಮಾಯಿ, ಸಂಸದ

ಫಲಾನುಭವಿ ಮನೆ ಎದುರು ಚಿತ್ರ ತೆಗೆಸಿಕೊಂಡ ಬೊಮ್ಮಾಯಿ

'ಶಿಗ್ಗಾವಿ ಕ್ಷೇತ್ರದಲ್ಲಿ ಬಸವರಾಜ ಬೊಮ್ಮಾಯಿ ಒಂದು ಮನೆಯನ್ನೂ ಕಟ್ಟಿಸಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿದ ಆರೋಪವನ್ನು ಅಲ್ಲಗಳೆದಿರುವ ಸಂಸದ ಬಸವರಾಜ ಬೊಮ್ಮಾಯಿ ಅವರು ಫಲಾನುಭವಿಯೊಬ್ಬರ ಮನೆ ಎದುರು ನಿಂತು ಚಿತ್ರ ಕ್ಲಿಕ್ಕಿಸಿಕೊಂಡರು.

ಶಿಗ್ಗಾವಿ ತಾಲ್ಲೂಕಿನ ಹಿರೇಮಣಕಟ್ಟಿ ಗ್ರಾಮಕ್ಕೆ ಮಂಗಳವಾರ ಭೇಟಿ ನೀಡಿದ ಬಸವರಾಜ ಬೊಮ್ಮಾಯಿ ಅವರು ಪ್ರವಾಹದ ಸಂದರ್ಭದಲ್ಲಿ ಹಾನಿ ಅನುಭವಿಸಿದ್ದ ಫಲಾನುಭವಿಗೆ ₹5 ಲಕ್ಷ ವೆಚ್ಚದಲ್ಲಿ ನಿರ್ಮಿಸಿಕೊಟ್ಟ ಮನೆಗೆ ತೆರಳಿ, ಭೇಟಿಯಾದರು.

ಈ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಬಸವರಾಜ ಬೊಮ್ಮಾಯಿ, 'ಸಿದ್ದರಾಮಯ್ಯ ಅವರೇ ಶಿಗ್ಗಾವಿಯಲ್ಲಿ ಒಂದೂ ಮನೆ ಕಟ್ಟಿಲ್ಲ ಅಂತ ಹೇಳಿದ್ದೀರಿ. ನಿಮ್ಮದು ಹಸಿ ಸುಳ್ಳು. ಇಲ್ಲಿ ನೋಡಿ ನಾನು ಕಟ್ಟಿಸಿದ ಮನೆ ಕಣ್ಣೆದುರು ಇದೆ. ಬಸವಣ್ಣೆಮ್ಮಾ ಮಾಳಪ್ಪನವರ ಮನೆ ಇದು. ಹಿರೇಮಣಕಟ್ಟಿ ಗ್ರಾಮದಲ್ಲಿ 300 ಮನೆ ಕಟ್ಟಿಸಿದ್ದೇವೆ' ಎಂದರು.

'ಬಿಜೆಪಿ ಸರ್ಕಾರ ಇದ್ದಾಗ 2021-22ರಲ್ಲಿ ಶಿಗ್ಗಾವಿ ಕ್ಷೇತ್ರದಲ್ಲಿ 12,500 ಮನೆಗಳನ್ನು ಕಟ್ಟಿದ್ದೇವೆ. ನಾವು ಕಟ್ಟಿಸಿದ ಮನೆಗಳ ಮುಂದೆ ನಿಂತು ಚಿತ್ರಗಳನ್ನು ಕ್ಲಿಕ್ಕಿಸಿ, ನಿಮಗೆ ಕಳುಹಿಸುತ್ತೇವೆ. ನೀವು ಹಸಿ ಸುಳ್ಳು ಹೇಳುವುದು ಬಿಡಿ. ಮುಖ್ಯಮಂತ್ರಿ ಸ್ಥಾನಕ್ಕೆ ಗೌರವ ಇರಲಿ' ಎಂದರು.

'ಗುಡ್ಡದ ಮೇಲೆ ಬಿಜೆಪಿ ಕಣ್ಣು'

ಪ್ರಜಾವಾಣಿ ವಾರ್ತೆ

ಬಳ್ಳಾರಿ ಜಿಲ್ಲೆ ತೋರಣಗಲ್‌ನ ತಿಮ್ಮಲಾಪುರದಲ್ಲಿ ಮಂಗಳವಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾಂಗ್ರೆಸ್ ಅಭ್ಯರ್ಥಿ ಇ.ಅನ್ನಪೂರ್ಣ ಪರ ಪ್ರಚಾರ ನಡೆಸಿದರು

ಬಳ್ಳಾರಿ: 'ಬಳ್ಳಾರಿ ಜನ ಶಾಂತಿಯಿಂದ ಇದ್ದಾರೆ. ಅಂಥ ಕಾಲ ಈಗ ಬಂದಿದೆ. ಹಿಂದೆಲ್ಲ ಜನ ದೊಡ್ಡ ಕಷ್ಟ ಎದುರಿಸಿದರು. ಹೀಗಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿದರು.

ಸಂಡೂರು ತಾಲ್ಲೂಕಿನ ತೋರಣಗಲ್‌ನ ತಿಮ್ಮಲಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಇ. ಅನ್ನಪೂರ್ಣ ಪರ ಮಂಗಳವಾರ ಪ್ರಚಾರ ನಡೆಸಿ ಮಾತನಾಡಿದ ಅವರು, 'ಕಾಂಗ್ರೆಸ್ ಕನಿಷ್ಠ ಸೇವೆಯನ್ನಾದರೂ ಮಾಡಿದೆ. ಅದಕ್ಕೆ ಕೂಲಿ ಕೇಳುತ್ತಿದ್ದೇವೆ. ಸಿಂಗಪುರ, ನ್ಯೂಯಾರ್ಕ್ ಅಥವಾ ಬೀಜಿಂಗ್ ಮಾಡುತ್ತೇವೆ ಎಂದೆಲ್ಲ ಹೇಳುತ್ತಿಲ್ಲ. ಅವುಗಳಿಂದ ಪ್ರಯೋಜನವೂ ಆಗುವುದಿಲ್ಲ. ಜನ ನೆಮ್ಮದಿಯಾಗಿ ರಬೇಕು ಅಷ್ಟೆ' ಎಂದರು. 'ಬಳ್ಳಾರಿ ಜಿಲ್ಲೆಯ ಶಾಂತಿ ಕೆಡಿಸಲು ಬಿಜೆಪಿಗರು ಪ್ರಯತ್ನಿಸುತ್ತಿದ್ದಾರೆ. ಅವರ ಕಣ್ಣು ಗುಡ್ಡದ ಮೇಲೆ ಬಿದ್ದಿದೆ. ಹಿಂದೆ ಗುಡ್ಡದ ಮೇಲೆ ಕಣ್ಣು ಹಾಕಿ ಏನೇನಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಜನ ಜಾಗೃತರಾಗಿರಬೇಕು' ಎಂದರು.

'ಈಗೇನಾದರೂ ಪೊಲೀಸರಿಂದ ಕಿರುಕುಳ ಆಗುತ್ತಿದೆಯೇ? ರೌಡಿಗಳಿಂದ ಕಿರುಕುಳ ಇದೆಯೇ? ಯಾವುದಾದರೂ ತೊಂದರೆ ಇದೆಯೇ? ಬಳ್ಳಾರಿ ಜನ ಶಾಂತಿಯಿಂದ ಬದುಕುತ್ತಿದ್ದಾರೆ. ಅಂಥ ಕಾಲ ಈಗ ಬಂದಿದೆ' ಎಂದರು.

10 ವರ್ಷ 5 ಗ್ಯಾರಂಟಿಗಳು ಶಾಶ್ವತ: 'ಈ ಮೂರೂವರೆ ವರ್ಷ ಅದ ಮೇಲೆ ನಮ್ಮದೇ ಸರ್ಕಾರ, ನಮ್ಮದೇ ಆಡಳಿತ, ನಮ್ಮದೇ ಸೇವೆ. ನಾವು ಒಳ್ಳೆ ಕೆಲಸ ಮಾಡಿದ್ದೇವೆ. ಉಪ್ಪು ತಿಂದವರು ಉಪಕಾರ ಸ್ಮರಿಸುತ್ತಾರೆ. ಋಣ ತೀರಿಸುತ್ತಾರೆ. ಯಾವುದೇ ಗ್ಯಾರಂಟಿಯನ್ನೂ ನಿಲ್ಲಿಸುವುದಿಲ್ಲ. ಯಾರೂ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. 10 ವರ್ಷ 5 ಗ್ಯಾರಂಟಿಗಳು ಶಾಶ್ವತ ಇರಲಿವೆ ' ಎಂದರು.

ಬಿಜೆಪಿಗೆ ಮುಸ್ಲಿಂ ಮುಖಂಡರು

ಸಂಡೂರಿನ ವಿವಿಧ ಗ್ರಾಮಗಳ 200ಕ್ಕೂ ಹೆಚ್ಚು ಮುಸ್ಲಿಂ ಮುಖಂಡರು ಮಂಗಳವಾರ ಬಿಜೆಪಿ ಸೇರಿದರು.

ಈ ಸಂದರ್ಭದಲ್ಲಿ ಶಾಸಕ ಜನಾರ್ದನ ರೆಡ್ಡಿ ಮಾತನಾಡಿ, 'ಮುಸ್ಲಿಮರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುವೆ. ಮುಸ್ಲಿಮರಿಗೆ ಬಡವರಿಗೆ ಬೇಕಾದ ಸವಲತ್ತು ನೀಡುತ್ತೇವೆ. ಕೇಂದ್ರ ಸರ್ಕಾರ ನೀಡುವ ಯೋಜನೆಗಳಲ್ಲಿ ಮುಸ್ಲಿಮರು ಕೂಡ ಫಲಾನುಭವಿಗಳಾಗಿದ್ದಾರೆ. ಹಾಗಾಗಿ ಅವರು ನಮ್ಮೊಂದಿಗೆ ಬರುತ್ತಿದ್ದಾರೆ' ಎಂದರು.

'ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರು ಮುಸ್ಲಿಮರನ್ನು ಕಡೆಗಣಿಸುತ್ತಿದ್ದಾರೆ. ಆದ್ದರಿಂದ ಬಿಜೆಪಿ ಸೇರುತ್ತಿದ್ದೇವೆ' ಎಂದು ಮುಸ್ಲಿಂ ಮುಖಂಡರು ಹೇಳಿದರು.

ಗಣಿಗಾರಿಕೆ ಮೂಲಕ ಸಂಪತ್ತು ಲೂಟಿ ಮಾಡುವವರಿಗೆ ಸಂಡೂರಿನ ಜನ ಅವಕಾಶ ಮಾಡಿಕೊಡಬಾರದು
ಕೆ.ಸಿ ಕೊಂಡಯ್ಯ, ಮಾಜಿ ಸಂಸದ

ಬಿಜೆಪಿ ಅಲ್ಪಸಂಖ್ಯಾತರ ವಿರೋಧಿ ಅಲ್ಲ. ಜಮೀರ್ ತಲೆಹರಟೆ ಮಾಡಿದರೆ ಪಾಕಿಸ್ತಾನಕ್ಕೆ ಗಡಿಪಾರು ಮಾಡಬೇಕಾಗುತ್ತದೆ
ಎಂ.ಪಿ ರೇಣುಕಾಚಾರ್ಯ, ಮಾಜಿ ಸಚಿವ

ಮುಖ್ಯಮಂತ್ರಿ ರಾಜೀನಾಮೆಗೆ ಮುಹೂರ್ತ ನಿಗದಿ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಮುಹೂರ್ತ ನಿಗದಿಯಾಗಿದೆ. ಅದು ಯಾವಾಗ ಎಂದು ಅವರೇ ಹೇಳಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಸೇರಿಯೇ ರಾಜೀನಾಮೆಗೆ ಮುಹೂರ್ತ ಸಿದ್ಧ ಮಾಡಿದ್ದಾರೆ ಎಂದರು.

ಸಿದ್ದರಾಮಯ್ಯ ಅವರು ತಮ್ಮ ಅವಧಿಯನ್ನು ಪೂರ್ಣಗೊಳಿಸುವುದಿಲ್ಲ. ಅತಿ ಶೀಘ್ರವೇ ರಾಜೀನಾಮೆ ಕೊಡುತ್ತಾರೆ. ಮುಖ್ಯಮಂತ್ರಿ ಮತ್ತು ಅವರ ಕುಟುಂಬ ಹಲವು ಪ್ರಕರಣಗಳಲ್ಲಿ ಆರೋಪಿ ಸ್ಥಾನದಲ್ಲಿ ನಿಂತಿದೆ. ಭ್ರಷ್ಟಾಚಾರದ ಸಂಬಂಧ ರಾಜ್ಯದ ಜನರ ಬಹಳಷ್ಟು ಪ್ರಶ್ನೆಗಳಿಗೆ ಅವರು ಉತ್ತರ ಕೊಡಬೇಕಿದೆ. ಸಿದ್ದರಾಮಯ್ಯ ಅವರಿಗೆ ಲೋಕಾಯುಕ್ತ ನೋಟಿಸ್ ಕೊಟ್ಟು ತನಿಖೆಗೆ ಹಾಜರಾಗುವಂತೆ ತಿಳಿಸಿದೆ. ರಾಜ್ಯದ ಮುಖ್ಯಮಂತ್ರಿಯಾಗಿ ತನಿಖೆ ಎದುರಿಸುತ್ತೀರಾ? ಆರೋಪಿಯಾಗಿ ಹೋಗುತ್ತೀರಾ ಎಂಬುದನ್ನು ಜನರಿಗೆ ತಿಳಿಸಿ ಎಂದು ಹೇಳಿದರು.

ಮುಖ್ಯಮಂತ್ರಿಯೂ ಸೇರಿ ಕಾಂಗ್ರೆಸ್‌ನ ಎಲ್ಲರೂ ಭ್ರಷ್ಟಾಚಾರದ ಬಗ್ಗೆ ಉದ್ದುದ್ದ ಭಾಷಣ ಬಿಗಿಯುತ್ತಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ, ಸರ್ಕಾರ ಕಾಮಗಾರಿಗಳ ಬಿಲ್ ಪಾವತಿಸದ ಕಾರಣ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಎಚ್‌ಡಿಕೆ, ನಿಖಿಲ್ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

'ನ್ಯಾಯಾಲಯದ ಆದೇಶದಂತೆ ಬಿಎನ್‌ಎಸ್ ಕಲಂ 224ರ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ನಿಯಮದಂತೆ ಮೂವರಿಗೂ ನೋಟಿಸ್ ಜಾರಿಗೊಳಿಸಿ, ಕಾನೂನು ಪ್ರಕಾರ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ತಿಳಿಸಿದರು.

'ಗಣಿಗಾರಿಕೆ ಪ್ರಕರಣದಲ್ಲಿ ಎಸ್‌ಐಟಿ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದೇನೆ. ಎಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧ ದಾಖಲಾದ ಪ್ರಕರಣದಲ್ಲಿ (ದೂ. ಸಂ.:16/2024) ತನಿಖೆ ನಡೆಸುತ್ತಿದ್ದು, ತನಿಖೆ ವೇಳೆ ಹೆಚ್ಚುವರಿ ಸಾಕ್ಷ್ಯಾಧಾರಗಳು ದೊರೆತಿದ್ದವು. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ರಾಜ್ಯಪಾಲರಲ್ಲಿ ಅನುಮತಿ ಕೋರಿದ್ದೆ. ಈ ಸಂದರ್ಭದಲ್ಲಿ ಕುಮಾರಸ್ವಾಮಿ ಸೆ.28 ಹಾಗೂ 29ರಂದು ಪತ್ರಿಕಾಗೋಷ್ಠಿ ನಡೆಸಿ, ನನ್ನ ಬಗ್ಗೆ ಸುಳ್ಳು ಹಾಗೂ ದುರುದ್ದೇಶದ ಆರೋಪ ಮಾಡಿ ಬೆದರಿಕೆ ಒಡ್ಡಿದ್ದರು' ಎಂದು ಚಂದ್ರಶೇಖರ್ ನೀಡಿರುವ ದೂರು ಆಧರಿಸಿ, ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಕರ್ನಾಟಕ ರಾಜ್ಯ ಕೇಡರ್‌ನಿಂದ ಬೇರೆ ರಾಜ್ಯಕ್ಕೆ ಕಳುಹಿಸುವುದಾಗಿಯೂ ಮೌಖಿಕವಾಗಿ ಬೆದರಿಕೆಯೊಡ್ಡಿದ್ದರು. ನನ್ನ ಕುಟುಂಬದ ವಿರುದ್ಧವೂ ಸುಳ್ಳು ಆರೋಪ ಮಾಡಿ ಅವರಿಗೂ ತೊಂದರೆ ಕೊಡುವುದಾಗಿ ಬೆದರಿಕೆಯೊಡಿದ್ದರು. ನಾನು ಬೌರಿಂಗ್ ಆಸ್ಪತ್ರೆಯಲ್ಲಿ ಸುಳ್ಳು ವೈದ್ಯಕೀಯ ದಾಖಲಾತಿ ಪಡೆದು ಕರ್ನಾಟಕ ಕೇಡರ್‌ನಲ್ಲೇ ಮುಂದುವರಿಯುತ್ತಿರುವುದಾಗಿ ಸುಳ್ಳು ಆರೋಪ ಮಾಡಿದ್ದರು. ಲಂಚ ಪಡೆದಿರುವುದಾಗಿಯೂ ಹೇಳಿದ್ದರು' ಎಂದು ಚಂದ್ರಶೇಖರ್ ದೂರಿನಲ್ಲಿ ವಿವರಿಸಿದ್ದರು.

'ನಿಖಿಲ್ ಕುಮಾರಸ್ವಾಮಿ ಅವರು ಸೆ.29ರಂದು ಪತ್ರಿಕಾಗೋಷ್ಠಿ ನಡೆಸಿ ಸುಳ್ಳು ಹೇಳಿಕೆ ಕೊಟ್ಟಿದ್ದರು. ಸುರೇಶ್ ಬಾಬು ಅವರು ನನ್ನ ವಿರುದ್ದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದರು' ಎಂದು ಉಲ್ಲೇಖಿಸಿದ್ದರು.

'ನ್ಯಾಯಾಲಯದ ಆದೇಶದ ಅನುಸಾರ ಈಗ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪ್ರತಿಕ್ರಿಯಿಸಿದ್ದಾರೆ.

'ನೂರು ಎಫ್‌ಐಆರ್ ಆದರೂ ಧೃತಿಗೆಡಲ್ಲ'

ಚನ್ನಪಟ್ಟಣ: 'ಲೋಕಾಯುಕ್ತ ಎಡಿಜಿಪಿ ಚಂದ್ರಶೇಖರ್ ದೂರಿನ ಮೇರೆಗೆ ನನ್ನ ವಿರುದ್ಧ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಹಾಸ್ಯಾಸ್ಪದ ಮತ್ತು ದುರುದ್ದೇಶಪೂರಿತ. ಇಂತಹ ನೂರು ಎಫ್‌ಐಆರ್ ದಾಖಲಾದರೂ ಧೃತಿಗೆಡಲ್ಲ. ಚುನಾವಣೆ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ದ್ವೇಷ ಸಾಧನೆಗೆ ಕೋರ್ಟ್ ಮೂಲಕವೇ ಉತ್ತರ ಕೊಡುತ್ತೇನೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.ಅಕ್ಕೂರು ಹೊಸಹಳ್ಳಿಯಲ್ಲಿ ಮಂಗಳವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

ಮಹಾರಾಷ್ಟ್ರ: ಸಂಜಯ್ ವರ್ಮಾ ನೂತನ ಡಿಜಿಪಿ

ಮುಂಬೈ (ಪಿಟಿಐ): ಮಹಾರಾಷ್ಟ್ರದ ನೂತನ ಪೊಲೀಸ್ ಮಹಾನಿರ್ದೇಶಕ-ರಾಗಿ (ಡಿಜಿಪಿ) ಸಂಜಯ್ ಕುಮಾರ್ ವರ್ಮಾ ಅವರನ್ನು ಮಂಗಳವಾರ ನೇಮಿಸಲಾಗಿದೆ.

ಭಾರತೀಯ ಚುನಾವಣಾ ಆಯೋಗದ (ಇಸಿಐ) ನಿರ್ದೇಶನದ ಮೇರೆಗೆ ಡಿಜಿಪಿ ಹುದ್ದೆಯಿಂದ ರಶ್ಮಿ ಶುಕ್ಲಾ ಅವರನ್ನು ಬದಲಿಸಿ, ಅವರ ಸ್ಥಾನಕ್ಕೆ ವರ್ಮಾ ಅವರನ್ನು ನೇಮಿಸಲಾಗಿದೆ.

ನವೆಂಬರ್ 20ರಂದು ನಡೆಯಲಿರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಮುನ್ನ, ವಿರೋಧ ಪಕ್ಷಗಳ ದೂರಿನ ಹಿನ್ನೆಲೆಯಲ್ಲಿ ತಕ್ಷಣವೇ ಜಾರಿಗೆ ಬರುವಂತೆ ರಶ್ಮಿ ಶುಕ್ಲಾ ಅವರನ್ನು ರಾಜ್ಯ ಪೊಲೀಸ್ ಮುಖ್ಯಸ್ಥ ಸ್ಥಾನದಿಂದ ತೆರವುಗೊಳಿಸಲು ಇಸಿಐ ಸೋಮವಾರ ನಿರ್ದೇಶನ ನೀಡಿತ್ತು. ಶುಕ್ಲಾ ಮಹಾರಾಷ್ಟ್ರದ ಮೊದಲ ಮಹಿಳಾ ಡಿಜಿಪಿಯಾಗಿದ್ದರು.

ಶುಕ್ಲಾ ಅವರು ಅಧಿಕಾರವನ್ನು ಸೇವಾ ಹಿರಿತನದಲ್ಲಿ ನಂತರದಲ್ಲಿರುವ ಹಿರಿಯ ಐಪಿಎಸ್ ಅಧಿಕಾರಿಗೆ ಹಸ್ತಾಂತರಿಸಬೇಕು ಎಂದು ಸಿಇಸಿ, ಮಹಾರಾಷ್ಟ್ರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿತ್ತು. ಡಿಜಿಪಿ ಹುದ್ದೆಗೆ ಮಂಗಳವಾರ ಮಧ್ಯಾಹ್ನದೊಳಗೆ ಮೂವರು ಐಪಿಎಸ್ ಅಧಿಕಾರಿಗಳ ಹೆಸರು ಕಳುಹಿಸುವಂತೆಯೂ ಸೂಚಿಸಿತ್ತು. ವರ್ಮಾ ಅವರ ಹೆಸರನ್ನು ಇಸಿಐ ಅನುಮೋದಿಸಿದೆ.

'ಕಟುಕರಿಗೆ ಕಣ್ಣೀರು ಬರೋದಿಲ್ಲ'

ಮೊಮ್ಮಗನ ನಿಖಿಲ್ ಪರ ಅಖಾಡಕ್ಕಿಳಿದ ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ ತಾಲ್ಲೂಕಿನ ವಿರುಪಾಕ್ಷಿಪುರದಲ್ಲಿ ಮಂಗಳವಾರ ನಡೆದ ಪ್ರಚಾರ ಸಭೆಯಲ್ಲಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಅವರು, ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಪರ ಮತ ಯಾಚಿಸಿದರು. ಶಾಸಕ ಗೋಪಾಲಯ್ಯ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌.ಅಶೋಕ, ಮಾಜಿ ಶಾಸಕ ಎಚ್‌.ಕೆ.ಕುಮಾರಸ್ವಾಮಿ ಹಾಗೂ ಮುಖಂಡರು ಇದ್ದರು

ಚನ್ನಪಟ್ಟಣ (ರಾಮನಗರ): 'ನಿಮ್ಮ ಆಶೀರ್ವಾದದಿಂದ ನಾನು ಆರೋಗ್ಯವಾಗಿದ್ದೇನೆ. ನಾನೇನು ಗಾಲಿಕುರ್ಚಿ ಅಥವಾ ಆಂಬುಲೆನ್ಸ್‌ನಲ್ಲಿ ಬಂದಿಲ್ಲ. ನಾನು ಚನ್ನಾಗಿದ್ದೇನೆಂದು ತೋರಿಸಲು ಬಂದಿದ್ದೇನೆ. ಕಟುಕರಿಗೆ ಕಣ್ಣೀರು ಬರುವುದಿಲ್ಲ. ಹೃದಯವಿರುವವರಿಗೆ ಮಾತ್ರ ಕಣ್ಣೀರು ಬರುತ್ತದೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ, ತಮ್ಮ ಆರೋಗ್ಯ ಕುರಿತು ಅಣಕವಾಡಿದವರಿಗೆ ತಿರುಗೇಟು ನೀಡಿದರು.

ತಾಲ್ಲೂಕಿನ ವಿರುಪಾಕ್ಷಿಪುರ ಸೇರಿದಂತೆ ವಿವಿಧೆಡೆ ಮಂಗಳವಾರ ನಡೆದ ಪ್ರಚಾರ ಸಭೆಯಲ್ಲಿ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಪರ ಮತಯಾಚಿಸಿದ ಅವರು, ಕಾಂಗ್ರೆಸ್ ನಾಯಕರನ್ನು ತರಾಟೆಗೆ ತೆಗೆದುಕೊಂಡರು. ಸಹಾಯಕರಿಬ್ಬರ ನೆರವಿನಿಂದ ವೇದಿಕೆ ಏರಿ ಮಹಾರಾಜ ಕುರ್ಚಿಯಲ್ಲಿ ಆಸೀನರಾಗಿಯೇ ಭಾಷಣ ಮಾಡಿದರು. ಅವರ ಬಲಗೈನಲ್ಲಿ ಡ್ರಿಪ್ ಕ್ಯಾನಲ್ ಬ್ಯಾಂಡೇಜ್ ಎದ್ದು ಕಾಣುತ್ತಿತ್ತು.

'ನನಗೀಗ 92 ವರ್ಷ. ಮಂಡಿ ನೋವು. ಎದ್ದು ನಿಲ್ಲಲಾಗುವುದಿಲ್ಲ. ಎಸ್.ಎಂ.ಕೃಷ್ಣ ಮತ್ತು ನಾನು ಒಂದೇ ವಯಸ್ಸಿನವರು. ಆದರೂ, ಕೆಲಸ ಮಾಡುತ್ತಿದ್ದೇವೆ. ದೇಹಕ್ಕೆ ವಯಸ್ಸಾಗುತ್ತದೆಯೇ ಹೊರತು, ಇಚ್ಛಾಶಕ್ತಿಗಲ್ಲ. ನಿಮ್ಮ ಆಶೀರ್ವಾದವಿದ್ದರೆ ಶತಾಯುಷಿ ಆಗುತ್ತೇನೆ' ಎಂದ ಅವರು, 'ಕಾಂಗ್ರೆಸ್‌ನವರಿಗೆ ನನ್ನ ಆರೋಗ್ಯದ ಚಿಂತೆ. ಹಿರಿಯರಿಗೆ ಗೌರವ ಕೊಡುವ ಸೌಜನ್ಯವೂ ಅವರಿಗಿಲ್ಲ'ಎಂದು ಕುಟುಕಿದರು.

'ಉಪ ಚುನಾವಣೆ ಒಳ ರಾಜಕೀಯ ಏನೆಲ್ಲ ನಡೆದಿದೆ ಎಂಬುದು ನಿಮಗೆ ತಿಳಿದಿದೆ. ದೇವೇಗೌಡರ ಕೈ ನಡುಗುತ್ತವೆ, ಅವರು ಪ್ರಚಾರಕ್ಕೆ ಬರುತ್ತಾರಂತೆ ಎಂದು ಕನ್ವರ್ಟೆಡ್ ಕಾಂಗ್ರೆಸ್ ಜೆಂಟಲ್‌ಮ್ಯಾನ್ (ಸಿ.ಪಿ.ಯೋಗೇಶ್ವರ್) ಹೇಳುತ್ತಾರೆ. ನ.11ನೇ ತಾರೀಖಿನವರೆಗೆ ನಾನು ಪ್ರಚಾರಕ್ಕೆ ಬರುತ್ತೇನೆ. ನನ್ನ ಮೊಮ್ಮಗ ಈ ಕ್ಷೇತ್ರವನ್ನು ಅಭಿವೃದ್ಧಿ ಮಾಡುತ್ತಾನೆ. ಅವನಿಗೆ ನೀವು ಆಶೀರ್ವಾದ ಮಾಡಿ ಶಕ್ತಿ ತುಂಬಿ' ಎಂದು ಮನವಿ ಮಾಡಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್ ಅಶೋಕ, ಛಲವಾದಿ ನಾರಾಯಣಸ್ವಾಮಿ, ಶಾಸಕ ಗೋಪಾಲಗೌಡ ಸೇರಿದಂತೆ ಮೈತ್ರಿ ಶಾಸಕರು ನಿಖಿಲ್ ಪರ ಪ್ರಚಾರ ನಡೆಸಿದರು.

ಎಚ್‌ಡಿಕೆ ನಂಬಿಕೆ ದ್ರೋಹ: ಸಿಪಿವೈ

'ಉಪ ಚುನಾವಣೆಯಲ್ಲಿ ಟಿಕೆಟ್ ಕೊಡುವ ಮಾತುಕತೆಯಾಗಿತ್ತು. ಆದರೆ, ಕುಮಾರಸ್ವಾಮಿ ನಾಟಕವಾಡಿ ಮಗನನ್ನು ತಂದರು. ಮೊದಲು ನಂಬಿಕೆ ಹುಟ್ಟಿಸಿ, ಬಳಿಕ ವಂಚಿಸಿ ವಿಶ್ವಾಸದ್ರೋಹ ಮಾಡಿದರು. ಈಗಾಗಲೇ ಕ್ಷೇತ್ರ ಬಿಟ್ಟಿರುವ ಅವರು, ಇಲ್ಲಿಗೆ ಬರುವಾಗಲೂ ಹಾಗೂ ಹೋಗುವಾಗಲೂ ಜನರ ಅಭಿಪ್ರಾಯ ಕೇಳಿಲ್ಲ. ಎಲ್ಲದಕ್ಕೂ ಜನ ಚುನಾವಣೆಯಲಿ ತಕ್ಕ ಉತ್ತರ ನೀಡುತ್ತಾರೆ' ಎಂದು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಹೇಳಿದರು.

ನಿಖಿಲ್ ಪರ ದೇವೇಗೌಡರ ಪ್ರಚಾರ ಕುರಿತು ಪ್ರತಿಕ್ರಿಯಿಸಿದ ಅವರು, 'ಪ್ರಚಾರಕ್ಕೆ ಸಾಕಷ್ಟು ಜನ ಬರುತ್ತಾರೆ, ಹೋಗುತ್ತಾರೆ. ಇದು ಮನರಂಜನೆ ಆಗದೆ, ಜನರ ಕಷ್ಟಕ್ಕೆ ಸ್ಪಂದಿಸುವ ಕೆಲಸವಾಗಬೇಕು' ಎಂದರು.

ಸಲ್ಮಾನ್‌ಖಾನ್‌ಗೆ ಮತ್ತೆ ಬೆದರಿಕೆ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯಿ ಕಡೆಯವರಿಂದ ಮತ್ತೊಂದು ಬೆದರಿಕೆ ಸಂದೇಶ ಬಂದಿದೆ. ಬೆದರಿಕೆ ಹಾಕಿರುವ ವ್ಯಕ್ತಿಯು ₹5 ಕೋಟಿ ಬೇಡಿಕೆ ಇರಿಸಿ, ಮುಂಬೈ ಟ್ರಾಫಿಕ್ ಪೊಲೀಸ್ ಸಹಾಯವಾಣಿಗೆ ಬೆದರಿಕೆ ಸಂದೇಶ ಕಳುಹಿಸಿದ್ದು, ಮಧ್ಯರಾತ್ರಿಯ ಸುಮಾರಿಗೆ ಬಂದಿರುವ ಆ ಸಂದೇಶವನ್ನು ಅಧಿಕಾರಿಯೊಬ್ಬರು ಸ್ವೀಕರಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜಕೀಯ ನಿವೃತ್ತಿ; ಶರದ್ ಪವಾರ್ ಸುಳಿವು

ಪ್ರಜಾವಾಣಿ ವಾರ್ತೆ/ಪಿಟಿಐ

ಶರದ್ ಪವಾರ್

ಮುಖ್ಯಾಂಶಗಳು
- ಭದ್ರಕೋಟೆಯಲ್ಲೇ ಅಚ್ಚರಿ ಹೇಳಿಕೆ
- ಯುವ ಪೀಳಿಗೆಗೆ ಅವಕಾಶ
- ಅಜಿತ್ ಬಗ್ಗೆಯೂ ಮೆಚ್ಚುಗೆ

ಮುಂಬೈ/ಪುಣೆ: 'ಇನ್ಮುಂದೆ ಯಾವುದೇ ಚುನಾವಣೆಯಲ್ಲೂ ಸ್ಪರ್ಧಿಸುವು-ದಿಲ್ಲ' ಎಂದು ಹೇಳುವ ಮೂಲಕ ರಾಜಕೀಯದಿಂದ ನಿವೃತ್ತರಾಗುವ ಸುಳಿವನ್ನು ಎನ್‌ಸಿಪಿ (ಎಸ್‌ಪಿ) ವರಿಷ್ಠ ಶರದ್ ಪವಾರ್ ನೀಡಿದರು.

ತಮ್ಮ ಮೊಮ್ಮಗ ಯುಗೇಂದ್ರ ಪವಾರ್ ಪರ ಬಾರಾಮತಿ ವಿಧಾನಸಭಾ ಕ್ಷೇತ್ರದ ಸುಪಾದಲ್ಲಿ ಮಂಗಳವಾರ ಮತ ಯಾಚಿಸುವಾಗ, 'ನಿಮ್ಮ ಬೆಂಬಲ ದಿಂದ 14 ಚುನಾವಣೆಗಳಲ್ಲಿ (ಲೋಕಸಭೆ ಹಾಗೂ ವಿಧಾನಸಭೆ) ಸ್ಪರ್ಧಿಸಿದ್ದೆ. ಇನ್ನೂ ಎಷ್ಟು ಬಾರಿ ಸ್ಪರ್ಧಿಸುವುದು, ಯುವ ಪೀಳಿಗೆಗೆ ಅವಕಾಶ ನೀಡಬೇಕಾಗಿದೆ' ಎಂದರು.

'ರಾಜ್ಯಸಭೆಯ ಸದಸ್ಯತ್ವದ ಅವಧಿ ಇನ್ನೂ ಒಂದೂವರೆ ವರ್ಷ ಬಾಕಿ ಇದೆ. ಮತ್ತೊಂದು ಅವಧಿಗೆ ಸದಸ್ಯನಾಗಬೇಕೆ? ಎಂಬುದರ ಕುರಿತು ಯೋಚಿಸುವೆ' ಎಂದೂ ಅವರು ತಿಳಿಸಿದರು.

'ಹೊಸ ನಾಯಕತ್ವಕ್ಕಾಗಿ ಕೆಲಸ ಮಾಡುತ್ತಿರುವೆ. ನಾನು ಅಧಿಕಾರದಲ್ಲಿ ಇರುವುದಿಲ್ಲ. ಆದರೆ, ಜನರಿಗಾಗಿ ಕೆಲಸ ಮಾಡುವುದನ್ನು ಮುಂದುವರಿಸುವೆ' ಎಂದು ಪವಾರ್ ಹೇಳಿದರು.

ವಿಧಾನಸಭಾ ಚುನಾವಣೆ ಪ್ರಚಾರದ ವೇಳೆಯೇ ತಮ್ಮ ಭದ್ರಕೋಟೆಯಾದ ಬಾರಾಮತಿಯಲ್ಲೇ ಶರದ್ ಪವಾರ್ ಅಚ್ಚರಿಯ ಹೇಳಿಕೆಯನ್ನು ನೀಡಿರುವುದು ಮಹಾರಾಷ್ಟ್ರದ ರಾಜಕಾರಣದಲ್ಲಿ ಸಂಚಲನ ಮೂಡಿಸಿದೆ.

ಮರಾಠರ ಪ್ರಬಲ ನಾಯಕರಾಗಿರುವ ಶರದ್ ಪವಾರ್ ಅವರು, ನಾಲ್ಕು ಬಾರಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದರು. ಕೇಂದ್ರದಲ್ಲಿಯೂ ಮೂರು ಬಾರಿ ಸಚಿವರಾಗಿದ್ದರು.

'ಬಾರಾಮತಿಗೆ ಹೊಸ ನಾಯಕತ್ವ': 'ಬಾರಾಮತಿಗೆ ಉಪಮುಖ್ಯಮಂತ್ರಿ ಅಜಿತ್ ಪವಾರ್ ಕೊಡುಗೆ ಸಾಕಷ್ಟಿದೆ. ಆದರೆ, ಮುಂದಿನ ಮೂರು ದಶಕ ಈ ಪ್ರದೇಶದ ಅಭಿವೃದ್ಧಿಗೆ ಹೊಸ ನಾಯಕತ್ವ ಬೇಕಿದೆ' ಎಂದು ಶರದ್ ಪವಾರ್ ಹೇಳಿದರು.

'ಕ್ಷೇತ್ರದ ಲೋಕಸಭಾ ಚುನಾವಣೆಯು ಕುಟುಂಬದೊಳಗಿನ ಸ್ಪರ್ಧೆಯಿಂದಾಗಿ ಕಷ್ಟಕರವಾಗಿತ್ತು. ಐದು ತಿಂಗಳ ನಂತರ ವಿಧಾನಸಭಾ ಚುನಾವಣೆಯಲ್ಲೂ ಮತ್ತದೇ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದರು.

'ನನ್ನನ್ನು ನಾಲ್ಕು ಬಾರಿ ಮುಖ್ಯಮಂತ್ರಿಯನ್ನಾಗಿ ಮಾಡಿದವರು ನೀವು. 1967ರಿಂದಲೂ 25 ವರ್ಷ ನನಗೆ ಅವಕಾಶ ಕೊಟ್ಟವರು. ನಾನು ಇಲ್ಲಿಂದ ತೆರಳುವ ಮುನ್ನ, ಇಲ್ಲಿನ ಎಲ್ಲ ಜವಾಬ್ದಾರಿಗಳನ್ನು ಅಜಿತ್‌ಗೆ ಕೊಟ್ಟಿದ್ದೆ' ಎಂದರು.

'ಅಜಿತ್ ಸಹ 25ರಿಂದ 30 ವರ್ಷ ಈ ಪ್ರದೇಶದಲ್ಲಿ ಕೆಲಸ ಮಾಡಿದ್ದಾರೆ. ಅವರ ಕೆಲಸದ ಬಗ್ಗೆ ಅನುಮಾನಗಳು ಇಲ್ಲ. ಇದೀಗ ಭವಿಷ್ಯಕ್ಕಾಗಿ ತಯಾರಿ ಮಾಡುವ ಸಮಯ. ಮುಂದಿನ 30 ವರ್ಷ ಕೆಲಸ ಮಾಡುವ ನಾಯಕತ್ವವನ್ನು ಹುಡುಕಬೇಕಿದೆ' ಎಂದು ತಮ್ಮ ಮೊಮ್ಮಗನ ಪರ ಮತಯಾಚಿಸಿದರು.

ಬಾರಾಮತಿ ವಿಧಾನಸಭಾ ಕ್ಷೇತ್ರದಿಂದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಎಂಟನೇ ಬಾರಿಗೆ ಸ್ಪರ್ಧಿಸಿದ್ದಾರೆ. ಇವರ ಕಿರಿಯ ಸಹೋದರ ಶ್ರೀನಿವಾಸ್ ಪವಾರ್ ಅವರ ಪುತ್ರ ಯುಗೇಂದ್ರ ಪವಾರ್ ಎನ್‌ಸಿಪಿ (ಎಸ್‌ಪಿ) ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದು, ಚುನಾವಣಾ ಅಖಾಡ ರಂಗೇರಿದೆ.

ಜಾರ್ಖಂಡ್: ಕಣದಲ್ಲಿ 40 ಕುಟುಂಬ ಕುಡಿಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾರ್ಖಂಡ್ ವಿಧಾನಸಭೆ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ಎಲ್ಲ ಪಕ್ಷಗಳು ಕುಟುಂಬ ರಾಜಕಾರಣಕ್ಕೆ ಮಣೆ ಹಾಕಿವೆ. ಪಕ್ಷಗಳು ಮಾಜಿ ಮುಖ್ಯಮಂತ್ರಿಗಳು, ಸಚಿವರು, ಶಾಸಕರು, ಮಾಜಿ ಜನಪ್ರತಿನಿಧಿಗಳ ಕುಟುಂಬದ 40 ಸದಸ್ಯರಿಗೇ ಟಿಕೆಟ್ ಹಂಚಿವೆ. ಇದರಲ್ಲಿ 17 ಮಂದಿ ಮಾಜಿ ಶಾಸಕರ ಮಕ್ಕಳು.

ಕಾಂಗ್ರೆಸ್ ಪಕ್ಷದ ವಿರುದ್ಧ ಕುಟುಂಬ ರಾಜಕಾರಣದ ಅಸ್ತ್ರವನ್ನು ಬಿಜೆಪಿ ನಿರಂತರ ಬಳಸುತ್ತಾ ಬಂದಿದೆ. ವಂಶಪಾರಂಪರ್ಯ ರಾಜಕಾರಣದ ಕಡು ವಿರೋಧಿಯಾಗಿರುವ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ನಿರಂತರ ವಾಗ್ದಾಳಿ ನಡೆಸಿದ್ದಾರೆ. ಜಾರ್ಖಂಡ್ ಚುನಾವಣಾ ಪ್ರಚಾರದ ವೇಳೆಯೂ ಪರಿವಾರ ವಾದದ ವಿರುದ್ಧ ಕಿಡಿಕಾರಿದ್ದಾರೆ. ತಮಾಷೆಯೆಂದರೆ, ಅವರ ಪಕ್ಷವೇ ವಂಶವಾದಕ್ಕೆ ಹೆಚ್ಚಿನ ಮನ್ನಣೆ ನೀಡಿದೆ. ಕಮಲ ಪಾಳಯದಿಂದ ವಿವಿಧ ಕುಟುಂಬಗಳ 17 ಕುಡಿಗಳು ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಬಿಜೆಪಿ 68 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುತ್ತಿದೆ. ಬಿಜೆಪಿ ಮಿತ್ರ ಪಕ್ಷ ಆಲ್ ಜಾರ್ಖಂಡ್ ಸ್ಟೂಡೆಂಟ್ಸ್ ಯೂನಿಯನ್ (ಎಜೆಎಸ್‌ಯು) 10 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಇವರಲ್ಲಿ ಇಬ್ಬರು ಅಭ್ಯರ್ಥಿಗಳು ವಂಶವಾದದ ಹಿನ್ನೆಲೆಯವರು.

ಆಡಳಿತರೂಢ ಜೆಎಂಎಂ– ಕಾಂಗ್ರೆಸ್ ಮೈತ್ರಿಕೂಟ ಈ ವಿಷಯದಲ್ಲಿ ಹಿಂದುಳಿದಿಲ್ಲ. ಜೆಎಂಎಂ ಪಕ್ಷದ 10, ಕಾಂಗ್ರೆಸ್‌ನ ಎಂಟು, ಆರ್‌ಜೆಡಿ ಹಾಗೂ ಎಡಪಕ್ಷಗಳ ತಲಾ ಒಬ್ಬರು ಅಭ್ಯರ್ಥಿಗಳು ಸಚಿವರು, ಮಾಜಿ ಶಾಸಕರ ಹತ್ತಿರದ ಸಂಬಂಧಿಗಳು. ಜೆಎಂಎಂ ಸ್ಥಾಪಕ ಹಾಗೂ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ಕುಟುಂಬದ ನಾಲ್ವರು ಚುನಾವಣಾ ಅಖಾಡದಲ್ಲಿದ್ದಾರೆ. ಜೆಎಂಎಂನಿಂದ ಮುಖ್ಯಮಂತ್ರಿ ಹೇಮಂತ್ ಸೊರೇನ್, ಅವರ ಪತ್ನಿ ಕಲ್ಪನಾ ಮತ್ತು ಶಿಬು ಸೊರೇನ್ ಅವರ ಕಿರಿಯ ಪುತ್ರ ಬಸನ್ ಸೊರೇನ್ ಅವರಿಗೆ ಟಿಕೆಟ್ ನೀಡಲಾಗಿದೆ. ಜೆಎಂಎಂ ತೊರೆದುಬಂದ ಮತ್ತೊಬ್ಬ ನಾಯಕಿ ಸೀತಾ ಸೊರೇನ್ ಅವರನ್ನು ಬಿಜೆಪಿ ಜಮ್ತಾರ ಕ್ಷೇತ್ರದಿಂದ ಕಣಕ್ಕಿಳಿಸಿದೆ. ಸೀತಾ ಅವರು ಶಿಬು ಸೊರೇನ್ ಅವರ ಸೊಸೆ. ಹೇಮಂತ್ ಸೊರೇನ್ ಅವರ ಕುಟುಂಬ ರಾಜಕಾರಣ ವಿರೋಧಿಸಿ ಸೀತಾ ಅವರು ಕಮಲ ಪಾಳಯಕ್ಕೆ ಜಿಗಿದಿದ್ದರು.

ಇಬ್ಬರು ಮಾಜಿ ಮುಖ್ಯಮಂತ್ರಿಗಳ ಪತ್ನಿಯರನ್ನು ಬಿಜೆಪಿ ಹುರಿಯಾಳುಗಳನ್ನಾಗಿ ಮಾಡಿದೆ. ಜಗನ್ನಾಥಪುರದಿಂದ ಮಧು ಕೋಡಾ ಪತ್ನಿ ಗೀತಾ ಕೋಡಾ ಮತ್ತು ಪೊಟ್ಕಾದಿಂದ ಅರ್ಜುನ್ ಮುಂಡಾ ಪತ್ನಿ ಮೀರಾ ಕಣಕ್ಕಿಳಿದಿದ್ದಾರೆ. ಮಾಜಿ ಮುಖ್ಯಮಂತ್ರಿ ಮತ್ತು ಒಡಿಶಾ ರಾಜ್ಯಪಾಲ ರಘುವರ್ ದಾಸ್ ಅವರ ಸೊಸೆ ಪೂರ್ಣಿಮಾ ದಾಸ್ ಸಾಹು ಜೆಮ್‌ಶೆಡ್‌ಪುರದಿಂದ ಅದೃಷ್ಟ ಕಣಕ್ಕಿಳಿ ದಿದ್ದಾರೆ. ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಸರೈಕೆಲಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

'ಇಂಡಿಯಾ'ದಿಂದ 7 'ಗ್ಯಾರಂಟಿ'ಗಳ ಪ್ರಣಾಳಿಕೆ ಬಿಡುಗಡೆ

10 ಲಕ್ಷ ನೌಕರಿ, ₹ 15 ಲಕ್ಷ ಆರೋಗ್ಯ ವಿಮೆ

ರಾಂಚಿ (ಪಿಟಿಐ): ಯುವಜನರಿಗಾಗಿ 10 ಲಕ್ಷ ನೌಕರಿ ಸೃಷ್ಟಿಸುವ ಹಾಗೂ ಬಡಜನರಿಗೆ ₹ 15 ಲಕ್ಷದವರೆಗೂ ಆರೋಗ್ಯ ವಿಮಾ ಭದ್ರತೆ ಒದಗಿಸುವುದು ಸೇರಿದಂತೆ ಗ್ಯಾರಂಟಿಗಳಿರುವ ಪ್ರಣಾಳಿಕೆಯನ್ನು 'ಇಂಡಿಯಾ' ಮೈತ್ರಿಕೂಟ ಮಂಗಳವಾರ ಇಲ್ಲಿ ಬಿಡುಗಡೆ ಮಾಡಿತು.

ಮೀಸಲು ಪ್ರಮಾಣವನ್ನು ಪರಿಶಿಷ್ಟ ಪಂಗಡದವರಿಗೆ ಶೇ 28ಕ್ಕೆ, ಪರಿಶಿಷ್ಟ ಜಾತಿಯವರಿಗೆ ಶೇ 12ಕ್ಕೆ ಹಾಗೂ ಇತರೆ ಹಿಂದುಳಿದ ವರ್ಗದವರಿಗೆ ಶೇ 27ಕ್ಕೆ ಏರಿಸುವ ಭರವಸೆಯನ್ನು 'ಇಂಡಿಯಾ' ನೀಡಿದೆ. ಪ್ರಸ್ತುತ ಮೀಸಲಾತಿ ಪ್ರಮಾಣ ಕ್ರಮವಾಗಿ ಶೇ 26, ಶೇ 10 ಮತ್ತು ಶೇ 14ರಷ್ಟಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಮತ್ತು ಆರ್‌ಜೆಡಿ ನಾಯಕ ಜೆ.ಪಿ. ಯಾದವ್ ಅವರು ಜಂಟಿಯಾಗಿ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

'ನಾವು ಎಂದಾದರೂ ಗ್ಯಾರಂಟಿ ಬಗ್ಗೆ ಮಾತನಾಡಿದರೆ, ಪ್ರಧಾನಿ ಹಿಂದೆಯೇ ಅದನ್ನು ಟೀಕಿಸುತ್ತಾರೆ. ಚುನಾವಣೆ ಪ್ರಚಾರದ ವೇಳೆ ನನ್ನ ಹೆಸರು ಉಲ್ಲೇಖಿಸಿ ಕಾಂಗ್ರೆಸ್‌ನ ಗ್ಯಾರಂಟಿ ವಿಶ್ವಾಸಾರ್ಹವಲ್ಲ ಎಂದಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷ ಎಲ್ಲ ಗ್ಯಾರಂಟಿಗಳನ್ನು ಈಡೇರಿಸಲಿದೆ' ಎಂದು ಖರ್ಗೆ ಹೇಳಿದರು.

'ಇಂಡಿಯಾ' ಮೈತ್ರಿಕೂಟದ ಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ, ಹೇಮಂತ್ ಸೊರೇನ್ ಭಾಗವಹಿಸಿದ್ದರು –ಪಿಟಿಐ ಚಿತ್ರ

ಜಾರ್ಖಂಡ್‌ನಲ್ಲಿ ಬಿಜೆಪಿಗೆ ಅಧಿಕಾರ ನೀಡಿ ಕಲ್ಲು ತೂರುವವರು, ಶಾಂತಿ ಕದಡುವವರ ಗುಡಿಸಿ ಹಾಕುತ್ತೇವೆ. ಮತದಾರರು ಜಾತಿ ಹೆಸರಿನಲ್ಲಿ ವಿಭಜನೆಗೊಳ್ಳಬಾರದು
ಯೋಗಿ ಆದಿತ್ಯನಾಥ, ಮುಖ್ಯಮಂತ್ರಿ, ಉತ್ತರ ಪ್ರದೇಶ

'ಗ್ಯಾರಂಟಿಗಳ ಬಗ್ಗೆ ಪ್ರಧಾನಿ ಮೋದಿ ಅವರ ಜತೆ ಚರ್ಚೆಗೆ ಸಿದ್ಧ. ಅವರು ಬೆಂಗಳೂರಿಗೆ ಬರಲಿ. ನನ್ನ ಪ್ರಶ್ನೆಗಳಿಗೆ ಅವರು ಸಂಸತ್ತಿನಲ್ಲಿ ಉತ್ತರಿಸಿಲ್ಲ. ಅವರ ಪ್ರಶ್ನೆಗಳಿಗೆ ನಾನು ಉತ್ತರಿಸಲು ಸಿದ್ಧ. ಅವರು ಸಹ ನನ್ನ ಪ್ರಶ್ನೆಗಳಿಗೆ ಉತ್ತರಿಸಲಿ' ಎಂದು ಖರ್ಗೆ ಹೇಳಿದರು. ಉಳಿದಂತೆ, ಬಡಜನರಿಗೆ ಈಗ ನೀಡುತ್ತಿರುವ ಮಾಸಿಕ ಪಡಿತರವನ್ನು ಈಗಿನ 5 ಕೆ.ಜಿಯಿಂದ 7 ಕೆ.ಜಿಗೆ ಏರಿಸುವುದು, ಅಡುಗೆ ಅನಿಲ ಸಿಲಿಂಡರ್ ಅನ್ನು ₹450ಕ್ಕೆ ಒದಗಿಸುವುದಾಗಿಯೂ ಭರವಸೆ ನೀಡಿದೆ.

'ಕನಕ ಗೌರವ, ಯುವ ಪುರಸ್ಕಾರ' ಪ್ರಕಟ

ಪ್ರಜಾವಾಣಿ ವಾರ್ತೆ

ಜಿ.ವಿ. ಆನಂದಮೂರ್ತಿ

ಉಮೇಶ ಎಂ.

ಚಿಕ್ಕಮಗಳೂರು ಗಣೇಶ್

ವಸಂತ ಕುಮಾರ್



ಎಚ್‌.ಎನ್‌. ಮುರಳೀಧರ

ನೀಲಪ್ಪ ಮೈಲಾರಪ್ಪ

ಅನಿಲ್ ಕುಮಾರ್

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾ-ರರ ಅಧ್ಯಯನ ಕೇಂದ್ರದಿಂದ ನೀಡುವ ವಾರ್ಷಿಕ 'ಕನಕ ಗೌರವ ಪುರಸ್ಕಾರ' ಹಾಗೂ 'ಕನಕ ಯುವ ಪುರಸ್ಕಾರ' ಗಳನ್ನು ಪ್ರಕಟಿಸಲಾಗಿದೆ.

'ಕನಕ ಗೌರವ ಪುರ-ಸ್ಕಾರ'ಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ತಾಳ್ತಜೆ ವಸಂತಕುಮಾರ್ (2021–22), ಹಾವೇರಿಯ ನೀಲಪ್ಪ ಮೈಲಾರಪ್ಪ ಅಂಬಲಿಯವರ (2022–23), ಬೆಂಗಳೂರಿನ ಎಚ್‌.ಎನ್‌. ಮುರಳೀಧರ (2023–24) ಹಾಗೂ ತುಮಕೂರಿನ ಜಿ.ವಿ. ಆನಂದಮೂರ್ತಿ (2024–25) ಆಯ್ಕೆಯಾಗಿದ್ದಾರೆ. 'ಕನಕ ಯುವ ಪುರಸ್ಕಾರ'ಕ್ಕೆ ಮೈಸೂರಿನ ಅನಿಲ್ ಕುಮಾರ್ (2021–22), ಚಿಕ್ಕಮಗಳೂರಿನ ಚಿಕ್ಕಮಗಳೂರು ಗಣೇಶ್ (2022–23) ಹಾಗೂ ವಿಜಯನಗರ ಜಿಲ್ಲೆಯ ಉಮೇಶ ಎಂ. (2023–24) ಆಯ್ಕೆಯಾಗಿದ್ದಾರೆ.

ಕನಕ ಗೌರವ ಪುರಸ್ಕಾರವು ₹ 75 ಸಾವಿರ ನಗದು, ಕನಕ ಯುವ ಪುರಸ್ಕಾರವು ₹50 ಸಾವಿರ ನಗದು, ಪುತ್ಥಳಿ ಹಾಗೂ ಫಲಕ ಒಳಗೊಂಡಿದೆ.

'2021-22 ರಿಂದ 2024-25ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದ್ದು, 2024-25ನೇ ಸಾಲಿನ 'ಯುವ ಪುರಸ್ಕಾರ'ಕ್ಕೆ ಅರ್ಹರು ಲಭ್ಯವಾಗದ ಕಾರಣ ಆಯ್ಕೆಗೊಂಡಿರುವುದಿಲ್ಲ' ಎಂದು ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯೋಗ ವಾಣಿ

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಕೇಂದ್ರ, ಮುಂಬೈ
ದೂರವಾಣಿ: 022-22820427
ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿರಿ

ಒಪ್ಪಂದದ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ಒಪ್ಪಂದದ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ಅರ್ಹ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಜಾಹೀರಾತು ಸಂ : CRPD/SCO/2024-25/17

ಹುದ್ದೆಯ ಹೆಸರು	ಖಾಲಿ ಹುದ್ದೆ	ಸಮನಾದ ಗ್ರೇಡ್
ವೈಸ್ ಪ್ರೆಸಿಡೆಂಟ್ (ಕಾರ್ಪೊರೇಟ್ ಸಂವಹನ ಮತ್ತು ಮಾರ್ಕೆಟಿಂಗ್)	01	ಟಿಇಜಿಎಸ್-VI

ಅರ್ಹತೆಯ ಮಾನದಂಡಗಳು (ವಯಸ್ಸು, ಅನುಭವ, ಕೆಲಸದ ವಿವರಣೆ ಇತ್ಯಾದಿ), ಖಾಲಿ ಹುದ್ದೆಯ ವಿವರಗಳು, ಅವಶ್ಯಕ ಶುಲ್ಕಗಳು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಲಿಂಕ್ ನೊಂದಿಗೆ ಇತರ ವಿವರಗಳಿಗಾಗಿ ಹಾಗೂ ಅರ್ಜಿ ಶುಲ್ಕದ ಆನ್‌ಲೈನ್ ಪಾವತಿಗಾಗಿ ಬ್ಯಾಂಕ್‌ನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿರಿ https://bank.sbi/web/careers. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ಉಲ್ಲೇಖಿಸಿ. ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: "CONTACT US" —> "Post Your Query" ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (https://bank.sbi/web/careers/post-your-query).

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ : 22.10.2024 ರಿಂದ 11.11.2024**

ಸ್ಥಳ : ಮುಂಬೈ
ದಿನಾಂಕ : 22.10.2024
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಂ)

ವಕ್ಫ್: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಧರಣಿ ಮುಂದುವರಿಕೆ

ವಿಜಯಪುರಕ್ಕೆ ನಾಳೆ ಜಂಟಿ ಸಂಸದೀಯ ಸಮಿತಿ

ಪ್ರಜಾವಾಣಿ ವಾರ್ತೆ

ವಿಜಯಪುರ: ವಕ್ಫ್ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ ಜಗದಂಬಿಕಾ ಪಾಲ್ ಅಧ್ಯಕ್ಷತೆಯ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಗುರುವಾರ (ನವೆಂಬರ್ 7) ಮಧ್ಯಾಹ್ನ 12ಕ್ಕೆ ವಿಜಯಪುರಕ್ಕೆ ಭೇಟಿ ನೀಡಲಿದೆ. ಸಮಿತಿ ಸದಸ್ಯರು ವಿಜಯಪುರ ಜಿಲ್ಲಾಧಿಕಾರಿ ಜೊತೆ ಸಭೆ ನಡೆಸಿ, ತೊಂದರೆಗೆ ಒಳಗಾದವರ ಅಹವಾಲು ಸ್ವೀಕರಿಸಲಿದೆ.

ಜಿಲ್ಲಾಧಿಕಾರಿ ಕಚೇರಿ ಬಳಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನಗೌಡ ಪಾಟೀಲ ಯತ್ನಾಳ ನೇತೃತ್ವದಲ್ಲಿ ಧರಣಿ ಮುಂದುವರೆದಿದೆ. ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಧರಣಿ ಸ್ಥಳಕ್ಕೆ ಭೇಟಿ ನೀಡಿ, ಬೆಂಬಲಿಸಿದರು.

ವಕ್ಫ್ ಪರ ಬಿಜೆಪಿ ಪ್ರಣಾಳಿಕೆ: 2024ರ ಲೋಕಸಭಾ ಚುನಾವಣೆ ಪ್ರಣಾಳಿಕೆಯಲ್ಲಿ ಬಿಜೆಪಿಯು ವಕ್ಫ್ ಆಸ್ತಿ ಸಂರಕ್ಷಿಸುವುದಾಗಿ ಭರವಸೆ ನೀಡಿದ ಮತ್ತು ಸಂಸತ್ತಿನಲ್ಲಿ ಸಚಿವೆ ಶೋಭಾ ಕರಂದ್ಲಾಜೆ ವಕ್ಫ್ ಆಸ್ತಿ ರಕ್ಷಣೆ ಸಂಬಂಧ ಪ್ರಶ್ನೆ ಕೇಳಿದ ಕುರಿತು ದಾಖಲೆಗಳ ಪ್ರತಿಯನ್ನು ಮಾಜಿ ಶಾಸಕ ಪ್ರೊ.ರಾಜು ಆಲಗೂರ ಅವರು ಪ್ರದರ್ಶಿಸಿದರು.

'ರಾಜಕೀಯ ಕಾರಣಕ್ಕೆ ವಕ್ಫ್ ವಿವಾದ ಎಬ್ಬಿಸಿರುವ ಬಿಜೆಪಿ ಮುಖಂಡರು ತಮ್ಮ ಪ್ರಣಾಳಿಕೆ ಒಮ್ಮೆ ನೋಡಿ, ಸ್ವವಿಮರ್ಶೆ ಮಾಡಿಕೊಳ್ಳಬೇಕು. ದೇಶದಲ್ಲಿ ಇರುವ ವಕ್ಫ್ ಆಸ್ತಿ ಎಷ್ಟು, ಒತ್ತುವರಿ ಆಗಿದ್ದು ಎಷ್ಟು? ವಕ್ಫ್ ಆಸ್ತಿ ರಕ್ಷಣೆಗೆ ಕೇಂದ್ರ ಸರ್ಕಾರ ಮುಂದಾಗಬೇಕು, ವಕ್ಫ್ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಡಿಜಿಟಲೀಕರಣ ಮಾಡಬೇಕು ಎಂದು ಶೋಭಾ ಕರಂದ್ಲಾಜೆ ಈ ಹಿಂದೆ ಸಂಸತ್ತಿನಲ್ಲಿ ಪ್ರಶ್ನಿಸಿದ್ದಾರೆ' ಎಂದು ರಾಜು ಆಲಗೂರ ತಿಳಿಸಿದರು.

ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಬಳಿ ಅನಿರ್ದಿಷ್ಟಾವಧಿ ಧರಣಿ ನಿರತ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಬಿಜೆಪಿ ಮುಖಂಡರು ಮಂಗಳವಾರ ಹೋಳಿಗೆ, ಕರದಂಟು ಊಟ ಸವಿದರು

ಪ್ರಶ್ನೆ ಕೇಳಿದ್ದು ಸತ್ಯ: ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ಶೋಭಾ ಕರಂದ್ಲಾಜೆ, 'ಸಂಸತ್ತಿನಲ್ಲಿ ನಾನು ವಕ್ಫ್ ಆಸ್ತಿ ರಕ್ಷಣೆ ಕುರಿತು ಮಾತನಾಡಿದ್ದು ಸತ್ಯ. ಕಾಂಗ್ರೆಸ್‌ನವರು ನನ್ನ ಭಾಷಣ ಬಿಡುಗಡೆ ಮಾಡಿರುವುದನ್ನು ಸ್ವಾಗತಿಸುವೆ' ಎಂದು ಹೇಳಿದರು.

'ಅನ್ವರ್ ಮಾಣಿಪ್ಪಾಡಿ ವರದಿ ಪ್ರಕಾರ ರಾಜ್ಯದಲ್ಲಿ ಕಾಂಗ್ರೆಸ್ ಮುಖಂಡರು 29 ಸಾವಿರ ಎಕರೆ ವಕ್ಫ್ ಆಸ್ತಿ ನುಂಗಿದ್ದಾರೆ. ಅಲ್ಲಾಹು ಹೆಸರಿನಲ್ಲಿರುವ ವಕ್ಫ್ ಆಸ್ತಿಯನ್ನು ದೋಖಾ ಮಾಡಿದ್ದಾರೆ. ಅದಕ್ಕೆ ನಾನು ಸಂಸತ್ತಿನಲ್ಲಿ ಪ್ರಶ್ನೆ ಕೇಳಿದ್ದೇನೆ. ಅನ್ವರ್ ಮಾಣಿಪ್ಪಾಡಿ ವರದಿಯನ್ನು ಸಿಬಿಐಗೆ ಒಪ್ಪಿಸುವಂತೆ ನಾನು ಆರಂಭದಿಂದಲೂ ಒತ್ತಾಯಿಸಿದ್ದೇನೆ' ಎಂದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಮರುಲ್ಲಾ ಇಸ್ಲಾಂ, ರೆಹಮಾನ್ ಖಾನ್, ಸಿ.ಎಂ. ಇಬ್ರಾಹಿಂ, ಹ್ಯಾರಿಸ್ ಮುಂತಾದವರು ₹2.70 ಲಕ್ಷ ಕೋಟಿ ಮೌಲ್ಯದ ವಕ್ಫ್ ಆಸ್ತಿ ನುಂಗಿ ನೀರು ಕುಡಿದ್ದಾರೆ ಎಂದು ಅನ್ವರ್ ಮಾಣಿಪ್ಪಾಡಿ ವರದಿಯಲ್ಲಿ ಇದೆ' ಎಂದರು.

ಗರಡಿ ಮನೆ ಆಸ್ತಿಯಲ್ಲೂ ವಕ್ಫ್ ಹೆಸರು

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಶತಮಾನ ಕಂಡ ಪುರಸಭೆ ಸಮೀಪದ ಗರಡಿ ಮನೆ ಆಸ್ತಿ ದಾಖಲೆಗಳಲ್ಲೂ ವಕ್ಫ್ ಹೆಸರು ನಮೂದಾಗಿದೆ. ಶಿಥಿಲ ಸ್ಥಿತಿಯಲ್ಲಿರುವ ಈ ಗರಡಿಮನೆಯ ದುರಸ್ತಿಗೆ ಪಂಚ ಸಮಿತಿ ಮುಂದಾಗಿತ್ತು. ಗರಡಿ ಮನೆ ಆಸ್ತಿಯಲ್ಲಿ ವಕ್ಫ್ ಹೆಸರು ನಮೂದಾಗಿದ್ದು, ದುರಸ್ತಿಗೆ ಅಡ್ಡಿ ಆಗಿದೆ.

'2019ರ ಡಿಸೆಂಬರ್ 23ರಂದು ಜಿಲ್ಲಾ ವಕ್ಫ್ ಅಧಿಕಾರಿಗಳ ಪತ್ರದ ವರದಿ ಪ್ರಕಾರ, ವಕ್ಫ್ ಆಸ್ತಿ ಎಂದು ಹೆಸರು ದಾಖಲು ಮಾಡಿದ್ದು ಗೊತ್ತಾಗಿದೆ. 2019ಕ್ಕೂ ಮೊದಲು ದಾಖಲೆ ಪತ್ರದಲ್ಲಿ ಸಾರ್ವಜನಿಕ ಗರಡಿಮನೆ ಎಂದಿತ್ತು. ಮತ್ತೆ ಈ ಆಸ್ತಿಯನ್ನು ಗರಡಿಮನೆ ಎಂದು ಬದಲಾವಣೆ ಮಾಡಿಕೊಡಲು ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ' ಎಂದು ಗರಡಿ ಮನೆಯ ಮಹದೇವಪ್ಪ ಕಟ್ಟಿಮನಿ ತಿಳಿಸಿದ್ದಾರೆ.

'ದೇವಾಲಯಗಳ ಆಸ್ತಿ ರಕ್ಷಣೆಗೆ ಸರ್ಕಾರ ಮುಂದಾಗಲಿ'

ದಾವಣಗೆರೆ: 'ಧಾರ್ಮಿಕ ದತ್ತಿ ಇಲಾಖೆಯು ದೇವಾಲಯಗಳ ಆಸ್ತಿ ರಕ್ಷಣೆಗೆ ಮುಂದಾಗಬೇಕು. ದೇವರ ಹೆಸರಿನಲ್ಲಿರುವ ಆಸ್ತಿಗಳನ್ನು ನೋಂದಣಿ ಮಾಡುವ ಕೆಲಸವನ್ನು ಅಧಿಕಾರಿಗಳು ಅಗತ್ಯವಾಗಿ ಮಾಡಬೇಕು' ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಆಗ್ರಹಿಸಿದರು.

'ಅವರವರ ಆಸ್ತಿಯು ಅವರಿಗೇ ಸೇರಬೇಕು. ತಲೆ ತಲಾಂತರದಿಂದ ಒಬ್ಬರ ಹೆಸರಿನಲ್ಲಿ ಇದ್ದ ಆಸ್ತಿಯು ಇದ್ದಕ್ಕಿದ್ದಂತೆಯೇ ಬೇರೊಬ್ಬರಿಗೆ ಸೇರಿದ್ದು ಎನ್ನುವುದು ಸರಿಯಲ್ಲ. ಇಂತಹದ್ದೊಂದು ಕಾನೂನು ಯಾವಾಗ ಬಂತು? ಹೇಗೆ ಬಂತು? ಎಂಬ ಬಗ್ಗೆ ತನಿಖೆ ನಡೆಯಲಿ' ಎಂದು ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು ಸರ್ಕಾರವನ್ನು ಕೋರಿದರು.


ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ವಕ್ಫ್ ಮಂಡಳಿ ಆಸ್ತಿಯ ಕುರಿತು ರೈತರಿಗೆ ನೀಡಿರುವ ನೋಟಿಸ್ ವಾಪಸ್ ಪಡೆದರೆ ಸಾಲದು. ಬದಲಿಗೆ, ಪಹಣಿಯಲ್ಲಿ ಹೆಸರು ಬದಲಾವಣೆ ಮಾಡಬೇಕು. ರೈತರಲ್ಲಿ ಭಯ ಸೃಷ್ಟಿಸುವ ಕೆಲಸ ಆಗಬಾರದು. ಹಗಲು ದರೋಡೆ ಆಗಬಾರದು. ಎಲ್ಲರೂ ನೆಮ್ಮದಿಯಿಂದ ಬದುಕುವಂತೆ ಮಾಡುವುದು ಸರ್ಕಾರದ ಕರ್ತವ್ಯವಾಗಿದೆ. ವಕ್ಫ್ ಮಂಡಳಿ ರದ್ದು ಮಾಡುವ ಬಗ್ಗೆ ಸರ್ಕಾರ ಕೂಲಂಕಶವಾಗಿ ಪರಿಶೀಲಿಸಿ ಕ್ರಮ ವಹಿಸಲಿ' ಎಂದು ಅವರು ಆಗ್ರಹಿಸಿದರು.

ಮುಸ್ಲಿಮರಾಗಿ ಹುಟ್ಟಿದವರೇ ಅಲ್ಲಾಹುಗೆ ಮೋಸ ಮಾಡಿದ್ದಾರೆ. ಹಾಗಾದರೆ, ವಕ್ಫ್ ಆಸ್ತಿ ರಕ್ಷಿಸುವವರು ಯಾರು? ಅದಕ್ಕೆ ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲಾಗುತ್ತಿದೆ.
ಶೋಭಾ ಕರಂದ್ಲಾಜೆ
ಕೇಂದ್ರ ಸಚಿವೆ

ಜಂಟಿ ಸಂಸದೀಯ ಸಮಿತಿಯು ಜಿಲ್ಲಾಧಿಕಾರಿ, ಧರಣಿ ನಿರತ ಬಿಜೆಪಿ ಸಚಿವೆ, ಶಾಸಕರ ಜೊತೆ ಸಭೆ ಮಾಡಿದರೆ ಸಾಲದು, ಜನರ ಅಹವಾಲು ಆಲಿಸಬೇಕು.
ಎಸ್.ಎಂ.ಪಾಟೀಲ ಗಣೇಹಾರ
ಕೆಪಿಸಿಸಿ ವಕ್ತಾರ

ವಕ್ಫ್ ಆಸ್ತಿ ಮುಸ್ಲಿಂ ಬದಲು ಬೇರೆಯವರ ಪಾಲಾಗುವುದು ತಪ್ಪಿಸಲು ಅದರ ಆಸ್ತಿ ರಕ್ಷಿಸುವುದಾಗಿ ಬಿಜೆಪಿ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿತ್ತು. ಇದರಲ್ಲಿ ತಪ್ಪೇನು?
ಬಸನಗೌಡ ಪಾಟೀಲ ಯತ್ನಾಳ
ಶಾಸಕ

20ಕ್ಕೂ ಹೆಚ್ಚು ಶಾಸಕರಿಂದ ಎಐಸಿಸಿ ಅಧ್ಯಕ್ಷರಿಗೆ ಪತ್ರ

ಜಮೀರ್ ವಿರುದ್ಧ ಖರ್ಗೆಗೆ ದೂರು?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಕ್ಫ್ ಆಸ್ತಿ ವಿವಾದಕ್ಕೆ ಕಾರಣರಾಗಿರುವ ಸಚಿವ ಜಮೀರ್ ಅಹಮದ್ ಖಾನ್ ನೀಡುತ್ತಿರುವ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು' ಎಂದು ಆಗ್ರಹಿಸಿ ನೂತನವಾಗಿ ಆಯ್ಕೆಯಾದ ದಲಿತ, ಲಿಂಗಾಯತ, ಒಕ್ಕಲಿಗ ಸಮುದಾಯದ 20ಕ್ಕೂ ಹೆಚ್ಚು ಶಾಸಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೂರು ನೀಡಿದ್ದಾರೆ.

'ಜಮೀರ್ ನಡೆಯಿಂದ ಸರ್ಕಾರ ಮತ್ತು ಪಕ್ಷದ ವರ್ಚಸ್ಸಿಗೆ ಧಕ್ಕೆ ಉಂಟಾಗುತ್ತಿದೆ. ಅವರು ನೀಡುತ್ತಿರುವ ಹೇಳಿಕೆಗಳಿಗೆ ಕಡಿವಾಣ ಹಾಕದಿದ್ದರೆ ಮುಂದಿನ ದಿನಗಳಲ್ಲಿ ಪಕ್ಷ ಭಾರಿ ಬೆಲೆ ತೆರಬೇಕಾದ ಪರಿಸ್ಥಿತಿ ಬರಬಹುದು. ಹೀಗಾಗಿ, ಪಕ್ಷಕ್ಕೆ ಹಾಗೂ ಸರ್ಕಾರಕ್ಕೆ ಆಗುತ್ತಿರುವ ಮುಜುಗರ ತಪ್ಪಿಸಲು ತಕ್ಷಣ ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ಗ್ಯಾರಂಟಿ ಯೋಜನೆಗಳನ್ನು ನೀಡುವ ಜೊತೆಗೆ, ಅನೇಕ ಅಭಿವೃದ್ಧಿ ಕಾರ್ಯಗಳನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಸರ್ಕಾರ ಉತ್ತಮ ಕೆಲಸಗಳನ್ನು ಮಾಡುತ್ತಿದ್ದರೂ ಜಮೀರ್ ಅವರ ಹೇಳಿಕೆಗಳಿಂದ ಸಾರ್ವಜನಿಕ ವಲಯಗಳಲ್ಲಿ ಗೊಂದಲ ಉಂಟಾಗಿದೆ. ಜೊತೆಗೆ ನಾಗರಿಕರಿಗೆ ತಪ್ಪು ಸಂದೇಶ ರವಾನೆಯಾಗುತ್ತಿದೆ. ಎಲ್ಲವೂ ಸುಸೂತ್ರವಾಗಿ ನಡೆಯುತ್ತಿರುವಾಗ ವಕ್ಫ್ ವಿಚಾರ ಬೇಕಿರಲಿಲ್ಲ. ಒಬ್ಬರು ಸಚಿವರು ನೀಡುತ್ತಿರುವ ಹೇಳಿಕೆಗಳಿಂದ ಇಡೀ ಪಕ್ಷ ಹಾಗೂ ಸರ್ಕಾರ ಸಮಜಾಯಿಷಿ ಕೊಡುವ ಪರಿಸ್ಥಿತಿ ಎದುರಾಗಿದೆ ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವಕ್ಫ್: ವಿಚಾರಣೆ, ದಾಖಲೆ ಪರಿಶೀಲನೆ

ಧಾರವಾಡ: ತಾಲ್ಲೂಕಿನ ಉಪ್ಪಿನಬೆಟಗೇರಿಯ ಕೆಲ ರೈತರ ಜಮೀನಿನ ಪಹಣಿಯಲ್ಲಿ ವಕ್ಫ್ ಹೆಸರು ನಮೂದಾದ ಬಗ್ಗೆ ತಹಶೀಲ್ದಾರ್ ಕಚೇರಿಯಲ್ಲಿ ಮಂಗಳವಾರ ವಿಚಾರಣೆ ಮತ್ತು ದಾಖಲೆ ಪರಿಶೀಲನೆ ನಡೆಯಿತು. ತಹಶೀಲ್ದಾರ್ ಡಾ.ದೊಡ್ಡಪ್ಪ ಹೂಗಾರ ಅವರು ಪ್ರಕ್ರಿಯೆ ನಡೆಸಿದರು. ಜಿಲ್ಲಾ ವಕ್ಫ್ ಅಧಿಕಾರಿ ಮತ್ತು ರೈತರು ಹಾಜರಿದ್ದರು.

'ಉಪ್ಪಿನಬೆಟಗೇರಿಯ ಆರು ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆ ನಡೆಯಿತು. ಕೆಲ ಸರ್ವೆ ನಂಬರ್, ಬ್ಲಾಕ್ ನಂಬರ್‌ಗಳಲ್ಲಿ ವ್ಯತ್ಯಾಸ ಆಗಿದೆ. ದಾಖಲೆಗಳನ್ನು ಪರಿಶೀಲಿಸಿ, ವಾರದಲ್ಲಿ ಸಮಸ್ಯೆ ಪರಿಹರಿಸಲಾಗುವುದು' ಎಂದು ತಹಶೀಲ್ದಾರ್ ದೊಡ್ಡಪ್ಪ ಹೂಗಾರ 'ಪ್ರಜಾವಾಣಿ'ಗೆ ತಿಳಿಸಿದರು.

'ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದ್ದಾರೆ. ಸರ್ವೆ ನಂಬರ್ ವ್ಯತ್ಯಾಸ ಆಗಿದೆ. ಸಮಸ್ಯೆಯನ್ನು ಶೀಘ್ರದಲ್ಲಿ ಪರಿಹರಿಸುವುದಾಗಿ ತಿಳಿಸಿದ್ದಾರೆ' ಎಂದು ಉಪ್ಪಿನಬೆಟಗೇರಿ ಗ್ರಾಮಸ್ಥ ಗಂಗಪ್ಪ ಆರ್. ಜಾವಳಗಿ ತಿಳಿಸಿದರು.

ರೌಡಿಶೀಟರ್ ಅತಿಥಿ ಶಿಕ್ಷಕ ವಜಾ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ರಸ್ತಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ ರೌಡಿಶೀಟರ್ ಭಾಗಪ್ಪ ರಸ್ತಾಪುರ ಎಂಬಾತನನ್ನು ಮಂಗಳವಾರ ಶಾಲಾ ಕರ್ತವ್ಯದಿಂದ ವಜಾಗೊಳಿಸಲಾಗಿದೆ.

ರೌಡಿಶೀಟರ್ ಭಾಗಪ್ಪ ಅತಿಥಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲೆಯ ಮುಖ್ಯ ಶಿಕ್ಷಕರಿಗೂ ಕಾರಣ ಕೇಳಿ ನೋಟಿಸ್ ಜಾರಿಗೊಳಿಸಲಾಗಿದ್ದು, ಅವರು ನೋಟಿಸ್‌ಗೆ ಉತ್ತರ ಕೊಟ್ಟಿದ್ದಾರೆ ಎಂದು ಕ್ಷೇತ್ರ ಸಮನ್ವಯ ಅಧಿಕಾರಿ ರೇಣುಕಾ ಪಾಟೀಲ ತಿಳಿಸಿದ್ದಾರೆ.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2019ರಿಂದ ರೌಡಿಶೀಟರ್ ಅತಿಥಿ ಶಿಕ್ಷಕನಾಗಿ ಕಾರ್ಯ-ನಿರ್ವಹಿಸುತ್ತಿದ್ದ. ಜತೆಗೆ ಕಲಬುರಗಿ ಮೂಲದ ಸ್ಥಳೀಯ ಪತ್ರಿಕೆಯ ವರದಿಗಾರನಾಗಿ ಕೆಲಸ ಮಾಡುತ್ತಿದ್ದಾನೆ.

'2016ರಲ್ಲಿ ಗ್ರಾಮದಲ್ಲಿ ನಡೆದ ಸಮುದಾಯಗಳ ನಡುವಿನ ಜಗಳದಲ್ಲಿ ಭಾಗಪ್ಪನ ವಿರುದ್ಧ ಸಮುದಾಯ ರೌಡಿಶೀಟರ್ ಎಂದು ನಮ್ಮ ಠಾಣೆಯಲ್ಲಿ ದಾಖಲಾಗಿದೆ. ಇಂದಿಗೂ ಆತ ರೌಡಿಶೀಟರ್ ಪಟ್ಟಿಯಲ್ಲಿ ಇದ್ದಾನೆ' ಎಂದು ಶಹಾಪುರ ಠಾಣೆಯ ಪಿ.ಐ ಎಸ್.ಎಂ.ಪಾಟೀಲ್ ಮಾಹಿತಿ ನೀಡಿದರು.

ಶಿಕ್ಷಕರ ಕೊರತೆಯ ಕಾರಣಕ್ಕೆ ವೃತ್ತಿ ತರಬೇತಿ ಪಡೆದ ನಿರುದ್ಯೋಗಿ ಯುವಕರನ್ನು ಸ್ಥಳೀಯವಾಗಿ ಅತಿಥಿ ಶಿಕ್ಷಕರನ್ನಾಗಿ ನೇಮಿಸಿಕೊಳ್ಳಲಾಗುತ್ತಿದೆ. ಮಕ್ಕಳ ಸುರಕ್ಷತೆಯ ಹಿತದೃಷ್ಟಿಯಿಂದ ಮುಂಬರುವ ದಿನಗಳಲ್ಲಿ ಆಯಾ ಠಾಣಾ ವ್ಯಾಪ್ತಿಯ ಅತಿಥಿ ಶಿಕ್ಷಕರ ನಡತೆಯ ಬಗ್ಗೆ ಪ್ರಮಾಣ ಪತ್ರ ಹಾಗೂ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದರೆ ವರದಿ ನೀಡುವಂತೆ ಸಂಬಂಧಪಟ್ಟ ಠಾಣೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಐದು ವರ್ಷಗಳಿಂದ ಶಿಕ್ಷಕನಾಗಿ ಕೆಲಸ ಮಾಡಿದ್ದೆ. ಕೆಲವರು ದ್ವೇಷದಿಂದ ನನ್ನ ಮೇಲೆ ಇಲ್ಲ ಸಲ್ಲದ ಆರೋಪ ಮಾಡಿದ್ದಾರೆ. ವೈಯಕ್ತಿಕ ಕಾರಣದಿಂದ ಅ.29ರಿಂದ ಶಾಲೆಗೆ ಹೋಗುತ್ತಿಲ್ಲ
ಭಾಗಪ್ಪ ರಸ್ತಾಪುರ,
ವಜಾಗೊಂಡ ಅತಿಥಿ ಶಿಕ್ಷಕ

ಕಚೇರಿಯಲ್ಲೇ ಎಸ್‌ಡಿಎ ಆತ್ಮಹತ್ಯೆ

ಒಂದನೇ ಪುಟದಿಂದ...

ರುದ್ರಣ್ಣ ಸೋಮವಾರ ಸಂಜೆ 7.31ಕ್ಕೆ ವಾಟ್ಸ್‌ಆ್ಯಪ್ ಗ್ರೂಪಿನಲ್ಲಿ ಈ ಸಂದೇಶ ಹಾಕಿದ್ದರು. ಒಂದು ನಿಮಿಷದ ಬಳಿಕ ತಹಶೀಲ್ದಾರರು ರುದ್ರಣ್ಣ ಅವರ ಮೊಬೈಲ್ ಸಂಖ್ಯೆಯನ್ನು ಗ್ರೂಪಿನಿಂದ ಹೊರಹಾಕಿದ್ದರು. ಅದರೆ, ಅವರನ್ನು ಕಾಪಾಡುವ ಗೋಜಿಗೆ ಯಾರೂ ಹೋಗಲಿಲ್ಲ.

ಸೋಮು

ಅಶೋಕ

'ಮಂಗಳವಾರ ಬೆಳಿಗ್ಗೆ 7ರ ಸುಮಾರಿಗೆ ಕಚೇರಿಗೆ ಬಂದ ರುದ್ರಣ್ಣ, ತಹಶೀಲ್ದಾರ್ ಕೊಠಡಿಯ ಫ್ಯಾನ್‌ಗೆ ದುಪಟ್ಟಾದಿಂದ ನೇಣು ಹಾಕಿಕೊಂಡರು. ಬೆಳಿಗ್ಗೆ 10ರ ಬಳಿಕ ಬೇರೆ ಸಿಬ್ಬಂದಿ ಕಚೇರಿಗೆ ಬಂದಾಗಲೇ ವಿಷಯ ಗೊತ್ತಾಗಿದೆ' ಎಂದು ಡಿಸಿಪಿ ರೋಹನ್ ಜಗದೀಶ ತಿಳಿಸಿದ್ದಾರೆ.

'ರುದ್ರಣ್ಣ ಅವರ ಕೆಲಸದ ವೈಖರಿ ತೃಪ್ತಿದಾಯಕವಾಗಿಲ್ಲ. ಬೇರೆ ತಾಲ್ಲೂಕಿಗೆ ವರ್ಗಾವಣೆ ಮಾಡುವಂತೆ ತಹಶೀಲ್ದಾರರು ಜಿಲ್ಲಾಧಿಕಾರಿಗೆ ವರದಿ ನೀಡಿದ್ದರು. ಅದನ್ನು ಆಧರಿಸಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಸವದತ್ತಿ ಯಲ್ಲಮ್ಮ ಅಭಿವೃದ್ಧಿ ಮಂಡಳಿಗೆ ವರ್ಗಾವಣೆ ಮಾಡಿದ್ದರು. ನವೆಂಬರ್ 5ರಂದು ರುದ್ರಣ್ಣ ವರ್ಗಾವಣೆಯಾದ ಸ್ಥಳಕ್ಕೆ ಹಾಜರಾಗಬೇಕಿತ್ತು.

'ನನಗೆ ಇಲ್ಲಿ ಕೆಲಸ ಮಾಡಲು ಆಗುತ್ತಿಲ್ಲ. ಸಾಹೇಬರು ಬಹಳ ಕಿರುಕುಳ ನೀಡುತ್ತಾರೆ. ಸಾಕಾಗಿ ಹೋಗಿದೆ ಎಂದು ಪದೇ ಪದೇ ಗೋಳಾಡುತ್ತಿದ್ದ ರುದ್ರಣ್ಣಗೆ ನಾವು ಧೈರ್ಯ ಹೇಳುತ್ತಲೇ ಇದ್ದೆವು. ಯಾರದೋ ತಪ್ಪಿಗೆ ಆತ ಹೆಣವಾದ' ಎಂದು ರುದ್ರಣ್ಣ ತಾಯಿ ಮಲ್ಲವ್ವ, ಪತ್ನಿ ಗಿರಿಜಾ ಮತ್ತು ಸಹೋದರಿ ಸುದ್ದಿಗಾರರಿಗೆ ತಿಳಿಸಿದರು.

ರುದ್ರಣ್ಣ ಪತ್ನಿ ಗಿರಿಜಾ ಕೂಡ ಇದೇ ತಹಶೀಲ್ದಾರ್ ಕಚೇರಿಯಲ್ಲಿ ನೌಕರಿ ಮಾಡುತ್ತಿದ್ದರು. ಎರಡು ತಿಂಗಳ ಹಿಂದೆ ಅನಗೋಳ ಗ್ರಾಮ ಲೆಕ್ಕಾಧಿಕಾರಿಯಾಗಿ ಅವರನ್ನು ವರ್ಗಾವಣೆ ಮಾಡಲಾಗಿದೆ.

ಸಾವು ಬೆಳಿಗ್ಗೆ 7ರ ಸುಮಾರಿಗೆ ಸಂಭವಿಸಿದ್ದರೂ ಮಧ್ಯಾಹ್ನ 3.45ರ ವರೆಗೂ ಶವ ಹೊರತೆಗೆಯಲಿಲ್ಲ. ಪೊಲೀಸರು ಎಂಟು ಗಂಟೆಗೂ ಹೆಚ್ಚು ಸಮಯ ಮಹಜರು ನಡೆಸಿದರು. ಜಿಲ್ಲಾಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಶವ ಹಸ್ತಾಂತರಿಸಲಾ-ಯಿತು. ಖಡೇಬಜಾರ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಎಚ್ಚರಿಕೆ ವಹಿಸದ ತಹಶೀಲ್ದಾರ್

ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ರುದ್ರಣ್ಣ ಸೋಮವಾರ ಸಂಜೆ 7.31ಕ್ಕೆ ವಾಟ್ಸ್‌ಆ್ಯಪ್ ಗ್ರೂಪಿನಲ್ಲಿ ಸಂದೇಶ ಹಾಕಿದ್ದರು. ಅದನ್ನು ನೋಡಿ ತಹಶೀಲ್ದಾರ್ ಬಸವರಾಜ ನಾಗರಾಳ ಅವರನ್ನು ಗ್ರೂಪಿನಿಂದ ಹೊರಹಾಕಿದರು. ಆದರೆ, ಈ ವಿಷಯವನ್ನು ಪೊಲೀಸರಿಗೆ ಅಥವಾ ಮನೆಯವರಿಗೆ ಏಕೆ ತಿಳಿಸಲಿಲ್ಲ ಎಂಬ ಪ್ರಶ್ನೆ ಪೊಲೀಸರನ್ನು ಕಾಡುತ್ತಿದೆ. ಮಂಗಳವಾರ ಬೆಳಿಗ್ಗೆ ಕಚೇರಿಗೆ ಬಂದ ತಹಶೀಲ್ದಾರ್ ಬಸವರಾಜ ನಾಗರಾಳ, ರುದ್ರಣ್ಣನ ಶವ ನೋಡಿ ಮರಳಿ ಹೋದರು. ಸ್ಥಳದಲ್ಲಿದ್ದ ಪೊಲೀಸರೂ ಅವರನ್ನು ವಶಕ್ಕೆ ಪಡೆಯಲಿಲ್ಲ. ನಂತರ ಅವರು ಇಡೀ ದಿನ ಕಾಣಿಸಿಕೊಳ್ಳಲಿಲ್ಲ.

ಬಸವರಾಜ ನಾಗರಾಳ

ರುದ್ರಣ್ಣ ತನ್ನ ವರ್ಗಾವಣೆ ನಿಲ್ಲಿಸಿ ಎಂದು ಕೋರಿ ಸೋಮು ಎಂಬಾತನಿಗೆ ₹2 ಲಕ್ಷ ಕೊಟ್ಟಿದ್ದ. ಆ ಬಗ್ಗೆ ಮನೆಯಲ್ಲಿ ಚರ್ಚೆ ಮಾಡಿದ್ದ
ಮಲ್ಲವ್ವ, ರುದ್ರಣ್ಣ ತಾಯಿ

ಈ ಪ್ರಕರಣವನ್ನು ಅತಿ ಸೂಕ್ಷ್ಮವಾಗಿ, ಯಾವುದೇ ಒತ್ತಡವಿಲ್ಲದೇ ತನಿಖೆ ಮಾಡಲು ಪೊಲೀಸರಿಗೆ ತಿಳಿಸಿದ್ದೇನೆ.
ಮೊಹಮ್ಮದ್ ರೋಷನ್, ಜಿಲ್ಲಾಧಿಕಾರಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–30/505/2024–25 ದಿನಾಂಕ: 05.11.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಾಗನಾಯಕನಹಳ್ಳಿ ಮತ್ತು ಚನರಾಯಪಟ್ಟಣ ಗ್ರಾಮದ ಹತ್ತಿರ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ 2ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ಮಳೆ ನೀರು ಚರಂಡಿ ನಿರ್ಮಾಣ ಮಾಡುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22.11.2024 ಸಂಜೆ 4.30 ಗಂಟೆಯವರೆಗೆ

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/2928/Zen/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರ ಕಛೇರಿ, (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಐಟಂ ದರದ ಎರಡು ಹಂತದ ಪದ್ಧತಿಯಲ್ಲಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
ಸಂ. ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ&ಡಿಸಿಡಬ್ಲ್ಯೂ)/1505/2024–25		ದಿನಾಂಕ : 04.11.2024
1)	ಒಂದು ವರ್ಷ ವ್ಯಾರಂಟಿ + 5 ವರ್ಷಗಳಿಗೆ ಸಲಕರಣೆ ನಿರ್ವಹಣೆ ಒಳಗೊಂಡಂತೆ ಮಂಡಳಿಯಿಂದ ಒದಗಿಸಲ್ಪಡುವ ಬಿಎಸ್–VI ಚಾಸೀಸ್‌ನ ಸೂಕ್ತವಾದ ಜೋಡಣೆಯೊಂದಿಗೆ 6000 ಲೀಟರ್‌ಗಳ ಸಾಮರ್ಥ್ಯದ (4000 ಲೀಟರ್‌ಗಳಷ್ಟು ನೀರು ಮತ್ತು 2000 ಲೀಟರ್‌ಗಳ ಸೀವೇಜ್ ಕೊಂಡೊಯ್ಯುವ) 8 ಸಕ್ಷನ್ ಕಮ್ ಜೆಟ್ಟಿಂಗ್ ಯಂತ್ರಗಳನ್ನು ಖರೀದಿಸುವುದು.	ರೂ. 4,43,30,240/– / ರೂ. 6,65,000/–
ಸಂ. ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ&ಡಿಸಿಡಬ್ಲ್ಯೂ)/1506/2024–25		ದಿನಾಂಕ : 04.11.2024
2)	8 ಸಂಖ್ಯೆಯ ಬಿಎಸ್–VI ಚಾಸೀಸ್‌ನ ನಿವ್ವಳ ವಾಹನ ತೂಕ (ಜಿವಿಡಬ್ಲ್ಯೂ) 11 ಟನ್‌ಗಳಿಗೆ ಕಡಿಮೆ ಇರದಂತೆ 6000 ಲೀಟರ್ ಸಾಮರ್ಥ್ಯದ ಸೂಕ್ತವಾದ ಜೋಡಣೆ ಹೊಂದಿರುವ ಕಾಂಬಿನೇಷನ್ ಯಂತ್ರಗಳ (ಸಕ್ಷನ್ ಕಮ್ ಜೆಟ್ಟಿಂಗ್) (4000 ಲೀಟರ್‌ಗಳಷ್ಟು ನೀರು ಮತ್ತು 2000 ಲೀಟರ್‌ಗಳ ಸೀವೇಜ್ ಕೊಂಡೊಯ್ಯುವ) ಖರೀದಿ ಕಾಮಗಾರಿ.	ರೂ. 1,71,84,000/– / ರೂ. 2,58,000/–

ಮೇಲ್ಕಂಡ ಕಾಮಗಾರಿಗಳಿಗೆ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 16.11.2024 ರಂದು ಸಂಜೆ 4.00 ಗಂಟೆಯ ಒಳಗೆ, ಟೆಂಡರ್‌ಗಳನ್ನು ತೆರೆಯುವ ದಿನಾಂಕ : 19.11.2024 ರ ಮಧ್ಯಾಹ್ನ 12.00 ಗಂಟೆಗೆ.

ಸಹಿ/– ಮುಖ್ಯ ಅಭಿಯಂತರರು (ಯೋಜನೆ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/2914/Zen/2024-25

ಕಾನೂನು ರೂಪಿಸಲು ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ಮನವಿ

'ರಾಜ್ಯ ಕಾನೂನಿಗೂ ಐಟಿ ವಿನಾಯಿತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದ ಶಾಸನಗಳ ಅಡಿಯಲ್ಲಿ ಭೂ ಸ್ವಾಧೀನ ಪಡಿಸಿಕೊಂಡ ಪರಿಹಾರ ಧನಕ್ಕೆ ಹೇಗೆ ಆದಾಯ ತೆರಿಗೆ ಪಾವತಿ ವಿನಾಯಿತಿ ನೀಡಲಾಗಿದೆಯೋ ಅದೇ ರೀತಿಯಲ್ಲಿ ಪ್ರಾದೇಶಿಕ ಶಾಸನಗಳ ಅಡಿಯಲ್ಲಿ ಭೂ ಸ್ವಾಧೀನಪಡಿಸಿ-ಕೊಂಡಾಗ ನೀಡಲಾಗುವ ಪರಿಹಾರ ಧನಕ್ಕೂ ಆದಾಯ ತೆರಿಗೆ ವಿನಾಯಿತಿ ನೀಡುವಂತಹ ಕಾನೂನು ರೂಪಿಸುವತ್ತ ಚಿತ್ತ ಹರಿಸಿ' ಎಂದು ಹೈಕೋರ್ಟ್, ಕೇಂದ್ರ ಸರ್ಕಾರಕ್ಕೆ ಮನವಿ ನೀಡಿದೆ.

ಈ ಸಂಬಂಧ ಏಕಸದಸ್ಯ ನ್ಯಾಯಪೀಠ ಭೂಮಿ ಕಳೆದುಕೊಂಡವರ ಪರವಾಗಿ ನೀಡಿದ್ದ ತೀರ್ಪು ಪ್ರಶ್ನಿಸಿ ಆದಾಯ ತೆರಿಗೆ ಆಯುಕ್ತರು (ಟಿಡಿಎಸ್) ಸಲ್ಲಿಸಿದ ಮೇಲ್ಮನವಿಯನ್ನು ಪುರಸ್ಕರಿ-ಸಿರುವ ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠವು ಈ ಕುರಿತಂತೆ ತನ್ನ ಆದೇಶದಲ್ಲಿ ವಿವರಿಸಿದೆ.

'ಭೂಸ್ವಾಧೀನ, ಪುನರ್ವಸತಿ ಮತ್ತು ಪುನರ್ ಸ್ಥಾಪನೆ ಕಾಯ್ದೆ-2013ರಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಕಲಂ 96ರ ಅಡಿಯಲ್ಲಿ ಪರಿಹಾರ ಪಾವತಿಸಲು ತೆರಿಗೆ ವಿನಾಯಿತಿ ನೀಡಲಾಗುತ್ತದೆ. ಆದರೆ, ಇದಕ್ಕೂ ಮುನ್ನವೇ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಕಾಯ್ದೆ–1966, ಕರ್ನಾಟಕ ಹೆದ್ದಾರಿಗಳ ಕಾಯ್ದೆ–1964, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ- 1987... ಇತ್ಯಾದಿ ನೂರಾರು ಕಾನೂನುಗಳು ಪ್ರಾದೇಶಿಕ ಮಟ್ಟದಲ್ಲಿ ಜಾರಿಗೆ ಬಂದಿವೆ. ಹೀಗಾಗಿ, ಈ ಕಾಯ್ದೆಗಳ ಅಡಿಯಲ್ಲಿ ಪರಿಹಾರ ಪಡೆಯುವ ರೈತರಿಗೂ ತೆರಿಗೆ ವಿನಾಯಿತಿ ನೀಡಬೇಕಾಗುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಕೇಂದ್ರದ ಶಾಸನಗಳ ಅಡಿಯಲ್ಲಿ ಸ್ವಾಧೀನಪಡಿಸಿಕೊಂಡ ಜಮೀನುಗಳ ಪರಿಹಾರ ವಿತರಣೆಯಲ್ಲಿ ತೆರಿಗೆ ವಿನಾಯಿತಿ, ನಿರಾಶ್ರಿತರಿಗೆ ಪುನರ್ವಸತಿ ಸೇರಿದಂತೆ ಹಲವು ಪ್ರಯೋಜನಗಳಿವೆ' ಎಂಬುದನ್ನು ನ್ಯಾಯಪೀಠ ಉಲ್ಲೇಖಿಸಿದೆ.

ಹೈಕೋರ್ಟ್ ಮೊರೆ ಹೋದ ಕನ್ನಡಿಗರು

ಬದಿಯಡ್ಕ (ಕಾಸರಗೋಡು): ದೇಲಂಪಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಡೂರು ಗ್ರಾಮದ ಕೋರಿಕಂಡ ಅಂಗನವಾಡಿಯಲ್ಲಿ ಶೇ 90ರಷ್ಟು ಕನ್ನಡ, ತುಳು ಹಾಗೂ ಮರಾಠಿ ಮಾತೃಭಾಷೆಯ ಮಕ್ಕಳಿದ್ದು, ಅಲ್ಲಿಗೆ ಕೇವಲ ಮಲಯಾಳ ಭಾಷೆ ತಿಳಿದಿರುವ ಶಿಕ್ಷಕಿಯನ್ನು ನೇಮಕ ಮಾಡಲಾಗಿದೆ.

ಪ್ರಾಥಮಿಕ ಹಂತದಲ್ಲೇ ಕನ್ನಡ ಮಕ್ಕಳ ಮೇಲೆ ಮಲಯಾಳ ಹೇರುವ ಮತ್ತು ಮಾತೃಭಾಷಾ ಶಿಕ್ಷಣದ ಅವಕಾಶವನ್ನು ಕಸಿಯುವ ಪ್ರಯತ್ನ ಇದು ಎಂದು ಕನ್ನಡಿಗರು ಆರೋಪಿಸಿದ್ದಾರೆ.

ಅಂಗನವಾಡಿಯ ಕಾಯಂ ಶಿಕ್ಷಕಿ ಅನಾರೋಗ್ಯ ನಿಮಿತ್ತ ರಜೆಯಲ್ಲಿರುವು-ದರಿಂದ 3 ವರ್ಷಗಳಿಂದ 6 ತಿಂಗಳ ಅವಧಿಗೆ ತಾತ್ಕಾಲಿಕ ಶಿಕ್ಷಕಿಯನ್ನು ನೇಮಿ-ಸಲಾಗುತ್ತಿತ್ತು. ಈಗ ನೇಮಕಗೊಂಡ ಶಿಕ್ಷಕಿಗೆ ಮಲಯಾಳ ಮಾತ್ರ ತಿಳಿದಿದೆ. ಈ ಅಂಗನವಾಡಿಯಲ್ಲಿ 16 ಮಕ್ಕಳಿದ್ದು, ಈ ಪೈಕಿ 14 ಮಕ್ಕಳು ಕನ್ನಡ, ತುಳು ಹಾಗೂ ಮರಾಠಿ ಮಾತೃಭಾಷೆಯವರು. ಎರಡೂ ಭಾಷೆ ತಿಳಿದ ಶಿಕ್ಷಕಿಯನ್ನು ನೇಮಿಸಬೇಕೆಂದು ಒತ್ತಾಯಿಸಿದರೂ ಪ್ರಯೋಜನವಾಗಲಿಲ್ಲ. ಮಲಯಾಳ ಶಿಕ್ಷಕಿಯ ಪಾಠ ಈ ಅಂಗನವಾಡಿಯ ಮಕ್ಕಳಿಗೆ ಅರ್ಥವಾಗುತ್ತಿಲ್ಲ. ಇದೀಗ ಮಕ್ಕಳ ಪೋಷಕರು ಮಲಯಾಳ ಶಿಕ್ಷಕಿಯನ್ನು ಬದಲಾಯಿಸಿ, ಎರಡೂ ಭಾಷೆ ತಿಳಿದ ಶಿಕ್ಷಕಿಯನ್ನು ನೇಮಿಸಬೇಕು ಎಂದು ಹೈಕೋರ್ಟ್ ಮೊರೆ ಹೋಗಿದ್ದಾರೆ.

ಸುದ್ದಿ 2 ನಿಮಿಷ

ಶನಿವಾರ, ಭಾನುವಾರ ಮುಳ್ಳಯ್ಯನಗಿರಿ ಪ್ರವಾಸ ನಿರ್ಬಂಧ

ಚಿಕ್ಕಮಗಳೂರು:ಶ್ರೀರಾಮ ಸೇನೆಯಿಂದ ದತ್ತಮಾಲಾ ಅಭಿಯಾನ ನಡೆಯುತ್ತಿದ್ದು, ನ.9ರ ಬೆಳಿಗ್ಗೆ 6 ರಿಂದ ನ.11ರ ಬೆಳಿಗ್ಗೆ 6 ಗಂಟೆ ತನಕ ಮುಳ್ಳಯ್ಯನಗಿರಿ ಮತ್ತು ಬಾಬಾಬುಡನ್‌ಗಿರಿಗೆ ಇತರೆ ಪ್ರವಾಸಿಗರ ಭೇಟಿಯನ್ನು ನಿರ್ಬಂಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮೀನಾ ನಾಗರಾಜ್ ತಿಳಿಸಿದ್ದಾರೆ.

ನ.10 ರಂದು ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಬರಲಿದ್ದಾರೆ. ವಾಹನಗಳ ಮೂಲಕ ತೆರಳಿ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಗೆ ಭೇಟಿ ನೀಡಲಿದ್ದಾರೆ. ರಸ್ತೆ ಕಿರಿದಾಗಿದ್ದು, ವಾಹನ ದಟ್ಟಣೆ ಹಾಗೂ ಹೆಚ್ಚಿನ ಜನಸಂದಣಿ ಉಂಟಾಗುವ ಸಾಧ್ಯತೆ ಇರುವುದರಿಂದ ಬೇರೆ ಪ್ರವಾಸಿಗರ ಭೇಟಿಯನ್ನು ನಿರ್ಬಂಧಿಸಲಾಗಿದೆ.

ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ, ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ, ಗಾಳಿಕೆರೆ ಮತ್ತು ಮಾಣಿಕ್ಯಧಾರಾ ತಾಣಗಳಿಗೆ ಪ್ರವೇಶ ಇರುವುದಿಲ್ಲ. ದತ್ತ ಮಾಲಾಧಾರಿಗಳು, ಶ್ರೀರಾಮ ಸೇನೆ ಮುಖಂಡರು, ಕಾರ್ಯಕರ್ತರು, ಸುತ್ತಮುತ್ತಲ ಸ್ಥಳೀಯರು, ಈಗಾಗಲೇ ಹೋಮ್ ಸ್ಟೇ ಮತ್ತು ರೆಸಾರ್ಟ್‌ಗಳಿಗೆ ಬುಕ್ಕಿಂಗ್ ಮಾಡಿದ್ದವರ ಪ್ರವೇಶಕ್ಕೆ ಅವಕಾಶ ಇದೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮುಡಾ ಆಯುಕ್ತರ ನಿವಾಸದ ಡಿವಿಆರ್ ನಾಪತ್ತೆ: ದೂರು

ಮೈಸೂರು: ಇಲ್ಲಿನ ಕುವೆಂಪುನಗರದಲ್ಲಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಆಯುಕ್ತರ ಅಧಿಕೃತ ನಿವಾಸದಲ್ಲಿದ್ದ ಡಿವಿಆರ್ ಹಾಗೂ 2 ಸಿಸಿಟಿವಿ ಕ್ಯಾಮೆರಾಗಳು ನಾಪತ್ತೆಯಾದ ತಿಂಗಳುಗಳ ಬಳಿಕ, ಅಧಿಕಾರಿಗಳು ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮುಡಾದ ಹಿಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಇದೇ ನಿವಾಸದಲ್ಲಿ ವಾಸವಿದ್ದರು. ಜುಲೈನಲ್ಲಿ ಅವರ ವರ್ಗಾವಣೆಯಾಗಿದ್ದು, ನಂತರ ಈ ಮನೆಯನ್ನು ನವೀಕರಣ ಮಾಡಲಾಗುತ್ತಿದೆ. ಇದೇ ಸೆಪ್ಟೆಂಬರ್‌ನಲ್ಲಿ ಕಾಮಗಾರಿ ಆರಂಭದ ಸಂದರ್ಭದಲ್ಲೇ ಇಲ್ಲಿನ ಡಿವಿಆರ್ ಹಾಗೂ ಸಿಸಿಟಿವಿ ಕ್ಯಾಮೆರಾಗಳು ನಾಪತ್ತೆಯಾಗಿರುವ ಕುರಿತು ಸುದ್ದಿಯಾಗಿತ್ತು. ಅಧಿಕಾರಿಗಳು ಈಗ ದೂರು ದಾಖಲಿಸಿದ್ದಾರೆ.

ಇ.ಡಿ. ಹಾಗೂ ಲೋಕಾಯುಕ್ತ ವಿಚಾರಣೆ ನಂತರ ಅಧಿಕಾರಿಗಳು ಎಚ್ಚೆತ್ತಿದ್ದು, ತಡವಾಗಿ ದೂರು ನೀಡಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಈ ಕುರಿತು ಮುಡಾದ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿ, 'ಆಯುಕ್ತರ ನಿವಾಸದಲ್ಲಿ ಕೆಲವು ವಸ್ತುಗಳು ನಾಪತ್ತೆಯಾದ ಕುರಿತು ಆಂತರಿಕ ತನಿಖೆ ನಡೆಸಲಾಗಿತ್ತು. ಆ ವರದಿ ಬರುವುದು ತಡವಾಯಿತು. ವರದಿ ಆಧರಿಸಿ ಈಗ ದೂರು ನೀಡಿದ್ದೇವೆ' ಎಂದು ತಿಳಿಸಿದರು.

ಕೇಂದ್ರದ ವಿರುದ್ಧ ದೆಹಲಿಯಲ್ಲಿ ಪ್ರತಿಭಟನಾ ಸಭೆ ನಾಳೆ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದ ಜಿಎಸ್‌ಟಿ ಪಾಲು ನೀಡದೆ ವಂಚಿಸಿರುವ ಹಾಗೂ ಜಾರಿ ನಿರ್ದೇಶನಾಲಯದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ ನಡೆಸಿರುವ ಕೇಂದ್ರ ಸರ್ಕಾರದ ನಡೆಯನ್ನು ಖಂಡಿಸಿ ಅಹಿಂದ ಸಂಘಟನೆಗಳು ನ.7ರಂದು ನವದೆಹಲಿಯಲ್ಲಿ ಪ್ರತಿಭಟನ ಸಭೆ ನಡೆಸಲಿವೆ' ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಂ ತಿಳಿಸಿದರು.

ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಅಲ್ಲಿನ ಮೋತಿಬಾಗ್‌ನ ದೆಹಲಿ ಕರ್ನಾಟಕ ಸಂಘದಲ್ಲಿ ಬೆಳಿಗ್ಗೆ 11ಕ್ಕೆ ಸಭೆ ಆಯೋಜಿಸಲಾಗಿದ್ದು, ಪ್ರೊ.ಬಂಜಗೆರೆ ಜಯಪ್ರಕಾಶ, ಪ್ರೊ.ಎಸ್.ಜಿ. ಸಿದ್ದರಾಮಯ್ಯ, ಪ್ರೊ. ಕಾಳೇಗೌಡ ನಾಗವಾರ, ಎಲ್. ಹನುಮಂತಯ್ಯ, ಕೋಟೆ ಎಂ.ಶಿವಣ್ಣ, ಲೀಲಾ ಸಂಪಿಗೆ ಸೇರಿದಂತೆ ಲೇಖಕರು, ಮುಖಂಡರು, ಹೋರಾಟಗಾರರು ಪಾಲ್ಗೊಳ್ಳುತ್ತಿದ್ದಾರೆ' ಎಂದರು.

'ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ಒಕ್ಕೂಟ ವ್ಯವಸ್ಥೆ ಮೇಲೆ ಪ್ರಹಾರ ನಡೆಸುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ವಿರುದ್ಧವಿರುವ ಆ ಸರ್ಕಾರಕ್ಕೆ ಎಚ್ಚರಿಕೆ ನೀಡಲು 200 ಮಂದಿ ಪಾಲ್ಗೊಳ್ಳುತ್ತಿದ್ದೇವೆ. ರಾಜಸ್ಥಾನ, ತೆಲಂಗಾಣ, ಬಿಹಾರ, ಆಂಧ್ರದಿಂದಲೂ ಮುಖಂಡರು ಬರಲಿದ್ದಾರೆ. ಮನವಿ ಸಲ್ಲಿಸಲು ರಾಷ್ಟ್ರಪತಿ ಅವರ ಸಮಯ ಕೋರಲಾಗಿದೆ' ಎಂದರು.

ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಮಡಿವಾಳರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರವಿನಂಧನ್, ಮುಖಂಡರಾದ ಲೋಕೇಶ್‌ಕುಮಾರ್, ಮೊಗಣ್ಣಾಚಾರ್, ಕೋಟೆ ಶಿವಣ್ಣ ಹಾಜರಿದ್ದರು.

ಪಂಡಿತಾರಾಧ್ಯ ಶ್ರೀಗಳಿಗೆ 'ರೊನಾಲ್ಡ್ ಕೊಲಾಸೊ ಸಾಮರಸ್ಯ' ಪ್ರಶಸ್ತಿ

ಹೊಸದುರ್ಗ (ಚಿತ್ರದುರ್ಗ): ತಾಲ್ಲೂಕಿನ ಸಾಣೇಹಳ್ಳಿಯ ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರನ್ನು ಮಂಗಳೂರಿನ 'ಡಾ.ರೊನಾಲ್ಡ್ ಕೊಲಾಸೊ ಸಾಮರಸ್ಯ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹1 ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ನ.10ರಂದು ಸಂಜೆ 4 ಗಂಟೆಗೆ ಮಂಗಳೂರಿನ ನೀರುಮಾರ್ಗದ ಕೊಲರ್ಸ ಚರ್ಚ್‌ನಲ್ಲಿ ನಡೆಯಲಿದೆ.

ಕ್ರೈಸ್ತ ಸಮುದಾಯದ ಮುಖಂಡರಾದ ರೊನಾಲ್ಡ್ ಕೊಲಾಸೊ ಅವರು ಅನೇಕ ಚರ್ಚ್, ದೇವಾಲಯಗಳನ್ನು ಕಟ್ಟಿಸಿ ಕೊಟ್ಟಿದ್ದು, ಅವರ ಹೆಸರಿನ ಪ್ರಶಸ್ತಿಯನ್ನು ಆಮಿ ಆನಿ ಆಮ್ಚಿಂ (ನಾವು ಮತ್ತು ನಮ್ಮವರು) ಸಂಸ್ಥೆಯು ಈ ವರ್ಷದಿಂದ ಆರಂಭಿಸಿದೆ ಎಂದು ಆಮಿ ಆನಿ ಆಮ್ಚಿಂ ಸಂಸ್ಥೆಯ ಅಧ್ಯಕ್ಷ ಡೆನಿಸ್ ಡಿಸಿಲ್ವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ನಿಧನ ವಾರ್ತೆ

ಟಿ.ಸುಬ್ಬರಾಮಯ್ಯ

ಶಿವಮೊಗ್ಗ: ಇಲ್ಲಿನ ಸುಬ್ಬಯ್ಯ ಆಸ್ಪತ್ರೆ ಮತ್ತು ಸಮೂಹ ಸಂಸ್ಥೆಗಳ ಅಧ್ಯಕ್ಷ ಟಿ.ಸುಬ್ಬರಾಮಯ್ಯ (88) ವಯೋಸಹಜ ಅನಾರೋಗ್ಯದಿಂದ ಮಂಗಳವಾರ ಬೆಳಗಿನ ಜಾವ ನಿಧನರಾದರು.

ಅವರಿಗೆ ಪುತ್ರ, ವೈದ್ಯ ಡಾ.ನಾಗೇಂದ್ರ ಇದ್ದಾರೆ.

ಬೆಳಿಗ್ಗೆ ರವೀಂದ್ರ ನಗರದ ಸ್ವಗೃಹದಲ್ಲಿ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನ ಇಲ್ಲಿನ ವಿದ್ಯಾನಗರದ ರೋಟರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು.

ಮೂಲತಃ ಕೃಷಿಕ, ಗುತ್ತಿಗೆದಾರ ಆಗಿದ್ದ ಸುಬ್ಬರಾಮಯ್ಯ, ಶಿವಮೊಗ್ಗದ ಗುರುಪುರದಲ್ಲಿ 2003ರಲ್ಲಿ ತಡಿಕೇಲ ಸುಬ್ಬಯ್ಯ ಟ್ರಸ್ಟ್ ಅಡಿ ಸುಬ್ಬಯ್ಯ ಆಸ್ಪತ್ರೆ ನಂತರ ಮೆಡಿಕಲ್, ಡೆಂಟಲ್ ಕಾಲೇಜು ಆರಂಭಿಸಿದ್ದರು. ಮುಂದೆ ಶಿವಮೊಗ್ಗ ನಗರದಲ್ಲಿ ಮ್ಯಾಕ್ಸ್ ಮತ್ತು ಭರತ್ ಹೆಸರಿನ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳನ್ನು ಆರಂಭಿಸಿದ್ದರು.

ಕೆನಡಾ ವಿರುದ್ಧ ವಿದೇಶಾಂಗ ಸಚಿವ ಜೈಶಂಕರ್ ವಾಗ್ದಾಳಿ

ತೀವ್ರಗಾಮಿಗಳಿಗೆ ರಾಜಕೀಯ ನೆಲೆ

ಕ್ಯಾನ್‌ಬೆರಾ/ಮೆಲ್ಬರ್ನ್/ಒಟ್ಟಾವ (ಪಿಟಿಐ/ಎಪಿ/ರಾಯಿಟರ್ಸ್): 'ಬ್ರಾಂಪ್ಟನ್‌ನ ಹಿಂದೂ ಸಭಾ ದೇವಾಲಯದಲ್ಲಿ ನಡೆದ ಘಟನೆಯು ತೀವ್ರ ಕಳವಳಕಾರಿಯಾದುದು. 'ತೀವ್ರಗಾಮಿ ಶಕ್ತಿಗಳಿಗೆ' ಕೆನಡಾವು ನೀಡಿದ 'ರಾಜಕೀಯ ಪ್ರಾಧಾನ್ಯ'ವನ್ನು ಇದು ತೋರಿಸುತ್ತದೆ' ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅಭಿಪ್ರಾಯಪಟ್ಟರು.

ಆಸ್ಟ್ರೇಲಿಯಾ ಪ್ರವಾಸದಲ್ಲಿ ಇರುವ ಜೈಶಂಕರ್, ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಅವರೊಂದಿಗೆ ಮಂಗಳವಾರ ಮಾತುಕತೆ ನಡೆಸಿದರು. ಬಳಿಕ ನಡೆದ ಮಾಧ್ಯಮಗೋಷ್ಠಿಯಲ್ಲಿ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಜೈಶಂಕರ್ ಉತ್ತರಿಸಿದರು.

'ಮೂರು ಅಂಶಗಳನ್ನು ಹೇಳ ಬಯಸುತ್ತೇನೆ. ಒಂದು; ಸೂಕ್ತ ದಾಖಲೆಗಳನ್ನು ಒದಗಿಸದೇ ಬೇರೆಯವರ ಮೇಲೆ ಆರೋಪ ಮಾಡುವ ಮಾದರಿಯೊಂದನ್ನು ಕೆನಡಾ ಕಂಡುಕೊಂಡಿದೆ. ಎರಡು; ಅದು ನಮ್ಮ ರಾಜತಾಂತ್ರಿಕ ಅಧಿಕಾರಿಗಳ ಮೇಲೆ ಕಣ್ಗಾವಲು ಇರಿಸಿದ್ದು, ಈ ಕ್ರಮವನ್ನಂತೂ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ' ಎಂದರು.

'ಮೂರು; ಹಿಂದೂ ಸಭಾ ದೇವಾಲಯದಲ್ಲಿ ನಡೆದ ಘಟನೆಯನ್ನೇ ತೆಗೆದುಕೊಳ್ಳಿ, ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊಗಳನ್ನು ನೋಡಿ. ತೀವ್ರಗಾಮಿ ಶಕ್ತಿಗಳಿಗೆ ಕೆನಡಾ ನೀಡಿದ ರಾಜಕೀಯ ಪ್ರಾಧಾನ್ಯವನ್ನು ಆ ವಿಡಿಯೊಗಳೇ ಹೇಳುತ್ತವೆ' ಎಂದರು.

'ಘಟನೆಯನ್ನು ಖಂಡಿಸಿ ಭಾರತದ ಅಧಿಕೃತ ವಕ್ತಾರರು ನೀಡಿದ ಹೇಳಿಕೆಯನ್ನು ನೀವು ನೋಡಿರಬಹುದು. ಜೊತೆಗೆ ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ ಹೇಳಿಕೆಯನ್ನೂ ನೋಡಿರಬಹುದು. ನಮ್ಮ ಕಳವಳವನ್ನು ಈ ಹೇಳಿಕೆಗಳೇ ತಿಳಿಸುತ್ತವೆ' ಎಂದರು.

ಖಾಲಿಸ್ತಾನ ಧ್ವಜ ಹಾಗೂ ಖಾಲಿಸ್ತಾನ ಪರವಾದ ಬ್ಯಾನರ್‌ಗಳನ್ನು ಹಿಡಿದಿದ್ದ ಪ್ರತಿಭಟನಕಾರರು ಹಿಂದೂ ಸಭಾ ದೇವಾಲಯದಲ್ಲಿ ಜನರೊಂದಿಗೆ ಘರ್ಷಣೆ ನಡೆಸಿದ ಘಟನೆ ಭಾನುವಾರ ನಡೆದಿತ್ತು. ಕೆನಡಾದಲ್ಲಿನ ಭಾರತದ ದೂತಾವಾಸದ ಅಧಿಕಾರಿಗಳು ಹಾಗೂ ಹಿಂದೂ ಸಭಾ ದೇವಾಲಯ ಆಯೋಜಿಸಿದ್ದ ಕಾರ್ಯಕ್ರಮಗಳಿಗೂ ಪ್ರತಿಭಟನಕಾರರು ಅಡ್ಡಿಪಡಿಸಿದ್ದರು.

'ಕೆನಡಾ ನ್ಯಾಯದಾನ ವ್ಯವಸ್ಥೆ ಮೇಲೆ ನಂಬಿಕೆ ಇದೆ'

ಕ್ಯಾನ್‌ಬೆರಾದಲ್ಲಿ ವಿದೇಶಾಂಗ ಸಚಿವ ಜೈಶಂಕರ್ ಹಾಗೂ ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಾ ವಾಂಗ್ ಅವರು ಮಂಗಳವಾರ ಜಂಟಿ ಪತ್ರಿಕಾಗೋಷ್ಠಿ ನಡೆಸಿದರು ಪಿಟಿಐ ಚಿತ್ರ

'ಸಿಖ್ ಚಳವಳಿಕಾರರನ್ನು ಭಾರತವು ಗುರಿಯಾಗಿಸುತ್ತಿದೆ ಎಂಬ ಕೆನಡಾದ ಆರೋಪದ ಕುರಿತು ನಾನು ಭಾರತದ ವಿದೇಶಾಂಗ ಸಚಿವ ಜೈಶಂಕರ್ ಅವರೊಂದಿಗೆ ನಡೆಸಿದ ಸಭೆಯಲ್ಲಿ ಪ್ರಸ್ತಾಪಿಸಿದೆ' ಎಂದು ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಹೇಳಿದರು.

ಸಭೆಯ ಬಳಿಕ ಜೈಶಂಕರ್ ಅವರೊಂದಿಗೆ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೆನಡಾದ ಆರೋಪಗಳ ಕುರಿತು ನಾವು ನಮ್ಮ ಕಳವಳವನ್ನು ದಾಖಲಿಸಿದ್ದೇವೆ. ಈ ಆರೋಪಗಳ ಕುರಿತು ತನಿಖೆಯೂ ಆಗುತ್ತಿದೆ. ಕೆನಡಾದ ನ್ಯಾಯದಾನ ವ್ಯವಸ್ಥೆಯ ಮೇಲೆ ನಮಗೆ ನಂಬಿಕೆ ಇದೆ' ಎಂದರು.

'ಈ ವಿಷಯದಲ್ಲಿ ನಮ್ಮ ನಿಲುವನ್ನು ನಾವು ಭಾರತಕ್ಕೆ ತಿಳಿಸಿದ್ದೇವೆ. ಕಾನೂನು ಪ್ರಕ್ರಿಯೆ, ನ್ಯಾಯಾಂಗದ ಸ್ವಾತಂತ್ರ್ಯ ಹಾಗೂ ದೇಶಗಳ ಸಾರ್ವಭೌಮತ್ವದ ಕುರಿತು ನಮಗೆ ನಮ್ಮದೇ ಆದ ಅಭಿಪ್ರಾಯಗಳಿವೆ' ಎಂದರು.

ಗುಪ್ತಚರ ಮಾಹಿತಿಗಳನ್ನು ಹಂಚಿಕೊಳ್ಳುವಂಥ ಗುಂಪೊಂದನ್ನು ರಚಿಸಿಕೊಳ್ಳಲಾಗಿದೆ. ಈ ಗುಂಪಿನಲ್ಲಿ ಕೆನಡಾ, ಅಮೆರಿಕ, ಬ್ರಿಟನ್, ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್ ಇವೆ.

ಪೊಲೀಸ್ ಅಧಿಕಾರಿ ಅಮಾನತು

ಬ್ರಾಂಪ್ಟನ್‌ನ ಹಿಂದೂ ಸಭಾ ದೇವಾಲಯದ ಎದುರು ಖಾಲಿಸ್ತಾನಿ ಪರ ಪ್ರತಿಭಟನೆ ನಡೆಸಿದ ಕೆನಡಾದ ಪೊಲೀಸ್ ಅಧಿಕಾರಿಯೊಬ್ಬರನ್ನು 'ಸಮುದಾಯ ಸುರಕ್ಷತೆ ಮತ್ತು ಪೊಲೀಸ್ ಕಾಯ್ದೆ' ಅಡಿ ಅಮಾನತು ಮಾಡಲಾಗಿದೆ. ಪ್ರತಿಭಟನೆಯ ವಿಡಿಯೊಗಳೂ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.

'ಇಂಥ ವಿಡಿಯೊವೊಂದರಲ್ಲಿ ಕೆನಡಾ ಪೊಲೀಸ್ ಅಧಿಕಾರಿ ಹರಿಂದರ್ ಸೋನಿ ಎಂಬುವರು ಇರುವುದು ಪತ್ತೆಯಾಗಿತ್ತು. ಈಗ ಇವರನ್ನು ಅಮಾನತು ಮಾಡಲಾಗಿದೆ' ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ಜಾಲತಾಣಗಳಲ್ಲಿ ವಿಡಿಯೊ ಹರಿದಾಡುತ್ತಿರುವ ಕುರಿತು ನಮಗೆ ಅರಿವಿದೆ. ರಜಾದಲ್ಲಿ ಇದ್ದ ಪೊಲೀಸ್ ಅಧಿಕಾರಿಯೊಬ್ಬರು ಪ್ರತಿಭಟನೆಯಲ್ಲಿ ತೊಡಗಿರುವುದು ಕಂಡುಬಂದಿದೆ' ಎಂದು ಕೆನಡಾದ 'ದಿ ಪೀಲ್ ಪೊಲೀಸ್'ನ ಮಾಧ್ಯಮ ಸಂಪರ್ಕ ಅಧಿಕಾರಿ ರಿಚರ್ಡ್ ಚಿನ್ 'ಸಿಬಿಸಿ ನ್ಯೂಸ್' ಮಾಧ್ಯಮಕ್ಕೆ ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಪ್ರತಿಭಟನೆಗಳು ಭಾನುವಾರ ಮೂರು ಕಡೆಗಳಲ್ಲಿ ನಡೆದಿದ್ದರೂ ಒಂದಕ್ಕೊಂದು ಸಂಬಂಧ ಇರುವಂತೆ ತೋರುತ್ತಿದೆ. ಹಲವೆಡೆ ಪ್ರತಿಭಟನಕಾರರು ಹಾಗೂ ಹಿಂದೂ ಭಕ್ತರ ನಡುವೆ ಘರ್ಷಣೆಗಳು ನಡೆದಿರುವುದು ಗೊತ್ತಾಗಿದೆ' ಎಂದು ಹೇಳಿದ್ದಾರೆ.

ಸುಧಾ, ಮಯೂರ ಓದಿರಿ...

ತಿರುಪತಿ ಲಾಡು ಕಲಬೆರಕೆ: ಎಸ್‌ಐಟಿ ರಚಿಸಿದ ಸಿಬಿಐ

ಅಮರಾವತಿ (ಪಿಟಿಐ): ತಿರುಪತಿ ಲಾಡು ತಯಾರಿಕೆಯಲ್ಲಿ ಪ್ರಾಣಿಗಳ ಕೊಬ್ಬು ಬಳಸಲಾಗಿದೆ ಎಂಬ ಆರೋಪದ ಕುರಿತ ತನಿಖೆಗೆ ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಸಿಬಿಐ ಸ್ವತಂತ್ರ ಎಸ್‌ಐಟಿ ರಚಿಸಿದೆ.

ಕೇಂದ್ರೀಯ ಸಂಸ್ಥೆಯ ಇಬ್ಬರು, ಆಂಧ್ರ ಪ್ರದೇಶ ಪೊಲೀಸ್ ಇಲಾಖೆಯ ಇಬ್ಬರು ಮತ್ತು ಎಫ್‌ಎಸ್‌ಎಸ್‌ಎಐನಿಂದ ಒಬ್ಬರು ಸೇರಿ ಐವರು ಅಧಿಕಾರಿಗಳನ್ನು ಎಸ್‌ಐಟಿ ತಂಡವು ಒಳಗೊಂಡಿದೆ.

ಸಿಬಿಐ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಲಿರುವ ಎಸ್‌ಐಟಿ ತಂಡಕ್ಕೆ ರಾಜ್ಯ ಸರ್ಕಾರವು ಹಿರಿಯ ಐಪಿಎಸ್ ಅಧಿಕಾರಿಗಳಾದ ಸರ್ವಶ್ರೇಷ್ಠ ತ್ರಿಪಾಠಿ ಮತ್ತು ಗೋಪಿನಾಥ್ ಜೆಟ್ಟಿ ಅವರ ಹೆಸರುಗಳನ್ನು ನೀಡಿದೆ ಎಂದು ಆಂಧ್ರಪ್ರದೇಶದ ಪೊಲೀಸ್ ಮಹಾನಿರ್ದೇಶಕ ಸಿ.ಎಚ್. ದ್ವಾರಕಾ ತಿರುಮಲ ರಾವ್ ಹೇಳಿದ್ದಾರೆ.

'ನಾವು ಹೆಸರು ಕಳುಹಿಸಿದ ನಂತರ, ಸಿಬಿಐ ನಿರ್ದೇಶಕರು ಐವರ ಸಮಿತಿ ರಚಿಸಿದ್ದಾರೆ. ರಾಜ್ಯ ಸರ್ಕಾರದಿಂದ ಅನುಮೋದನೆ ಪಡೆದು ತ್ರಿಪಾಠಿ ಮತ್ತು ಗೋಪಿನಾಥ್ ಜೆಟ್ಟಿ ಹೆಸರನ್ನು ಎಸ್‌ಐಟಿಗೆ ಸೇರಿಸಲು ಸಿಬಿಐಗೆ ಕಳುಹಿಸಿದ್ದೇವೆ' ಎಂದು ಅವರು ಸುದ್ದಿಸಂಸ್ಥೆಗೆ ತಿಳಿಸಿದರು.

ತ್ರಿಪಾಠಿ ಮತ್ತು ಗೋಪಿನಾಥ್ ಜೆಟ್ಟಿ ಅವರು, ರಾಜ್ಯ ಸರ್ಕಾರವು ಲಾಡು ಕಲಬೆರಕೆ ಆರೋಪಗಳನ್ನು ಪರಿಶೀಲಿಸಲು ಈ ಹಿಂದೆ ರಚಿಸಿದ್ದ ಎಸ್‌ಐಟಿಯ ಭಾಗವಾಗಿದ್ದರು. ಆದರೆ, ಸುಪ್ರೀಂ ಕೋರ್ಟ್‌ನ ಆದೇಶದ ನಂತರ ಈ ಸಮಿತಿ ನಿಷ್ಕ್ರಿಯಗೊಂಡಿತು.

ಮೈಸೂರು ಸಕ್ಕರೆ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ–571 402.
MSCo/ADM/457/2024-25 Date:04-11-2024
ಇ–ಮೇಲ್ :gm_msco@yahoo.co.in (or) cao_msco2020@gmail.com

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ MSCO/2024-25/SE0006

ಮೈಸೂರು ಸಕ್ಕರೆ ಕಂಪನಿ ನಿಯಮಿತ ಮಂಡ್ಯ, ಕಾರ್ಖಾನೆಯ ದೈನಂದಿನ ಕಾರ್ಯಗಳನ್ನು ಅನುಷ್ಠಾನಗೊಳಿಸಲು ಕಂಪನಿಯ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎರಡು ವರ್ಷದ ಅವಧಿಗೆ ಹೊರ ಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲವನ್ನು ಸರಬರಾಜು ಮಾಡಲು ಇ–ಪ್ರಕ್ಯೂರ್‌ಮೆಂಟ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
(1) ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು (https://Kppp.karnataka.gov.in) ತುಂಬುವುದು. ಟೆಂಡರ್‌ನ ವೇಳಾ ಪಟ್ಟಿ ಈ ರೀತಿ ಇದೆ. (2) ಇ– ಪೋರ್ಟ್‌ಲ್ ಟೆಂಡರ್‌ಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆಗಳಿದ್ದರೆ ದಿನಾಂಕ: 11.11.2024 ರ ಬೆಳಗ್ಗೆ 11.00 ಯೊಳಗೆ ಸಲ್ಲಿಸತಕ್ಕದ್ದು. (3) ಇ– ಪೋರ್ಟ್‌ಲ್ ಟೆಂಡರ್‌ನ್ನು ತುಂಬಲು ಪ್ರಾರಂಭದ ದಿನಾಂಕ:04.11.2024 ಮತ್ತು ಕೊನೆಯ ದಿನಾಂಕ: 15.11.2024 ಸಂಜೆ 04.00 ಗಂಟೆ ಆಗಿರುತ್ತದೆ. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:19.11.2024 ರ ಬೆಳ್ಳಿಗ್ಗೆ 11.00 ಕ್ಕೆ ತೆರೆಯಲಾಗುತ್ತದೆ. 5) ವಾಣಿಜ್ಯ ಬಿಡ್ ತೆರೆಯುವ ದಿನಾಂಕ:22–11–2024 ರ ಬೆಳ್ಳಿಗ್ಗೆ 11.00 ಕ್ಕೆ ತೆರೆಯಲಾಗುತ್ತದೆ.
(ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 9731245061 ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರವರ ತೀರ್ಮಾನವೇ ಅಂತಿಮವಾಗಿರುತ್ತದೆ.
ಸಹಿ/– ಮುಖ್ಯ ಆಡಳಿತಾಧಿಕಾರಿ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/414/2024–25

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ:ಮನಪಾ/ಲೋವಿ/ಮನಿ/ಟಿಪ್ರ/2024–25/3459 ದಿನಾಂಕ:29.10.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸನ್ 2024–25 ನೇ ಸಾಲಿನ ಮಹಾನಗರ ಪಾಲಿಕೆ ನಿಧಿ ಅನುದಾನದಲ್ಲಿ 09 ಕಾಮಗಾರಿ ಇಂಡೆಂಟ್ ನಂ: DMA/2024-25/EL/WORK_INDENT31489, DMA/2024-25/EL/WORK_INDENT31490, DMA/2024-25/EL/WORK_INDENT31491, DMA/2024-25/EL/WORK_INDENT31504, DMA/2024-25/EL/WORK_INDENT31521, DMA/2024-25/EL/WORK_INDENT31527, DMA/2024-25/EL/WORK_INDENT31531, DMA/2024-25/EL/WORK_INDENT31541, DMA/2024-25/EL/WORK_INDENT31505, ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಇ.ಐ. ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಸ್ಟಾಂಡರ್ಡ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.
1. ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18.11.2024.
ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/377/ಕೆಎಸ್‌ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಯೋಜನಾ ಕೇಂದ್ರ–6, ಎನ್ ಆರ್ ಚೌಕ, ಬೆಂಗಳೂರು –560002.
No. EE/PC-6/TEND/05/2024-25 Date: 05.11.2024

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ) (ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ–ಕರೆ–2)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ದ್ವಿ ಲಕೋಟೆ ಪದ್ಧತಿ

ಕಾರ್ಯಪಾಲಕ ಅಭಿಯಂತರರವರು, (ಯೋಜನಾ ಕೇಂದ್ರ–6), ಬಿಬಿಎಂಪಿ ಇವರು ಅರ್ಹ ಗುತ್ತಿಗೆದಾರರಿಂದ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು (https://kppp.karnataka.gov.in). ಕಾಮಗಾರಿಗೆ ಅರ್ಹತೆ ಪಡೆಯಲು ಟೆಂಡರ್‌ದಾರರು ಷರತ್ತು 3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. 2. ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ 05.11.2024 ರಿಂದ ಡೌನ್‌ಲೋಡ್ ಮಾಡಬಹುದು. 3.ಟೆಂಡರ್‌ಗಳನ್ನು ಆನ್‌ಲೈನ್ ಕೆಪಿಪಿ ಪೋರ್ಟಲ್ ಮೂಲಕ 20.11.2024 ಸಂಜೆ 5.30 ಗಂಟೆಯ ಒಳಗೆ ಸಲ್ಲಿಸತಕ್ಕದ್ದು. 4. ಇತರೆ ವಿವರಗಳನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಗಳ ಹೆಸರು/ಟೆಂಡರ್‌ನ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) (ಜಿಎಸ್‌ಟಿ ಹೊರತುಪಡಿಸಿ)/ಇಎಂಡಿ (ರೂ. ಲಕ್ಷಗಳಲ್ಲಿ)
1	ಕರ್ನಾಟಕ ಸರ್ಕಾರದ 2023–24ರ ಅನುದಾನದಡಿಯಲ್ಲಿ ವೈಟ್ ಟಾಪಿಂಗ್ ಒದಗಿಸುವ ಮೂಲಕ ಗಾಂಧಿ ನಗರ ವಿಧಾನಸಭಾ ಕ್ಷೇತ್ರದ ಆಯ್ದ ರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 4653.40, ಇಎಂಡಿ (ರೂ. ಗಳಲ್ಲಿ) : ರೂ. 46.53 ಲಕ್ಷಗಳು.

ವೇಳಾಪಟ್ಟಿ: 1. ಆನ್‌ಲೈನ್ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ 13.11.2024 ಸಂಜೆ 5.30 ಗಂಟೆಗೆ ವೆಬ್‌ಸೈಟ್ http://kppp.karnataka.gov.in ನಲ್ಲಿ.
2. ಪ್ರಿ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸ್ಥಳ : 14.11.2024 ಸಂಜೆ 04.00 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, (ಯೋಜನಾ ಕೇಂದ್ರ).
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21.11.2024 ಸಂಜೆ 5.30 ಗಂಟೆಗೆ.
4. ತಾಂತ್ರಿಕವಾಗಿ ಆಯ್ಕೆಯಾದ ಬಿಡ್‌ದಾರರಿಗೆ ಹಣಕಾಸಿನ ಬಿಡ್‌ಗಳನ್ನು ತಿಳಿಸಲಾಗುವುದು
ಸಹಿ/– ಕಾರ್ಯಪಾಲಕ ಅಭಿಯಂತರರು, (ಯೋಜನಾ– ಕೇಂದ್ರ–6).ಬಿಬಿಎಂಪಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಕೊಟ್ಟಾರ, ಮಂಗಳೂರು
ಸಂ:ದ.ಕ.ಜಿ.ಪ/ಮಂ/ಟೆಂಡರ್–04/ಎಇ–1/ಜೆಇ1/2024–25 ದಿನಾಂಕ: 04–11–2024

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿವಿಧ ಲೆಕ್ಕ ಶೀರ್ಷಿಕೆಯಡಿ ಮಂಜೂರಾದ ಕಾಮಗಾರಿಗಳಿಗೆ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವರ್ಷನ್–2 ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ.
(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19–11–2024 ಅಪರಾಹ್ನ 5.30 ಗಂಟೆಯವರೆಗೆ
(2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20–11–2024 ಅಪರಾಹ್ನ 4.00 ಗಂಟೆಗೆ
(3) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು ದ.ಕ.ಜಿಲ್ಲೆ ಈ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು
DIPR/ADM/KSMCA/752/24-25 Dt. 05.11.2024

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001.
ದೂರವಾಣಿ: 080–22215601, 22211246, ಫ್ಯಾಕ್ಸ್: 080–22215602
ಸಂಖ್ಯೆ: ಡಿವೈಇಎಸ್/ತಾಂಶಾ/ಕ್ರೀಯೋ/145/2024–25 ದಿನಾಂಕ: 30–10–2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉಪ–ನಿರ್ದೇಶಕರು (ಆಡಳಿತ), ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿ ವಿವರ	ಟೆಂಡರಿಗಿಟ್ಟ ಮೊತ್ತ (ರೂ. ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಬೆಂಗಳೂರಿನಲ್ಲಿರುವ ಕುಂಬಳಗೋಡಿನ ಯುವ ತರಬೇತಿ ಕೇಂದ್ರದ ಆವರಣ ಗೋಡೆ ಎತ್ತರಿಸುವಿಕೆ, ವಿವಿಧ ಕಟ್ಟಡಕ್ಕೆ ಬಣ್ಣ ಬಳಿಯುವುದು, ಸಂಪ್ ನಿರ್ಮಾಣ, ಇನ್ನಿತರೆ ಅಗತ್ಯ ಕಾಮಗಾರಿ.	167.80 ಲಕ್ಷಗಳು	2,51,695.00

1) ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 16–11–2024 ರಂದು ಸಮಯ: 16.00 ಗಂಟೆವರೆಗೆ.
2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 19–11–2024 ರಂದು ಸಮಯ: 11.00 ಗಂಟೆಗೆ.
ಆಸಕ್ತ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.
ಸಹಿ/– ಉಪ ನಿರ್ದೇಶಕರು (ಆಡಳಿತ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ವಾಸಾಸಂಇ/ವಾ.ಪ್ರ/2924/ಅಡ್ವರ್ಟೋರ್/2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ,
ಹೊಸಪೇಟೆ.
ಸಂಖ್ಯೆ: EE/RWS&SD/VJNR/e-tender/Tech/2024–25/734 ದಿನಾಂಕ:04.11.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ– 12/2024–25.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರು 2024–25ನೇ ಸಾಲಿನ ಜೆ.ಜೆ.ಎಮ್ ಯೋಜನೆಯಡಿ ಅನುಮೋಧನೆಯಾದ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ 01 ಕಾಮಗಾರಿ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ 02 ಕಾಮಗಾರಿಗಳು, ಹೂವಿನಹಡಗಲಿ ತಾಲ್ಲೂಕಿನ 01 ಕಾಮಗಾರಿ ಒಟ್ಟು 4 ಕಾಮಗಾರಿಗಳು ಒಟ್ಟು ರೂ.138.10 ಲಕ್ಷಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್ ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರಮೆಂಟ್ ಮೂಲಕ ಇ– ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ:04–11–2024 ರಿಂದ 21–11–2024ರ ಸಾಯಂಕಾಲ 05.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ ಮತ್ತು ಇ–ಪ್ರಕ್ಯೂರ್ ಮೆಂಟ್ ಟೆಂಡರ್ ತೆರೆಯುವ ದಿನಾಂಕ:22–11–2024ರಂದು ಸಾಯಂಕಾಲ 05.05 ಗಂಟೆಗೆ ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ವೆಬ್ ಸೈಟ್‌ನಲ್ಲಿ ಪಡೆಯಬಹುದು. (www.kppp.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು. ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನೀಯರ್, ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/340

ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಬಂದರು ಮತ್ತು ಮೀನುಗಾರಿಕಾ ವಿಭಾಗ,
'ಶ್ಯಾಮಿಲಿ ಹಾಲ್', 2ನೇ ಮಹಡಿ, ಅಂಬಲಪಾಡಿ, ಉಡುಪಿ–576103
Tel No: 0820-2532961, Email: pfdudupi@gmail.com
ಸಂ:ಕಾನಿಇಂ:ಬಂಮೀವಿ:ಉಡುಪಿ:ಎಇ: ಕೊಟೇಶನ್:2024–25 ದಿ: 29–10–2024

ಕೊಟೇಶನ್ ಪ್ರಕಟಣೆ

ಕರ್ನಾಟಕ ಮಾರಿಟೈಮ್ ಬೋರ್ಡ್ ಕೆಳಗೆ ತಿಳಿಸಲಾದ ವಿವರಣೆಗಳಿಗಾಗಿ ನೋಂದಾಯಿತ ಕಂಪನಿಗಳು / ಅನುಭವಿ ಸಂಸ್ಥೆಗಳು / ಎಂಪಾನೆಲ್ಡ್ ಕನ್ಸಲ್ಟೆಂಟ್‌ಗಳು / ಏಜೆನ್ಸಿಗಳಿಂದ ಕೊಟೇಶನ್ ಆಹ್ವಾನಿಸಲಾಗಿರುತ್ತದೆ. ಆಸಕ್ತ ನೋಂದಾಯಿತ ಕಂಪನಿಗಳು / ಅನುಭವಿ ಸಂಸ್ಥೆಗಳು / ಎಂಪಾನೆಲ್ಡ್ ಕನ್ಸಲ್ಟೆಂಟ್‌ಗಳು / ಏಜೆನ್ಸಿಗಳು ಈ ಕೆಳಗಿನ ಅಧ್ಯಯನಕ್ಕಾಗಿ ತಮ್ಮ ಕೊಟೇಶನ್ ನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ EOI ಅನ್ನು ಸಲ್ಲಿಸಬಹುದು. (http://Kppp.karnataka.gov.in).
ವಿವರ: Comprehensive Assessment of Stability and Load-bearing Capacity of the Vertical Live Load of South Wharf at Mangaluru., ಪರಿಮಾಣ: Lumpsum, ದರ: ಅಂಕಿಗಳಲ್ಲಿ (ರೂ.).......... ಅಕ್ಷರಗಳಲ್ಲಿ........., ಮೊತ್ತ:................
15–11–2024 ರ ಮೊದಲು ಸಹಿ ಮಾಡಲಾದ ಎಲ್ಲಾ ಅನ್ವಯವಾಗುವ ತೆರಿಗೆಗಳನ್ನು ಹೊರತುಪಡಿಸಿ ನಿಮ್ಮ ದರಗಳನ್ನು ಸಲ್ಲಿಸತಕ್ಕದ್ದು ಮತ್ತು ಸದರಿ ದರಗಳನ್ನು ಟೆಂಡರ್ ಉದ್ದೇಶದ ಮೌಲ್ಯಮಾಪನವನ್ನು ಪಡೆಯಲು ಮಾತ್ರ ಬಳಸಲಾಗುತ್ತದೆ ಮತ್ತು ಯಾವುದೇ ಗುತ್ತಿಗೆ ಕರಾರು ಒಪ್ಪಂದವನ್ನು ನೀಡಲು ಆಗಿರುವುದಿಲ್ಲ.
ಸಹಿ/–ಕಾರ್ಯನಿರ್ವಾಹಕ ಇಂಜಿನಿಯರ್ ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ
ವಾಸಾಇ/ಸನಿಉ/ಕೆಎಸ್‌ಎಂಸಿಎ/413/24–25 ದಿ: 05.11.2024

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಸಕಾಅ–1/ಟೆಂಡರ್–17/2024–25 ದಿನಾಂಕ: 04.11.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಬಳ್ಳಾರಿ, ರಾಯಚೂರು, ಉತ್ತರ ಕನ್ನಡ, ಬೆಳಗಾವಿ, ಚಿಕ್ಕಬಳ್ಳಾಪುರ, ಧಾರವಾಡ, ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದ ಮೊರಾರ್ಜಿ ದೇಸಾಯಿ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ದುರಸ್ತಿ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ: 376, 383, 386, 344, 358, 354, 352, 349, 411, 408, 338, 412, 410, 409 & 255/call-2) ಇ–ಪೋರ್ಟಲ್ ಮುಖಾಂತರ ದಿನಾಂಕ 04.11.2024 ರಂದು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 20.11.2024 ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ನೋಡಬಹುದಾಗಿದೆ.
ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು–1 ಕ.ವ.ಶಿ.ಸಂ.ಸಂಘ
DIPR/CP/YC/2936/2024-25

ಕರ್ನಾಟಕ ಸರ್ಕಾರ (ಜಿಲ್ಲಾ ಪಂಚಾಯತ್, ಗದಗ)
ಜಿಲ್ಲಾ ಅಂಧತ್ವ ನಿಯಂತ್ರಣ ವಿಭಾಗ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಗದಗ ದೂರವಾಣಿ ಸಂ: 08372–200285,
ಇ–ಮೇಲ್: dbcsgadag@gmail.com
ಸಂಖ್ಯೆ/ಟೆಂಡರ್/ಡಿ.ಬಿ.ಸಿ.ಎಸ್/2024–25 ದಿನಾಂಕ : 05.11.2024

ಟೆಂಡರ್ ಪ್ರಕಟಣೆ

ಸನ್ 2024–25 ನೇ ಸಾಲಿನಲ್ಲಿ ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಗದಗ ಜಿಲ್ಲೆಗೆ ಬೇಕಾಗುವ ಶಾಲಾ ಮಕ್ಕಳ ಕನ್ನಡಕಗಳು ಹಾಗೂ ವಯೋವೃದ್ದರಿಗೆ ಕನ್ನಡಕಗಳನ್ನು ಖರೀದಿಸಲು ಇ–ಪ್ರಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ. 50,22,500=00 ಇ.ಎಮ್.ಡಿ ಮೊತ್ತ ರೂ. 1,00,450=00 ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ : 04.11.2024 ಮತ್ತು ಕೊನೆಯ ದಿನಾಂಕ : 19.11.2024 ಮಧ್ಯಾಹ್ನ 1:00 ಗಂಟೆಯವರೆಗೆ ಹಾಗೂ ಮಾದರಿ ಕನ್ನಡಕಗಳನ್ನು ಸಲ್ಲಿಸುವ ದಿನಾಂಕ : 20.11.2024 ಮಧ್ಯಾಹ್ನ 1:00 ಗಂಟೆಯವರೆಗೆ ಹೆಚ್ಚಿನ ಮಾಹಿತಿಗಾಗಿ ಇ–ಪ್ರಕ್ಯೂರಮೆಂಟ ವೆಬ್‌ಸೈಟ್ www://kppp.karnataka.gov.in ನಲ್ಲಿ Tender Reference No-DHFWS/2024.25/IND1054 ನಲ್ಲಿ ಸಂಪರ್ಕಿಸಬಹುದಾಗಿದೆ
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಗದಗ
ವಾಸಾಸಂಇ/ಗದಗ/348/ಕೆ.ಎಸ್.ಎಂ.ಸಿ.ಎ/24–25

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬಾಗಲಕೋಟೆ ವಿಭಾಗ, ಬಾಗಲಕೋಟೆ.
ದೂರವಾಣಿ : 08357–235769, ಇ–ಮೇಲ್ : dcftbagalkot@gmail.com
ಸಂಖ್ಯೆ : ಬಿ1/ಸೇಲ್ಸ್/ಬೀ.ವ./ಟೆಂಕಿಡಿಪೋ/2024–25 ದಿನಾಂಕ : 04–11–2024

ಟಿಂಬರ್ ಮತ್ತು ಇತರೆ ಅರಣ್ಯ ಉತ್ಪನ್ನಗಳ ಇ-ಹರಾಜು ಪ್ರಕಟಣೆ

ಸಾರ್ವಜನಿಕರ ಅವಗಾಹನೆಗಾಗಿ ತಿಳಿಯಪಡಿಸುವುದೇನೆಂದರೆ, ಬೀಳಗಿ ವಲಯದ ಯಡಹಳ್ಳಿ ಟೆಂಕಿ ಡಿಪೋದಲ್ಲಿ ದಾಸ್ತಾನು ಇರುವ ನಾಟಾ, ಎಳೆ, ಮತ್ತು ಸೌದೆಗಳನ್ನು ಎಂ.ಎಸ್.ಟಿ.ಸಿ. ಮುಖಾಂತರ ಇ–ಹರಾಜು ಮಾಡಲು ದಿನಾಂಕ : 20–11–2024 ರಂದು ಅಪರಾಹ್ನ 16.00 ಗಂಟೆಯಿಂದ 16.45 ಗಂಟೆಯವರೆಗೆ ನಾಲ್ಕನೇ ಸೆಷನ್‌ನಲ್ಲಿ ನಡೆಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಾಗಲಕೋಟೆ ವಿಭಾಗ, ಬಾಗಲಕೋಟೆ ಇವರು ಅಥವಾ ಇವರಿಂದ ಅಧಿಕೃತವಾಗಿ ಸೂಚಿಸಲ್ಪಟ್ಟವರಿಂದ ನೆರವೇರಿಸಲಾಗುವುದು. ಖರೀದಿಸಲು ಇಚ್ಛೆಯುಳ್ಳವರು ಸದರಿ ಇ–ಹರಾಜಿನಲ್ಲಿ ಭಾಗವಹಿಸಿ ಷರತ್ತಿಗೊಳಪಟ್ಟು ಉತ್ಪನ್ನಗಳನ್ನು ಖರೀದಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಅಂತರ್ಜಾಲ www.mstcecommerce.com ರಲ್ಲಿ ಬೀಳಗಿ ವಲಯ ಕಛೇರಿಯಿಂದ ಅಥವಾ ಈ ಕಛೇರಿಯಿಂದ ರಜಾ ದಿನಗಳನ್ನು ಹೊರತುಪಡಿಸಿ ಕೆಲಸದ ಅವಧಿಯಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಾಗಲಕೋಟೆ ವಿಭಾಗ, ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/315/ಮಣಿಪಾಲ್/2024–25

ಕರ್ನಾಟಕ ಸರ್ಕಾರ ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ದಾವಣಗೆರೆ.
ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರು ರಸ್ತೆ, ದಾವಣಗೆರೆ–577004
ದೂರವಾಣಿ ಸಂಖ್ಯೆ: 08192–222701 ಇ.ಮೇಲ್: dcpudvg1@gmail.com
ಸಂ:ಜಿಮರಘದಾ/ಆಹಾರ.ಸಾ.ಮ.ಟಿ/2024–25 ದಿನಾಂಕ: 04–11–2024

ಅಲ್ಪಾವಧಿ ಟೆಂಡರ್ ಪ್ರಕಟಣೆ–3ನೇ ಕರೆ

2024–25ನೇ ಸಾಲಿಗೆ ದಾವಣಗೆರೆ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಆಡಿಯಲ್ಲಿ ಬರುವ ಸುಧಾರಣಾ ಸಂಸ್ಥೆಗಳಿಗೆ ಆಹಾರ ಸಾಮಾಗ್ರಿಗಳು, ತರಕಾರಿ, ಹಣ್ಣುಗಳು ಹಾಗೂ ಇತರೆ ಅವಶ್ಯಕ ವಸ್ತುಗಳನ್ನು ಸರಬರಾಜು ಮಾಡಲು ಅಧಿಕೃತ ಮಾರಾಟ ಏಜೆನ್ಸಿರವರಿಂದ ಎರಡು ಹಂತದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ) 1999 ನಿಯಮಗಳು 2000 ಪ್ರಕಾರ ಕೆ.ಪಿ.ಪಿ.ಪಿ ಮೂಲಕ ಒಂದು ವರ್ಷ ಅವಧಿಗೆ ಟೆಂಡರ್ ಮೂಲಕ ಪಡೆಯಲು ಅಧಿಸೂಚನೆಯನ್ನು ಹೊರಡಿಸಲಾಗಿದೆ. (1) ಟೆಂಡರ್ ಹೆಸರು:– 2024–25ನೇ ಸಾಲಿಗೆ ದಾವಣಗೆರೆ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಆಡಿಯಲ್ಲಿ ಬರುವ ಸುಧಾರಣಾ ಸಂಸ್ಥೆಗಳಿಗೆ ಆಹಾರ ಸಾಮಾಗ್ರಿಗಳು, ತರಕಾರಿ, ಹಣ್ಣುಗಳು ಹಾಗೂ ಇತರೆ ಅವಶ್ಯಕ ವಸ್ತುಗಳನ್ನು ಸರಬರಾಜು ಮಾಡಲು ಅಧಿಕೃತ ಮಾರಾಟ ಏಜೆನ್ಸಿರವರಿಂದ ಎರಡು ಹಂತದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ) 1999 ನಿಯಮಗಳು 2000 ಪ್ರಕಾರ ಕೆ.ಪಿ.ಪಿ.ಪಿ ಮೂಲಕ ಒಂದು ವರ್ಷ ಅವಧಿಗೆ ಟೆಂಡರ್ ಮೂಲಕ ಪಡೆಯುವ ಬಗ್ಗೆ. (2) ತಾಂತ್ರಿಕ ಮತ್ತು ಆರ್ಥಿಕ ಬಿಡ್ ಅರ್ಜಿ ಸಲ್ಲಿಸಲು ಪ್ರಾರಂಭ ದಿ: 04–11–2024 (3) ಟೆಂಡರ್ ಅಂದಾಜು ಮೌಲ್ಯ ರೂ.50.00 ಲಕ್ಷ. (4) ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ ರೂ.1,00,000/–ಗಳು (5) ತಾಂತ್ರಿಕ ಮತ್ತು ಆರ್ಥಿಕ ಬಿಡ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 12–11–2024 (6) ಟೆಂಡರ್ ಅರ್ಜಿ ಅಪ್ ಲೋಡ್ ಮಾಡಿದ ದಿನಾಂಕ: 04–11–2024 ಸೂಚನೆ:– ಟೆಂಡರ್ ಅರ್ಜಿಯನ್ನು https://kppp.karnataka.gov.in ಪೋರ್ಟಲ್ ಮೂಲಕ ಸಲ್ಲಿಸುವುದು.
ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ದಾವಣಗೆರೆ.
DIPR/DVG/KSMCA/470/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ. ಮ.ಎ.ಕಾ. ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ–591116 ತಾಲೂಕು:ಸವದತ್ತಿ. ಜಿಲ್ಲಾ:ಬೆಳಗಾವಿ. ರಾಜ್ಯ:ಕರ್ನಾಟಕ
Dn. e-mail: eemlbcnth@gmail.com Ph: - 08330-224516
ಟೆಂಡರ ಪ್ರಕಟಣೆ ಸಂಖ್ಯೆ:MLBCC-2/DB/4701 KTR-SDT/E-tender/24-25/2123, 2124, 2125, 2126 & 2127 ದಿನಾಂಕ: 04-11-2024

ಅಲ್ಪಾವಧಿ ಟೆಂಡರ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ)
(ದ್ವಿ ಲಕೋಟೆ ಪದ್ಧತಿಯಲ್ಲಿ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ. ಮ.ಎ.ಕಾ.ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ ಕಚೇರಿ ಅಡಿಯಲ್ಲಿ 4701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಐದು ಕಾಮಗಾರಿಗಳಿಗೆ (as per KTPP act 2000) ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲೂ ಪಿ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ (ಇ–ಸಂಗ್ರಹಣಾ ಕೋಶದ ಮುಖಾಂತರ) ಶೇಕಡಾವಾರು ಟೆಂಡರನ್ನು ಆಹ್ವಾನಿಸಲಾಗಿದೆ
(Work Indent Numbers. 1979,1980, 1982, 1984 & 1985) ಕಾಮಗಾರಿಯ ಅಂದಾಜು ಮೊತ್ತ ರೂ. 400.00 ರಿಂದ 495.00 ಲಕ್ಷಗಳು.
1.ಪ್ರಿ ಬಿಡ್ ಮೀಟಿಂಗ್ ದಿನಾಂಕ:08–11–2024 ರಂದು 11.00 ಘಂಟೆಗೆ
2.ಗುತ್ತಿಗೆದಾರರು ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ:15–11–2024 ರಂದು ಸಂಜೆ 4.00 ಘಂಟೆವರೆಗೆ.
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:16–11–2024 ರಂದು ಸಂಜೆ 4.30 ಘಂಟೆಯ ನಂತರ, 4. ಆರ್ಥಿಕ ಬಿಡ್ ತೆರೆಯುವ ದಿನಾಂಕ:18–11–2024 ರಂದು ಸಂಜೆ 11.00 ಘಂಟೆಯ ನಂತರ
ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ www.kppp.karnataka.gov.in , ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08330 224516 ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು.
ಸಹಿ/–(ಶ್ರೀ.ಪಿ.ವ್ಹಿ.ಮುಳ್ಳೂರ) ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ. ಮ.ಎ.ಕಾ.ನಿ. ವಿಭಾಗ.ನಂ.2 ನವಿಲುತೀರ್ಥ.
DIPR/BGM/RO-NO-1084/KSMCA/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮೈಸೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ), ಅಂಧತ್ವ ನಿಯಂತ್ರಣಾ ವಿಭಾಗ, ಮೈಸೂರು.
ದೂರವಾಣಿ ಸಂಖ್ಯೆ: 2441231
ಇ–ಮೇಲ್ ID dlo.lbmysore@gmail.com
ಸಂಖ್ಯೆ:ಜಿಆಕುಕಸಂ:ಅಂನಿವಿ/ಮೈ/06/2024–25 ದಿನಾಂಕ: 04.11.2024

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಮೈಸೂರು ಜಿಲ್ಲೆಯ ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ವಯಸ್ಕರು ಮತ್ತು ವಯೋವೃದ್ಧರ ಕನ್ನಡಕಗಳನ್ನು ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕಧಿನಿಯಮ (ಕೆಟಿಟಿಪಿ) 1999 ನಿಯಮಗಳು 2000 ರ ಪ್ರಕಾರ ಟೆಂಡರ್ ಮೂಲಕ ಪಡೆಯುವ ಬಗ್ಗೆ. ಟೆಂಡರ್ ಪ್ರಕಟಣೆ ದಿ: 04.11.2024. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ ಮತ್ತು ಸಮಯ ದಿ: 04.11.2024 ಮಧ್ಯಾಹ್ನ 03.00 ಗಂಟೆಗೆ. ಪ್ರೀಬಿಡ್ ಸಭೆ ನಡೆಯುವ ದಿನಾಂಕ ಮತ್ತು ಸಮಯ ದಿ:11.11.2024 ಮಧ್ಯಾಹ್ನ 12.00 ಗಂಟೆಗೆ. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ ದಿ: 19.11.2024ರ ಮಧ್ಯಾಹ್ನ 5.30 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿ:21.11.2024 ಬೆಳಗ್ಗೆ 11.00 ಗಂಟೆಗೆ. ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿ: 25.11.2024 ಬೆಳಗ್ಗೆ 11.30 ಗಂಟೆಗೆ ಅಥವಾ ನಂತರ. ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (2.5%) ರೂ.2,34,500/–. ಭದ್ರತಾ ಠೇವಣಿ (5%) ರೂ.4,69,000/–. ಟೆಂಡರ್‌ಗೆ ಇಟ್ಟ ಮೊತ್ತ ರೂ.93,80,000/– ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ: 9448556803 ಕಾರ್ಯಕ್ರಮ ವ್ಯವಸ್ಥಾಪಕರು / ಸದಸ್ಯ ಕಾರ್ಯದರ್ಶಿಗಳು ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ವಿಭಾಗ,ಮೈಸೂರು.
ಟೆಂಡರ್‌ದಾರರು ನಿಗಧಿಪಡಿಸಿರುವ ಅರ್ಹತೆ ಮತ್ತು ಅನುಭವಗಳು ಇರತಕ್ಕದು. ಹೆಚ್ಚಿನ ವಿವರಗಳಿಗೆ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮ ವಿಭಾಗ ಎನ್.ಪಿ.ಸಿ ಆವರಣ ನಜರ್ ಬಾದ್, ಮೈಸೂರು–10 ಇವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು. ಕಛೇರಿ ದೂರವಾಣಿ ಸಂಖ್ಯೆ: 0821–2441231.
ಸಹಿ/– ಸದಸ್ಯರು
DIPR/DDMYS-750/KSMCA-/5132024-25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಧಾರವಾಡ
ಕಾರ್ಯನಿರ್ವಾಹಕ ಇಂಜಿನೀಯರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಧಾರವಾಡ
ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ./ಇ–ಟೆಂಡರ/2024–25/1274 ದಿನಾಂಕ: 05.11.2024

ಅಲ್ಪಾವಧಿ ಸರ್ವಿಸ್ ಟೆಂಡರನ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)

ವಿಷಯ: ಕಾಮಗಾರಿಯ ಟೆಂಡರ್‌ನ ಪ್ರಕಟಣೆ ಕುರಿತು.
ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಡಿ ಧಾರವಾಡ ಜಿಲ್ಲೆಯ ಈ ಕೆಳಗಾಣಿಸಿದ ಕಾಮಗಾರಿಯ ಟೆಂಡ್‌ರ್ ಕರೆಯಲಾಗಿದೆ.
ಕಾಮಗಾರಿಯ ವಿವರ ಈ ಕೆಳಗಿನಂತಿದೆ.
ಧಾರವಾಡ ಜಿಲ್ಲೆ:ವರ್ಗ:ಸಾಮಾನ್ಯ :Indent No: RWSSD/2024-25/WS/WORK_INDENT8669
ಗರಿಷ್ಠ ಮೊತ್ತ: 41.23 ಲಕ್ಷಗಳು
ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ (Calander of Events)
1) ಖಾಲಿ ಟೆಂಡರ ಫಾರ್ಮಗಾಗಿ ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 06.11.2024 ರಿಂದ ದಿನಾಂಕ: 14.11.2024 ಸಾಯಂಕಾಲ 4.00 ಘಂಟೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15.11.2024 ಸಾಯಂಕಾಲ 4.30 ಘಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ.
ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತೀಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ kppp.karnataka.gov.in ನಲ್ಲಿ ಪಡೆಯಬಹುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ.
ವಾ.ಸಾ.ಇ/ಧಾರವಾಡ/576/ದೇಶಪಾಂಡೆಪಬ್ಲಿಸಿಟಿ/2024–25

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ, ಧಾರವಾಡ KMF
ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ.ಬಿ. ರಸ್ತೆ, ವಿದ್ಯಾಗಿರಿ ಪೋಸ್ಟ್, ಧಾರವಾಡ –580004
ದೂರವಾಣಿ: 0836–2467603/2468380 e-mail: dharwarnin@gmail.com
ಐಎಫ್‌ಟಿ ಸಂಖ್ಯೆ: KMF/2024-25/IND1072 ದಿನಾಂಕ:–05–11–2024

ಇ–ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ., (ಧಾಮುಲ್) ಧಾರವಾಡವು ತಾಂತ್ರಿಕ ಮತ್ತು ವಾಣಿಜ್ಯ ದ್ವಿ–ಲಕೋಟಿ ಪದ್ಧತಿಯಲ್ಲಿ 3000 ಸಂಖ್ಯೆ "ರಬ್ಬರ್ ಮ್ಯಾಟ್ (ಕೌ ಮ್ಯಾಟ್)" ಗಳನ್ನು ನಮ್ಮ ಟೆಂಡರನ ತಾಂತ್ರಿಕ ತಪಶೀಲುಪಟ್ಟಿ ಪ್ರಕಾರ ಪೂರೈಸಲು ಅರ್ಹ ಮೂಲ ಉತ್ಪಾದಕರು/ ಪೂರೈಕೆದಾರರಿಂದ ಇ–ಟೆಂಡರ ಆಹ್ವಾನಿಸಲಾಗಿರುತ್ತದೆ. ಸದರ ರಬ್ಬರ್ ಮ್ಯಾಟ್ (ಕೌ ಮ್ಯಾಟ್) ಗಳನ್ನು ಧಾರವಾಡ, ಗದಗ & ಸಿರ್ಸಿ (ಉ.ಕ.) ಯಲ್ಲಿ ಇರುವ ನಮ್ಮ ಉಗ್ರಾಣ/ಶೀ.ಕೇ ಗಳಿಗೆ (ಪ್ರತಿ ಸ್ಥಳಕ್ಕೆ 1000ಸಂಖ್ಯೆಯಂತೆ) ತಲುಪಿಸುವುದಾಗಿದೆ.
ಇ–ಟೆಂಡರ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ಮತ್ತು ಇಎಂಡಿ (ಗಳಿಕೆ ಠೇವಣಿ) ರೂ.1,80,000/– ವನ್ನು ಇ–ಪೋರ್ಟಲ್ ನಿಯಮಾನುಸಾರ ಟೆಂಡರ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಟೆಂಡರ ದಾಖಲಾತಿಗಳನ್ನು ಇ–ಪ್ರೊಕ್ಯುರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಲ್ಲಿ ಲಾಗ್‌ಇನ್ ಆಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಅಥವಾ ಸಹಾಯವಾಣಿ ಸಂಖ್ಯೆ: 080–46010000 / 68948777 ಅಥವಾ ಇ–ಮೇಲ್: support@eprochelpdesk.com ರ ಮೂಲಕ ಸಂಪರ್ಕಿಸಬಹುದು ಮತ್ತು ಉಳಿದ ಮಾಹಿತಿಯನ್ನು ಟೆಂಡರ ದಾಖಲಾತಿಯಲ್ಲಿ ನೋಡಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1.	ಇ–ಪೋರ್ಟಲ್ ಜಾಲತಾಣದಿಂದ ಟೆಂಡರ ದಾಖಲಾತಿ ಲಭ್ಯವಾಗುವ ದಿನಾಂಕ	06.11.2024 ರಿಂದ 05.12.2024 ರ ಸಂಜೆ 4 ಗಂಟೆಗಿಂತ ಮೊದಲು
2.	ಇ–ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	05.12.2024, ರಂದು ಸಂಜೆ 4.00 ರ ವರೆಗೆ
3.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	06.12.2024, ರಂದು ಬೆಳಿಗ್ಗೆ 4.30 ರ ನಂತರ
4.	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	10.12.2024, ರಂದು ಬೆಳಿಗ್ಗೆ 11.00 ರ ನಂತರ

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

❦ ಸುಭಾಷಿತ ❦

ಬೋಧಿಸುವ ಕಲೆ ಇರುವುದು ಸ್ಪಷ್ಟತೆಯಲ್ಲಿ ಮತ್ತು ಕಲಿಯುವ ಕಲೆ ಇರುವುದು ಆಲಿಸುವುದರಲ್ಲಿ.

-ವಂದನಾ ಶಿವ

ಆಯುಷ್ಮಾನ್ ಭಾರತ: ವಿಸ್ತರಣೆಗೆ ತಕ್ಕಂತೆ ಸೌಲಭ್ಯವೂ ಹೆಚ್ಚಲಿ

'ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ'ಯನ್ನು (ಎಬಿ– ಪಿಎಂಜೆಎವೈ) 70 ವರ್ಷ ದಾಟಿದ ಎಲ್ಲ ಪ್ರಜೆಗಳಿಗೂ ವಿಸ್ತರಿಸುವ ಕೇಂದ್ರ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಈ ಕ್ರಮವು ಈಗ ಇರುವುದಕ್ಕಿಂತ ಹೆಚ್ಚಿನ ಜನರಿಗೆ ಆರೋಗ್ಯ ಸೇವೆ ಪಡೆಯುವ ಹಕ್ಕು ನಿಜಾರ್ಥದಲ್ಲಿ ಕಾರ್ಯರೂಪಕ್ಕೆ ಬರುವಂತೆ ಮಾಡಲಿದೆ. ಯಾವುದೇ ಆದಾಯ ಮಿತಿ ಇಲ್ಲದೆ, 70 ವರ್ಷ ಮೇಲ್ಪಟ್ಟ ಎಲ್ಲರಿಗೂ ಈ ಯೋಜನೆಯ ಸೌಲಭ್ಯ ಈಗ ಲಭ್ಯವಾಗಲಿದೆ. ಯೋಜನೆಯು ವಾರ್ಷಿಕ ₹5 ಲಕ್ಷದವರೆಗೆ ವಿಮಾ ಸೌಲಭ್ಯ ಕಲ್ಪಿಸಲಿದೆ. 4.5 ಕೋಟಿ ಕುಟುಂಬಗಳ ಸುಮಾರು 6 ಕೋಟಿ ಜನರು, ಅಂದರೆ ಜನಸಂಖ್ಯೆಯ ಶೇ 5ರಷ್ಟು ಮಂದಿ ಹೊಸದಾಗಿ ಯೋಜನೆಯ ವ್ಯಾಪ್ತಿಗೆ ಒಳಪಡಲಿದ್ದಾರೆ. 2050ರ ವೇಳೆಗೆ ಜನಸಂಖ್ಯೆಯ ಶೇ 20ರಷ್ಟು ಮಂದಿ 70 ವರ್ಷಕ್ಕಿಂತ ಹೆಚ್ಚು ವಯಸ್ಸಿನವರಾಗಿರುತ್ತಾರೆ. ಇವರಲ್ಲಿ ಹಲವರಿಗೆ ಆರೋಗ್ಯ ಸೌಲಭ್ಯ ಸೇರಿದಂತೆ ಕಲ್ಯಾಣ ಯೋಜನೆಗಳ ಬೆಂಬಲದ ಅಗತ್ಯ ಇರುತ್ತದೆ. ಪ್ರಸ್ತುತ ಹಿರಿಯ ನಾಗರಿಕರಲ್ಲಿ ಶೇ 20ಕ್ಕಿಂತಲೂ ಕಡಿಮೆ ಪ್ರಮಾಣದಷ್ಟು ಜನರಷ್ಟೇ ವಿವಿಧ ಬಗೆಯ ಆರೋಗ್ಯ ಸುರಕ್ಷಾ ಕಾರ್ಯಕ್ರಮಗಳ ಪರಿಧಿಗೆ ಒಳಪಟ್ಟಿದ್ದಾರೆ. ಯೋಜನೆ ವಿಸ್ತರಣೆಯ ಜೊತೆಗೆ ಉದ್ಭವವಾಗಬಹುದಾದ ಕೆಲವು ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವುದು ಮುಖ್ಯವಾಗುತ್ತದೆ.

ಯೋಜನೆ ವಿಸ್ತರಣೆಯ ಜೊತೆಗೆ ಉದ್ಭವವಾಗಬಹುದಾದ ಪ್ರಮುಖ ಸಮಸ್ಯೆಗಳನ್ನು ಸರ್ಕಾರ ಬಗೆಹರಿಸಬೇಕಾಗಿದೆ

ಪ್ರಸಕ್ತ ಯೋಜನೆಯಡಿ ಚಿಕಿತ್ಸೆ ನೀಡುತ್ತಿರುವ ಆಸ್ಪತ್ರೆಗಳು ಸೌಲಭ್ಯಗಳನ್ನು ಶಕ್ತಿಮೀರಿ ಒದಗಿಸುತ್ತಿವೆ. ಉದ್ದೇಶಿತ ವಿಸ್ತರಣೆಯು ಅವುಗಳ ಮೇಲೆ ಇನ್ನಷ್ಟು ಒತ್ತಡ ಹೇರಲಿದೆ. 13,582 ಖಾಸಗಿ ಸಂಸ್ಥೆಗಳೂ ಸೇರಿದಂತೆ 30 ಸಾವಿರಕ್ಕೂ ಹೆಚ್ಚು ಆಸ್ಪತ್ರೆಗಳು ಹಾಗೂ ಆರೋಗ್ಯ ಕೇಂದ್ರಗಳು ಆಯುಷ್ಮಾನ್ ಭಾರತ್ ಯೋಜನೆಯಡಿ ಚಿಕಿತ್ಸೆ ನೀಡುವ ಪಟ್ಟಿಯಲ್ಲಿ ಸೇರಿವೆ. ಹಲವು ರಾಜ್ಯಗಳಲ್ಲಿ ಪ್ರತಿ 1 ಲಕ್ಷ ಜನರಿಗೆ ಎರಡರಿಂದ ಹತ್ತು ಆಸ್ಪತ್ರೆಗಳಲ್ಲಷ್ಟೇ ಈ ಯೋಜನೆಯಡಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ. ಇದು ಅತ್ಯಂತ ಅಸಮರ್ಪಕ. ಹೀಗಾಗಿ, ಈಗ ಹೊಸ ಬೇಡಿಕೆಗೆ ತಕ್ಕಂತೆ ಸರ್ಕಾರವು ಆರೋಗ್ಯ ಮೂಲಸೌಕರ್ಯ ಹಾಗೂ ಸೌಲಭ್ಯಗಳನ್ನು ಹೆಚ್ಚಿಸಬೇಕಾಗಿದೆ. ಯೋಜನೆಯು ಉಚಿತ ಆರೋಗ್ಯಸೇವೆ ನೀಡುವುದರ ಹೊರತಾಗಿಯೂ ಕೈಯಿಂದ ಮಾಡಬೇಕಾದ ಖರ್ಚಿನ ಸಮಸ್ಯೆಯು ಬಗೆಹರಿಯುವುದಿಲ್ಲ. ರೋಗಿಗಳು ಮತ್ತು ಅವರ ಕುಟುಂಬದವರು ಭರಿಸಬೇಕಾದ ಇಂತಹ ಖರ್ಚು ಅವರ ಮೇಲೆ ಬೀಳುವ ಒಂದು ಗಂಭೀರವಾದ ಹೊರೆಯೇ ಹೌದು. ಭಾರತದಲ್ಲಿನ ಈ ಖರ್ಚುವೆಚ್ಚವು ವಿಶ್ವದಲ್ಲಿ ಮಾಡುವ ಈ ಬಗೆಯ ಖರ್ಚಿನ ಸರಾಸರಿಗಿಂತ ಎರಡು ಪಟ್ಟಿಗೂ ಹೆಚ್ಚು. ಯೋಜನೆಯ ಅನುಷ್ಠಾನದಲ್ಲೂ ಕೆಲವು ಲೋಪಗಳು ಕಂಡುಬಂದಿವೆ. ಚಿಕಿತ್ಸೆಗಾಗಿ ನಿಗದಿಪಡಿಸಿರುವ ದರ ಕಡಿಮೆ ಮತ್ತು ಈ ಸಂಬಂಧದ ಹಣ ಬಿಡುಗಡೆಯೂ ವಿಳಂಬವಾಗುತ್ತಿದೆ ಎಂದು ಹಲವು ಆಸ್ಪತ್ರೆಗಳು ದೂರಿವೆ. ಪಾಲಿಸಬೇಕಾದ ಔಪಚಾರಿಕ ಕ್ರಮಗಳು ಹಾಗೂ ಹೆಚ್ಚುವರಿ ಕೆಲಸಗಳ ಕಾರಣದಿಂದ, ಈ ಯೋಜನೆಯಡಿ ಚಿಕಿತ್ಸೆ ಪಡೆಯುವುದನ್ನು ವೈದ್ಯರು ಸೇರಿದಂತೆ ಆಸ್ಪತ್ರೆಯ ಆಡಳಿತ ಮಂಡಳಿಯವರು ರೋಗಿಗಳು ಮತ್ತು ಅವರ ಕುಟುಂಬದವರನ್ನು ಪ್ರೋತ್ಸಾಹಿಸುವುದಿಲ್ಲ ಎಂಬ ವರದಿಗಳೂ ಇವೆ. ಇಂತಹ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ. ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು, ಅಗತ್ಯವಿರುವ ಎಲ್ಲರಿಗೂ ಅದರ ಸೌಲಭ್ಯ ದೊರಕುವಂತೆ ಮಾಡಬೇಕಾದ ಹೊಣೆ ಸರ್ಕಾರದ ಮೇಲಿದೆ.

ಯೋಜನೆ ಜಾರಿಯ ವಿಷಯದಲ್ಲಿ ರಾಜಕೀಯದ ನೆರಳು ಇಣುಕಿರುವುದು ದುರದೃಷ್ಟಕರ. ಬಿಜೆಪಿಯನ್ನು ವಿರೋಧಿಸುವ ಪಕ್ಷಗಳ ನೇತೃತ್ವದ ಸರ್ಕಾರ ಇರುವ ರಾಜ್ಯಗಳಾದ ಪಶ್ಚಿಮ ಬಂಗಾಳ ಮತ್ತು ದೆಹಲಿಯು ಈ ಯೋಜನೆಯಿಂದ ಹೊರಗುಳಿಯಲು ನಿರ್ಧರಿಸಿವೆ. ರಾಜಕೀಯ ಹಿತಾಸಕ್ತಿಯ ಕಾರಣದಿಂದ ಅವು ಇಂತಹ ನಿರ್ಧಾರಕ್ಕೆ ಬಂದಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ತಾವು ತಮ್ಮ ನಾಗರಿಕರಿಗೆ ಉತ್ತಮ ಆರೋಗ್ಯ ಸೇವಾ ಯೋಜನೆಗಳನ್ನು ಒದಗಿಸುತ್ತಿರುವುದಾಗಿ ಈ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಪ್ರತಿಪಾದಿಸಿದ್ದಾರೆ. ಅದರಲ್ಲೂ ದೆಹಲಿಯಲ್ಲಿನ ಆರೋಗ್ಯ ಸೇವೆಯು ಮಾದರಿ ಎನಿಸಿಕೊಂಡಿದ್ದು, ಅಂತರರಾಷ್ಟ್ರೀಯವಾಗಿ ಪ್ರಶಂಸೆಗೂ ಒಳಗಾಗಿದೆ. ಆದರೆ, ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ಕೇರಳ ಮತ್ತು ತಮಿಳುನಾಡು– ತಮ್ಮ ನಾಗರಿಕರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುತ್ತಿರುವುದರ ನಡುವೆಯೂ– ತಮ್ಮ ರಾಜ್ಯಗಳಲ್ಲಿ ಎಬಿ– ಪಿಎಂಜೆಎವೈ ಯೋಜನೆಯ ಕಾರ್ಯಾಚರಣೆಗೆ ಅನುವು ಮಾಡಿಕೊಟ್ಟಿರುವುದು ಗಮನಾರ್ಹ.

ದಿನದ ಟ್ವೀಟ್

ಗಂಭೀರವಾಗಿ ಪರಿಗಣಿಸಬೇಕಿದೆ

ಇದು ಕಟು ವಾಸ್ತವದ ಸಂಗತಿ: ಯಾವ ಪಕ್ಷದ ನೇತೃತ್ವದ ಸರ್ಕಾರವೇ ಅಧಿಕಾರಕ್ಕೆ ಬರಲಿ, ಮದ್ಯದಂಗಡಿಗೆ ಪರವಾನಗಿ ನೀಡುವಲ್ಲಿ ನಡೆಯುವ ವ್ಯಾಪಕ ಭ್ರಷ್ಟಾಚಾರ ಮಾತ್ರ ಶಾಶ್ವತವಾಗಿ ಇರುತ್ತದೆ.

(ಅಬಕಾರಿ ಇಲಾಖೆಯಲ್ಲಿ ಭಾರಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಆರೋಪಿಸಿ ಮದ್ಯ ಮಾರಾಟಗಾರರು ಮುಖ್ಯಮಂತ್ರಿಗೆ ಪತ್ರ ಬರೆದಿರುವ ಬೆಳವಣಿಗೆಗೆ ಪ್ರತಿಕ್ರಿಯೆ)

ಅರ್ಜುನ್

ಕಿಡಿನುಡಿ

ಕಾಂಗ್ರೆಸ್ ನಾಯಕರು ಜನರಿಗೆ ಬರೀ ಸುಳ್ಳು ಹೇಳುತ್ತಿದ್ದಾರೆ. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಈ ಮಹಾನುಭಾವರು ಎತ್ತಿನಹೊಳೆ ನೀರು ತರುತ್ತಾರಂತೆ. ಹೇಗೆ ತರುತ್ತಾರೆ? ಬರೀ ಸುಳ್ಳು ಪೊಳ್ಳು ಹೇಳಿಕೊಂಡು ಜನರಿಗೆ ಮೋಸ ಮಾಡುತ್ತಿದ್ದಾರೆ. ಎತ್ತಿನಹೊಳೆ ನೀರು ಕೋಲಾರಕ್ಕೆ ಬಂದರೆ ನಾನು ಅವರಿಗೆ ದೀರ್ಘದಂಡ ನಮಸ್ಕಾರ ಮಾಡುತ್ತೇನೆ.



ಎಚ್.ಡಿ.ದೇವೇಗೌಡ, ಜೆಡಿಎಸ್ ವರಿಷ್ಠ

25 ವರ್ಷಗಳ ಹಿಂದೆ

ಶನಿವಾರ, 6-11-1999

• **ರಾಜೀವ್ ಹೆಸರು ತೆಗೆಯಲು ಅರ್ಜಿ ಸರ್ಕಾರದ ತೀವ್ರ ವಿರೋಧ**

ನವದೆಹಲಿ, ನ. 5 (ಪಿಟಿಐ)– ಬೊಫೋರ್ಸ್ ಆರೋಪಪಟ್ಟಿಯಿಂದ ರಾಜೀವ್ ಗಾಂಧಿ ಅವರ ಹೆಸರನ್ನು ತೆಗೆಯಬೇಕೆಂದು ಕೋರಿರುವ ಅರ್ಜಿಗೆ ದೆಹಲಿ ಹೈಕೋರ್ಟ್‌ನಲ್ಲಿ ಇಂದು ಕೇಂದ್ರ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿತು.

ದೆಹಲಿಯ 'ರಾಜೀವ್ ಗಾಂಧಿ ಏಕತಾ ಸಮಿತಿ' ಎಂಬ ಸಂಸ್ಥೆಯೊಂದು ಈ ಅರ್ಜಿಯನ್ನು ಸಲ್ಲಿಸಿದ್ದು, ಆರೋಪ-ಪಟ್ಟಿಯಿಂದ ರಾಜೀವ್ ಗಾಂಧಿ ಹೆಸರನ್ನು ತೆಗೆಯುವಂತೆ ಸರ್ಕಾರಕ್ಕೆ ಆದೇಶ ನೀಡಬೇಕು ಎಂದು ಕೋರಿದೆ.

ಆದರೆ ಈ ವಿಷಯದಲ್ಲಿ ಅರ್ಜಿ ಸಲ್ಲಿಸುವ ಹಕ್ಕು ಈ ಸಂಸ್ಥೆಗೆ ಇದೆಯೇ ಎಂಬ ಪ್ರಶ್ನೆಯನ್ನು ನ್ಯಾಯಮೂರ್ತಿ ಸಿರಿಯಕ್ ಜೋಸೆಫ್ ಅವರು ಎತ್ತಿದ್ದು, ಅಂಥ ಹಕ್ಕು ಇದೆ ಎಂಬುದನ್ನು ದಾಖಲೆಗಳ ಸಹಿತ ಸಾಬೀತುಪಡಿಸಲು ಅರ್ಜಿದಾರರಿಗೆ ನ. 18ರವರೆಗೆ ಕಾಲಾವಕಾಶ ನೀಡಿದ್ದಾರೆ.

• **ಭಾರತಕ್ಕೆ ಬಂದಿಳಿದ ಕ್ಯಾಥೊಲಿಕ್ ಕ್ರೈಸ್ತರ ಪರಮೋಚ್ಚ ಧರ್ಮಗುರು**

ನವದೆಹಲಿ, ನ. 5– ಮತಾಂತರದ ವಿಷಯಕ್ಕೆ ಸಂಬಂಧಿಸಿ ವ್ಯಾಪಕ ಚರ್ಚೆ ಮತ್ತು ಸಂಘ ಪರಿವಾರದ ತೀವ್ರ ವಿರೋಧದ ಮಧ್ಯೆ ಕ್ಯಾಥೊಲಿಕ್ ಕ್ರೈಸ್ತರ ಪರಮೋಚ್ಚ ಧರ್ಮಗುರು ಪೋಪ್ ಜಾನ್ ಪಾಲ್ ಅವರು ಇಂದು ಸಂಜೆ ಇಲ್ಲಿಗೆ ಆಗಮಿಸಿದರು.

ಪಾಲಂ ವಿಮಾನ ನಿಲ್ದಾಣದಲ್ಲಿ ಪೋಪ್ ಅವರನ್ನು ವಿದೇಶಾಂಗ ವ್ಯವಹಾರ ಖಾತೆ ರಾಜ್ಯ ಸಚಿವ ಅಜಿತ್ ಕುಮಾರ್ ಪಾಂಜಾ ಅವರು ಪುಷ್ಪಗುಚ್ಛ ನೀಡಿ ಸಾಂಪ್ರದಾಯಿಕ ಭಾರತೀಯ ಶೈಲಿಯಲ್ಲಿ ಸ್ವಾಗತಿಸಿದರು.

50 ವರ್ಷಗಳ ಹಿಂದೆ

ಬುಧವಾರ, 6-11-1974

• **ಅತಿ ನಿದ್ರೆ ಚಿಂತೆಗಳ ಚಿಹ್ನೆ**

ನವದೆಹಲಿ, ನ. 5– ಅತಿ ನಿದ್ರೆ ಮಾಡುವವರಿಗೆ, ಅಂದರೆ ಒಂಬತ್ತು ಗಂಟೆಗೂ ಹೆಚ್ಚು ಕಾಲ ನಿದ್ರೆ ಮಾಡುವವರಿಗೆ, ಚಿಂತೆ ಮತ್ತು ನಿರುತ್ಸಾಹದ ಕಾಟ ಜಾಸ್ತಿ.

ಯೇಲ್ ವಿಶ್ವವಿದ್ಯಾಲಯದ ಅಮೆರಿಕನ್ ಸಂಶೋಧಕರ ದೃಷ್ಟಿಯಲ್ಲಿ, ಒಬ್ಬರು ನಿದ್ರೆ ಮಾಡುವ ಕಾಲ ಅವರವರ ಮಾನಸಿಕ ಸ್ಥಿತಿಯನ್ನವಲಂಬಿಸಿರುತ್ತದೆ.

ಕನಸು ಬೀಳುವವರು ಮತ್ತು ಕನಸು ಬೀಳದವರನ್ನು ವಿಂಗಡಿಸಿ ವೈದ್ಯರು ಎರಡು ಬಗೆಯ ನಿದ್ರೆಗಳ ಕುರಿತು ಅಧ್ಯಯಿಸಿದರು.

ಆರು ಗಂಟೆ ಕಾಲಕ್ಕೂ ಕಡಿಮೆ ನಿದ್ರೆ ಮಾಡುವವರಲ್ಲಿ ನೆಮ್ಮದಿ, ದಕ್ಷತೆ ಮತ್ತು ತಮ್ಮ ಮೇಲೆ ಹತೋಟಿ ಇರುವುದೆಂದು ಅವರ ಅಭಿಪ್ರಾಯ.

ಕನಸು ಬೀಳುವ ನಿದ್ರೆಯಲ್ಲಿ ಜನರು ತಮ್ಮ ಸುಪ್ತಪ್ರಜ್ಞೆ ಜತೆ ಸಂಪರ್ಕ ಬೆಳೆಸಿಕೊಂಡು ತಮ್ಮ ಸಮಸ್ಯೆಗಳನ್ನು ಬಿಡಿಸಿಕೊಳ್ಳುತ್ತಾರೆ. ಇದನ್ನು ಅವರು ಒಬ್ಬ ಮನೋ ವಿಶ್ಲೇಷಕ ತಜ್ಞನ ಜತೆ ಸಮಾಲೋಚಿಸಿದ ಅನುಭವಕ್ಕೆ ಹೋಲಿಸಬಹುದು. ತೊಂದರೆಗಳು ಕಾಡುತ್ತಿರುವ ಜನರಿಗೆ ಇಂತಹ ಚಿಕಿತ್ಸೆ ಅಗತ್ಯ. ಆದ್ದರಿಂದಲೇ ಅವರು ಹೆಚ್ಚುಕಾಲ ನಿದ್ರೆ ಮಾಡುತ್ತಿರುವಂತಾಗುತ್ತದೆ.

• **ತುರ್ತು ಹಣ ಬಳಸದಿದ್ದರೆ ಭೀಕರ ಆಹಾರ ಸಮಸ್ಯೆ**

ರೋಮ್, ನ. 5– ಸುಮಾರು ಎರಡು ಕೋಟಿ ಧಾನ್ಯ ಮತ್ತು 10 ಲಕ್ಷ ಟನ್ ಸೀಮೆಗೊಬ್ಬರದ ಕೊರತೆ ತುಂಬಲು ಮುಂದಿನ ಆರು ತಿಂಗಳಲ್ಲಿ 400–500 ಕೋಟಿ ಡಾಲರುಗಳನ್ನು ವೆಚ್ಚ ಮಾಡದಿದ್ದರೆ, ವಿಶ್ವದಲ್ಲಿ 1945ರಿಂದ ಈಚೆಗೆ ಕಾಣದಿದ್ದಂತಹ ಅತ್ಯಂತ ತೀವ್ರವಾದ ಆಹಾರ ಅಭಾವ ತಲೆದೋರುವುದೆಂದು 25 ಜನ ಅಂತರರಾಷ್ಟ್ರೀಯ ವಿಜ್ಞಾನಿಗಳ ತಂಡವೊಂದು ಎಚ್ಚರಿಕೆ ನೀಡಿದೆ.

ಏಕಸ್ವಾಮ್ಯವಾದಿಗಳಿಂದಾಗಿ ಭಾರತದ ಪ್ರತಿಭಾವಂತ ಉದ್ಯಮ ನಾಯಕರು ದಿಗಿಲುಗೊಂಡಿದ್ದಾರೆ

ಏಕಸ್ವಾಮ್ಯದ ಭೀತಿಗಿದೆ ಬಿಡುಗಡೆಯ ದಾರಿ

ವಿಶ್ಲೇಷಣೆ

ರಾಹುಲ್ ಗಾಂಧಿ

ಈಸ್ಟ್ ಇಂಡಿಯಾ ಕಂಪನಿಯು ಭಾರತವನ್ನು ನಿಶ್ಶಬ್ದಗೊಳಿಸಿತ್ತು. ಆ ಕಂಪನಿಯ ವ್ಯಾಪಾರ ಪ್ರಾವೀಣ್ಯದಿಂದಾಗಿ ಭಾರತವು ಮೌನವಾಗಲಿಲ್ಲ, ಬದಲಿಗೆ ಕಂಪನಿಯು ಭಾರತವನ್ನು ಉಸಿರುಗಟ್ಟಿಸಿ, ಮೌನವಾಗುವಂತೆ ಮಾಡಿತು. ನಮ್ಮ ಮಹಾರಾಜರು ಮತ್ತು ನವಾಬರ ಜೊತೆಗೆ ಪಾಲುದಾರಿಕೆ ಕುದುರಿಸಿಕೊಂಡು, ಅವರಿಗೆ ಲಂಚ ಕೊಟ್ಟು ಇಲ್ಲವೇ ಬೆದರಿಸಿ ಕಂಪನಿಯು ಭಾರತವನ್ನು ಉಸಿರುಗಟ್ಟಿಸಿತು. ಕಂಪನಿಯು ನಮ್ಮ ಬ್ಯಾಂಕಿಂಗ್, ಅಧಿಕಾರಿಶಾಹಿ ಮತ್ತು ಮಾಹಿತಿ ಜಾಲಗಳೆಲ್ಲವನ್ನೂ ನಿಯಂತ್ರಣಕ್ಕೆ ತೆಗೆದುಕೊಂಡಿತು. ಒಂದು ವಿಚಾರ ನೆನಪಿಡಬೇಕು, ನಾವು ನಮ್ಮ ಸ್ವಾತಂತ್ರ್ಯವನ್ನು ಬೇರೊಂದು ದೇಶದಿಂದಾಗಿ ಕಳೆದುಕೊಳ್ಳಲಿಲ್ಲ. ಏಕಸ್ವಾಮ್ಯವಾದಿ ಉದ್ಯಮ ಸಂಸ್ಥೆಯೊಂದು ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಂಡಿತು.

ವ್ಯಾಪಾರದ ನಿಯಮಗಳನ್ನು ತಾನೇ ರೂಪಿಸಿ, ತನ್ನ ನಿಯಂತ್ರಣದಲ್ಲಿ ಇರಿಸಿಕೊಂಡಿತು ಮತ್ತು ಸ್ಪರ್ಧೆಯನ್ನು ತೊಡೆದುಹಾಕಿತು. ಯಾರು ಮಾರಬೇಕು, ಏನನ್ನು ಮಾರಬೇಕು, ಯಾರಿಗೆ ಮಾರಬೇಕು ಎಂಬುದನ್ನೆಲ್ಲ ನಿರ್ದೇಶಿಸಿತು. ನಮ್ಮ ಜವಳಿ ಉದ್ಯಮ ಮತ್ತು ತಯಾರಿಕಾ ಉದ್ಯಮವನ್ನು ನಾಶಗೊಳಿಸಿತು. ಕಂಪನಿಯು ಯಾವುದಾದರೂ ಹೊಸ ಉತ್ಪನ್ನವನ್ನು ಸಂಶೋಧನೆ ಮಾಡಿದ್ದು ಅಥವಾ ಮಾರುಕಟ್ಟೆಯನ್ನು ಬೆಳೆಸಿದ್ದು ನನಗಂತೂ ಗೊತ್ತಿಲ್ಲ. ನನಗೆ ಗೊತ್ತಿರುವ ಒಂದು ವಿಚಾರವೆಂದರೆ, ಒಂದು ಪ್ರದೇಶದಲ್ಲಿ ಅಫೀಮು ಬೆಳೆಯುವ ಏಕಸ್ವಾಮ್ಯವನ್ನು ಸೃಷ್ಟಿಸಿಕೊಂಡು ಬೇರೊಂದು ಕಡೆ ತನ್ನದು ಮಾತ್ರವೇ ಆದ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಿತು. ಕಂಪನಿಯು ಭಾರತವನ್ನು ಕೊಳ್ಳೆ ಹೊಡೆಯುತ್ತಿರಬೇಕಾದರೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಇದನ್ನೊಂದು ಮಾದರಿ ಕಂಪನಿ ಎಂದು ಪರಿಗಣಿಸಲಾಗುತ್ತಿತ್ತು. ವಿದೇಶಿ ಪಾಲುದಾರರಿಗೆ ಕಂಪನಿಯ ಮೇಲೆ ಭಾರಿ ಪ್ರೀತಿ ಇತ್ತು.

ಈಸ್ಟ್ ಇಂಡಿಯಾ ಕಂಪನಿಯನ್ನು ಸುಮಾರು 150 ವರ್ಷಗಳ ಹಿಂದೆ ಮುಚ್ಚಲಾಯಿತು. ಆದರೆ, ಅದು ಆಗ ಸೃಷ್ಟಿಸಿದ್ದ ಭೀತಿ ಮತ್ತೊಮ್ಮೆ ಕಾಣಿಸಿಕೊಂಡಿದೆ. ಹೊಸ ತಲೆಮಾರಿನ ಏಕಸ್ವಾಮ್ಯವಾದಿಗಳು ಈ ಜಾಗದಲ್ಲಿ ಬಂದು ಕುಳಿತಿದ್ದಾರೆ. ಅವರು ಅಪಾರವಾದ ಸಂಪತ್ತನ್ನು ಗುಡ್ಡೆ ಹಾಕಿಕೊಂಡಿದ್ದಾರೆ. ಆದರೆ, ಭಾರತವು ಇನ್ನೂ ಹೆಚ್ಚು ಅಸಮಾನ ಆಯಿತು; ಇತರ ಎಲ್ಲರಿಗೂ ನ್ಯಾಯಯುತವಾಗಿ ಸಿಗಬೇಕಾದುದು ಏನೂ ಸಿಗದಂತಾಯಿತು. ನಮ್ಮ ಸಂಸ್ಥೆಗಳು ಈಗ ನಮ್ಮ ಜನರದ್ದಾಗಿ ಉಳಿದಿಲ್ಲ. ಈ ಸಂಸ್ಥೆಗಳು ಈ ಏಕಸ್ವಾಮ್ಯವಾದಿಗಳಿಗಾಗಿ ಬಿಡ್ ಕೂಗುವ ಸ್ಥಿತಿಗೆ ಬಂದಿವೆ. ಲಕ್ಷಾಂತರ ವ್ಯಾಪಾರಗಳು ನಾಶವಾದವು ಮತ್ತು ಭಾರತವು ತನ್ನ ಯುವಜನರಿಗಾಗಿ ಉದ್ಯೋಗ ಸೃಷ್ಟಿಸಲು ಅಸಮರ್ಥವಾಯಿತು. ಭಾರತ ಮಾತೆಯು ಎಲ್ಲ ಮಕ್ಕಳಿಗೂ ತಾಯಿಯೇ. ಆದರೆ, ಆಕೆಯ ಸಂಪನ್ಮೂಲ ಮತ್ತು ಅಧಿಕಾರ ಏಕಸ್ವಾಮ್ಯಗೊಂಡಿವೆ; ಪರಿಣಾಮವಾಗಿ, ಕೆಲವೇ ಕೆಲವರಿಗೆ ಬೇಕಾಗಿದ್ದನ್ನು ಕೊಟ್ಟು, ಇತರ ಎಲ್ಲರಿಗೂ ಎಲ್ಲವನ್ನೂ ಲಜ್ಜಾಹೀನವಾಗಿ ನಿರಾಕರಿಸುವಂತಾಗಿದ್ದು ತಾಯಿಯನ್ನು ಗಾಸಿಗೊಳಿಸಿದೆ.

ಭಾರತದ ನೂರಾರು ಮಂದಿ ಪ್ರತಿಭಾವಂತ ಹಾಗೂ ಚಲನಶೀಲ ಉದ್ಯಮ ನಾಯಕರು ಈ ಏಕಸ್ವಾಮ್ಯವಾದಿಗಳಿಂದಾಗಿ ದಿಗಿಲುಗೊಂಡಿದ್ದಾರೆ. ನೀವೂ ಅವರಲ್ಲಿ ಒಬ್ಬರೇ? ಫೋನ್‌ನಲ್ಲಿ ಮಾತನಾಡುವುದಕ್ಕೂ ಭಯವಾಗುತ್ತಿದೆಯೇ? ಈ ಏಕಸ್ವಾಮ್ಯವಾದಿಗಳು ಸರ್ಕಾರದ ಜೊತೆಗೆ ಶಾಮೀಲಾಗಿ ನಿಮ್ಮ ಉದ್ಯಮ ಕ್ಷೇತ್ರ ಪ್ರವೇಶಿಸಿ ನಿಮ್ಮನ್ನು ದಮನಿಸಬಹುದು ಎಂಬ ಭೀತಿಯೇ? ಸಿಬಿಐ, ಐಟಿ ಅಥವಾ ಜಾರಿ ನಿರ್ದೇಶನಾಲಯವು ನಿಮ್ಮ ಮೇಲೆ ದಾಳಿ ನಡೆಸಿ ನಿಮ್ಮ ಉದ್ಯಮವನ್ನು ಇವರಿಗೆ ಮಾರುವಂತೆ ಬಲವಂತ ಮಾಡಬಹುದು ಎಂಬ ಭಯವೇ? ನಿಮಗೆ ಅತ್ಯಂತ ಅಗತ್ಯವಾಗಿ ಬಂಡವಾಳ ಬೇಕಾಗಿದ್ದಾಗ ಅದು ಸಿಗದಂತೆ ಮಾಡಬಹುದು ಎಂಬ ಆತಂಕವೇ? ನಿಮ್ಮ ಮೇಲೆ ಆಕ್ರಮಣ ಮಾಡುವುದಕ್ಕಾಗಿ ಆಟದ ಮಧ್ಯದಲ್ಲಿಯೇ ಅವರು ನಿಯಮಗಳನ್ನು ಬದಲಾಯಿಸಬಹುದು ಎಂಬ ಭೀತಿ ನಿಮ್ಮಲ್ಲಿದೆಯೇ?

ಈ ಏಕಸ್ವಾಮ್ಯವಾದಿ ಗುಂಪುಗಳ ಚಟುವಟಿಕೆಯನ್ನು ವ್ಯಾಪಾರ ಎಂದು ಬಣ್ಣಿಸಿದರೆ ದಾರಿ ತಪ್ಪಿಸಿದಂತಾಗುತ್ತದೆ. ನೀವು ಅವರ ಜೊತೆಗೆ ಸ್ಪರ್ಧೆಗೆ ಇಳಿಯುತ್ತೀರಿ ಎಂದಾದರೆ, ನೀವು ಒಂದು ಕಂಪನಿಯೊಂದಿಗೆ ಸ್ಪರ್ಧಿಸುತ್ತಿಲ್ಲ; ಬದಲಿಗೆ ಭಾರತ ಸರ್ಕಾರದ ವ್ಯವಸ್ಥೆಯೊಂದಿಗೆ ಸ್ಪರ್ಧಿಸುತ್ತಿದ್ದೀರಿ ಎಂದೇ ಅರ್ಥ. ಅವರ ಪ್ರಧಾನ ಸಾಮರ್ಥ್ಯ ಉತ್ಪನ್ನ, ಗ್ರಾಹಕರು ಅಥವಾ ಯೋಚನೆಗಳಲ್ಲ; ಬದಲಿಗೆ ಭಾರತದ ಆಡಳಿತ ನಡೆಸುವ ಸಂಸ್ಥೆಗಳು ಮತ್ತು ಅದರ ನಿಯಂತ್ರಕರನ್ನು ನಿಯಂತ್ರಿಸುವ ಶಕ್ತಿ ಹಾಗೂ ಕಣ್ಗಾವಲು ನಡೆಸುವ ತಾಕತ್ತು. ಇವರು ನಿಮ್ಮಂತೆ ಅಲ್ಲ, ಬದಲಿಗೆ ಭಾರತೀಯರು ಏನನ್ನು ಓದಬೇಕು ಮತ್ತು ವೀಕ್ಷಿಸಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಭಾರತೀಯರು ಹೇಗೆ ಯೋಚಿಸಬೇಕು ಮತ್ತು ಏನನ್ನು ಮಾತನಾಡಬೇಕು ಎಂಬುದರ ಮೇಲೆಯೂ ಪ್ರಭಾವ ಬೀರುತ್ತಾರೆ. ಇಂದು, ಯಶಸ್ಸನ್ನು ನಿರ್ಣಯಿಸುವುದು ಮಾರುಕಟ್ಟೆ ಶಕ್ತಿಗಳಲ್ಲ, ಬದಲಿಗೆ ಅಧಿಕಾರ ಸಂಬಂಧಗಳು.

ನಿಮ್ಮ ಮನಸ್ಸಿನಲ್ಲಿ ಭೀತಿ ಇದೆ. ಆದರೆ, ಆಶಾಕಿರಣವೂ ಇದೆ.

'ಮ್ಯಾಚ್ ಫಿಕ್ಸಿಂಗ್'ನ ಈ ಏಕಸ್ವಾಮ್ಯದ ಗುಂಪುಗಳಿಗೆ ವ್ಯತಿರಿಕ್ತವಾಗಿ, 'ನ್ಯಾಯಸಮ್ಮತ'ವಾಗಿ ಹಾಗೂ ನಮ್ಮನ್ನು ಚಕಿತಗೊಳಿಸುವಂತೆ ಉದ್ಯಮ ನಡೆಸುವವರೂ ಬಹಳ ಮಂದಿ ಇದ್ದಾರೆ. ಸಣ್ಣ ವ್ಯಾಪಾರದಿಂದ ಭಾರಿ ಉದ್ಯಮದವರೆಗೆ ಇದು ವ್ಯಾಪಿಸಿದೆ. ಆದರೆ ನೀವು ಮೌನವಾಗಿದ್ದೀರಿ. ದಮನಕಾರಿ ವ್ಯವಸ್ಥೆಯಲ್ಲಿ ಕೂಡ ನೀವು ಹೋರಾಟ ನಡೆಸುತ್ತಿದ್ದೀರಿ. ಪೀಯೂಷ್ ಬನ್ಸಲ್ ಅವರನ್ನೇ ನೋಡಿ– ರಾಜಕೀಯದ ಯಾವುದೇ ನಂಟು ಇಲ್ಲದ ಮೊದಲ ತಲೆಮಾರಿನ ಈ ಉದ್ಯಮಿ ತಮ್ಮ 22ನೇ ವಯಸ್ಸಿನಲ್ಲಿ ಉದ್ಯಮವೊಂದನ್ನು ಆರಂಭಿಸಿದರು. 2010ರಲ್ಲಿ ಇತರರ ಜೊತೆ ಸೇರಿ ಲೆನ್ಸ್‌ಕಾರ್ಟ್ ಕಂಪನಿ ಆರಂಭಿಸಿದರು. ಕನ್ನಡಕ ಉದ್ಯಮದ ಚಹರೆಯನ್ನೇ ಇದು ಬದಲಿಸಿತು. ಇಂದು, ಲೆನ್ಸ್‌ಕಾರ್ಟ್ ಭಾರತದಲ್ಲಿ ಸಾವಿರಾರು ಮಂದಿಗೆ ಉದ್ಯೋಗ ಕೊಟ್ಟಿದೆ. ಫಕೀರ್ ಚಂದ್ ಕೊಹ್ಲಿ ಮ್ಯಾನೇಜರ್ ಆಗಿ 1970ರ ದಶಕದಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಅನ್ನು ಕಟ್ಟಿ ಬೆಳೆಸಿದರು. ಇದು ಭೀತಿಯ ಎದುರು ಮಹತ್ವಾಕಾಂಕ್ಷೆಯ ವಿಜಯ. ಐಬಿಎಂ ಮತ್ತು ಎಕ್ಸೆಂಚರ್‌ನಂತಹ ದೈತ್ಯ ಕಂಪನಿಗಳನ್ನು ಅವರದೇ ಅಂಗಳದಲ್ಲಿ ಎದುರಿಸುವ ದಿಟ್ಟತನ. ಟಿಸಿಎಸ್ ಮತ್ತು ಇತರ ಕೆಲವು ಕಂಪನಿಗಳು ಐಟಿ ಸೇವೆಯನ್ನು ಸಣ್ಣ ವ್ಯಾಪಾರದಿಂದ ದೊಡ್ಡ ಉದ್ಯಮವಾಗಿ ಬೆಳೆಸಿದವು. ಪೀಯೂಷ್ ಅವರಾಗಲಿ, ಕೊಹ್ಲಿ ಅವರಾಗಲಿ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಬಹುಶಃ ಅವರ ರಾಜಕೀಯ ಆದ್ಯತೆಗಳು ನನಗಿಂತ ಭಿನ್ನವಾಗಿರಬಹುದು. ಹಾಗಿದ್ದರೇನು? ಟೈನೊರ್, ಇನ್‌ಮೊಬಿ, ಮಾನ್ಯವರ್, ಜೊಮಾಟೊ, ಫ್ರಾಕ್ಟಲ್ ಅನಲಿಟಿಕ್ಸ್, ಅರಕು ಕಾಫಿ, ಟ್ರೆಡೆನ್ಸ್, ಅಮಾಗಿ, ಐಡಿ ಫೂಡ್ಸ್, ಫೋನ್‌ಪೇ, ಮೊಗ್ಲಿಕ್ಸ್, ಸುಲಾ ವೈನ್ಸ್, ಜಸ್‌ಪೇ, ಝುರೋದಾ, ವೆರಿಟಸ್, ಆಕ್ಸಿಜೊ, ಅವೆಂಡಸ್‌ನಂತಹ ಹೊಸ ತಲೆಮಾರಿನ ಕಂಪನಿಗಳು, ಎಲ್ ಆ್ಯಂಡ್ ಟಿ, ಹಲ್ದಿರಾಮ್, ಅರವಿಂದ ಐ ಹಾಸ್ಪಿಟಲ್, ಇಂಡಿಗೊ, ಏಷ್ಯನ್ ಪೇಂಟ್ಸ್, ಎಚ್‌ಡಿಎಫ್‌ಸಿ ಗ್ರೂಪ್, ಬಜಾಜ್ ಆಟೊ, ಸಿಪ್ಲಾ, ಮಹೀಂದ್ರ ಆಟೊ, ಟೈಟನ್‌ನಂತಹ ಹಳೆಯ ಕಂಪನಿಗಳು ಇಲ್ಲಿಯೇ ಹುಟ್ಟಿ ಬೆಳೆದು ನ್ಯಾಯಸಮ್ಮತವಾಗಿ ವ್ಯಾಪಾರ ನಡೆಸುವುದನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ಸಣ್ಣ ಉದಾಹರಣೆ. ಇವರಲ್ಲಿ ಹೆಚ್ಚಿನವರು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಇಲ್ಲಿಗೆ ಹೊಂದಿಕೆಯಾಗುವ ಮತ್ತು ಇನ್ನೂ ಉತ್ತಮವಾದ ನೂರಾರು ಕಂಪನಿಗಳು ಇರಬಹುದು. ಆದರೆ, ನಾನು ಏನನ್ನು ಹೇಳುತ್ತಿದ್ದೇನೆ ಎಂಬುದು ನಿಮಗೆ ಅರ್ಥವಾಗಿರುತ್ತದೆ.



ದುರ್ಬಲರು ಮತ್ತು ಧ್ವನಿರಹಿತರನ್ನು ರಕ್ಷಿಸುವುದೇ ನನ್ನ ರಾಜಕಾರಣ. ಧ್ವನಿಯಿಲ್ಲದ ಕೊನೆಯ ಸಾಲಿನ ವ್ಯಕ್ತಿಯನ್ನು ರಕ್ಷಿಸಬೇಕು ಎಂಬ ಗಾಂಧೀಜಿಯ ಮಾತು ನನಗೆ ಸ್ಫೂರ್ತಿ. ಈ ನಂಬಿಕೆಯೇ ನರೇಗಾ, ಆಹಾರ ಭದ್ರತೆ ಕಾಯ್ದೆ ಮತ್ತು ಭೂಸ್ವಾಧೀನ ಕಾಯ್ದೆಯನ್ನು ನಾನು ಬೆಂಬಲಿಸುವಂತೆ ಮಾಡಿತು. ನಿಯಾಮಗಿರಿ ಸಂಘರ್ಷದಲ್ಲಿ ನಾನು ಆದಿವಾಸಿಗಳ ಜೊತೆಗೆ ನಿಲ್ಲುವುದಕ್ಕೂ ಇದೇ ಕಾರಣ. ಕೃಷಿಗೆ ಸಂಬಂಧಿಸಿದ ಮೂರು ಕರಾಳ ಕಾಯ್ದೆಗಳ ವಿರುದ್ಧದ ಸಂಘರ್ಷದಲ್ಲಿ ನಾನು ರೈತರನ್ನು ಬೆಂಬಲಿಸಿದೆ. ಮಣಿಪುರ ಜನರ ವೇದನೆಯನ್ನೂ ಆಲಿಸಿದ್ದೇನೆ.

ಗಾಂಧೀಜಿಯ ಮಾತುಗಳ ಗಾಢ ಅರ್ಥವನ್ನು ನಾನು ಪೂರ್ಣವಾಗಿ ಗ್ರಹಿಸಿಕೊಂಡಿಲ್ಲ ಎಂಬುದು ಈಗ, ನಾನು ಇದನ್ನು ಬರೆಯುತ್ತಿರುವಾಗ ಮನದಟ್ಟಾಗುತ್ತಿದೆ. ಸಾಲು ಎಂಬುದು ಇಲ್ಲಿ ಒಂದು ರೂಪಕ. ಹಾಗೆ ನೋಡಿದರೆ, ಭಿನ್ನವಾದ ಹಲವು ಸಾಲುಗಳು ಇವೆ. ನೀವು ಈಗ ಇರುವ ಸಾಲು ಉದ್ಯಮವಾಗಿದ್ದರೆ, ಶೋಷಣೆಗೆ ಒಳಗಾಗುತ್ತಿದ್ದೀರಿ, ಅನನುಕೂಲಕರ ಸ್ಥಿತಿಯಲ್ಲಿದ್ದೀರಿ ಎಂದು ಅರ್ಥ. ನಿಮಗೆ ನಿರಾಕರಿಸಲಾಗಿರುವ ನ್ಯಾಯಸಮ್ಮತತೆ ಮತ್ತು ಸಮಾನ ಅವಕಾಶಗಳನ್ನು ಒದಗಿಸುವುದೇ ನನ್ನ ರಾಜಕಾರಣ.

ಸರ್ಕಾರವು ಬಹುಪಾಲು ಮಂದಿಯ ಹಿತ ಬಲಿಕೊಟ್ಟು, ಒಂದೇ ಉದ್ಯಮ ಸಂಸ್ಥೆಯನ್ನು ಬೆಂಬಲಿಸಲು ಮತ್ತು ವ್ಯಾಪಾರ ವ್ಯವಸ್ಥೆಯಲ್ಲಿ ಬೇನಾಮಿ ಸಮೀಕರಣಗಳನ್ನು ಬೆಂಬಲಿಸಲು ಅವಕಾಶ ಕೊಡಬಾರದು. ಉದ್ಯಮ ಸಂಸ್ಥೆಗಳನ್ನು ಬೆದರಿಸಲು ಮತ್ತು ದಾಳಿ ಮಾಡಲು ಸರ್ಕಾರದ ಸಂಸ್ಥೆಗಳನ್ನು ಆಯುಧವಾಗಿ ಬಳಸಬಾರದು. ನಿಮ್ಮಲ್ಲಿರುವ ಭೀತಿಯು ದೊಡ್ಡ ಉದ್ಯಮದ ಏಕಸ್ವಾಮ್ಯವಾದಿಗಳಿಗೆ ವರ್ಗಾವಣೆ ಆಗುವುದನ್ನೂ ನಾನು ಬೆಂಬಲಿಸುವುದಿಲ್ಲ. ಅವರು ಕೆಡುಕಿನ ವ್ಯಕ್ತಿಗಳಲ್ಲ; ಬದಲಿಗೆ, ನಮ್ಮ ಸಮಾಜ ಹಾಗೂ ರಾಜಕೀಯ ಪರಿಸರದಲ್ಲಿನ ಹುಳುಕುಗಳ ಫಲಿತಾಂಶ. ಅವರಿಗೂ ಅವಕಾಶ ಇರಬೇಕು, ನಿಮಗೂ ಅವಕಾಶ ಸಿಗಬೇಕು.

ಇದು ನಮ್ಮೆಲ್ಲರಿಗಾಗಿ ಇರುವ ದೇಶ. ಸುಸ್ತಿ ಸಾಲ ಇದ್ದಾಗಲೂ ಅತಿ ದೊಡ್ಡ ಮತ್ತು ಹೆಚ್ಚು ಸಂಪರ್ಕಗಳನ್ನು ಹೊಂದಿರುವ 100 ಕಂಪನಿಗಳಿಗೆ ಮಾತ್ರ ಸಾಲ ನೀಡುವ ಮೋಹವನ್ನು ನಮ್ಮ ಬ್ಯಾಂಕುಗಳು ಬಿಡಬೇಕು. ನ್ಯಾಯಯುತವಾಗಿ ವ್ಯಾಪಾರ ನಡೆಸುವ ಸಂಸ್ಥೆಗಳಿಗೆ ಸಾಲ ನೀಡುವ ಮೂಲಕವೂ ಲಾಭ ಮಾಡಿಕೊಳ್ಳಬಹುದು ಎಂಬುದನ್ನು ಕಂಡುಕೊಳ್ಳಬೇಕು. ಕೊನೆಯದಾಗಿ, ರಾಜಕೀಯ ವರ್ತನೆಯನ್ನು ರೂಪಿಸುವಲ್ಲಿ ಸಾಮಾಜಿಕ ಒತ್ತಡ ಮತ್ತು ಪ್ರತಿರೋಧದ ಶಕ್ತಿಯನ್ನು ನಾವು ಕಡೆಗಣಿಸಲೇಬಾರದು. ಇದಕ್ಕಾಗಿ ಅವತಾರ ಪುರುಷನ ಅಗತ್ಯವೇನೂ ಇಲ್ಲ. ಸಂಪತ್ತು ಸೃಷ್ಟಿಸುವ ಮತ್ತು ಎಲ್ಲರಿಗೂ ಉದ್ಯೋಗ ಕೊಡುವ ಆ ಬದಲಾವಣೆ ನೀವೇ ಆಗಬಹುದು.

ಪ್ರಗತಿಪರ ಭಾರತದ ಉದ್ಯಮಕ್ಕೆ ಹೊಸ ದಿಕ್ಕು ತೋರುವ ಆ ಕಾಲ ಈಗ ಬಂದಿದೆ ಎಂದು ನಾನು ನಂಬಿದ್ದೇನೆ.

ಲೇಖಕ: ಲೋಕಸಭೆಯ ವಿರೋಧ ಪಕ್ಷದ ನಾಯಕ

ಸಂಗತ

ನಿದ್ರಾ ಸಮಯ: ಯಾವುದು ಹಿತ?

ಆಧುನಿಕ ಜೀವನಶೈಲಿಗೆ ತಕ್ಕಂತೆ ನಿದ್ರೆಯ ಸಮಯ ಬದಲಾಗಿದ್ದರೂ ಅದನ್ನು ಸೂಕ್ತವಾಗಿ ನಿರ್ವಹಿಸುವುದು ಒಳಿತು

• ಎಚ್.ಬಿ.ಚಂದ್ರಶೇಖರ್

ಸರ್ಕಾರಿ ಪ್ರೌಢಶಾಲೆಯೊಂದಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದೆ. ಈ ಸಂದರ್ಭದಲ್ಲಿ, ಹತ್ತನೇ ತರಗತಿಯಲ್ಲಿ ದೀರ್ಘಕಾಲದಿಂದ ಗೈರುಹಾಜರಾಗುತ್ತಿದ್ದ ಕೆಲವು ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಲಾಯಿತು. ಆಗ ಕುತೂಹಲಕಾರಿ ಅಂಶವೊಂದು ಗಮನಕ್ಕೆ ಬಂದಿತು. ಮೂವರು ವಿದ್ಯಾರ್ಥಿಗಳು ರಾತ್ರಿ ತಡವಾಗಿ ಮಲಗುವ ಕಾರಣದಿಂದ ಬೆಳಿಗ್ಗೆ ತಡವಾಗಿ ಏಳುವುದರಿಂದ ಶಾಲೆ ತಪ್ಪಿಸುತ್ತಿರುವುದಾಗಿ ತಿಳಿಸಿದರು. ಬೆಳಿಗ್ಗೆ 8 ಗಂಟೆಯೊಳಗೆ ಎದ್ದರೂ ದಿನಪೂರ್ತಿ ಒಂದು ರೀತಿಯ ಅನಾರೋಗ್ಯ ತಮ್ಮನ್ನು ಆವರಿಸಿರುವಂತೆ ಅನ್ನಿಸುವುದಾಗಿ ತಿಳಿಸಿದರು.

ಪೋಷಕರು ಕಚೇರಿ ಕೆಲಸ ಮುಗಿಸಿಕೊಂಡು ರಾತ್ರಿ ಮನೆಗೆ ಬಂದು, ಅಡುಗೆ ಸಿದ್ಧಪಡಿಸಿ, ಎಲ್ಲರೂ ಊಟ ಮಾಡುವ ವೇಳೆಗೆ 11 ಗಂಟೆ ದಾಟುತ್ತದೆ. ಜೊತೆಗೆ ಮನೆಯವರೆಲ್ಲ ಸೇರಿ ಒಂದಷ್ಟು ಮಾತುಕತೆ ನಡೆಸುವ ವೇಳೆಗೆ ಮಧ್ಯರಾತ್ರಿ 12 ಗಂಟೆ ದಾಟುವುದರಿಂದ, ಬೆಳಿಗ್ಗೆ ಬೇಗ ಏಳಲು ಆಗುತ್ತಿಲ್ಲ ಎಂದು ಅಲವತ್ತುಕೊಂಡರು. ಹಿರಿಯರು ರಾತ್ರಿ ತಡವಾಗಿ ಮಲಗಿದರೂ ಅನಿವಾರ್ಯವಾಗಿ ಬೆಳಿಗ್ಗೆ ಬೇಗ ಎದ್ದು ತಮ್ಮ ಕೆಲಸಗಳಿಗೆ ತೆರಳುತ್ತಾರೆ. ಮಕ್ಕಳಿಗೆ ಸಿದ್ಧರಾಗಿ ಶಾಲೆಗೆ ತೆರಳಲು ತಿಳಿಸಿದರೂ ಅವರು ತಡವಾಗಿ ಏಳುವ ಕಾರಣದಿಂದ ಸಮಯಕ್ಕೆ ಸರಿಯಾಗಿ ಸಿದ್ಧರಾಗದೆ ಶಾಲೆ ತಪ್ಪಿಸುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಈ ಮಕ್ಕಳಿಗೆ ಅವರು ಈಗ ಏಳುತ್ತಿರುವ ಸಮಯಕ್ಕಿಂತ ಅರ್ಧ ಗಂಟೆ ಮುಂಚೆ ಏಳುವ ಅಭ್ಯಾಸ ಮಾಡಿಕೊಳ್ಳುತ್ತಾ ಕ್ರಮೇಣ ಏಳು ಗಂಟೆಯೊಳಗೆ ಏಳುವ ಅಭ್ಯಾಸ ರೂಢಿ ಮಾಡಿಕೊಳ್ಳಲು ತಿಳಿಹೇಳಿದೆ.

ಆಧುನಿಕ ಜೀವನಶೈಲಿ ಎಂದರೆ ರಾತ್ರಿ ತಡವಾಗಿ ಮಲಗಿ, ಬೆಳಿಗ್ಗೆ ನಿಧಾನವಾಗಿ ಏಳುವುದು ಎಂಬಂತಾಗಿದೆ. ಉದ್ಯೋಗ, ಓದು, ಪರೀಕ್ಷೆಗೆ ತಯಾರಿ ಎಂಬಂತಹ ಕಾರಣಗಳು ಇಲ್ಲದಿದ್ದಾಗ್ಯೂ ಮೊಬೈಲ್ ಫೋನ್ ನೋಡುತ್ತಾ ಅಥವಾ ಒಟಿಟಿಯಲ್ಲಿನ ಸಿನಿಮಾ ಅಥವಾ ಧಾರಾವಾಹಿಗಳನ್ನು ನೋಡುತ್ತಾ ಇಂದಿನ ಮಕ್ಕಳು ರಾತ್ರಿ 2-3 ಗಂಟೆಯವರೆಗೆ ಎದ್ದಿರುತ್ತಾರೆ. ಸಹಜವಾಗಿ ಬೆಳಿಗ್ಗೆ 10 ಗಂಟೆಯ ನಂತರ ಅವರ ರೂಮಿನ ಬಾಗಿಲುಗಳು ನಿಧಾನವಾಗಿ ತೆರೆದುಕೊಳ್ಳುತ್ತವೆ. ಈ ಸನ್ನಿವೇಶ ಕೆಲವರ ಮನೆಗಳಲ್ಲಿ ಸಾಮಾನ್ಯ ಎಂಬಂತೆ ಆಗಿದೆ ಎನ್ನಬಹುದು. ಬೆಳಿಗ್ಗೆ 5-6 ಗಂಟೆಗೆ ಎದ್ದು ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಗುವ ಮನೆಯ ಹಿರಿಯರಿಗೆ ನಿಧಾನವಾಗಿ ನಿದ್ರೆಯಿಂದ ಏಳುವ ಕಿರಿಯರ ಜೊತೆ ತಾಕಲಾಟಗಳು ಆಗಿ, ಕೊನೆಗೆ ಹಿರಿಯರು ಅಸಹಾಯಕತೆಯಿಂದ ಸುಮ್ಮನಾಗುತ್ತಾರೆ.

ಬೆಳಿಗ್ಗೆ ಬೇಗ ಎದ್ದು ಕೆಲಸಗಳಲ್ಲಿ ತೊಡಗಿ, ರಾತ್ರಿ ಬೇಗ ಮಲಗುವುದು ಒಳ್ಳೆಯ ಅಭ್ಯಾಸ ಎಂದು ವಿಜ್ಞಾನಿಗಳು, ಆರೋಗ್ಯ ತಜ್ಞರು ಹೇಳುತ್ತಾರೆ. ಸಮಾಜವು ಬೆಳಿಗ್ಗೆ ಬೇಗ ಏಳುವವರಿಗೆ ಸೂಕ್ತವಾಗುವಂತೆ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದೆ. ತುರ್ತು ಕೆಲಸಗಳು ಇರುವಾಗ ರಾತ್ರಿ ವೇಳೆ ಸಕ್ರಿಯವಾಗಿ ಇರುವವರಿಗೆ ಬೆಳಿಗ್ಗೆ ಬೇಗ ಎದ್ದು ಸಿದ್ಧವಾಗುವುದು ಕಷ್ಟವಾಗುತ್ತದೆ. ಬೆಳಿಗ್ಗೆ ಬೇಗ ಎದ್ದಾಗ ಶಕ್ತಿ, ಉತ್ಸಾಹ ಕಡಿಮೆಯಾದಂತೆ ಅನ್ನಿಸಿ, ಮೂಡ್ ಇಲ್ಲದಂತೆ ಆಗುವ ಸಾಧ್ಯತೆ ಇರುತ್ತದೆ. ನಿದ್ರೆಯ ಲಯ ತಪ್ಪಿದರೆ ದೇಹದ ಜೈವಿಕ ಗಡಿಯಾರವನ್ನು ಸರಿಪಡಿಸಿಕೊಳ್ಳಲು ಹೆಚ್ಚಿನ ಶ್ರಮ ವಹಿಸಬೇಕಾಗುತ್ತದೆ.

ಇಂತಹ ಅಭ್ಯಾಸಗಳಲ್ಲಿ ವ್ಯಕ್ತಿಗಳ ನಡುವೆ ವ್ಯತ್ಯಾಸ ಇರುತ್ತದೆ. ಕೆಲವರಿಗೆ ಬೆಳಿಗ್ಗೆ ಬೇಗ ಎದ್ದು ಕೆಲಸದಲ್ಲಿ ತೊಡಗುವುದು ಉತ್ಸಾಹ, ಹಿತಕರ ಎನಿಸಿದರೆ ಅವರು ಮುಂಜಾವಿನವರು. ಇನ್ನು ಕೆಲವರಿಗೆ ಸಂಜೆ, ರಾತ್ರಿ ವೇಳೆ ಕೆಲಸದಲ್ಲಿ ತೊಡಗುವುದು ಖುಷಿ ಕೊಡುತ್ತದೆ. ಈ ವ್ಯತ್ಯಾಸವನ್ನು ಅರ್ಥ ಮಾಡಿಕೊಂಡು, ಅದನ್ನು ಗೌರವಿಸುವ ಅಗತ್ಯ ಇದೆ. ಪ್ರಕೃತಿಸಹಜ ಸ್ವಭಾವಗಳನ್ನು ಬದಲಿಸಿಕೊಳ್ಳುವುದು ಕಠಿಣವಾಗುತ್ತದೆ. ಬೆಳಿಗ್ಗೆ ಬೇಗ ಏಳುವವರು ಹೆಚ್ಚು ಕ್ರಿಯಾಶೀಲರು, ಸೃಜನಶೀಲರು ಮತ್ತು ಆರೋಗ್ಯವಂತರು ಆಗಿರುತ್ತಾರೆ ಎಂಬ ಭಾವನೆ ಸಹಜವಾಗಿ ಇದೆ. ಆದಾಗ್ಯೂ ಸಮೀಕ್ಷೆಗಳಲ್ಲಿ ಕಂಡುಕೊಂಡಂತೆ, ರಾತ್ರಿ ಸಕ್ರಿಯವಾಗಿ ಇರುವವರು ಆದಾಯ ಗಳಿಕೆಯಲ್ಲಿ ಬೆಳಿಗ್ಗೆ ಸಕ್ರಿಯವಾಗಿ ಇರುವವರಿಗಿಂತ ಮುಂದಿದ್ದಾರೆ ಎನ್ನಲಾಗಿದೆ. ಎರಡೂ ರೀತಿಯ ವ್ಯಕ್ತಿಗಳಲ್ಲಿ ಕೆಲವು ಅಂಶಗಳು ಉತ್ತಮವಾಗಿ ಇರುವಂತೆ ಕಾಣುತ್ತದೆ.

ಅಂತಿಮವಾಗಿ ಶಿಕ್ಷಣ, ವೃತ್ತಿ, ಕುಟುಂಬ ಜೀವನವನ್ನು ಯಶಸ್ವಿಯಾಗಿ ನಿಭಾಯಿಸುವುದೇ ಮುಖ್ಯ ಅಂಶವಾಗುತ್ತದೆ. ಈ ದಿಸೆಯಲ್ಲಿ ವ್ಯಕ್ತಿ ಯಶಸ್ವಿಯಾದರೆ ಯಾವುದೇ ಹಾನಿ ಇರದು. ಜವಾಬ್ದಾರಿಗಳು ಹೆಚ್ಚಾದಂತೆ ವ್ಯಕ್ತಿಯು ರಾತ್ರಿ ವೇಳೆಯ ಸಕ್ರಿಯ ಜೀವನಶೈಲಿಯನ್ನು ಅಗತ್ಯಕ್ಕೆ ತಕ್ಕಂತೆ ಬದಲಿಸಿಕೊಂಡು ನಿರ್ವಹಿಸುವ ಉದಾಹರಣೆಗಳನ್ನು ಕಾಣುತ್ತೇವೆ. ಆದರೆ ವಿದ್ಯಾರ್ಥಿ ದೆಸೆಯಿಂದಲೇ ರಾತ್ರಿ ಬಹು ಹೊತ್ತಿನವರೆಗೆ ಸಕ್ರಿಯವಾಗಿದ್ದು, ಮುಂಜಾನೆಯ ಶೈಕ್ಷಣಿಕ ಚಟುವಟಿಕೆಗಳನ್ನು ನಿರ್ವಹಿಸಲು ಸಮಸ್ಯೆ ಆಗದಂತೆ ಎಚ್ಚರ ವಹಿಸುವತ್ತ ಅವರನ್ನು ಸಜ್ಜುಗೊಳಿಸುವುದು ಮುಖ್ಯವಾಗಿದೆ. ಇದರ ಜೊತೆಗೆ ಪ್ರತಿಯೊಬ್ಬರೂ ಸೂಕ್ತ ನಿದ್ರೆಯ ಅಗತ್ಯವನ್ನು ಮನಗಂಡು, ಅದನ್ನು ಹೊಂದುವತ್ತ ಗಮನಹರಿಸಬೇಕಿದೆ.

ವಾಚಕರ ವಾಣಿ

ಪಟಾಕಿ ದುರಂತ: ಉಡಾಫೆ ಧೋರಣೆಯೇ ಕಾರಣ

ದೀಪಾವಳಿಯ ಸಂಭ್ರಮದ ಜೊತೆಗೆ ಪಟಾಕಿಗಳ ಸದ್ದೂ ಬೆರೆತುಹೋಗಿದೆ. ಆದರೆ, ಪಟಾಕಿಗಳಿಂದ ಆಗುತ್ತಿರುವ ಅವಘಡಗಳು ಮನಸ್ಸಿಗೆ ಬೇಸರ ತರಿಸುತ್ತವೆ. ತಿಳಿವಳಿಕೆ ಮೂಡಿಸುವ ಪ್ರಯತ್ನಗಳು ಎಷ್ಟೇ ಆದರೂ ಪ್ರತಿವರ್ಷ ಒಂದಲ್ಲ ಒಂದು ಬಗೆಯ ದುರಂತಗಳು ಘಟಿಸುತ್ತಲೇ ಇರುತ್ತವೆ. ಹಬ್ಬದ ಖರೀದಿಯ ಜೊತೆಗೆ ಆಸ್ಪತ್ರೆಯ ಖರ್ಚಿಗಾಗಿ ಹಣ ತೆಗೆದಿರಿಸಬೇಕಾದಂತಹ ಪರಿಸ್ಥಿತಿಗೆ ತಲುಪುತ್ತಿದ್ದೇವೆ. ಕನಿಷ್ಠ ಮಟ್ಟದ ಎಚ್ಚರಿಕೆ ವಹಿಸಿದರೂ ಅವಘಡಗಳನ್ನು ತಪ್ಪಿಸಬಹುದು. ಉಡಾಫೆ ಧೋರಣೆಯೇ ದುರಂತಗಳಿಗೆ ಹೆಚ್ಚಿನ ಮಟ್ಟಿಗೆ ಕಾರಣವಾಗುತ್ತಿದೆ.

ಪಟಾಕಿ ಅವಘಡಗಳಲ್ಲಿ ದೇಹದ ಬಲು ಸೂಕ್ಷ್ಮ ಅಂಗವಾದ ಕಣ್ಣಿಗೆ ಹಾನಿಯಾಗುವ ಸಾಧ್ಯತೆಯೇ ಹೆಚ್ಚು. ಅದರಲ್ಲೂ ಮಕ್ಕಳು, ವಯೋವೃದ್ಧರೇ ಅಧಿಕ ಸಂಖ್ಯೆಯಲ್ಲಿ ಗಾಸಿಗೊಳ್ಳುತ್ತಾರೆ. ಈ ಬಾರಿಯ ಹಬ್ಬದ ಮೂರು ದಿನಗಳಲ್ಲಿ ಬೆಂಗಳೂರಿನ ಆಸ್ಪತ್ರೆಗಳಲ್ಲಿ ನೂರಾರು ಮಂದಿ ದಾಖಲಾಗಿದ್ದಾರೆ. ನೋವು–ನರಳಾಟದ ಜೊತೆಗೆ ಆಸ್ಪತ್ರೆಗಳವರು ಕೇಳಿದಷ್ಟು ಹಣ ಕೊಟ್ಟು ಚಿಕಿತ್ಸೆ ಪಡೆಯುವಂತಹ ಸ್ಥಿತಿ ತಂದುಕೊಳ್ಳಬಾರದು. ಬೆಳಕಿನ ಹಬ್ಬ ನಮ್ಮ ಅಜಾಗರೂಕತೆಯಿಂದ ಬದುಕನ್ನು ಕತ್ತಲಿನೆಡೆಗೆ ದೂಡದಿರಲಿ.

ಮಯೂರ ಹಾಲವರ್ಥಿ, ಕೊಪ್ಪಳ

ನಡೆಜಾಣರಿಲ್ಲ, ನುಡಿಜಾಣರೇ ಎಲ್ಲ

ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಂದ ಹಿಡಿದು ಕರ್ನಾಟಕವನ್ನು ಪ್ರತಿನಿಧಿಸುವ ಕೇಂದ್ರ ಸಚಿವರಾದಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ತನಕ ಕನ್ನಡಪ್ರೇಮ ಉಕ್ಕಿ ಹರಿಯಿತು. ಆದರೆ ವಾಸ್ತವವಾಗಿ ಕರ್ನಾಟಕದಲ್ಲಿ ಕನ್ನಡ ಹಿಮ್ಮುಖವಾಗಿ ಚಲಿಸುತ್ತಿರುವಂತೆ ಕಾಣುತ್ತದೆ. ಒಕ್ಕೂಟ ಭಾರತದ ಉದ್ಯೋಗ ನೇಮಕಾತಿ ಪರೀಕ್ಷೆಗಳಲ್ಲಿ ಇಂದಿಗೂ ಹಿಂದಿ, ಇಂಗ್ಲಿಷ್ ಭಾಷೆಗಳ ಆಧಿಪತ್ಯವೇ ಮುಂದುವರಿದಿದೆ. ಶಿಕ್ಷಣ ಮಾಧ್ಯಮ ಹಾಗೂ ಆಡಳಿತ ವ್ಯವಹಾರದಲ್ಲೂ ಇದೇ ಸ್ಥಿತಿ ಇದೆ. ನೇಮಕಾತಿ ಪರೀಕ್ಷೆಯನ್ನು ಹಿಂದಿಯಲ್ಲಿ ಬರೆದು ಪಾಸಾಗಿ ದಕ್ಷಿಣ ಭಾರತಕ್ಕೆ, ಮುಖ್ಯವಾಗಿ ಕರ್ನಾಟಕಕ್ಕೆ ಸರ್ಕಾರಿ ನೌಕರಶಾಹಿಯ ವಲಸೆ ಅಸಹಜವಾಗಿ ಹರಿದುಬರುತ್ತಿದೆ. ಅದು ಇಲ್ಲಿನ ಜನಲಕ್ಷಣವನ್ನು ಅಸ್ತವ್ಯಸ್ತಗೊಳಿಸಿದೆ.

ಕರ್ನಾಟಕ ಸರ್ಕಾರವು ಕೆಪಿಎಸ್‌ಸಿ ಮೂಲಕ ಡಿಸೆಂಬರ್‌ನಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ನೇಮಕಾತಿ ಪರೀಕ್ಷೆಯನ್ನು ನಡೆಸುತ್ತಿದೆ. ಅದರ ಎರಡನೇ ಪತ್ರಿಕೆಯಲ್ಲಿ ಸಂವಹನಕ್ಕೆ ಸಂಬಂಧಿಸಿದಂತೆ ಇಂಗ್ಲಿಷ್‌ನಲ್ಲಿ ಪ್ರಶ್ನೆಗಳು ಇರಲಿವೆ. ಈ ಮೊದಲ ನೇಮಕಾತಿಗಳಲ್ಲಿ ಈ ಪತ್ರಿಕೆಯು ಪಂಚಾಯತ್ ರಾಜ್ ವ್ಯವಸ್ಥೆ ಕುರಿತಾಗಿತ್ತು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನೇಮಕಕ್ಕೆ ಪಂಚಾಯತ್ ರಾಜ್ ಕುರಿತಾದ ಪ್ರಶ್ನೆಪತ್ರಿಕೆ ಅತ್ಯಂತ ವೈಜ್ಞಾನಿಕವಾಗಿತ್ತು ಹಾಗೂ ನ್ಯಾಯಯುತವಾಗಿತ್ತು. ಇದೇ ಬಗೆಯ ಅನ್ಯಾಯ ಅಕ್ಟೋಬರ್‌ನಲ್ಲಿ ನಡೆದ ಗ್ರಾಮ ಆಡಳಿತ ಅಧಿಕಾರಿಗಳ ನೇಮಕಾತಿ ಪರೀಕ್ಷೆಯಲ್ಲಿಯೂ ನಡೆದಿತ್ತು.

ಹೀಗೆ ಒಕ್ಕೂಟ ಸರ್ಕಾರ ಹಾಗೂ ರಾಜ್ಯ ಸರ್ಕಾರ ಕನ್ನಡ ಭಾಷೆಯ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿವೆ. ಎಲ್ಲರೂ ನುಡಿಜಾಣರೇ ಆಗಿದ್ದಾರೆ, ನಡೆಜಾಣರು ಕಾಣುತ್ತಿಲ್ಲ ಎಂಬಂತಾಗಿದೆ.

ಗಿರೀಶ್ ಮತ್ತೇರ, ಹೊದಿಗೆರೆ, ಚನ್ನಗಿರಿ

ಭಕ್ತರ ಸಂಕಷ್ಟ ತಪ್ಪಲಿ

ಹಾಸನಾಂಬೆ ಜಾತ್ರಾ ಮಹೋತ್ಸವದ ವಿಶೇಷ ಟಿಕೆಟ್ ಮಾರಾಟ ಹಾಗೂ ಕಾಣಿಕೆಯಿಂದ ಈ ಬಾರಿ ದಾಖಲೆಯ ₹ 12.63 ಕೋಟಿ ಆದಾಯ ಸಂಗ್ರಹವಾಗಿರುವುದಾಗಿ ವರದಿಯಾಗಿದೆ (ಪ್ರ.ವಾ., ನ. 5). ಆದರೆ ಹಾಸನಾಂಬೆಯ ದರ್ಶನದ ಕಡೆಯ ದಿನ ಸಾವಿರಾರು ಮಂದಿ ಸೇರಿದ್ದ ಸರದಿ ಸಾಲಿನಲ್ಲಿ ಅವ್ಯವಸ್ಥೆ ಉಂಟಾಗಿದ್ದು ದುರದೃಷ್ಟಕರ. ದರ್ಶನಕ್ಕೆ ನಿಗದಿಪಡಿಸಿದ್ದ ದಿನಗಳ ಅವಧಿಯಲ್ಲಿ ವಸತಿ, ಸಾರಿಗೆ, ಆಹಾರ, ನೀರು, ವೈದ್ಯಕೀಯ ಸೌಲಭ್ಯದಂತಹವುಗಳ ಕೊರತೆಯಿಂದ ಭಕ್ತರು ಸಂಕಟಪಟ್ಟಿದ್ದನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಬೇಕು.

ವರ್ಷವರ್ಷವೂ ಹೆಚ್ಚು ಭಕ್ತರನ್ನು ಆಕರ್ಷಿಸುತ್ತಿರುವ ಈ ದೇವಿಯ ದರ್ಶನದ ಸಂದರ್ಭದಲ್ಲಿ ರಾಜಕಾರಣಿಗಳು, ಅಧಿಕಾರಿಗಳು, ಪೊಲೀಸರು ಹಾಗೂ ನೌಕರರ ನಡುವಿನ ಬೀದಿಜಗಳವು ಭಕ್ತರಲ್ಲಿ ಬೇಸರವನ್ನು ಉಂಟುಮಾಡಿತು.

ಮಂಜುಳಾ ರಾಮಶೇಷ, ಹುಲಿಮಂಗಲ

ನೋಟಿಸ್ ಹಿಂಪಡೆದರಷ್ಟೇ ಸಾಲದು

ರೈತರ ಸ್ವಾಧೀನದಲ್ಲಿರುವ ಜಮೀನಿನ ಪಹಣಿಗಳಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿರುವ ಕುರಿತು ಕಾನೂನು ಸಚಿವರು, ಕಂದಾಯ ಸಚಿವರು ಮತ್ತಿತರರೊಡನೆ ನಡೆಸಿದ ಸಭೆಯ ನಂತರ, ರೈತರಿಗೆ ನೀಡಲಾಗಿರುವ ನೋಟಿಸ್‌ಗಳನ್ನು ವಾಪಸ್ ಪಡೆದು, ಪಹಣಿಯಲ್ಲಿ ಯಾವುದೇ ರೀತಿಯ ತಿದ್ದುಪಡಿಗಳನ್ನು ಮಾಡಿದ್ದರೆ ತಕ್ಷಣ ರದ್ದು ಮಾಡಬೇಕೆಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಪ್ರಕರಣ ಗಂಭೀರ ಸ್ವರೂಪ ಪಡೆಯುವ ಮುನ್ನ ಅವರು ತೆಗೆದುಕೊಂಡ ಕ್ರಮ ಸಕಾಲಿಕ. ಆದರೆ, ಈ ವಿವಾದದ ಕೇಂದ್ರ ಬಿಂದು ಎನ್ನಲಾದ ವಕ್ಫ್ ಸಚಿವರೂ ಈ ಸಭೆಯಲ್ಲಿ ಪಾಲ್ಗೊಂಡಿದ್ದರೆ ಸೂಕ್ತ ಮತ್ತು ಔಚಿತ್ಯಪೂರ್ಣವಾಗುತ್ತಿತ್ತು.

ಇದಿಷ್ಟೇ ಕ್ರಮ ಸಾಲದು. ಸರ್ಕಾರದ ಅಧಿಕೃತ ಆದೇಶ ಅಥವಾ ಯಾರಾದರೂ 'ಮೇಲಿನವರ' ಲಿಖಿತ ಅಥವಾ ಮೌಖಿಕ ನಿರ್ದೇಶನವಿಲ್ಲದೆ, ಅಧಿಕಾರಿಗಳು ತಮ್ಮ ಹಂತದಲ್ಲಿಯೇ ಪಹಣಿ ತಿದ್ದುಪಡಿ ಮಾಡಿದ್ದರೆ, ಕರ್ತವ್ಯಲೋಪಕ್ಕಾಗಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲೇಬೇಕು. ಹಾಗಿಲ್ಲದೆ, ಅಧಿಕಾರಿಗಳ ಮೇಲೆ ಆ 'ಮೇಲಿನವರು' ಪ್ರತ್ಯಕ್ಷ ಅಥವಾ ಪರೋಕ್ಷ ಒತ್ತಡ ಹೇರಿ ಕೆಲಸ ಮಾಡಿಸಿದ್ದರೆ, ಕೋಮು ಸಂಘರ್ಷಕ್ಕೆ ಎಡೆಮಾಡಿಕೊಡಬಹುದಾದ ಇಂತಹ ಸೂಕ್ಷ್ಮ ವಿಚಾರದಲ್ಲಿ ಅನಗತ್ಯವಾಗಿ ಮೂಗು ತೂರಿಸದಂತೆ, ಅವರನ್ನು ಮುಖ್ಯಮಂತ್ರಿಯೇ ನಿಯಂತ್ರಣದಲ್ಲಿ ಇಡಬೇಕಾಗುತ್ತದೆ. ಅಷ್ಟೇ ಮುಖ್ಯವಾಗಿ, ಸುಮಾರು 12 ವರ್ಷಗಳಿಂದಲೂ ನನೆಗುದಿಗೆ ಬಿದ್ದಿರುವ ಅನ್ವರ್ ಮಾಣಿಪ್ಪಾಡಿ ವರದಿಯನ್ನು ಜಾರಿಗೊಳಿಸಿ, ಅತಿಕ್ರಮಣಗೊಂಡಿರುವ ಸಾವಿರಾರು ಎಕರೆ ವಕ್ಫ್ ಆಸ್ತಿಯನ್ನು ವಿಳಂಬವಿಲ್ಲದೆ ಮರಳಿ ಪಡೆಯುವತ್ತ ಅವರು ಗಮನಹರಿಸಬೇಕು.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಡಿಜಿಟಲ್ ಅರೆಸ್ಟ್ ವಿನೂತನ ಸುಲಿಗೆ

ಫೋನ್, ವಿಡಿಯೊ ಕರೆ ಮೂಲಕ ಗೃಹಬಂಧನ; ಕೂತಲ್ಲಿಂದಲೇ ಹಣ ಲೂಟಿ

ಸೈಬರ್ ಖದೀಮರು ವಿನೂತನ ವಂಚನೆಯ ವಿಧಾನಗಳನ್ನು ಅನುಸರಿಸತೊಡಗಿದ್ದಾರೆ. ಒಂದು ಫೋನ್/ ವಿಡಿಯೊ ಕರೆ ಮೂಲಕ ಜನರನ್ನು ಅವರ ಮನೆಗಳಲ್ಲೇ ಬಂಧನದಲ್ಲಿರಿಸಿ, ಅವರಿಂದ ಲಕ್ಷ, ಕೋಟಿಗಳ ಲೆಕ್ಕದಲ್ಲಿ ಸುಲಿಗೆ ಮಾಡುತ್ತಿದ್ದಾರೆ. ವಿದ್ಯಾವಂತರೇ ಹೆಚ್ಚಾಗಿ ಸೈಬರ್ ಅರೆಸ್ಟ್‌ಗೆ ಒಳಗಾಗುತ್ತಿದ್ದು, ಸಂತ್ರಸ್ತರ ಸಂಖ್ಯೆ ಹೆಚ್ಚುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ಈ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ಎಚ್ಚರಿಕೆ ವಹಿಸುವಂತೆ ಕರೆ ನೀಡಿದ್ದಾರೆ

ದೂರು ನೀಡಲು ಪೋರ್ಟಲ್, 1930 ಸಹಾಯವಾಣಿ

ಸೈಬರ್ ವಂಚನೆ ಯತ್ನ ಮತ್ತು ವಂಚನೆಗೆ ಒಳಗಾದ ಸಂದರ್ಭದಲ್ಲಿ ಅದರ ಬಗ್ಗೆ ದೂರು ನೀಡಲು ರಾಷ್ಟ್ರೀಯ ಮಟ್ಟದಲ್ಲಿ 'ಸಿಟಿಜನ್ ಫೈನಾನ್ಶಿಯಲ್ ಸೈಬರ್ ಫ್ರಾಡ್ ರಿಪೋರ್ಟಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್' ಅನ್ನು ರೂಪಿಸಲಾಗಿದೆ. 2021ರಲ್ಲಿ ಇದು ಅಸ್ತಿತ್ವಕ್ಕೆ ಬಂದಿದ್ದು, ಇದರ ಅಡಿಯಲ್ಲಿ ರಾಷ್ಟ್ರೀಯ ಸೈಬರ್ ಅಪರಾಧ ದೂರು ನೀಡುವ ಪೋರ್ಟಲ್ www.cybercrime.gov.in ಕಾರ್ಯನಿರ್ವಹಿಸುತ್ತದೆ. ಇದರ ಜೊತೆಗೆ ಸೈಬರ್ ಪ್ರಕರಣಗಳ ಬಗ್ಗೆ ದೂರು ನೀಡುವುದಕ್ಕೆ **'1930'** ಸಹಾಯವಾಣಿಯನ್ನೂ ಆರಂಭಿಸಲಾಗಿದೆ.

ಈ ವ್ಯವಸ್ಥೆ ಜಾರಿಗೆ ಬಂದ ನಂತರ 7.6 ಲಕ್ಷಕ್ಕೂ ಹೆಚ್ಚು ಸೈಬರ್ ವಂಚನೆ ದೂರು ದಾಖಲಾಗಿದ್ದು, ₹2,400 ಕೋಟಿಗೂ ಹೆಚ್ಚು ಹಣ ವಂಚಕರ ಕೈ ಸೇರದಂತೆ ತಡೆಯಲಾಗಿದೆ ಎಂದು ಗೃಹ ಸಚಿವಾಲಯವು ಈ ವರ್ಷದ ಆಗಸ್ಟ್‌ನಲ್ಲಿ ಸಂಸತ್ತಿಗೆ ತಿಳಿಸಿತ್ತು.

2023ರಲ್ಲಿ ಸೈಬರ್ ವಂಚನೆ ಪ್ರಕರಣಗಳು

11.28 ಲಕ್ಷ
ಸಿಟಿಜನ್ ಫೈನಾನ್ಶಿಯಲ್ ಸೈಬರ್ ಫ್ರಾಡ್ ರಿಪೋರ್ಟಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ನಲ್ಲಿ ದಾಖಲಾದ ದೂರುಗಳು

₹7,489 ಕೋಟಿ
ದೇಶದ ಜನರು ಕಳೆದುಕೊಂಡ ಮೊತ್ತ

₹922 ಕೋಟಿ
ಬ್ಯಾಂಕ್ ಖಾತೆಗಳಲ್ಲಿ ತಡೆ ಹಿಡಿಯಲಾದ ಮೊತ್ತ

64,301
ಕರ್ನಾಟಕದಲ್ಲಿ ವರದಿಯಾದ ಸೈಬರ್ ವಂಚನೆ ಪ್ರಕರಣಗಳು

₹662 ಕೋಟಿ
ರಾಜ್ಯದಲ್ಲಿ ವಂಚನೆಗೊಳಗಾದವರು ಕಳೆದುಕೊಂಡ ಹಣ

₹73.15 ಕೋಟಿ
ಬ್ಯಾಂಕ್ ಖಾತೆಗಳಲ್ಲಿ ತಡೆ ಹಿಡಿಯಲಾದ ಮೊತ್ತ

ಡಿಜಿಟಲ್ ಅರೆಸ್ಟ್ ಎಂದರೇನು?

ಇದು ಒಂದು ಬಗೆಯ ಸೈಬರ್ ವಂಚನೆಯಾಗಿದ್ದು, ಪೊಲೀಸ್, ಜಾರಿ ನಿರ್ದೇಶನಾಲಯ (ಇ.ಡಿ), ಸಿಬಿಐ ಮುಂತಾದ ತನಿಖಾ ಸಂಸ್ಥೆಗಳ ಅಧಿಕಾರಿಗಳ ಹೆಸರಿನಲ್ಲಿ ಜನರಿಗೆ ಕರೆ ಮಾಡಿ, ಅವರ ಮೇಲೆ ಸುಳ್ಳು ಆರೋಪ ಹೊರಿಸಿ, ಹೆದರಿಸಿ ಬೆದರಿಸಿ, ನಂತರ ಹಣಕ್ಕೆ ಬೇಡಿಕೆ ಇಡುವುದು; ಆನ್‌ಲೈನ್ ಬ್ಯಾಂಕಿಂಗ್ ಸೇರಿದಂತೆ ಹಲವು ಮಾರ್ಗಗಳ ಮುಖಾಂತರ ಅವರಿಂದ ಹಣ ಸುಲಿಗೆ ಮಾಡುತ್ತಾರೆ. ವಂಚಕರು ಸಂತ್ರಸ್ತರಿಂದ ಲಕ್ಷ, ಕೋಟಿಗಳ ಲೆಕ್ಕದಲ್ಲಿ ಹಣ ಸುಲಿಯುತ್ತಿದ್ದಾರೆ.

ಡಿಜಿಟಲ್ ಅರೆಸ್ಟ್ ಮಾಡುವುದು ಹೇಗೆ?

ವಂಚಕರು ಮೊದಲು ಸಂತ್ರಸ್ತರನ್ನು ಫೋನ್ ಮೂಲಕ ಸಂಪರ್ಕಿಸುತ್ತಾರೆ. ತಾವು ಸಿಬಿಐ, ಆರ್‌ಬಿಐ, ತೆರಿಗೆ, ನಾರ್ಕೋಟಿಕ್ಸ್ ಅಧಿಕಾರಿಗಳು ಎಂದು ಪರಿಚಯಿಸಿಕೊಳ್ಳುತ್ತಾರೆ. 'ನಿಮಗೆ ನಿಷೇಧಿತ ಅಥವಾ ಅಕ್ರಮ ವಸ್ತು/ ಸರಕು ಕೊರಿಯರ್‌ನಲ್ಲಿ ಬಂದಿದೆ' ಎಂದೋ, 'ನೀವು ಅಂಥ ವಸ್ತುಗಳನ್ನು ಕೊರಿಯರ್ ಮೂಲಕ ಕಳಿಸಿದ್ದೀರಿ' ಎಂದೋ ಪ್ರತಿಪಾದಿಸುತ್ತಾರೆ. ಇಲ್ಲವೇ ಹಣ ಅಕ್ರಮ ವರ್ಗಾವಣೆ, ಸೈಬರ್ ಅಪರಾಧದ ಆರೋಪ ಹೊರಿಸುತ್ತಾರೆ. ನಂತರ ಸ್ಕೈಪ್, ವ್ಯಾಟ್ಸ್ ಆ್ಯಪ್ ಮತ್ತು ಇತರ ವಿಡಿಯೊ ತಂತ್ರಜ್ಞಾನದ ಮೂಲಕ ಸಂತ್ರಸ್ತರೊಂದಿಗೆ ಸಂಪರ್ಕ ಸಾಧಿಸುತ್ತಾರೆ.

'ಅಕ್ರಮದ ಸಂಬಂಧ ವಿಚಾರಣೆಗಾಗಿ ನಿಮ್ಮನ್ನು ಬಂಧಿಸಲಾಗಿದೆ' (ಕಂಪ್ಯೂಟರ್/ ಮೊಬೈಲ್ ಪರದೆಯಲ್ಲಿ ಕಾಣುವಂತೆ ಒಂದೇ ಜಾಗದಲ್ಲಿ/ ಮನೆ, ಕೊಠಡಿಗಳಲ್ಲಿ ಕೂರುವುದು) ಎಂದು ಬೆದರಿಕೆ ಒಡ್ಡುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಸಂತ್ರಸ್ತರ ಮನೆಗಳಲ್ಲಿಯೇ ಅವರನ್ನು ಬಂಧನಕ್ಕೊಳಪಡಿಸಲಾಗಿರುತ್ತದೆ. ಸಂತ್ರಸ್ತರನ್ನು ನಂಬಿಸುವ ಸಲುವಾಗಿ ತಾವು ಯಾವ ತನಿಖಾ ಸಂಸ್ಥೆಯ ಅಧಿಕಾರಿಗಳೆಂದು ಹೇಳಿರುತ್ತಾರೋ, ಅಂಥ ಕಚೇರಿಯ ವಾತಾವರಣವನ್ನು ಸೃಷ್ಟಿಸಿರುತ್ತಾರೆ. ಅಧಿಕಾರಿಗಳು ಎನ್ನುವುದನ್ನು ಸಾಬೀತುಪಡಿಸುವ ಸಲುವಾಗಿ ನಕಲಿ ಗುರುತಿನ ಚೀಟಿಗಳನ್ನು ಕೂಡ ತೋರಿಸುತ್ತಾರೆ. ಕೆಲವೊಮ್ಮೆ ನಕಲಿ ಅರೆಸ್ಟ್ ವಾರಂಟ್‌ಗಳನ್ನೂ ಪ್ರಸ್ತುತಪಡಿಸುತ್ತಾರೆ. ಕೂತಲ್ಲಿಂದಲೇ ಅವನ್ನು ವಿಡಿಯೊ ಮೂಲಕ ನೋಡುವ ಸಂತ್ರಸ್ತರು ವಂಚಕರನ್ನು ನಂಬುತ್ತಾರೆ.

'ನಿಮ್ಮಿಂದ ಕಾನೂನು ಉಲ್ಲಂಘನೆಯಾಗಿದೆ. ನಿಮ್ಮ ಫೋನ್ ಅನ್ನು ಅಕ್ರಮಕ್ಕೆ ಬಳಸಲಾಗಿದೆ' ಎಂದೆಲ್ಲ ಹೇಳಿ, ವಿಚಾರಣೆ, ಜೈಲು, ಶಿಕ್ಷೆ ಬಗ್ಗೆ ಪ್ರಸ್ತಾಪಿಸಿ, ಸಂತ್ರಸ್ತರಲ್ಲಿ ಭಯ ಹುಟ್ಟಿಸಲಾಗುತ್ತದೆ. ನಂತರ ಹಣಕ್ಕೆ ಬೇಡಿಕೆ ಇಡುತ್ತಾರೆ. ಇಂತಿಷ್ಟು ಹಣ ಕೊಟ್ಟರೆ ಈ ಪ್ರಕರಣದಿಂದ ಮುಕ್ತಗೊಳಿಸುವುದಾಗಿ ಹೇಳುತ್ತಾರೆ. ಈ ಸಮಯದಲ್ಲಿ ಬೇರೆ ಯಾರನ್ನೂ ಸಂಪರ್ಕಿಸದಂತೆ ಮಾಡುತ್ತಾರೆ. ಆನ್‌ಲೈನ್ ಬ್ಯಾಂಕಿಂಗ್ ಮತ್ತಿತರ ಮಾರ್ಗಗಳ ಮೂಲಕ ಹಣವನ್ನು ಮೂರನೇ ವ್ಯಕ್ತಿಯ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ.

ವಿದೇಶದಲ್ಲಿ ಕುಳಿತು ಕೃತ್ಯ

ಡಿಜಿಟಲ್ ಅರೆಸ್ಟ್ ವಂಚಕರಲ್ಲಿ ಬಹುತೇಕರು ದೇಶದ ಹೊರಗಡೆಯಿಂದ ಕಾರ್ಯಾಚರಿಸುತ್ತಾರೆ. ಮ್ಯಾನ್ಮಾರ್, ಲಾವೊಸ್, ತೈವಾನ್, ಕಾಂಬೋಡಿಯಾದಂತಹ ದೇಶಗಳಲ್ಲಿ ಕುಳಿತು ಕರೆ ಮಾಡಿ ವಂಚನೆ ಎಸಗುತ್ತಾರೆ. ವಿದೇಶಿಯರು ಇದರಲ್ಲಿ ಭಾಗಿಯಾಗುತ್ತಿದ್ದಾರೆ. ವಂಚನೆಗೆ ಒಳಗಾಗುತ್ತಿರುವವರಲ್ಲಿ ನಗರ ಪ್ರದೇಶದವರು, ವಿದ್ಯಾವಂತರು, ಸೇವೆಯಿಂದ ನಿವೃತ್ತಿ ಹೊಂದಿದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.





ಎಷ್ಟು ಅವಧಿಯವರೆಗೆ ಡಿಜಿಟಲ್ ಅರೆಸ್ಟ್ ಮಾಡಲಾಗುತ್ತಿದೆ?

ಸಾಮಾನ್ಯವಾಗಿ ಸಂತ್ರಸ್ತರಿಗೆ ಮನೆಗಳಲ್ಲೇ ದಿಗ್ಬಂಧನ ವಿಧಿಸಲಾಗುತ್ತದೆಯಾದರೂ ಕೆಲವೊಮ್ಮೆ ಅವರನ್ನು ಹೊರಗೆ ಬರುವಂತೆ ಮಾಡಿ, ಬೇರೊಂದು ಸ್ಥಳದಲ್ಲಿ ಕೂಡಿಹಾಕುವುದುಂಟು. ವಾರದ ಹಿಂದೆ ಹೈದರಾಬಾದ್ ಟೆಕಿ ಒಬ್ಬರಿಗೆ ಕರೆ ಮಾಡಿದ್ದ ವಂಚಕರು, ಅವರನ್ನು ಮನೆಯಿಂದ ಹೊರಗೆ ಕರೆಸಿಕೊಂಡು, 15 ಕಿ.ಮೀ. ದೂರದ ಲಾಡ್ಜ್‌ನಲ್ಲಿ 30 ಗಂಟೆಗಳವರೆಗೆ ಡಿಜಿಟಲ್ ಅರೆಸ್ಟ್ ಮಾಡಿದ್ದರು. ಅನಿರೀಕ್ಷಿತವಾಗಿ ಕರೆ ಕಡಿತಗೊಂಡಾಗ ಟೆಕಿ ಪೊಲೀಸರನ್ನು ಸಂಪರ್ಕಿಸಿ ವಂಚಕರಿಂದ ಪಾರಾಗಿದ್ದರು.

ಸಂತ್ರಸ್ತರಿಂದ ಹಣ ವರ್ಗಾವಣೆ ಆಗುವವರೆಗೆ ವಂಚಕರು ಸಂತ್ರಸ್ತರನ್ನು ಡಿಜಿಟಲ್ ಬಂಧನದಲ್ಲಿ ಇರಿಸುತ್ತಾರೆ. ಇತ್ತೀಚೆಗೆ, ಮಧ್ಯಪ್ರದೇಶದ ಇಂದೋರ್‌ನ 65 ವರ್ಷದ ಮಹಿಳೆಯೊಬ್ಬರಿಗೆ ಐದು ದಿನ ಮನೆಯಲ್ಲೇ ದಿಗ್ಬಂಧನ ವಿಧಿಸಿದ್ದ ವಂಚಕರು, ₹46 ಲಕ್ಷ ಸುಲಿಗೆ ಮಾಡಿದ್ದರು.

ಇದರಿಂದ ಪಾರಾಗುವುದು ಹೇಗೆ?

ಅಪರಿಚಿತ/ಅಂತರರಾಷ್ಟ್ರೀಯ ಫೋನ್ ಕರೆಗಳ ಬಗ್ಗೆ ಎಚ್ಚರ ವಹಿಸಬೇಕು. ಅಂಥ ಸಂದರ್ಭ ಸೃಷ್ಟಿಯಾದರೆ, ಆತಂಕಕ್ಕೊಳಗಾಗದೇ ಧೈರ್ಯದಿಂದ ಮಾತಾಡಬೇಕು. ತನಿಖಾ ಸಂಸ್ಥೆಗಳ ಅಧಿಕಾರಿಗಳು ಎಂದು ಹೇಳಿಕೊಂಡು ಯಾರಾದರೂ ಕರೆ ಮಾಡಿದರೆ, ಅದನ್ನು ವಿವರವಾಗಿ ಪರಿಶೀಲಿಸಬೇಕು. ಗಮನಿಸಬೇಕಾದ ಮುಖ್ಯ ವಿಚಾರ ಏನೆಂದರೆ, ತನಿಖಾ ಸಂಸ್ಥೆಗಳ ಅಧಿಕಾರಿಗಳು ಎಂದೂ ಫೋನ್ ಕರೆ ಮಾಡಿ ಹಣಕ್ಕೆ ಬೇಡಿಕೆ ಇಡುವುದಿಲ್ಲ. ಸರ್ಕಾರಿ ಸಂಸ್ಥೆಗಳು ತಮ್ಮ ಅಧಿಕೃತ ಸಂವಹನಕ್ಕೆ ಸ್ಕೈಪ್, ಝೂಮ್ ಅಥವಾ ವಾಟ್ಸ್ ಆ್ಯಪ್‌ನಂಥ ವಿಡಿಯೊ ತಂತ್ರಾಂಶಗಳನ್ನು ಬಳಸುವುದಿಲ್ಲ. ಡಿಜಿಟಲ್ ಅರೆಸ್ಟ್ ಎಂಬ ಕಾನೂನು, ನಿಯಮ ದೇಶದಲ್ಲಿ ಇಲ್ಲ ಎಂಬುದೂ ಗಮನದಲ್ಲಿರಬೇಕು.

ಮತ್ತೊಂದು ಮುಖ್ಯ ವಿಚಾರ, ಈಗಲೇ ಕೆಲಸ ಆಗಬೇಕು, ಪ್ರಕರಣ ಇವತ್ತೇ ಮುಗಿಯಬೇಕು ಎನ್ನುವಂತೆ ಒತ್ತಡ ಹೇರಿ, ತುರ್ತು ಸ್ಥಿತಿ ಸೃಷ್ಟಿಸುವವರನ್ನು ನಂಬಬಾರದು. ಯಾವುದೇ ಕಾರಣಕ್ಕೂ ಅಪರಿಚಿತರೊಂದಿಗೆ ಖಾಸಗಿ ವಿಷಯಗಳನ್ನು, ಗೋಪ್ಯ ಮಾಹಿತಿಯನ್ನು ಹಂಚಿಕೊಳ್ಳಬಾರದು. ವಂಚನೆಯ ಬಗ್ಗೆ ಅನುಮಾನ ಬಂದರೆ, ಕೂಡಲೇ ಸೈಬರ್ ಸಹಾಯವಾಣಿ/ ಪೊಲೀಸರನ್ನು ಸಂಪರ್ಕಿಸಬೇಕು.

ಸೈಬರ್ ವಂಚನೆಯಿಂದ ಪಾರಾಗಬೇಕು ಎಂದರೆ, ಮೊದಲು ವಂಚಕರ ಕಾರ್ಯವಿಧಾನವನ್ನು ಅರಿಯಬೇಕು. ವಂಚಕರು ಹೇಗೆ ಸೈಬರ್ ಅಪರಾಧಗಳನ್ನು ಎಸಗುತ್ತಾರೆ ಎಂಬ ಬಗ್ಗೆ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ (ಸಿಇಆರ್‌ಟಿ-ಐಎನ್) ಮಾಹಿತಿ ಪ್ರಕಟಿಸಿದ್ದು, ಅದರಲ್ಲಿ ಡಿಜಿಟಲ್ ಅರೆಸ್ಟ್ ಬಗ್ಗೆಯೂ ವಿವರಗಳನ್ನು ನೀಡಲಾಗಿದೆ.

ವಂಚನೆಗೊಳಗಾದವರು ಏನು ಮಾಡಬೇಕು?

ನೀವು ಡಿಜಿಟಲ್ ಅರೆಸ್ಟ್‌ಗೆ ಒಳಗಾಗಿದ್ದ ಪಕ್ಷದಲ್ಲಿ ಮೊದಲು ಮಾಡಬೇಕಾದ ಕೆಲಸ ಬ್ಯಾಂಕ್ ಅನ್ನು ಸಂಪರ್ಕಿಸಿ ಖಾತೆಯನ್ನು ಸ್ಥಗಿತಗೊಳಿಸುವುದು. ನಂತರ ಸೈಬರ್ ಸಹಾಯವಾಣಿ (1930) ಸಂಪರ್ಕಿಸಬೇಕು. ನ್ಯಾಷನಲ್ ಸೈಬರ್ ಕ್ರೈಮ್ ರಿಪೋರ್ಟಿಂಗ್ ಪೋರ್ಟಲ್‌ನಲ್ಲಿ ದೂರು ದಾಖಲಿಸಬಹುದು. ತನಿಖೆಯ ಅನುಕೂಲಕ್ಕಾಗಿ, ನಿಮ್ಮ ಕರೆ, ಹಣ ವರ್ಗಾವಣೆಗೆ ಸಂಬಂಧಿಸಿದ ದಾಖಲೆಗಳನ್ನು ಜೋಪಾನವಾಗಿ ಇಟ್ಟುಕೊಳ್ಳಬೇಕು.

ಆಧಾರ:ಪಿಟಿಐ, ಎನ್‌ಸಿಆರ್‌ಬಿ, ಸಂಸತ್ತಿನ ಗೃಹಸಚಿವಾಲಯದ ಹೇಳಿಕೆ

ದೇಶದಲ್ಲಿ ದೊಡ್ಡ ಜಾಲ ಸಕ್ರಿಯ

ನಕಲಿ ಷೇರು ಮಾರುಕಟ್ಟೆ ಹೂಡಿಕೆಗಳು ಮತ್ತು ಡಿಜಿಟಲ್ ಅರೆಸ್ಟ್‌ನಂತಹ ಸೈಬರ್ ಹಗರಣಗಳನ್ನು ನಡೆಸುವ ದೊಡ್ಡ ಜಾಲವೇ ದೇಶದಲ್ಲಿ ಕಾರ್ಯಾಚರಿಸುತ್ತಿದೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಮತ್ತು ಟೆಲಿಗ್ರಾಂನಂತಹ ಸಾಮಾಜಿಕ ಜಾಲತಾಣಗಳನ್ನು ಬಳಸಿ ಈ ಕೃತ್ಯಗಳನ್ನು ಎಸಗಲಾಗುತ್ತಿದೆ ಎಂಬ ಸಂಗತಿ ಜಾರಿ ನಿರ್ದೇಶನಾಲಯ (ಇ.ಡಿ) ನಡೆಸಿರುವ ತನಿಖೆಯಿಂದ ತಿಳಿದು ಬಂದಿದೆ.

ಬೆಂಗಳೂರಿನಲ್ಲಿ ಕಳೆದ ತಿಂಗಳು ವರದಿಯಾಗಿದ್ದ ನಕಲಿ ಐಪಿಒ (ಆರಂಭಿಕ ಸಾರ್ವಜನಿಕ ಹೂಡಿಕೆ) ಹಂಚಿಕೆ ಮತ್ತು ವಂಚನೆ ಉದ್ದೇಶದ ಆ್ಯಪ್ ಬಳಸಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವಂತೆ ಮಾಡಿ ಜನರನ್ನು ವಂಚಿಸಿದ ಪ್ರಕರಣದಲ್ಲಿ ಎಂಟು ಆರೋಪಿಗಳ ವಿರುದ್ಧ ಇ.ಡಿಯು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

ಈ ಪ್ರಕರಣದಲ್ಲಿ ₹159 ಕೋಟಿಯಷ್ಟು ಹಣ ವಂಚಿಸಲಾಗಿದೆ ಎಂದು ಇ.ಡಿ ಹೇಳಿದೆ.

'ಕಡಿಮೆ ಹಣ ಹೂಡಿಕೆ ಮಾಡಿ ದೊಡ್ಡ ಮೊತ್ತವನ್ನು ಗಳಿಸಬಹುದು ಎಂಬ ಆಮಿಷ ಒಡ್ಡಿ ಜನರನ್ನು ವಂಚಿಸಲಾಗುತ್ತಿದೆ. ನಕಲಿ ವೆಬ್‌ಸೈಟ್‌ಗಳು ಮತ್ತು ದಾರಿತಪ್ಪಿಸುವ ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನು ಬಳಸಲಾಗುತ್ತಿದ್ದು, ಇವುಗಳು ಪ್ರತಿಷ್ಠಿತ ಹಣಕಾಸು ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿವೆ ಎಂಬ ರೀತಿಯಲ್ಲಿ ಬಿಂಬಿಸಲಾಗುತ್ತಿದೆ. ನಕಲಿ ಜಾಹೀರಾತು ಮತ್ತು ಸುಳ್ಳು ಯಶಸ್ಸಿನ ಕಥೆಗಳನ್ನು ಸೃಷ್ಟಿಸಿ ಸಂತ್ರಸ್ತರು ಹೆಚ್ಚು ಹಣವನ್ನು ಹೂಡುವಂತೆ ಮಾಡಲಾಗುತ್ತಿದೆ' ಎಂದು ಇ.ಡಿ. ವಿವರಿಸಿದೆ.

ಆಸ್ಕರ್ ಅಂಗಳದಲ್ಲಿ ಕನ್ನಡದ ಕಿರುಚಿತ್ರ

ಡಾ.ಚಿದಾನಂದ ಎಸ್ ನಾಯ್ಕ್

ಮೈಸೂರಿನ ಡಾ.ಚಿದಾನಂದ ಎಸ್ ನಾಯ್ಕ್ ನಿರ್ದೇಶಿಸಿರುವ 'ಸೂರ್ಯಕಾಂತಿ ಹೂಗೆ ಮೊದಲು ಗೊತ್ತಾಗಿದ್ದು' ಕನ್ನಡ ಕಿರುಚಿತ್ರ ಲೈವ್ ಆ್ಯಕ್ಷನ್ ಶಾರ್ಟ್ ಫಿಲಂ ವಿಭಾಗದಡಿ 2025ನೇ ಸಾಲಿನ ಆಸ್ಕರ್‌ಗೆ ಅರ್ಹತೆ ಪಡೆದಿದೆ. ಆಸ್ಕರ್ ವೆಬ್‌ಸೈಟ್‌ನಲ್ಲಿ ಕಿರುಚಿತ್ರ ಅಪ್‌ಲೋಡ್ ಆಗಿದ್ದು, ಪ್ರಶಸ್ತಿ ಸಮಿತಿ ಸದಸ್ಯರು ಅಂತಿಮವಾಗಿ ಆಯ್ಕೆ ಮಾಡಿದ 5 ಕಿರುಚಿತ್ರಗಳು ಅಂತಿಮ ಸ್ಪರ್ಧೆಗೆ ನಾಮನಿರ್ದೇಶನಗೊಳ್ಳಲಿವೆ. ಈ ಕಿರುಚಿತ್ರವು 77ನೇ ಕಾನ್ ಚಿತ್ರೋತ್ಸವದಲ್ಲಿ 'ಲಾ ಸಿನೆಫ್' ವಿಭಾಗದಲ್ಲಿ ಮೊದಲ ಬಹುಮಾನ ಪಡೆದಿತ್ತು.

ಪ್ರತಿದಿನ ಬೆಳಗ್ಗೆ ಸೂರ್ಯೋದಯಕ್ಕೆ ಕಾರಣವೆಂದು ಎಲ್ಲರೂ ನಂಬಿದ್ದ ಹುಂಜದೊಂದಿಗೆ ಅಜ್ಜಿ ಓಡಿಹೋಗುವ ಜನಪದ ಕಥಾವಸ್ತುವನ್ನು ಹೊಂದಿರುವ 16 ನಿಮಿಷಗಳ ಅವಧಿಯ ಕಿರುಚಿತ್ರ ಇದಾಗಿದೆ.

ಪುಣೆಯ ಫಿಲ್ಮ್ ಆಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಫ್‌ಟಿಐಐ) ವಿದ್ಯಾರ್ಥಿ ವಿಭಾಗದಡಿ ಈ ಕಿರುಚಿತ್ರವನ್ನು ನಿರ್ಮಾಣ ಮಾಡಿದೆ. ಕನ್ನಡದ ಜನಪ್ರಿಯ ನಟ ಎಂ.ಎಸ್.ಜಹಾಂಗೀರ್ ಅಜ್ಜನಾಗಿ ನಟಿಸಿದ್ದಾರೆ. ಸೂರಜ್ ಠಾಕೂರ್ ಛಾಯಾಚಿತ್ರಗ್ರಹಣ, ಮನೋಜ್ ವಿ ಸಂಕಲನ, ಅಭಿಷೇಕ್ ಕದಂ ಶಬ್ದ ವಿನ್ಯಾಸ ಈ ಕಿರುಚಿತ್ರಕ್ಕಿದೆ.

'ವೃತ್ತಿಯಿಂದ ವೈದ್ಯ. ಆಸಕ್ತಿಯಿಂದಾಗಿ ಸಿನಿಮಾ ನಿರ್ದೇಶನ ಕೋರ್ಸ್‌ಗೆ ಸೇರಿಕೊಂಡೆ. ನಮ್ಮಲ್ಲಿ ಈ ರೀತಿ ಜನಪದ ಕಥೆ ಹೇಳುವ ತಲೆಮಾರು ಮರೆಯಾಗುತ್ತಿದೆ. ಅಲ್ಲದೆ ಈ ಕಥೆ ಕರ್ನಾಟಕದಿಂದ ಆಚೆಗೆ ಹೆಚ್ಚಿನವರಿಗೆ ತಿಳಿದಿಲ್ಲ. ಹೀಗಾಗಿ ಈ ವಿಷಯ ಆಯ್ದುಕೊಂಡೆ' ಎನ್ನುತ್ತಾರೆ ಚಿದಾನಂದ.

ಡಿ.27ಕ್ಕೆ 'ರುದ್ರ ಗರುಡ ಪುರಾಣ'

'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ನಟ ರಿಷಿ ನಟಿಸಿರುವ 'ರುದ್ರ ಗರುಡ ಪುರಾಣ' ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದ್ದು, ಚಿತ್ರದ 'ಕಣ್ಮುಂದೆ ಬಂದು..' ಎಂಬ ಹಾಡು ಬಿಡುಗಡೆಯಾಗಿದೆ. ಸಿನಿಮಾ ಡಿ.27ರಂದು ತೆರೆಗೆ ಬರುತ್ತಿದೆ.

'ಚಿತ್ರದ ನಿರ್ದೇಶಕ ನಂದೀಶ್ ಉತ್ತಮವಾದ ಕಥೆ ಬರೆದಿದ್ದಾರೆ. ಈ ಕಥೆಯನ್ನು ತೆರೆಯ ಮೇಲೆ ಯಾವುದೇ ಕೊರತೆ ಇಲ್ಲದ ಹಾಗೆ ತರಲು ನಿರ್ಮಾಪಕ ಲೋಹಿತ್ ಸಹಕಾರ ನೀಡಿದ್ದಾರೆ. ಇದೊಂದು ಆ್ಯಕ್ಷನ್ ಥ್ರಿಲ್ಲರ್ ಚಿತ್ರವಾಗಿದ್ದು, ಪೊಲೀಸ್ ಅಧಿಕಾರಿ ಪಾತ್ರಕ್ಕೆ ಬಣ್ಣಹಚ್ಚಿದ್ದೇನೆ' ಎಂದರು ನಟ ರಿಷಿ. ರಿಷಿಗೆ ಜೋಡಿಯಾಗಿ ಪ್ರಿಯಾಂಕ ಕುಮಾರ್ ನಟಿಸಿದ್ದಾರೆ.

ಖ್ಯಾತ ಸಂಗೀತ ನಿರ್ದೇಶಕ ದೇವಿ ಶ್ರೀ ಪ್ರಸಾದ್ ಬಳಿ ಕಾರ್ಯನಿರ್ವಹಿಸಿರುವ ಕೃಷ್ಣಪ್ರಸಾದ್ ಈ ಚಿತ್ರಕ್ಕೆ ಸಂಗೀತ ನೀಡಿದ್ದು, ಸಂದೀಪ್ ಕುಮಾರ್ ಛಾಯಾಚಿತ್ರಗ್ರಹಣವಿದೆ. ಮಂಜು ಮಾಂಡವ್ಯ 'ಕಣ್ಮುಂದೆ ಬಂದು..' ಹಾಡಿಗೆ ಸಾಹಿತ್ಯ ಬರೆದಿದ್ದು, ಅಶ್ವಿನಿ ಗೌಡ, ಶಿವರಾಜ್ ಕೆ.ಆರ್. ಪೇಟೆ, ರಾಮ್ ಪವನ್, ನಂದ, ವಂಶಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ರಿಷಿ, ಪ್ರಿಯಾಂಕ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದೇಹ ಎಂಬ ಅದ್ಭುತ!

ನುಡಿ ಬೆಳಗು
ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
60

ದೇಹದ ಆರೋಗ್ಯ ಮುಖ್ಯ. ದೇಹ ಎಷ್ಟು ಅದ್ಭುತ ನೋಡಿ. ಅಲ್ಲಮಪ್ರಭು ಈ ದೇಹಕ್ಕೆ ಅದ್ಭುತ ಎಂದರು. ಯಾಕೆ ಅದ್ಭುತ? ಯಾಕೆಂದರ, 'ಭೂತ ಭೂತವ ಕೂಡಿ ಅದ್ಭುತವಾಯ್ತು' ಅಂತಾರ ಅಲ್ಲಮಪ್ರಭು. ಈ ದೇಹ ಪಂಚಮಹಾಭೂತಗಳಿಂದ ತಯಾರಾಗೈತಿ. ಪಂಚ ಭೂತಗಳು ಜೀವಿಗಳಲ್ಲ. ಜಡ ವಸ್ತುಗಳು. ಜಡದಿಂದ ಜೀವ ಉತ್ಪತ್ತಿಯಾಗುತ್ತದಲ್ಲ ಅದು ಅದ್ಭುತ. ತಾಯಿಯ ಗರ್ಭದಿಂದ ಭೂಗರ್ಭ ಸೇರುವವರೆಗೆ ನಮ್ಮ ಜೊತೆ ಇರೋದು ಈ ದೇಹ. ಸಂಪತ್ತು ಬಂದಾವ ಹೋಗ್ಯಾವ, ಸಂಬಂಧಗಳು ಬಂದಾವ ಹೋಗ್ಯಾವ, ಆಸ್ತಿ ಅಂತಸ್ತು ಬಂದಾವ ಹೋಗ್ಯಾವ, ಗೌರವ ಆದರಗಳು ಬಂದಾವ ಹೋಗ್ಯಾವ. ಆದರೆ ದೇಹ ಯಾವಾಗಲೂ ನಮ್ಮ ಜೊತೆ ಐತಿ.

ಐದಾರು ಮಂದಿ ಇರುವ ಮನೆಯೊಳಗೇ ಒಬ್ಬರನ್ನು ಕಂಡರೆ ಒಬ್ಬರಿಗೆ ಆಗುವಲ್ದು. ಅಣ್ಣನನ್ನು ಕಂಡರೆ ತಮ್ಮನಿಗೆ, ಅತ್ತೆಯನ್ನು ಕಂಡರೆ ಸೊಸೆಗೆ, ತಂಗಿಯನ್ನು ಕಂಡರೆ ಅಕ್ಕನಿಗೆ ಆಗೋವಲ್ದು. ಆದರ ಈ ದೇಹದೊಳಗೆ ಎಷ್ಟು ನರಗಳಿದಾವೆ, ಅಪಧಮನಿ, ಅಭಿಧಮನಿ, ಜೀರ್ಣಾಂಗ, ಸಾವಿರಾರು ಕೋಟಿ ಕೋಟಿ ಜೀವ ಕೋಶಗಳಿದಾವಲ್ಲ. ನಾವು ಬೆಳಿಗ್ಗೆ ತಿಂದ ಒಂದು ಕಟರೊಟ್ಟಿ ಈ ಎಲ್ಲ ಜೀವಕೋಶಗಳಿಗೆ ತಲುಪತ್ತೈತಿ. ಯಾವ ಜೀವಕೋಶವೂ ಇವತ್ತು ನನಗೆ ಆಹಾರ ಕೊಟ್ಟಿಲ್ಲ ಅಂತ ದೂರು ಹೇಳಿಲ್ಲ. ಎಷ್ಟೊಂದು ಸಹಕಾರದಿಂದ ಬದುಕ್ಯಾವೆ? ಇದು ನಿಸರ್ಗ ಸೃಷ್ಟಿಸಿದ ಅದ್ಭುತ ಸಹಕಾರಿ ವ್ಯವಸ್ಥೆ. ಎಷ್ಟು ಚೊಲೋ ಐತಿ. ಹಾಗಾಗಿ, ಈ ದೇಹ ಕೆಡಲಾರದಂತೆ ನೋಡಿಕೊಳ್ಳುವುದು ಮುಖ್ಯ.

ದೇಹ ಕೆಡದಂತೆ ನೋಡಿಕೊಳ್ಳಲು ನಮ್ಮ ಪೂರ್ವಜರು, ಋಷಿಗಳು ಮೂರು ಸೂತ್ರ ಹೇಳ್ಯಾರ. ಹಿತ, ಮಿತ ಮತ್ತು ಋತ. ಹಿತ ಅಂದರ ನಮ್ಮ ದೇಹಕ್ಕೆ ಯಾವುದು ಹಿತ ಐತಿ ಅದನ್ನು ಉಣ್ಣು ಅಂತ. ಮಿತ ಅಂದರ ಆಹಾರವನ್ನು ಮಿತವಾಗಿ ಉಣ್ಣು ಅಂತ. ಋತ ಎಂದರೆ ಋತುಗಳನ್ನು ನೋಡಿ ಉಣ್ಣು ಅಂತ. ನಾವು ಈಗ ಉಣ್ಣುವುದು ದೇಹಕ್ಕೆ ಹಿತವಾಗಿಲ್ಲ. ಹೊಟ್ಟೆ ಸ್ಮಶಾನ ಅಲ್ಲ. ಕೊಳಚೆ ಗುಂಡಿಯೂ ಅಲ್ಲ. ಬೇಕು ಬೇಡದ್ದನ್ನು ಅಲ್ಲಿ ಹಾಕಬಾರದು. ಸ್ವಚ್ಛವಾಗಿದ್ದು ಮತ್ತು ಹಿತವಾಗಿದ್ದನ್ನು ಮಾತ್ರ ತಿನ್ನಬೇಕು.

ಭಾರತ ಸರ್ಕಾರದವರು ಫಿಟ್ ಇಂಡಿಯಾ ಅಂತ ಘೋಷಣೆ ಮಾಡ್ಯಾರ. ಏನಿದು ಫಿಟ್ ಇಂಡಿಯಾ? ದೇಹ ಸದೃಢವಾಗಿರಬೇಕು. ಅದಕ್ಕೆ ನಾವು ತಿನ್ನುವ ಆಹಾರವೂ ಶುದ್ಧವಾಗಿರಬೇಕು. ಮನಸ್ಸು ತಾಳ್ಮೆಯಿಂದ ಇರಬೇಕು. ಇನ್ನೊಬ್ಬರ ಕಣ್ಣೀರು ಒರೆಸುವ ಹೃದಯ ಇರಬೇಕು. ಅಂತಹವನಿಗೆ ಆರೋಗ್ಯವಂತ ಅಂತಾರ. ಅದೇ ಫಿಟ್ ಇಂಡಿಯಾ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ನವೆಂಬರ್ 6, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪಂಚಮಿ ಗಂ. 24-42 ನಕ್ಷತ್ರ: ಮೂಲ ಗಂ. 11-00 ಯೋಗ: ಸುಕರ್ಮ ಗಂ. 10-51 ಕರಣ: ಬವ ಗಂ. 12-33, ತುಲಾ ಮಾಸದ 20 ನೇ ದಿನ, ಮಳೆನಕ್ಷತ್ರ: ವಿಶಾಖ 1.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ : 06-30 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 03 ಜುಮಾದುಲ್ಲಾವಲ್
ದಿನ ವಿಶೇಷ : ಜ್ಞಾನ ಪಂಚಮಿ (ಜೈನ್), ಅದೃಷ್ಟ ಸಂಖ್ಯೆ : 3, 1

ಮೇಷ: ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತಿ ಹೊಂದಿರುವವರಿಗೆ ಅವಕಾಶಗಳ ಜತೆಗೆ ಸ್ವಂತ ಉದ್ಯಮ ಸ್ಥಾಪಿಸುವ ಯೋಚನೆಗಳು ಬರಲಿವೆ. ಅದಕ್ಕೆ ಆರ್ಥಿಕ ಸಹಾಯದ ಜತೆಯಲ್ಲಿ ಜನಬಲ ಸಿಗಲಿದೆ.

ವೃಷಭ: ಕೆಲಸ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಪರಿಶ್ರಮದ ಅಗತ್ಯವಿದೆ. ಸಾಮಾಜಿಕ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯು ಎಲ್ಲರ ಪ್ರಶಂಸೆಗೆ ಪಾತ್ರವಾಗುತ್ತದೆ. ಪಿತ್ರಾರ್ಜಿತ ಆಸ್ತಿಯು ನಿಮ್ಮ ಪಾಲಾಗಲಿದೆ.

ಮಿಥುನ: ಸ್ವಧರ್ಾತ್ಮಕ ಮನೋಭಾವ ಹೊಸ ಸಾಹಸಕ್ಕೆ ಕೈ ಹಾಕಲು ಪ್ರೇರೇಪಿಸುವುದು. ವಿವಾಹ ಪ್ರಸ್ತಾವಗಳು ಬಲಗೊಂಡು ಕಂಕಣ ಭಾಗ್ಯ ಕೂಡಿ ಬರುವ ಸಾಧ್ಯತೆ ಇದೆ. ಹಿಡಿದ ಕೆಲಸದಲ್ಲಿ ಯಶಸ್ಸು ಕಾಣುವಿರಿ.

ಕರ್ಕಾಟಕ: ಶೈಕ್ಷಣಿಕ ರಂಗದಲ್ಲಿನ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಸಂಪಾದಿಸಿಕೊಳ್ಳುವಿರಿ. ವೈಯಕ್ತಿಕ ಜೀವನದ ಬೆಳವಣಿಗೆ ಬಗ್ಗೆ ಗಮನಹರಿಸಿ. ಕೊಟ್ಟ ಮಾತನ್ನು ಉಳಿಸಿಕೊಳ್ಳುವುದರಿಂದ ಕ್ಷೇಮ ಉಂಟಾಗುತ್ತದೆ.

ಸಿಂಹ: ದೈವಬಲ ಉಂಟಾಗಿದ್ದು, ಆರ್ಥಿಕ ಪರಿಸ್ಥಿತಿಯು ಸುಧಾರಣೆಯತ್ತ ಸಾಗಿರುವುದನ್ನು ಅನುಭವಪೂರ್ವಕವಾಗಿ ಕಾಣುವಿರಿ. ಬಾಹ್ಯಾಕಾಶ ಸಂಶೋಧನಾರ್ಥಿಗಳಿಗೆ ಸರ್ಕಾರದಿಂದ ಪ್ರಶಂಸೆ ದೊರೆಯುವುದು.

ಕನ್ಯಾ: ಸಂಕೋಚ ಸ್ವಭಾವವನ್ನು ಅನುಭವಿಸುವ ನಿಮಗೆ ಯಾರೊಂದಿಗಾದರೂ ಹೊಸದಾಗಿ ಪರಿಚಯ ಮಾಡಿಕೊಳ್ಳಲು ಸಮಯ ಹಿಡಿಯುವುದು. ಯಾವುದೇ ವಿಷಯವನ್ನಾದರೂ ಪತಿಯಲ್ಲಿ ಮುಕ್ತವಾಗಿ ಹೇಳಿ.

ತುಲಾ: ಸಿದ್ಧ ಉಡುಪುಗಳ ಮಾರಾಟಗಾರರಿಗೆ, ರಫ್ತು ವ್ಯಾಪಾರಗಳಿಂದ ಹೆಚ್ಚಿನ ಲಾಭವನ್ನು ಪಡೆಯಬಹುದು. ಜೀವನಚರಿತ್ರೆಯಲ್ಲಿ ಹೊಸದೊಂದು ಅಧ್ಯಾಯ ಪ್ರಾರಂಭವಾಗಲಿದೆ. ಖರ್ಚು ಕಡಿಮೆ ಮಾಡಿ.

ವೃಶ್ಚಿಕ: ಸಹೋದ್ಯೋಗಿಗಳಿಂದ ಅಥವಾ ಅಕ್ಕಪಕ್ಕದವರಿಂದ ಸಮಸ್ಯೆಗಳು ಹೆಚ್ಚುವುದಕ್ಕೆ ಮುಂಚಿತವಾಗಿ ಜಾಣ್ಮೆಯಿಂದ ಪರಿಹಾರ ಕಂಡುಕೊಳ್ಳುವುದು ಉತ್ತಮ. ಶ್ರೀಲಕ್ಷ್ಮಿ ಪೂಜಿಸಿದಲ್ಲಿ ಏಳಿಗೆ ಹೊಂದಲು ಸಾಧ್ಯವಾಗುವುದು.

ಧನು: ಕಾರ್ಮಿಕರು ಸಹನಶೀಲರಾಗಿ ಕೆಲಸದ ಬಗ್ಗೆ ಸರಿಯಾಗಿ ಗಮನ ವಹಿಸುವುದರಿಂದ ಯಶಸ್ಸು ಪಡೆಯಬಹುದು. ಮರ ಕೆತ್ತನೆಯ ಕೆಲಸಗಾರರಿಗೆ, ಕಟ್ಟಡ ಕಾರ್ಮಿಕರಿಗೆ ಅನುಕೂಲ ಇರಲಿದೆ.

ಮಕರ: ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಹೆಚ್ಚು ಆನಂದ ಸಿಗಬಹುದು. ಅನೇಕ ಮೂಲಗಳಿಂದ ಧನಾರ್ಜನೆ ಇದ್ದರೂ ಕೈಯಲ್ಲಿ ಹಣ ಇಲ್ಲದಂತೆ ಅಥವಾ ಕೊರತೆ ಆಗುವುದು.

ಕುಂಭ: ಕೈಗಾರಿಕೋದ್ಯಮಿಗಳು ಲಾಭದಾಯಕ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವಲ್ಲಿ ಬುದ್ಧಿವಂತಿಕೆಯನ್ನು ಉಪಯೋಗಿಸುವುದು ಉತ್ತಮ. ಅತಿ ಆಲಸ್ಯ, ನಿದ್ದೆಯಂಥ ಸಮಸ್ಯೆ ನಿಮ್ಮನ್ನು ಕಾಡಲಿದೆ.

ಮೀನ: ಲಾಭದ ನಿರೀಕ್ಷೆಯಿಲ್ಲದೆ ಮಾಡಿದ ಕೆಲಸದಲ್ಲೂ ಹೆಚ್ಚಿನ ಲಾಭವಾಗುವುದರಿಂದ ಸಂತೋಷ ಆಗುವುದು. ನೆಮ್ಮದಿಯ ಜತೆಯಲ್ಲಿ ಕುಟುಂಬದ ಸದಸ್ಯರೊಂದಿಗೆ ಕಾಲಕಳೆಯುವ ಸಮಯವಾಗಿದೆ.

ಪದಬಂಧ 5853

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸುಗಂಧಯುಕ್ತ ನೀರು (3)
2.ಹಿಂಜಿದ ಹತ್ತಿಯ ಸುರುಳಿ (2)
3.ಹೇಳಲು ಸಾಧ್ಯವಿಲ್ಲದುದು (4)
4.ಸಂಕೋಲೆ ಅಥವಾ ಸೆರೆಮನೆವಾಸ(3)
5.ಕಲಾವಿದನ ಮನೆ ಬಾಗಿಲ ಪಡಿ (2)
7.ಇವರು ಹುಟ್ಟಿದ ದಿನವನ್ನು ರಾಷ್ಟ್ರೀಯ ಗಣಿತ ದಿನ ಎಂದು ಆಚರಿಸಲಾಗುತ್ತದೆ (9)
10.ಸುಮಧುರ ಪರಿಮಳ ಬೀರುತ್ತಿರುವ ಹೂ (2)
12.ನೂರರ ಮೊತ್ತ (3)
13.ಹಣವಿರುವ ಅಗಲವಾದ ತಟ್ಟೆ! (4)
14.ಭೂಲೋಕದ ಅಮೃತ! (2)
15.ಐತಿಹಾಸಿಕ ತಾಣ ಲಕ್ಕುಂಡಿಯು ಈ ಜಿಲ್ಲೆಯಲ್ಲಿದೆ (3)

ಮೇಲಿಂದ ಕೆಳಕ್ಕೆ
1.ಹೃದಯದಿಂದ ದೇಹದ ಇತರೆ ಭಾಗಕ್ಕೆ ರಕ್ತವನ್ನು ಸಾಗಿಸುವ ರಕ್ತನಾಳ (5)
2.ಆತಂಕ ಹುಟ್ಟಿಸಿರುವ ಕೊಲೆಗಾರ (3)
3.ರಾಮ ಚರಿತೆ ಕುರಿತು ರಚಿಸಿದ ಮಹಾಕಾವ್ಯವು ಋಷಿಯ ಹೆಸರಿನೊಂದಿಗಿದೆ (7)
6.ಪುಸ್ತಕ ಅಥವಾ ಪತ್ರಿಕೆಯ ಪುಟ (2)
8.ಶಾಬ್ದಿಕವಾದ ಅರ್ಥ (2)
9. ನೀರಿನ ಅಲೆ ಎಂಬರ್ಥದ ವಾದ್ಯ (5)
11.ಭವ್ಯವಾದ ಸೌಧ (3)



5852ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕೊನರು 4.ಅನರ್ಥ 5.ಚತುರ 6.ಮುನಿ 8.ಸವತಿ 10.ಲವ 12.ಮದುವೆ 14.ಗರ 16.ಶುನಕ 18.ಬರ 20.ಡಿಕಾವು 22.ಜುಲುಮೆ 23.ಸತ್ಕಾರ

ಮೇಲಿಂದ ಕೆಳಕ್ಕೆ:
1.ಕೊತವಾಲ 2.ರುಸುಮು 3.ಮಂಚ 4.ಅರಸ 7.ನಿಗಮ 9.ವನ್ಯಮೃಗ 11.ವರ್ತಮಾನ 13.ವೇಣಬ 15.ರತ್ನಾಕರ 17.ಕಡಿಮೆ 19.ರಕ್ಕಸ 21.ವುಹಾ

ಸುಡೊಕು 6238

8		2		4		1		5
	1		8		9			
9		6			7	2		4
			1	6				
					3	8		6
				8				
	4	8		9	2			
1		5	7				4	
2		3		5	1	9		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6237 ಸುಡೊಕು

2	8	3	5	7	9	1	4	6
5	1	4	6	2	8	7	3	9
7	6	9	4	1	3	8	5	2
3	2	8	1	9	4	6	7	5
6	5	1	7	3	2	9	8	4
4	9	7	8	5	6	3	2	1
9	4	2	3	6	7	5	1	8
1	3	6	2	8	5	4	9	7
8	7	5	9	4	1	2	6	3

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-33000
ಹಳತು	41500-49500
ಚಿತ್ರದುರ್ಗ	
ಅಪಿ	48719-49129
ಬೆಟ್ಟೆ	32459-32899
ಕೆಂಪುಗೋಟು	26509-56910
ರಾಶಿ	48239-48669
ಪುತ್ತೂರು	
ಹೊಸತು	26000-33000
ಹಳತು	32000-49500
ಸಾಗರ	
ಬಿಳಿಗೋಟು	22599-22599
ಚಾಲಿ	30399-31999
ರಾಶಿ	43009-48309
ಸಿಪ್ಪೆಗೋಟು	15549-15549
ಶಿವಮೊಗ್ಗ	
ಬೆಟ್ಟೆ	46200-56549
ಗೊರಬಲು	17100-32307
ಹೊಸತು	41366-48899
ರಾಶಿ	31138-50006
ಸರಕು	46899-91296
ಸಿದ್ದಾಪುರ	
ಬಿಳಿಗೋಟು	23589-26859
ಚಾಲಿ	31009-34399
ಕೋಕ	19099-20899
ಕೆಂಪುಗೋಟು	23099-23099
ರಾಶಿ	40689-46289
ತಟ್ಟಿಬೆಟ್ಟೆ	26019-31319
ಶಿರಸಿ	
ಬೆಟ್ಟೆ	28699-40699
ಬಿಳಿಗೋಟು	22699-29023
ಚಾಲಿ	32169-35301
ಕೆಂಪುಗೋಟು	18299-24899
ರಾಶಿ	38269-44489
ಯಲ್ಲಾಪುರ	
ಅಪಿ	58695-72179
ಬಿಳಿಗೋಟು	18109-28600
ಚಾಲಿ	29499-35369
ಕೋಕ	5429-15271
ಕೆಂಪುಗೋಟು	16603-24899
ರಾಶಿ	3809-55799
ತಟ್ಟಿಬೆಟ್ಟೆ	25999-35029

ಷೇರುಪೇಟೆ ವಹಿವಾಟು

694



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,995
ಇಂದಿನ ಅಂತ್ಯ	24,213
▲	217
ದಿನದ ಗರಿಷ್ಠ	24,229

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹333-545
ದ್ವಿತಳಿ (ಬಿ.ವಿ)	₹366-670

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹175
ಆರ್‌ಎಸ್‌ಎಸ್-5	₹170
ಗುಡ್ ಲಾಟ್	₹166

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹17600
ಎಸಿ	₹11390
ಆರ್‌ಪಿ	₹18500
ಆರ್‌ಸಿ	₹10000

ಭಾರತ್ ಬ್ರ್ಯಾಂಡ್‌ನಡಿ ಎರಡನೇ ಹಂತದ ಮಾರಾಟಕ್ಕೆ ಕೇಂದ್ರ ಚಾಲನೆ

ಗೋಧಿಹಿಟ್ಟು ₹2.50, ಅಕ್ಕಿ ₹5 ತುಟ್ಟಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಭಾರತ್ ಬ್ರ್ಯಾಂಡ್‌ನಡಿ ಗೋಧಿಹಿಟ್ಟು ಮತ್ತು ಅಕ್ಕಿಯನ್ನು ರಿಯಾಯಿತಿ ದರದಲ್ಲಿ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವ ಎರಡನೇ ಹಂತದ ಕಾರ್ಯ-ಕ್ರಮಕ್ಕೆ ಮಂಗಳವಾರ ಚಾಲನೆ ನೀಡಿದೆ.

ಮೊದಲ ಹಂತಕ್ಕೆ ಹೋಲಿಸಿದರೆ, ಈ ಬಾರಿ ಅಕ್ಕಿ ಮತ್ತು ಗೋಧಿಹಿಟ್ಟಿನ ಬೆಲೆಯನ್ನು ಹೆಚ್ಚಿಸಿದೆ.

ಪ್ರಸ್ತುತ ಗೋಧಿಹಿಟ್ಟು ಪ್ರತಿ ಕೆ.ಜಿಗೆ ₹30, ಅಕ್ಕಿಗೆ ಕೆ.ಜಿಗೆ ₹34 ದರ ನಿಗದಿಪಡಿಸಿದೆ. ಆದರೆ, ಮೊದಲನೇ ಹಂತದಲ್ಲಿ ಗೋಧಿಹಿಟ್ಟು ಕೆ.ಜಿ ₹27.5 ಮತ್ತು ಅಕ್ಕಿ ಕೆ.ಜಿ ₹29 ಇತ್ತು.

ಪ್ರಸ್ತುತ ಅಕ್ಕಿ ಮತ್ತು ಗೋಧಿಹಿಟ್ಟು 5 ಕೆ.ಜಿ ಮತ್ತು 10 ಕೆ.ಜಿ ಪ್ಯಾಕೆಟ್‌ಗಳಲ್ಲಿ ಲಭ್ಯವಿದ್ದು, ಗ್ರಾಹಕರಿಂದ ಬೇಡಿಕೆ ಬಂದರೆ, ಸಣ್ಣ ಗಾತ್ರದ ಪ್ಯಾಕೆಟ್‌ಗಳಲ್ಲಿ ಪೂರೈಸಲಾಗುವುದು. ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್), ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ (ನಾಫೆಡ್), ಕೇಂದ್ರೀಯ ಭಂಡಾರ ಮತ್ತು ಇ-ಕಾಮರ್ಸ್ ವೇದಿಕೆಗಳ ಮೂಲಕಮಾರಾಟಮಾಡಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಚಿಲ್ಲರೆ ಮಾರಾಟಕ್ಕೆ ಚಾಲನೆ ನೀಡಿದ ಬಳಿಕ ಮಾತನಾಡಿದ ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ, ಸರ್ಕಾರವು 3.69 ಲಕ್ಷ ಟನ್ ಗೋಧಿ ಮತ್ತು 2.91 ಲಕ್ಷ ಟನ್ ಅಕ್ಕಿಯನ್ನು ಭಾರತೀಯ ಆಹಾರ ನಿಗಮದಿಂದ (ಎಫ್‌ಸಿಐ) ಬೆಲೆ ಸ್ಥಿರೀಕರಣ ನಿಧಿಯಡಿಯಲ್ಲಿ ಹಂಚಿಕೆ ಮಾಡಿದೆ. ದಾಸ್ತಾನು ಸಾಕಷ್ಟಿದೆ, ಅಗತ್ಯವಿದ್ದರೆ ಮತ್ತಷ್ಟು ಹಂಚಿಕೆ ಮಾಡಲಾಗುವುದು ಎಂದು ಹೇಳಿದ್ದಾರೆ.

ಸರ್ಕಾರದ ಉದ್ದೇಶ ವ್ಯಾಪಾರ ಮಾಡುವುದಲ್ಲ. ಬೆಲೆ ಏರಿಕೆಯಿಂದ ತತ್ತರಿಸಿರುವ ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸುವುದು ಮತ್ತು ಮಾರುಕಟ್ಟೆಯಲ್ಲಿ ದರ ಏರಿಕೆ ನಿಯಂತ್ರಿಸುವುದಾಗಿದೆ ಎಂದು ಹೇಳಿದ್ದಾರೆ.

2023ರ ಅಕ್ಟೋಬರ್‌ನಿಂದ 2024ರ ಜೂನ್‌ವರೆಗಿನ ಮೊದಲ ಹಂತದಲ್ಲಿ 15.20 ಲಕ್ಷ ಟನ್ ಗೋಧಿ ಹಿಟ್ಟು ಮತ್ತು 14.58 ಲಕ್ಷ ಟನ್ ಅಕ್ಕಿಯನ್ನು ಮಾರಾಟ ಮಾಡಲಾಗಿತ್ತು.

12 ಕೋಟಿ ಟನ್ ಅಕ್ಕಿ ಉತ್ಪಾದನೆ ನಿರೀಕ್ಷೆ



ಉತ್ತಮ ಮಳೆಯಿಂದಾಗಿ 2024–25ರ ಮುಂಗಾರು ಋತುವಿನಲ್ಲಿ (ಖಾರಿಫ್) ದೇಶದಲ್ಲಿ ಅಕ್ಕಿ ಉತ್ಪಾದನೆ 11.99 ಕೋಟಿ ಟನ್‌ಗೆ ತಲುಪುವ ನಿರೀಕ್ಷೆಯಿದೆ ಎಂದು ಕೇಂದ್ರ ಕೃಷಿ ಸಚಿವಾಲಯದ ಮೊದಲ ಅಂದಾಜು ವರದಿ ಮಂಗಳವಾರ ಹೇಳಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಉತ್ಪಾದನೆ-ಯಲ್ಲಿ 66.7 ಲಕ್ಷ ಟನ್‌ನಷ್ಟು ಹೆಚ್ಚಳವಾಗಲಿದೆ.

ಮೆಕ್ಕೆಜೋಳ ಸಾರ್ವಕಾಲಿಕ ಗರಿಷ್ಠ 2.45 ಕೋಟಿ ಟನ್, ಜೋಳ 21.9 ಲಕ್ಷ ಟನ್, ಸಜ್ಜೆ ಉತ್ಪಾದನೆ 93.7 ಲಕ್ಷ ಟನ್ ಆಗಲಿದೆ ಎಂದು ಅಂದಾಜಿಸಿದೆ.

ಪ್ರಸಕ್ತ ಮುಂಗಾರು ಋತುವಿನಲ್ಲಿ ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ 16.47 ಕೋಟಿ ಟನ್ ಆಗಲಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 15.57 ಕೋಟಿ ಟನ್‌ನಷ್ಟಾಗಿತ್ತು. ಬೇಳೆಕಾಳುಗಳ ಉತ್ಪಾದನೆ 69.5 ಲಕ್ಷ ಟನ್, ಎಣ್ಣೆ ಕಾಳುಗಳ ಉತ್ಪಾದನೆ 2.57 ಕೋಟಿ ಟನ್ ಆಗುವ ನಿರೀಕ್ಷೆಯಿದೆ ಎಂದು ವರದಿ ತಿಳಿಸಿದೆ.

‘ಯಕ್ಷ’ ವಿಸ್ಕಿ ಈಗ ರಾಜ್ಯದಲ್ಲಿ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವದೇಶಿ ಮದ್ಯ ಕಂಪನಿ ಗೋವಾದ ಬ್ಲಿಸ್‌ವಾಟರ್ ಇಂಡಸ್ಟ್ರೀಸ್‌ನ (ಹೌಸ್ ಆಫ್ ಬ್ಲಿಸ್‌ವಾಟರ್) ‘ಯಕ್ಷ’ ಹೆಸರಿನ ವಿಸ್ಕಿ ರಾಜ್ಯದ ಮಾರುಕಟ್ಟೆಗೆ ಪ್ರವೇಶಿಸಿದೆ.

ಸ್ಕಾಚ್ ಮಿಶ್ರಿತ ಈ ಯಕ್ಷ ವಿಸ್ಕಿಯು ರಾಜ್ಯದ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಲಭ್ಯವಿದೆ. 750 ಎಂ.ಎಲ್ ಬಾಟಲಿ ಬೆಲೆ ₹2,380 ಆಗಿದೆ.

‘ಗೋವಾ, ಮಹಾರಾಷ್ಟ್ರ, ರಾಜಸ್ಥಾನ ರಾಜ್ಯಗಳಲ್ಲಿ ಮತ್ತು ಅಮೆರಿಕ, ಜಪಾನ್, ಸಿಂಗಪುರ ಸೇರಿದಂತೆ ಅಂತರ ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಉತ್ಪನ್ನವು ಮಾರಾಟವಾಗುತ್ತಿದೆ. ಇದೀಗ ಕರ್ನಾಟಕ ದಲ್ಲೂ ವಹಿವಾಟನ್ನು ವಿಸ್ತರಿಸಿದ್ದೇವೆ’ ಎಂದು ಮಾಸ್ಟರ್ ಬ್ಲೆಂಡರ್ ಮತ್ತು ಬ್ಲಿಸ್‌ವಾಟರ್ ಇಂಡಸ್ಟ್ರೀಸ್ ಸಂಸ್ಥಾಪಕಿ ವರ್ಣಾ ಭಟ್ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಉತ್ತರ ಕ್ರಿಯಾದಿ ಹಾಗೂ ವೈಕುಂಠ ಸಮಾರಾಧನಾ ಆಹ್ವಾನ ಪತ್ರಿಕೆ

ಶ್ರೀಮತಿ ರಾಧಮ್ಮನವರು
ಶ್ರೀ ಕೆ. ಎಸ್. ಸತೀಶ್ ರೆಡ್ಡಿ
ನಂ. 43, 1ನೇ ಮುಖ್ಯ ರಸ್ತೆ, ಕಸವನಹಳ್ಳಿ, ಬೆಂಗಳೂರು– 560035
ಇವರು ಮಾಡುವ ವಿಜ್ಞಾಪನೆಗಳು ನನ್ನ ಪೂಜ್ಯ ತಾಯಿಯವರಾದ ಶ್ರೀಮತಿ ರಾಧಮ್ಮನವರು (ಶ್ರೀ ಲೇ। ಶ್ರೀನಿವಾಸರೆಡ್ಡಿರವರ ಧರ್ಮ ಪತ್ನಿ) ದಿನಾಂಕ 26–10–2024ನೇ ಶನಿವಾರದಂದು ಬೆಳಗ್ಗೆ 1:18ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರಕ್ರಿಯಾದಿಗಳನ್ನು ದಿನಾಂಕ 06–11–2024ನೇ ಬುಧವಾರ ಬೆಳಗ್ಗೆ 9:30 ಗಂಟೆಗೆ ಪುಣ್ಯಾಹ ಹಾಗು ಮಧ್ಯಾಹ್ನ 12ಕ್ಕೆ ವೈಕುಂಠಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಬಯಸುತ್ತೇವೆ.
ಇಂತಿ ದುಃಖತಪ್ತರು: ಸೊಸೆಯಂದಿರು, ಮೊಮಕ್ಕಳು ಮತ್ತು ಕುಟುಂಬದವರು

ಚಿನ್ನದ ದರ ₹200, ಬೆಳ್ಳಿ ₹1,800 ಏರಿಕೆ

ನವದೆಹಲಿ (ಪಿಟಿಐ): ಸ್ಥಳೀಯ ಆಭರಣ ತಯಾರಕರು ಮತ್ತು ಗ್ರಾಹಕರಿಂದ ಖರೀದಿ ಹೆಚ್ಚಳ ಆಗಿದ್ದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಮಂಗಳವಾರ ಏರಿಕೆಯಾಗಿದೆ.

ಚಿನ್ನದ ದರವು 10 ಗ್ರಾಂ ಗೆ ₹200 ಏರಿಕೆಯಾಗಿ, ₹81,300ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1,800 ಹೆಚ್ಚಳವಾಗಿ ₹96,700 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

05-11-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1560)
ಒಂದು ವಾರದ ಡೆಲಿವರಿ	1555 (1555)
ಪಾಮ್ ವಾರದ ಡೆಲಿವರಿ	1353 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹78,200 (78,100)
ಬೆಳ್ಳಿ ಕೆ.ಜಿ ₹94,300 (94,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1550)
ಸೋಯಾ (ರಿಫೈನ್ಡ್)	₹1370 (1360)
ಸೂರ್ಯಕಾಂತಿ (ರಿಫೈನ್ಡ್)	₹1375 (1390)
ಪಾಮೋಲಿನ್	₹1355 (1360)

ವಿನಿಮಯ ದರ

$ ಡಾಲರ್	84.09
£ ಪೌಂಡ್	109.19
€ ಯುರೊ	91.61
¥ ಯೆನ್ (100ಕ್ಕೆ)	55

₹25 ಸಾವಿರ ಕೋಟಿ ಜಿಎಸ್‌ಟಿ ವಂಚನೆ ಬಯಲಿಗೆ

18 ಸಾವಿರ ನಕಲಿ ಕಂಪನಿ ಪತ್ತೆ

ನವದೆಹಲಿ (ಪಿಟಿಐ): ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿಯಿಂದ (ಸಿಬಿಐಸಿ) ದೇಶದಾದ್ಯಂತ ಜಿಎಸ್‌ಟಿ ನಕಲಿ ನೋಂದಣಿ ವಿರುದ್ಧ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಇಲ್ಲಿಯವರೆಗೆ 18 ಸಾವಿರ ನಕಲಿ ಕಂಪನಿಗಳನ್ನು ಪತ್ತೆ ಹಚ್ಚಲಾಗಿದೆ. ಒಟ್ಟು ₹25 ಸಾವಿರ ಕೋಟಿ ವಂಚನೆ ಬೆಳಕಿಗೆ ಬಂದಿದೆ.

ನಕಲಿ ನೋಂದಣಿ ವಿರುದ್ಧ ಹಮ್ಮಿಕೊಂಡಿರುವ ಈ ಎರಡನೇ ಹಂತದ ವಿಶೇಷ ಕಾರ್ಯಾಚರಣೆಯು ಆಗಸ್ಟ್ 16ರಂದು ಪ್ರಾರಂಭವಾಗಿದ್ದು, ಅಕ್ಟೋಬರ್ 15ರ ವರೆಗೆ ನಡೆಯಿತು.

ಸರಕು ಮತ್ತು ಸೇವಾ ತೆರಿಗೆ ಅಡಿ ವರ್ತಕರಿಗೆ ಗುರುತಿನ ಸಂಖ್ಯೆ (ಜಿಎಸ್‌ಟಿಐಎನ್) ನೀಡಲಾಗುತ್ತದೆ. ಒಟ್ಟು 73 ಸಾವಿರ ಜಿಎಸ್‌ಟಿಐಎನ್‌ಗಳನ್ನು ಗುರುತಿಸಲಾಗಿದೆ. ಈ ಪೈಕಿ 18 ಸಾವಿರ ನಕಲಿ ಕಂಪನಿಗಳು, ₹24,550 ಕೋಟಿ ವಂಚನೆ ಮಾಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಕಾರ್ಯಾಚರಣೆ ವೇಳೆ ಸ್ವಯಂ-ಪ್ರೇರಿತವಾಗಿ ಕಂಪನಿಗಳು ₹70 ಕೋಟಿ ಜಿಎಸ್‌ಟಿ ಪಾವತಿ ಮಾಡಿವೆ.

ದೇಶದಲ್ಲಿ ಮೊದಲ ಹಂತದಲ್ಲಿ 2023ರ ಮೇ 16ರಿಂದ ಜುಲೈ 15ರ ವರೆಗೆ ನಕಲಿ ನೋಂದಣಿ ವಿರುದ್ಧ ಕಾರ್ಯಾಚರಣೆ ನಡೆದಿತ್ತು. 21,791 ನಕಲಿ ಕಂಪನಿಗಳನ್ನು ಪತ್ತೆ ಹಚ್ಚಿದ್ದ ತೆರಿಗೆ ಅಧಿಕಾರಿಗಳು, ₹24,010 ಕೋಟಿ ವಂಚನೆಯನ್ನು ಬಯಲಿಗೆ ಎಳೆದಿದ್ದರು.

6,500 ಸಲಹೆ ಸ್ವೀಕಾರ

ಆದಾಯ ತೆರಿಗೆ ಕಾಯ್ದೆ ಪರಾಮರ್ಶೆಗೆ ಸಂಬಂಧಿಸಿದಂತೆ ಕಳೆದ ಒಂದು ತಿಂಗಳಲ್ಲಿ ಆದಾಯ ತೆರಿಗೆ ಇಲಾಖೆಯು ಖಾಸಗಿ ವಲಯ ಮತ್ತು ತೆರಿಗೆ ಪರಿಣತರಿಂದ (ಷೇರುದಾರರು) 6,500 ಸಲಹೆಗಳನ್ನು ಸ್ವೀಕರಿಸಿದೆ.

ಆರು ದಶಕದಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆ 1961ರ ಸಮಗ್ರ ಪರಿಶೀಲನೆ ಬಗ್ಗೆ 2024–25ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿತ್ತು. ಹೀಗಾಗಿ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಸೋಮವಾರ ಸಭೆ ನಡೆಯಿತು.

ಆದಾಯ ತೆರಿಗೆ (ಐ.ಟಿ) ಕಾಯ್ದೆಯ ವಿವಿಧ ಅಂಶಗಳನ್ನು ಪರಿಶೀಲಿಸಲು 22 ವಿಶೇಷ ಉಪಸಮಿತಿಗಳನ್ನು ರಚಿಸಲಾಗಿದೆ. ಕಳೆದ ತಿಂಗಳು ಸಾರ್ವಜನಿಕರಿಂದ ಸಲಹೆ ಆಹ್ವಾನಿಸಿದ್ದು, ಪೋರ್ಟಲ್ ಮೂಲಕ 6,500 ಸಲಹೆಗಳನ್ನು ಸ್ವೀಕರಿಸಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ. ಸರಳ ಭಾಷೆಯಲ್ಲಿ ತೆರಿಗೆದಾರರಿಗೆ ಅರ್ಥವಾಗುವಂತೆ ಕಾಯ್ದೆ ರೂಪಿಸಲು ಸರ್ಕಾರ ಮುಂದಾಗಿದೆ.

‘ಭಾರತ, ಚೀನಾ ಸಂಘರ್ಷ ಶಮನ ಎದುರು ನೋಡುತ್ತಿವೆ’

ಕ್ಯಾನ್‌ಬೆರಾ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಸೇನಾ ಪಡೆಗಳ ವಾಪಸಾತಿಗೆ ಭಾರತವು ಚೀನಾ ಜತೆ ಮಾಡಿಕೊಂಡಿರುವ ಒಪ್ಪಂದವು ಮುಂದಿನ ದಿನಗಳಲ್ಲಿ ಉಭಯತ್ರರಿಗೂ ತೃಪ್ತಿಕರವಾಗಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮಂಗಳವಾರ ಹೇಳಿದ್ದಾರೆ.

ಇಲ್ಲಿ ನಡೆದ ಚಿಂತಕರ ಚಾವಡಿಯ ಉದ್ಘಾಟನಾ ಸಮಾರಂಭದಲ್ಲಿ ಜೈಶಂಕರ್ ಅವರು ಆಸ್ಟ್ರೇಲಿಯಾದ ಕಾರ್ಯತಂತ್ರದ ನೀತಿ ಸಂಸ್ಥೆ (ಎಎಸ್‌ಪಿಐ) ಕಾರ್ಯನಿರ್ವಾಹಕ ನಿರ್ದೇಶಕ ಜಸ್ಟಿನ್ ಬಸ್ಸಿ ಅವರೊಂದಿಗೆ ಸಂವಾದದಲ್ಲಿ ಮಾತನಾಡಿದರು.

ಭಾರತ-ಚೀನಾ ಸಂಬಂಧದ ಇತ್ತೀಚಿನ ಪ್ರಗತಿಯ ಬಗ್ಗೆ ಬಸ್ಸಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸೇನಾ ವಾಪಸಾತಿ ಪ್ರಕ್ರಿಯೆ ಈಗ ಮುಗಿದಿದೆ. ಈ ಒಪ್ಪಂದದ ಅನುಷ್ಠಾನವು ಮುಂದಿನ ದಿನಗಳಲ್ಲಿ ಉಭಯತ್ರರಿಗೂ ತೃಪ್ತಿಕರವಾಗಿರಲಿದೆ ಎಂದು ಹೇಳಿದರು.

‘ವಾಸ್ತವ ಗಡಿ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ಉಭಯ ದೇಶಗಳು ಜಮಾವಣೆ ಮಾಡಿದ್ದ ಸೇನಾಪಡೆಗಳನ್ನು ಸಂಘರ್ಷ ಶಮನಗೊಳಿಸುವ ಸಲುವಾಗಿ, ಒಪ್ಪಂದಂತೆ ವಾಪಸ್ ಕರೆಸಿಕೊಳ್ಳಲಾಗುತ್ತಿದೆ. ಎರಡೂ ದೇಶಗಳು 2020ರ ಮೊದಲು ಎಲ್‌ಎಸಿಯ ಉದ್ದಕ್ಕೂ ಇದ್ದಿದ್ದಕ್ಕಿಂತಲೂ ಭಾರಿ ಸಂಖ್ಯೆಯಲ್ಲಿ ಸೇನೆ ನಿಯೋಜನೆ ಮಾಡಿವೆ. ಈ ಸಂಬಂಧ ಮಾತುಕತೆಗಳನ್ನು ನಡೆಸುವ ಆಯ್ಕೆಗಳನ್ನು ಉಭಯತ್ರರು ಇರಿಸಿಕೊಂಡಿದ್ದೇವೆ’ ಎಂದು ಹೇಳಿದರು.

‘ಎರಡೂ ಸೇನೆಗಳು ಸಾಧ್ಯವಾದಷ್ಟು ತಮ್ಮ ಸಾಮಾನ್ಯ ಕಾರ್ಯಾಚರಣಾ ಸ್ಥಳಕ್ಕೆ ಹಿಂತಿರುಗಿವೆ. ಒಪ್ಪಂದದ ಪ್ರಕಾರ, 2020ರ ಹಿಂದಿದ್ದಂತೆಯೇ ಗಡಿಯಲ್ಲಿ ಗಸ್ತು ಪುನರಾರಂಭವಾಗುವ ನಿರೀಕ್ಷೆಯಿದೆ. ಇದು ವಾಸ್ತವವಾಗಿ, ನಾವು ಮಾತುಕತೆ ನಡೆಸಿರುವಂತೆಯೇ ನಡೆಯುತ್ತಿದೆ’ ಎಂದು ಹೇಳಿದ್ದಾರೆ.

> **ಎಲ್‌ಎಸಿಯಲ್ಲಿ ಭಾರಿ ಸಂಖ್ಯೆಯಲ್ಲಿ ಜಮಾವಣೆಗೊಂಡಿದ್ದ ಸೇನೆಯನ್ನು ಬೇರ್ಪಡಿಸುವ ಮಾರ್ಗ ಕಂಡುಕೊಳ್ಳುವುದು ಆದ್ಯತೆಯಾಗಿತ್ತು. ಅದರಂತೆ ಸೇನಾ ವಾಪಸಾತಿ ನಡೆಯುತ್ತಿದೆ**
> **ಎಸ್.ಜೈಶಂಕರ್,** ವಿದೇಶಾಂಗ ಸಚಿವ

‘ಈ ಅವಧಿಯಲ್ಲಿ (2020ರ ನಂತರ), ಭಾರತ-ಚೀನಾ ಸಂಬಂಧದಲ್ಲಿ ಬಹಳಷ್ಟು ಪರಿಣಾಮ ಉಂಟಾಗಿತ್ತು. ದ್ವಿಪಕ್ಷೀಯ ಸಂಬಂಧಗಳ ಬಲವರ್ಧನೆಗೆ ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿ ಬಹಳ ಮುಖ್ಯ. ಭಾರತ ಯಾವಾಗಲೂ ಇದನ್ನೇ ಬಯಸುತ್ತದೆ’ ಎಂದು ಅವರು ಹೇಳಿದರು.

ಬ್ರಿಕ್ಸ್ ಮತ್ತು ಕ್ವಾಡ್ ಸದಸ್ಯ ರಾಷ್ಟ್ರವಾಗಿರುವ ಭಾರತವು ಈ ಎರಡೂ ಕೂಟದಲ್ಲಿ ತನ್ನ ಸ್ಥಾನವನ್ನು ಹೇಗೆ ಸಮತೋಲನದಿಂದ ಕಾಯ್ದುಕೊಳ್ಳುತ್ತದೆ ಎಂಬುದರ ಕುರಿತು ಮಾತನಾಡಿದ ಅವರು, ಭಾರತ ಪಶ್ಚಿಮೇತರ ರಾಷ್ಟ್ರ. ಆದರೆ, ಪಶ್ಚಿಮದ ವಿರೋಧಿಯಲ್ಲ ಎಂದರು.

ಭಾರತೀಯ ವಲಸಿಗರ ಮಹತ್ವದ ಬಗ್ಗೆಯೂ ಮಾತನಾಡಿದ ಸಚಿವರು, ಭಾರತ-ಅಮೆರಿಕ ಸಂಬಂಧಗಳಲ್ಲಿನ ಬದಲಾವಣೆಯು ಅಮೆರಿಕದಲ್ಲಿ-ರುವ ಅನಿವಾಸಿ ಭಾರತೀಯರ ಬೆಳವಣಿಗೆಯೊಂದಿಗೆ ನಿಂತಿದೆ. ಇದನ್ನು ನೋಡಿ ಆಸ್ಟ್ರೇಲಿಯಾ ಕೂಡ ಕಲಿಯಬಹುದು. ಅನಿವಾಸಿ ಭಾರತೀಯರಿಗೆ ಇಲ್ಲಿ ಸೂಕ್ತ ಅವಕಾಶಗಳು ಸಿಕ್ಕಿದರೆ, ಅವರು ಸಹ ಆಸ್ಟ್ರೇಲಿಯಾದಲ್ಲಿ ಸಮಾನ ಪಾಲುದಾರರಾಗಿ ಗುರುತಿಸಿಕೊಳ್ಳುತ್ತಾರೆ. ಇದರಿಂದ ಅವರು ಈ ದೇಶಕ್ಕೆ ಹೆಚ್ಚು ಸೇವೆ ಸಲ್ಲಿಸುವ ಸಾಧ್ಯತೆಯಿದೆ. ಬೆಳೆಯುತ್ತಿರುವ ಉಭಯದೇಶಗಳ ಸಂಬಂಧಗಳು ಇನ್ನಷ್ಟು ಬಲಗೊಳ್ಳುತ್ತವೆ ಎಂದು ಹೇಳಿದರು.

ಕ್ಷಿಪಣಿ ಹಾರಿಸಿದ ಉತ್ತರ ಕೊರಿಯಾ

ಸೋಲ್ (ಎಪಿ): ಪೂರ್ವ ಸಮುದ್ರದ ಕಡೆಗೆ ಉತ್ತರ ಕೊರಿಯಾವು ಮಂಗಳವಾರ ಸೀಮಿತ ವ್ಯಾಪ್ತಿಯ ಗುರಿ ನಿರ್ದೇಶಿತ ಕ್ಷಿಪಣಿಗಳನ್ನು ಹಾರಿಸಿದೆ ಎಂದು ದಕ್ಷಿಣ ಕೊರಿಯಾದ ಮಿಲಿಟರಿ ತಿಳಿಸಿದೆ.

ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಮತದಾನ ಆರಂಭವಾಗುವ ಕೆಲವೇ ಗಂಟೆಗಳ ಮುನ್ನ, ತನ್ನ ಶಸ್ತ್ರಾಸ್ತ್ರ ಪ್ರದರ್ಶನವನ್ನು ಉತ್ತರ ಕೊರಿಯಾವು ಮುಂದುವರಿಸಿದೆ ಎಂದು ಹೇಳಿದೆ.

ಹಾರಿಸಿದ ಕ್ಷಿಪಣಿಗಳ ಸಂಖ್ಯೆ ಎಷ್ಟು? ಅವು ಎಷ್ಟು ದೂರ ಹಾರಿದವು ಎಂಬುದನ್ನು ದಕ್ಷಿಣ ಕೊರಿಯಾ ಖಚಿತಪಡಿಸಿಲ್ಲ.

ಕ್ಷಿಪಣಿಗಳು ಸಮುದ್ರಕ್ಕೆ ಬಿದ್ದಿವೆ ಎಂದು ಹೇಳಲಾಗಿದ್ದು, ಯಾವುದೇ ಹಾನಿಯ ಬಗ್ಗೆ ವರದಿಯಾಗಿಲ್ಲ ಎಂದು ಜಪಾನ್ ರಕ್ಷಣಾ ಸಚಿವಾಲಯ ತಿಳಿಸಿದೆ.

ಇಸ್ರೇಲ್ ವೈಮಾನಿಕ ದಾಳಿ ಉತ್ತರ ಗಾಜಾದಲ್ಲಿ 30 ಸಾವು

ದೇರ್ ಅಲ್-ಬಲಾಹ್ (ಗಾಜಾ ಪಟ್ಟಿ) (ಎಪಿ): ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ದಾಳಿಯಿಂದ ಗಾಜಾ ಪಟ್ಟಿಯಲ್ಲಿ 30 ಜನರು ಮೃತಪಟ್ಟಿದ್ದಾರೆ. ಮೃತರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು ಎಂದು ಪ್ಯಾಲೆಸ್ಟೀನ್‌ನ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಗಾಜಾ ಪಟ್ಟಿಯಲ್ಲಿ ಮಂಗಳವಾರ ನಸುಕಿನಲ್ಲಿ ನಡೆದ ದಾಳಿಯಲ್ಲಿ ನಾಲ್ಕು ಮಕ್ಕಳು ಮತ್ತು ಇಬ್ಬರು ಮಹಿಳೆಯರು ಸೇರಿ 10 ಜನರು ಮೃತಪಟ್ಟಿದ್ದಾರೆ. ಉತ್ತರ ಗಾಜಾ ಪಟ್ಟಣದ ಬೇತ್ ಲಾಹಿಯಾದಲ್ಲಿ ಸೋಮವಾರ ತಡರಾತ್ರಿ ನಡೆದ ವೈಮಾನಿಕ ಬಾಂಬ್ ದಾಳಿಯಲ್ಲಿ ಎಂಟು ಮಹಿಳೆಯರು ಮತ್ತು ಆರು ಮಕ್ಕಳು ಸೇರಿ 20 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಾಳುಗಳು ದಾಖಲಾಗಿರುವ ಹತ್ತಿರದ ಆಸ್ಪತ್ರೆಯ ನಿರ್ದೇಶಕ ಹೊಸಮ್ ಅಬು ಸಫಿಯಾ, ಬೇತ್ ಲಾಹಿಯಾ ಪಟ್ಟಣದಲ್ಲಿ ಹಲವು ಕುಟುಂಬಗಳು ಆಶ್ರಯ ಪಡೆದಿದ್ದ ಮನೆ ಮೇಲೆ ಸೋಮವಾರ ತಡರಾತ್ರಿ ವೈಮಾನಿಕ ದಾಳಿ ನಡೆದಿದೆ ಎಂದು ಹೇಳಿದ್ದಾರೆ.

ದಾಳಿ ಬಗ್ಗೆ ಇಸ್ರೇಲ್ ಸೇನೆ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಹಿಜ್ಬುಲ್ಲಾ ಕಮಾಂಡರ್ ಹತ್ಯೆ

ಜೆರುಸಲೇಂ (ಎಎಫ್‌ಪಿ): ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲ್ ಪಡೆಗಳ ವಿರುದ್ಧ ರಾಕೆಟ್ ಮತ್ತು ಟ್ಯಾಂಕ್ ನಿಗ್ರಹ ಕ್ಷಿಪಣಿ ದಾಳಿಯ ಮುಂದಾಳತ್ವ ವಹಿಸಿದ್ದ ಹಿಜ್ಬುಲ್ಲಾದ ಕಮಾಂಡರ್‌ನನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಸೇನೆ ಹೇಳಿದೆ.

ದಕ್ಷಿಣ ಲೆಬನಾನ್‌ನ ಬರಾಚಿತ್ ಪ್ರದೇಶದ ಹಿಜ್ಬುಲ್ಲಾ ಕಮಾಂಡರ್ ಅಬು ಅಲಿ ರಿದಾ ಎಂಬಾತನನ್ನು ವೈಮಾನಿಕ ದಾಳಿಯಲ್ಲಿ ಹತ್ಯೆ ಮಾಡಲಾಗಿದೆ ಎಂದು ಸೇನೆ ಹೇಳಿದೆ. ಆದರೆ, ರಿದಾ ಹತ್ಯೆ ಯಾವಾಗ ನಡೆಯಿತು ಎನ್ನುವುದನ್ನು ಅದು ನಿರ್ದಿಷ್ಟವಾಗಿ ತಿಳಿಸಿಲ್ಲ.

‘ಇಸ್ರೇಲ್ ಪಡೆಗಳ ಮೇಲೆ ರಾಕೆಟ್ ಮತ್ತು ಟ್ಯಾಂಕ್ ನಿಗ್ರಹ ಕ್ಷಿಪಣಿ ದಾಳಿಗಳನ್ನು ಯೋಜಿಸುವ ಮತ್ತು ಕಾರ್ಯಗತಗೊಳಿ-ಸುವ ಜವಾಬ್ದಾರಿಯನ್ನು ರಿದಾ ಹೊಂದಿದ್ದ. ಹಿಜ್ಬುಲ್ಲಾ ಉಗ್ರರ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದ’ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಚಂದ್ರಶೇಖರಾಚಾರ್ಯ ಪುರೋಹಿತ್, ಊರು ತಿಳಿಸಿಲ್ಲ

• **ಪ್ರಶ್ನೆ:** ನಾನು ಪ್ರೌಢ ಶಾಲಾ ಶಿಕ್ಷಕನಾಗಿದ್ದು, ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯನ್ನು ಮಾಡಬಹುದೇ? ದಯವಿಟ್ಟು ತಿಳಿಸಿ.

ಉತ್ತರ: ಷೇರುಪೇಟೆಯಲ್ಲಿ ಹೂಡಿಕೆ ಮಾಡಲು ಎಲ್ಲರಿಗೂ ಸಮಾನ ಹಾಗೂ ಮುಕ್ತ ಅವಕಾಶವಿದ್ದು, ಅಗತ್ಯವಿರುವ ಬ್ಯಾಂಕ್ ಖಾತೆ ಹಾಗೂ ಕೆವೈಸಿ ದಾಖಲೆಗಳನ್ನು ಸೆಬಿ ನೋಂದಾಯಿತ ಯಾವುದೇ ಬ್ರೋಕರ್‌ಗೆ ಸಲ್ಲಿಸುವ ಮೂಲಕ ಡಿಮ್ಯಾಟ್ ಖಾತೆ ತೆರೆದು ಹೂಡಿಕೆ ಆರಂಭಿಸಬಹುದು. ಪ್ರಸ್ತುತ ದಿನಗಳಲ್ಲಿ, ಸ್ವತಃ ಆನ್‌ಲೈನ್-ಮೊಬೈಲ್ ಮೂಲಕವೂ ಖಾತೆ ತೆರೆದು ಯಾವುದೇ ಸಂದರ್ಭದಲ್ಲಿ ವ್ಯವಹರಿಸಬಹುದು. ಹೆಚ್ಚಿನ ಸಂದರ್ಭಗಳಲ್ಲಿ ಆಧಾರ್ ಒಟಿಪಿ ಮೂಲಕವೇ ನಿಮ್ಮ ದಾಖಲೆಗಳು ಪರಿಶೀಲನೆಯಾಗುತ್ತವೆ.

ಆದರೆ, ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ನಿಮ್ಮ ಉದ್ದೇಶ, ಆ ಉದ್ದೇಶ ಸಾಧನೆಯ ಬಗೆಗಿರುವ ನಿಮ್ಮ ಪರಿಣತಿ, ಹೂಡಿಕೆದಾರರಿಗೆ ಇರಬೇಕಾದ ಸಾವಧಾನವೇ ಗೆಲುವಿನ ಪ್ರಮುಖ ಸಾಧನ. ಇಂದು ಸಾವಿರಾರು ಕಂಪನಿಗಳಿರುವ ಕಾರಣ ಅನಗತ್ಯ ಗೊಂದಲಕ್ಕೊಳಗಾಗದೆ, ಪ್ರತಿ ಷೇರು ಆಯ್ಕೆಯಲ್ಲಿರಬೇಕಾದ ಸೂಕ್ಷ್ಮವನ್ನು ಅರಿತು, ಕಂಪನಿ ಹಾಗೂ ಆ ಉದ್ಯಮ ವಲಯದ ಸಾಧಕ ಬಾಧಕಗಳನ್ನು ತಿಳಿದು, ಮಾರುಕಟ್ಟೆಯ ಏರಿಳಿತದ ಸಂದರ್ಭಗಳಲ್ಲಿ ಸಕಾಲಿಕವಾಗಿ ವ್ಯವಹರಿಸುವುದು ಇಲ್ಲಿ ಎಲ್ಲದಕ್ಕಿಂತ ಮುಖ್ಯ ಅಂಶ.

ಹೆಸರು ಬೇಡ, ಬೆಂಗಳೂರು

• **ಪ್ರಶ್ನೆ:** ನಾನು ಉದ್ಯೋಗದಿಂದ ನಿವೃತ್ತಿ ಹೊಂದಿ ಹತ್ತು ವರ್ಷಗಳಾಗಿವೆ. ಹಿಂದೆ ಖಾಸಗಿ ಕಂಪನಿಯಲ್ಲಿ ಉದ್ಯೋಗ ಮಾಡಿ ಸ್ವಂತ ಮನೆ ಕಟ್ಟಿಸಿದೆ. ಈ ಸಂದರ್ಭದಲ್ಲಿ ನನ್ನ ಹೆಚ್ಚಿನ ಉಳಿತಾಯದ ಮೊತ್ತವನ್ನು ಮನೆಯ ನಿರ್ಮಾಣಕ್ಕೆ ಖರ್ಚು ಮಾಡಿದ್ದೆ. ಹೀಗಾಗಿ ಸಾಧ್ಯವಾದಷ್ಟು ಕಡಿಮೆ ಮೊತ್ತದ ಬ್ಯಾಂಕ್ ಸಾಲದಲ್ಲಿ ಈ ಮನೆಯ ನಿರ್ಮಾಣ ಸಾಧ್ಯವಾಯಿತು. ಪ್ರಸ್ತುತ ಯಾವುದೇ ಬ್ಯಾಂಕ್‌ನಲ್ಲಿ ಸಾಲ ಇಲ್ಲ. ನಾನು ಹಾಗೂ ನನ್ನ ಪತ್ನಿ, ಆಕೆಯ ಹೆಸರಲ್ಲಿರುವ ಉಳಿತಾಯದ ಮೇಲೆ ಬರುವ ಬಡ್ಡಿಯಿಂದ ಜೀವನ ನಡೆಸುತ್ತಿದ್ದೇವೆ. ನಮಗೆ ಮಕ್ಕಳಿಲ್ಲ, ಆದರೆ ಸಹೋದರ ಹಾಗೂ ಅವರ ಮಕ್ಕಳಿದ್ದಾರೆ. **ನನ್ನ ಪ್ರಶ್ನೆ ಏನೆಂದರೆ, ನಮ್ಮ ಬದುಕಿಗೆ ಹಾಗೂ ಆರೋಗ್ಯ ವಿಚಾರದ ಸಮಸ್ಯೆಗಳಿಗೆ ಮುಂದೆ ಏನಾದರೂ ತೊಂದರೆ ಬಂದರೆ, ಯಾವುದೇ ಹೆಚ್ಚಿನ ಮೊತ್ತ ನಮ್ಮಲ್ಲಿಲ್ಲ. ಆ ಸಂದರ್ಭದಲ್ಲಿ ಸುಮಾರು ₹2 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದರೂ ಆರ್ಥಿಕ ಸಮಸ್ಯೆ ಎದುರಾಗದಂತೆ ಯಾವ ರೀತಿ ಬದುಕು ನಿಭಾಯಿಸಬಹುದು. ಕೆಲವೊಮ್ಮೆ ಉಳಿತಾಯ ಮಾಡಿದ್ದ ಮೊತ್ತ ಉಪಯೋಗಿಸದೆ, ಬ್ಯಾಂಕಿನಿಂದ ಅಧಿಕ ಸಾಲ ಪಡೆದು ಮನೆ ಕಟ್ಟಿಸಬಹುದಿತ್ತು ಎಂದೇ ಅನಿಸುತ್ತಿದೆ. ಈ ಬಗ್ಗೆ ಸಲಹೆಯ ಅಗತ್ಯವಿದೆ. ತಿಳಿಸಿ.**

ಉತ್ತರ: ನಿವೃತ್ತಿ ಜೀವನದ ಬಗ್ಗೆ ನಾವು ಯೋಚಿಸುವಾಗ, ಸಾಮಾನ್ಯವಾಗಿ ನಿರಂತರ ಆದಾಯದ ಅಭಾವ ಅಥವಾ ನಮ್ಮ ಎಲ್ಲ ಉದ್ದೇಶಗಳಿಗೆ ಅಗತ್ಯವಿರುವ ಯಥೇಚ್ಛ ಹಣ ನಮ್ಮಲ್ಲಿ ಇರಬೇಕಾದುದು ಮುಖ್ಯವಾಗಿ ಕಾಳಜಿಯ ವಿಷಯವಾಗಿರುತ್ತದೆ. ವೃತ್ತಿಯಿಂದ ನಿವೃತ್ತಿಯಾದ ಬಳಿಕ ದುಡಿಮೆಯಿಂದ ನಿರಂತರ ಆದಾಯವಿಲ್ಲದಿದ್ದರೂ ಜೀವನ ಚಟುವಟಿಕೆಗಳನ್ನು ನಿರ್ವಹಿಸಲು ಅಗತ್ಯವಿರುವ ಹಣಕಾಸು ವ್ಯವಸ್ಥೆ ಅವಶ್ಯಕ. ಇಂತಹ ಸಂದರ್ಭದಲ್ಲಿ, ನಮ್ಮ ಉಳಿತಾಯ ಅಥವಾ ಮಕ್ಕಳ ಮೇಲಿನ ನಮ್ಮ ಅವಲಂಬನೆ ಹೆಚ್ಚು ಪ್ರಸ್ತುತ ಎನಿಸುತ್ತದೆ. ಆದರೆ ನಿಮ್ಮ ವಿಚಾರದಲ್ಲಿ ಇದು ಅಸಾಧ್ಯವಾದ ಕಾರಣ ಉತ್ತಮ ಮೌಲ್ಯವಿರುವ ನಿಮ್ಮ ಮನೆಯನ್ನು ಆರ್ಥಿಕ ಮೂಲವನ್ನಾಗಿ ಪರಿವರ್ತಿಸಲು ಸಹಾಯ ಮಾಡುವ ‘ರಿವರ್ಸ್ ಮಾರ್ಟ್‌ಗೇಜ್’ (Reverse Mortgage) ಮುಖ್ಯ ಸಾಧನವಾಗಬಹುದು.

ರಿವರ್ಸ್ ಮಾರ್ಟ್‌ಗೇಜ್ ಬ್ಯಾಂಕಿಂಗ್ ವ್ಯವಸ್ಥೆಯ ಒಂದು ಸಾಲ ಸೌಲಭ್ಯವಾಗಿದೆ. ಇದು ವಿಶೇಷವಾಗಿ ಹಿರಿಯ ನಾಗರಿಕರಿಗಾಗಿ ರೂಪಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ, ಸ್ವಂತ ಮನೆ ಅಥವಾ ಆಸ್ತಿ ಹೊಂದಿರುವ ನಿವೃತ್ತ ನಾಗರಿಕರು ತಮ್ಮ ಆಸ್ತಿಯನ್ನು ಬ್ಯಾಂಕಿಗೆ ಅಡವು ಇಟ್ಟು ಪ್ರತಿ ತಿಂಗಳೂ ಕಂತಿನ ರೂಪದಲ್ಲಿ ತಮ್ಮ ಆಸ್ತಿಗೆ ಸಂಬಂಧಪಟ್ಟು ಹಣ ಪಡೆಯಬಹುದು. ಈ ರೀತಿ 15 ರಿಂದ 20 ವರ್ಷ ಮುಂದುವರಿಸಬಹುದು. ಇಲ್ಲಿ ಮರುಪಾವತಿಗೆ ಎರಡು ಅವಕಾಶಗಳನ್ನು ಕಲ್ಪಿಸಿ ಕೊಡಲಾಗಿದೆ. ಮೊದಲನೆಯದು, ಆಸ್ತಿ ಹೊಂದಿದ ಮಾಲೀಕರು ಮಾರಾಟ ಮಾಡುವ ಉದ್ದೇಶ ಹೊಂದಿದ್ದಲ್ಲಿ, ಮುಂದೆ ಮಾರಾಟವಾದಾಗ ಸಿಗುವ ಹಣಕ್ಕೆ ಅಸಲು ಹಾಗೂ ನಿಗದಿತ ಬಡ್ಡಿ ಸಮೇತ ವಜಾ ಮಾಡಿ ಉಳಿದ ಹೆಚ್ಚುವರಿ ಮೊತ್ತ ಪಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಎರಡನೆಯದು, ಒಂದು ವೇಳೆ, ಮೂಲ ಮಾಲೀಕರು ನಿಧನರಾದರೆ, ಅವರ ವಾರಸುದಾರರು, ಬ್ಯಾಂಕ್ ನೀಡಿದ್ದ ಅಸಲು ಮೊತ್ತ ಹಾಗೂ ಬಡ್ಡಿ ಸಮೇತ ತೀರಿಸಿ ಆಸ್ತಿಯನ್ನು ತಮ್ಮ ವಶಕ್ಕೆ ಪಡೆದುಕೊಳ್ಳಬಹುದು.

ಈ ಆರ್ಥಿಕ ವ್ಯವಹಾರದ ಒಟ್ಟಾರೆ ಸ್ವೀಕೃತಿಗೆ, ಆದಾಯ ತೆರಿಗೆಯ ಸೆಕ್ಷನ್ 10(43) ಅಡಿ ತೆರಿಗೆ ವಿನಾಯಿತಿ ಇದೆ. ಇದು ರಿವರ್ಸ್ ಮಾರ್ಟ್‌ಗೇಜ್ ಮೂಲಕ ಪಡೆಯುವ ಮೊತ್ತಕ್ಕೆ ಮಾತ್ರ ಸೀಮಿತ. ಆದರೆ, ಮುಂದೆ, ಆಸ್ತಿಯನ್ನು ಮಾರಾಟ ಮಾಡಿ ಖರೀದಿದಾರರಿಂದ ಹಣ ಪಡೆದಾಗ ಸಿಗುವ ಮೊತ್ತಕ್ಕೆ ಸಹಜವಾಗಿ ಬಂಡವಾಳ ಲಾಭದ ಮೇಲಿನ ಕ್ಯಾಪಿಟಲ್ ಗೇನ್ಸ್ ಅನ್ವಯಿಸುತ್ತದೆ.

ನಿಮ್ಮ ವಿಚಾರದಲ್ಲಿ ನೀವು ಸಮೀಪದ ಯಾವುದೇ ಬ್ಯಾಂಕ್‌ನಲ್ಲಿ ಈ ಸಾಲ ಸೌಲಭ್ಯದ ಬಗ್ಗೆ ಅವಕಾಶ ಇದೆಯೇ ಎಂಬ ಬಗ್ಗೆ ವಿಚಾರಿಸಿ ನಿಮ್ಮ ಆಸ್ತಿಯ ಮೌಲ್ಯ ಮಾಪನ ಮಾಡಿಸಿ, ಸಿಗಬಹುದಾದ ಗರಿಷ್ಠ ಸಾಲ ಎಷ್ಟು ಎಂದು ತಿಳಿದುಕೊಳ್ಳಿ. ಅದೇ ರೀತಿ ಮುಂದೆ ಮಾರಾಟ ಅಥವಾ ಈ ಆಸ್ತಿಯ ಮೇಲಿರುವ ಹಕ್ಕು-ಬಾಧ್ಯತೆ ಅಥವಾ ನಿಮ್ಮಿಬ್ಬರ ಕಾಲಾನಂತರ ಅದು ಯಾರಿಗೆ ಸೇರಬೇಕೆನ್ನುವ ಬಗ್ಗೆಯೂ ಚರ್ಚಿಸಿ ನಿರ್ಧರಿಸಿ. ಒಂದು ವೇಳೆ ಬ್ಯಾಂಕ್ ನೀಡಿದ ಮೊತ್ತ ಸಾಲಗಾರರ ಮರಣಾನಂತರವೂ ಪಾವತಿಯಾಗದ ಹಂತದಲ್ಲಿದ್ದರೆ, ಬ್ಯಾಂಕ್ ಆಸ್ತಿಯನ್ನು ಮಾರಾಟ ಮಾಡಿ ಸಾಲ ವಜಾ ಮಾಡುವ ಅವಕಾಶ ಹೊಂದಿರುತ್ತದೆ.

ರಿವರ್ಸ್ ಮಾರ್ಟ್‌ಗೇಜ್‌ನ ಮುಖ್ಯ ಪ್ರಯೋಜನ ಏನೆಂದರೆ, ಪ್ರತಿ ತಿಂಗಳೂ ಹಣದ ನಿರಂತರತೆ ಇರುತ್ತದೆ ಹಾಗೂ ನಿವೃತ್ತಿ ಕಾಲದ ಆರ್ಥಿಕ ಸುರಕ್ಷತೆಯ ಜೊತೆಗೆ ಆತ್ಮ-ವಿಶ್ವಾಸವನ್ನೂ ಹೆಚ್ಚಿಸುತ್ತದೆ. ಮಕ್ಕಳ ಮೇಲೆ ಅಥವಾ ಇತರ ಸಂಬಂಧಿಕರ ಮೇಲೆ ಆರ್ಥಿಕ ಅವಲಂಬನೆಯ ಅಗತ್ಯವಿಲ್ಲದೆ ಸ್ವತಂತ್ರ ಜೀವನ ಸಾಗಿಸಬಹುದು. ಮರಣಾನಂತರ ಸಾಲ ಪಾವತಿಸಿ ಆಸ್ತಿ ಉಳಿವಿಗೆ ಅವಕಾಶ ಇದ್ದು ಆಸ್ತಿಯನ್ನು ಸಂಬಂಧಿಕರು ಅಥವಾ ಉತ್ತರಾಧಿಕಾರಿಗಳಿಗೆ ಹಸ್ತಾಂತರಿಸುವ ಅವಕಾಶವೂ ಕಾನೂನಿನಡಿ ಇದೆ.

ಈ ಅವಕಾಶ ಇದ್ದ ಮಾತ್ರಕ್ಕೆ ನೀವು ಅದನ್ನು ಬಳಸಿಕೊಳ್ಳಬೇಕೆಂದೇನಿಲ್ಲ. ಏನಿದ್ದರೂ ಇದು ಸಾಲವಾದ ಕಾರಣ ಕೊನೆಯ ಅವಕಾಶವಾಗಿ ಅಷ್ಟೇ ಬಳಸಿಕೊಳ್ಳಿ. ನಿಮ್ಮ ಸಹೋದರ ಹಾಗೂ ಅವರ ಮಕ್ಕಳಿರುವ ಕಾರಣ ಈ ಬಗ್ಗೆ ಚರ್ಚಿಸಿ ನಂತರವಷ್ಟೇ ನಿರ್ಧಾರ ಕೈಗೊಳ್ಳಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

ಅಣಬೆ ತರಭೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕು ಹೆಚ್ಚು ಸಂಪಾದಿಸಿ ತರಭೇತಿಗಾಗಿ ಬೆಂಗಳೂರು 8095555516, ಶಿವಮೊಗ್ಗ 8095555517

WALK-IN INTERVIEW
Multicrore, fast growing all India Pharmaceutical Company, Leader in Skin Care, requires BUSINESS EXECUTIVES for their Bangalore, Mangalore & Davanagere Hq's. Fresh B.Sc. | B.Pharma Graduates or MBA Candidates with up to one year of sales experience (age below 26 years) may apply. Monthly Salary & Allowance Rs. 30,000 plus Attractive Incentives
(Average Emoluments up to Rs. 6 Lakhs/Annum).
Interview to be held on 12th and 13th November 2024,
Timing: 10 am - 5 pm
Venue: Zion - A Luxurious Hotel, 31, 5th Main Rd, Gandhi Nagar, Bangalore, Karnataka - 560009.
Interview to be held on 14th November 2024,
Timing: 10 am - 5 pm
Venue: AJ Grand Hotel, 14-7-965, Near K. R. Road, Karangalpady, Mangalore, Karnataka - 575003.
For Information and Application Contact:
Mr. Vishwanath (RBM): 8861308649
Mr. Raghavendra (RBM): 8105990999
Mr. Kiran Kumar (RBM): 9886312659
Mr. Shivanand (RBM): 9916688334
Email: karnatakajobs@hhpharma.com
Scan QR to apply
HEGDE & HEGDE PHARMACEUTICA LLP
Office No. 16-19, 1st Floor, Free Press House, 215 Nariman Point, Mumbai-400021
www.hhpharma.com

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Mangaluru

SITES FOR SALE MANGALORE KAVOOR MALLI LAYOUT 15 Cents 10.25/ Cent, Hosabettu Near Nilgiris 15 Cents 8.30/ Cent. Call: 7022266660

ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಕಿ ಜನಾಂಗದ 12ನೇ ತಲೆಮಾರಿನ 50ವರ್ಷ ಅನುಭವದ 35,000ಕ್ಕೂ ಹೆಚ್ಚು ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಶ್ರೀ.ದೇವಾನಂದ್.ನಿಮ್ಮೆಲ್ಲಾ ಕಷ್ಟಗಳಿಗೆ ಎಲ್ಲಿಲ್ಲದ_ಮುಕ್ತಿ, ಕಾಮಾಕ್ಯ_ಮೋಡಿವಶೀಕರಣ ಯಂತ್ರಕ್ಕೆ ರೂ.2300.ಪ್ರಾಚೀನ ಆಯುರ್ವೇದ ತೂಕ ಇಳಿಕೆ,ಹಸಿವು,ಲೈಂಗಿಕತೆ. 9353143216

ಒಂದೇದಿನದಲ್ಲಿ 100%ಗ್ಯಾರಂಟಿ ಶಾಸ್ತ್ರಪರಿಹಾರ, ಕೃಷ್ಣರೂಪ ವಶೀಕರಣ ಸ್ಪೆಶಲಿಸ್ಟ್. ಪಂಡಿತ್. ಕೃಷ್ಣಪ್ರಸಾದ್. ಉಚಿತಭವಿಷ್ಯ ವಿವಾಹಾಸಂಬಂಧಿತ ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ. 9900510171

★ಇಷ್ಟಪಟ್ಟ ಪ್ರೀತಿ★ ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರ. ... 9611968471

General

Wanted

✓ ಉದ್ಯೋಗಾವಕಾಶಗಳು TVS ಭ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಲ್ಲಿ 7th,PUC, ITI, Degree, ಸಂಬಳ 16,000- 86,000, (ವಿದ್ಯಾರ್ಹತೆಯನುಸಾರವಾಗಿ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಆಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ, ಅನುಭವ ಇರುವವರು ಅಥವಾ ಇಲ್ಲದಿರುವವರು. ಉಚಿತ ಊಟ ವಸತಿ ಸಂಬಳ 15,000/-, 20,000/-, ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ. 9008835841, 9148525233

ತಕ್ಷಣಬೇಕಾಗಿದ್ದಾರೆ. ಟಾಟಾಮೋಟರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIವರುಗಳು, 18,100- 76,000/- (ವಿದ್ಯಾರ್ಹತೆಯನುಸಾರ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯೊಂದಿಗೆ 13,000- 17,000. 8951315839, 9141634619

ಒಡುಗರ ಗಮನಕ್ಕೆ

ಪ್ರವಾಸ

Travel

10.11.2024 ರಾಮೇಶ್ವರಂ ಪ್ರವಾಸ 5 ದಿನ. 5.12.2024 ಗುಜರಾತ್ ..ಉಜ್ಜೈನ್ ಪ್ರವಾಸ 13 ದಿನ. 18.12.2024 ಕಾಶಿ, ಅಯೋಧ್ಯಾ,ಪ್ರಯಾಗ್ ಬೈದ್ಯನಾಥ್ 7 ದಿನ. ನಂದಿನಿ ಟೂರ್ಸ್. 9916574089.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂಫಿಲ್ಲಿಂಗ್ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕಿರಿಯರ್' ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಣೆಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಉತ್ತರ ಪ್ರದೇಶ: ಅಲಹಾಬಾದ್ ಹೈಕೋರ್ಟ್ ತೀರ್ಪು ರದ್ದುಪಡಿಸಿದ ಸುಪ್ರೀಂ ಕೋರ್ಟ್

‘ಮದರಸಾ ಕಾಯ್ದೆ ನ್ಯಾಯಸಮ್ಮತ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಉತ್ತರ ಪ್ರದೇಶ ಮದರಸಾ ಶಿಕ್ಷಣ ಮಂಡಳಿ ಕಾಯ್ದೆ–2004ರ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿ ಹಿಡಿದಿರುವ ಸುಪ್ರೀಂಕೋರ್ಟ್, ಕಾಯ್ದೆಯು ಜಾತ್ಯತೀತ ತತ್ವವನ್ನು ಉಲ್ಲಂಘಿಸುವುದಿಲ್ಲ ಎಂದು ಮಂಗಳವಾರ ಮಹತ್ವದ ತೀರ್ಪು ನೀಡಿದೆ.

ಇದು ಜಾತ್ಯತೀತ ತತ್ವವನ್ನು ಉಲ್ಲಂಘಿಸುತ್ತದೆ ಎಂಬ ಕಾರಣ ನೀಡಿ ಕಾಯ್ದೆಯನ್ನು ರದ್ದು ಮಾಡಿ ಮಾರ್ಚ್ 22ರಂದು ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ರದ್ದುಗೊಳಿಸಿದೆ.

‘ಈ ಕಾಯ್ದೆಯು ಜಾತ್ಯತೀತ ತತ್ವವನ್ನು ಉಲ್ಲಂಘಿಸುತ್ತದೆ ಎಂಬ ಹೈಕೋರ್ಟ್‌ನ ನಿಲುವು ದೋಷದಿಂದ ಕೂಡಿದೆ’ ಎಂದು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ ಹೇಳಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಹಾಗೂ ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿದ್ದರು.

ತೀರ್ಪನ್ನು ಓದಿದ ಸಿಜೆಐ ಚಂದ್ರಚೂಡ್, ‘ಉತ್ತರ ಪ್ರದೇಶ ಮದರಸಾ ಶಿಕ್ಷಣ ಮಂಡಳಿ ಕಾಯ್ದೆಯ ಸಿಂಧುತ್ವವನ್ನು ನಾವು ಎತ್ತಿ ಹಿಡಿಯುತ್ತೇವೆ. ಸರ್ಕಾರಕ್ಕೆ ಶಾಸನಬದ್ಧ ಅಧಿಕಾರ ಇಲ್ಲದಿದ್ದಾಗ ಮಾತ್ರ ಇಂತಹ ಕಾಯ್ದೆಯನ್ನು ರದ್ದುಗೊಳಿಸಬಹುದು’ ಎಂದರು.

ಮುಖ್ಯಾಂಶಗಳು

- ಉತ್ತರ ಪ್ರದೇಶದಲ್ಲಿ 16 ಸಾವಿರಕ್ಕೂ ಅಧಿಕ ಮದರಸಾಗಳಿವೆ
- ಮದರಸಾಗಳಲ್ಲಿ 17 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ

ಮದರಸಾಗಳನ್ನು ಮುಚ್ಚಿ, ಅಲ್ಲಿರುವ ವಿದ್ಯಾರ್ಥಿಗಳನ್ನು ಸರ್ಕಾರಿ ಶಾಲೆಗಳಿಗೆ ಸ್ಥಳಾಂತರ ಮಾಡುವಂತೆ ಹೈಕೋರ್ಟ್ ಆದೇಶಿಸಿತ್ತು. ಈಗ, ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಉತ್ತರ ಪ್ರದೇಶದ ಮದರಸಾಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ನಿರಾಳರಾಗಿದ್ದಾರೆ.

ಅಲಹಾಬಾದ್ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ಪೂರ್ಣಗೊಳಿಸಿದ್ದ ಸುಪ್ರೀಂ ಕೋರ್ಟ್, ಅಕ್ಟೋಬರ್ 22ರಂದು ತನ್ನ ತೀರ್ಪು ಕಾಯ್ದಿರಿಸಿತ್ತು.

ಅಂಜುಮ್ ಖಾದ್ರಿ ಹಾಗೂ ಇತರರು ಈ ಕುರಿತು ಮೇಲ್ಮನವಿ ಸಲ್ಲಿಸಿದ್ದರು.

ನ್ಯಾಯಪೀಠ ಹೇಳಿದ್ದು

- ಜಾತ್ಯತೀತ ತತ್ವಗಳ ಆಧಾರದ ಮೇಲೆ ಕಾಯ್ದೆಯೊಂದನ್ನು ರದ್ದುಗೊಳಿಸಲು ಸಾಧ್ಯವಿಲ್ಲ
- ಕಾಯ್ದೆಯೊಂದು ಶಾಸನಬದ್ಧವಾಗಿ ರೂಪಿಸಿರದಿದ್ದಲ್ಲಿ ಅಥವಾ ಜನರ ಮೂಲಭೂತ ಹಕ್ಕುಗಳು ಇಲ್ಲವೇ ಸಂವಿಧಾನದ ಇತರ ಅವಕಾಶಗಳನ್ನು ಉಲ್ಲಂಘಿಸುತ್ತಿದ್ದಲ್ಲಿ ಅಂತಹ ಕಾಯ್ದೆಯನ್ನು ಕಾನೂನುಬಾಹಿರ ಎಂದು ಘೋಷಿಸಬಹುದು
- ಮದರಸಾ ಕಾಯ್ದೆಯು (ಉತ್ತರ ಪ್ರದೇಶ ಮದರಸಾ ಶಿಕ್ಷಣ ಮಂಡಳಿ ಕಾಯ್ದೆ, 2004) ರಾಜ್ಯವು ಶಾಸನಬದ್ಧವಾಗಿಯೇ ರೂಪಿಸಿದ ಕಾಯ್ದೆಯಾಗಿದೆ. ಪಟ್ಟಿ 3ರಲ್ಲಿ ಉಲ್ಲೇಖಗೊಂಡಿದೆ.
- ಪದವಿ (ಫಾಜಿಲ್) ಹಾಗೂ ಸ್ನಾತಕೋತ್ತರ (ಕಾಮಿಲ್) ಕೋರ್ಸ್‌ಗಳು ಸೇರಿದಂತೆ ಉನ್ನತ ಶಿಕ್ಷಣದ ಮೇಲೆ ನಿಯಂತ್ರಣ ಹೊಂದುವ ಅವಕಾಶಗಳನ್ನು ಕೂಡ ಈ ಕಾಯ್ದೆ ಒಳಗೊಂಡಿದೆ. ಆದರೆ, ಉನ್ನತ ಶಿಕ್ಷಣವನ್ನು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ನಿಯಂತ್ರಿಸುತ್ತದೆ. ಹೀಗಾಗಿ, ಮದರಸಾ ಕಾಯ್ದೆಯಲ್ಲಿನ ಈ ಅವಕಾಶಗಳು ಅಸಾಂವಿಧಾನಿಕ
- ಧಾರ್ಮಿಕ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ಜಾತ್ಯತೀತ ಶಿಕ್ಷಣ ನೀಡುವುದನ್ನು ಖಾತ್ರಿಪಡಿಸುವ ಸಂಬಂಧ ಸರ್ಕಾರ ನಿಯಮಗಳನ್ನು ರೂಪಿಸಬಹುದು. ಈ ನಿಯಮಗಳು ಅವರ ಅಲ್ಪಸಂಖ್ಯಾತ ಸ್ಥಾನಮಾನವನ್ನು ನಾಶ ಮಾಡುವಂತಿರಬಾರದು

ವಿವಿಧ ನಾಯಕರ ಪ್ರತಿಕ್ರಿಯೆ

ಸರ್ಕಾರಕ್ಕೆ ಮದರಸಾಗಳಲ್ಲಿ ಸುಧಾರಣೆ ತರಬೇಕು ಎಂಬ ಉದ್ದೇಶ ಇದ್ದಲ್ಲಿ ಅದು ಸಂಬಂಧಿಸಿದ ಭಾಗೀದಾರರೊಂದಿಗೆ ಚರ್ಚೆ ನಡೆಸಿ, ಕ್ರಮ ತೆಗೆದುಕೊಳ್ಳಲಿ. ಈ ತೀರ್ಪು ಸಂವಿಧಾನದ ಆಶಯವನ್ನು ರಕ್ಷಿಸಿದೆ. ಯಾವುದೇ ಅಸಾಂವಿಧಾನಿಕ ನಿರ್ಧಾರ ಕೈಗೊಂಡಲ್ಲಿ ಕಾನೂನು ಹೋರಾಟ ನಡೆಸಲಾಗುವುದು

ಮೌಲಾನಾ ಕಬ್ ರಶಿದಿ
ಜಮೀಯತ್ ಉಲೇಮಾ–ಎ–ಹಿಂದ್‌ನ ಕಾನೂನು ಸಲಹೆಗಾರ

ಸರ್ಕಾರ ರೂಪಿಸಿರುವ ಕಾಯ್ದೆಯೊಂದು ಅಸಾಂವಿಧಾನಿಕವಾಗಿರಲು ಹೇಗೆ ಸಾಧ್ಯ? ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಮದರಸಾಗಳು ಈಗ ಸಂಪೂರ್ಣ ಸ್ವಾತಂತ್ರ್ಯದೊಂದಿಗೆ ಕಾರ್ಯನಿರ್ವಹಿಸಬಹುದು

ಮೌಲಾನಾ ಖಾಲಿದ್ ರಶೀದ್ ಫರಂಗಿ ಮಹಾಲಿ
ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಹಿರಿಯ ಸದಸ್ಯ

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮದರಸಾಗಳು ಮಹತ್ವದ ಪಾತ್ರ ವಹಿಸಿದ್ದವು. ಮದರಸಾಗಳನ್ನು ಸಂಶಯದಿಂದ ನೋಡುವುದು ಸರಿಯಲ್ಲ. ಇವು ಅನೇಕ ಐಎಎಸ್, ಐಪಿಎಸ್ ಅಧಿಕಾರಿಗಳು ಹಾಗೂ ಸಚಿವರನ್ನು ರೂಪಿಸಿವೆ. ‘ಸುಪ್ರೀಂ’ ತೀರ್ಪು ಕಾಯ್ದೆಯನ್ನು ಸಮರ್ಥಿಸಿದೆ

ಮೌಲಾನಾ ಯಾಸೂಬ್ ಅಬ್ಬಾಸ್
ಅಖಿಲ ಭಾರತ ಶಿಯಾ ವೈಯಕ್ತಿಕ ಕಾನೂನು ಮಂಡಳಿ ವಕ್ತಾರ

ಮದರಸಾಗಳ ಭವಿಷ್ಯ ಕುರಿತು ಸೃಷ್ಟಿಯಾಗಿದ್ದ ಅನಿಶ್ಚಿತತೆಗೆ ಸುಪ್ರೀಂ ಕೋರ್ಟ್ ತೀರ್ಪು ಅಂತ್ಯಹಾಡಿದೆ. ಸುಪ್ರೀಂ ಕೋರ್ಟ್ ತೀರ್ಪನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವುದು ಮುಖ್ಯ

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ

ಸ್ವಾತಂತ್ರ್ಯದ ನಂತರ ಕಾನೂನು ಪ್ರಕಾರವೇ ಮದರಸಾಗಳನ್ನು ಸ್ಥಾಪಿಸಲಾಗಿದೆ. ಆಡಳಿತಾರೂಢ ಬಿಜೆಪಿ ಮುಸ್ಲಿಮರನ್ನು ಅವರ ಸಾಂವಿಧಾನಿಕ ಹಕ್ಕುಗಳಿಂದ ವಂಚಿತರನ್ನಾಗಿ ಮಾಡಲು ಬಯಸಿತ್ತು. ಬಿಜೆಪಿ ನೇತೃತ್ವದ ಸರ್ಕಾರ ಅಲ್ಪಸಂಖ್ಯಾತರ ವಿರುದ್ಧವಾಗಿದ್ದು, ದ್ವೇಷದ ರಾಜಕೀಯ ಮಾಡುತ್ತಿದೆ

ಫಖ್ರುಲ್ ಹಸನ್, ಸಮಾಜವಾದಿ ಪಕ್ಷದ ವಕ್ತಾರ

ಶಿಕ್ಷೆ: ನಿಯಮ ಪರಿಷ್ಕರಣೆಗೆ ಕೇಂದ್ರ ಚಿಂತನೆ

ನವದೆಹಲಿ(ರಾಯಿಟರ್ಸ್): ಅನೇಕ ಪ್ರಕರಣಗಳಲ್ಲಿ ನ್ಯಾಯಾಧೀಶರು ಸಮರ್ಪಕ ವಿಚಾರಣೆ ನಡೆಸುವುದಿಲ್ಲ ಹಾಗೂ ಮನಸ್ಸಿಗೆ ತೋಚಿದಂತೆ ಶಿಕ್ಷೆ ಪ್ರಕಟಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿಬಂದ ಕಾರಣ, ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆ ನೀಡುವ ನಿಯಮಗಳನ್ನು ಪರಿಷ್ಕರಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಕಾನೂನು ಸಚಿವಾಲಯವು ಈ ಕುರಿತ ಯೋಜನೆಯನ್ನು ಸುಪ್ರೀಂ ಕೋರ್ಟ್‌ಗೆ ಡಿಸೆಂಬರ್ ವೇಳೆಗೆ ಸಲ್ಲಿಸಲಿದೆ ಎಂದು ಮೂಲಗಳು ಹೇಳಿವೆ.

ನ್ಯಾಯಾಲಯ ವಿಧಿಸುವ ಶಿಕ್ಷೆ ಅಪರಾಧಕ್ಕೆ ತಕ್ಕಂತೆ ಇರಬೇಕು, ಇದನ್ನು ಖಾತ್ರಿಪಡಿಸಲು ಸೂಕ್ತ ವ್ಯವಸ್ಥೆಯೊಂದನ್ನು ರೂಪಿಸಲು ಸರ್ಕಾರ ಚಿಂತನೆ ನಡೆಸಿದೆ. ಅಲ್ಲದೇ, ಬ್ರಿಟನ್, ಕೆನಡಾ ಹಾಗೂ ನ್ಯೂಜಿಲೆಂಡ್‌ನಲ್ಲಿರುವ ನ್ಯಾಯಾಂಗ ವ್ಯವಸ್ಥೆಯನ್ನೇ ಹೋಲುವ ನ್ಯಾಯದಾನ ವ್ಯವಸ್ಥೆಯನ್ನು ಇಲ್ಲಿಯೂ ರೂಪಿಸಲು ಯೋಜಿಸಿದೆ ಎಂದು ಹೇಳಿವೆ.

2022ರಲ್ಲಿ, ಅತ್ಯಾಚಾರ ಪ್ರಕರಣವೊಂದರ ವಿಚಾರಣೆ ನಡೆಸಿದ್ದ ಬಿಹಾರದ ನ್ಯಾಯಾಲಯವೊಂದು, 30 ನಿಮಿಷದಲ್ಲಿಯೇ ವಿಚಾರಣೆ ಪೂರ್ಣಗೊಳಿಸಿ ವ್ಯಕ್ತಿಗೆ ಮರಣ ದಂಡನೆ ವಿಧಿಸಿತ್ತು. ಈ ಬಗ್ಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು.

ಇದಾದ ಬಳಿಕ, ತೀರ್ಪು ರದ್ದುಗೊಳಿಸಿದ್ದ ಬಿಹಾರ ಹೈಕೋರ್ಟ್, ಪ್ರಕರಣ ಕುರಿತು ಮರು ವಿಚಾರಣೆ ನಡೆಸುವಂತೆ ಆದೇಶಿಸಿತ್ತು. ‘ವ್ಯಕ್ತಿಗೆ ತನ್ನ ಪರ ವಾದ ಮಂಡನೆಗೆ ಅವಕಾಶವನ್ನೇ ನೀಡಿಲ್ಲ. ಅಲ್ಲದೇ, ಈ ವಿಷಯದಲ್ಲಿ ನ್ಯಾಯಾಧೀಶರು ಬಹಳ ಅವಸರದಿಂದ ನಿರ್ಣಯ ಪ್ರಕಟಿಸಿದ್ದಾರೆ’ ಎಂದೂ ಹೈಕೋರ್ಟ್ ಹೇಳಿತ್ತು.

ಈ ಘಟನೆ ನಂತರ, ಶಿಕ್ಷೆ ಪ್ರಕಟಿಸುವ ನಿಯಮಗಳ ಪರಿಷ್ಕರಣೆಗೆ ಸಮಗ್ರ ನೀತಿ ರೂಪಿಸುವಂತೆ ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿತ್ತು.

ವಕ್ಫ್ ಮಸೂದೆ: ಪಾಲ್ ವಿರುದ್ಧ ಸ್ಪೀಕರ್‌ಗೆ ವಿಪಕ್ಷ ಸಂಸದರ ದೂರು

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆ ಕುರಿತ ಸಂಸದೀಯ ಸಮಿತಿಯಲ್ಲಿನ ವಿರೋಧ ಪಕ್ಷಗಳ ಸದಸ್ಯರು ಮಂಗಳವಾರ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾಗಿ, ಸಮಿತಿಯ ಅಧ್ಯಕ್ಷ ಮತ್ತು ಬಿಜೆಪಿ ಸಂಸದ ಜಗದಂಬಿಕಾ ಪಾಲ್ ಅವರು ತೆಗೆದುಕೊಳ್ಳುತ್ತಿರುವ ಏಕಪಕ್ಷೀಯ ನಿರ್ಧಾರಗಳ ವಿರುದ್ಧ ತಮ್ಮ ಪ್ರತಿಭಟನೆಯನ್ನು ದಾಖಲಿಸಿದರು.

ಸದಸ್ಯರ ಅಹವಾಲುಗಳನ್ನು ತಾಳ್ಮೆಯಿಂದ ಆಲಿಸಿದ ಸ್ಪೀಕರ್ ಓಂ ಬಿರ್ಲಾ ಅವರು, ಶೀಘ್ರವೇ ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದರು.

‘ಸ್ಪೀಕರ್ ಅವರು ತುಂಬಾ ತಾಳ್ಮೆಯಿಂದ ನಮ್ಮ ಮಾತುಗಳನ್ನು ಆಲಿಸಿದ್ದಾರೆ. ಅಲ್ಲದೆ, ಅವರು ಈ ವಿಷಯವನ್ನು ಪರಿಶೀಲಿಸುವುದಾಗಿ ಹೇಳಿದ್ದಾರೆ’ ಎಂದು ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ತಿಳಿಸಿದರು.

‘ಸ್ಪೀಕರ್ ಭೇಟಿ ಫಲಪ್ರದವಾಗಿತ್ತು. ನಮ್ಮ ಕುಂದು-ಕೊರತೆಗಳನ್ನು ಪರಿಶೀಲಿಸುವುದಾಗಿ ಸ್ಪೀಕರ್ ಭರವಸೆ ನೀಡಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ಸಂಸದ ಸಂಜಯ್ ಸಿಂಗ್ ಮತ್ತು ಡಿಎಂಕೆ ಸಂಸದ ಎ. ರಾಜಾ ಹೇಳಿದರು.

ಮೂಲಗಳ ಪ್ರಕಾರ, ಕಾಂಗ್ರೆಸ್‌ನ ಮೊಹಮ್ಮದ್ ಜಾವೇದ್ ಮತ್ತು ಇಮ್ರಾನ್ ಮಸೂದ್, ಡಿಎಂಕೆಯ ಎ. ರಾಜಾ, ಎಐಎಂಐಎಂನ ಅಸಾದುದ್ದೀನ್ ಓವೈಸಿ, ಎಎಪಿಯ ಸಂಜಯ್ ಸಿಂಗ್ ಮತ್ತು ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ ಸೇರಿದಂತೆ ವಿರೋಧ ಪಕ್ಷದ ಸಂಸದರು ಸಹಿ ಮಾಡಿದ ಪತ್ರವನ್ನು ಸಂಸದರು ಸ್ಪೀಕರ್‌ಗೆ ಸಲ್ಲಿಸಿದರು.

ಸಂಸತ್ ಚಳಿಗಾಲದ ಅಧಿವೇಶನ 25ರಿಂದ

ನವದೆಹಲಿ (ಪಿಟಿಐ): ಸಂಸತ್ತಿನ ಚಳಿಗಾಲದ ಅಧಿವೇಶನವು ನ.25ರಂದು ಆರಂಭವಾಗಲಿದ್ದು, ಡಿಸೆಂಬರ್ 20ರವರೆಗೆ ನಡೆಯಲಿದೆ.

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಂಗಳವಾರ ‘ಎಕ್ಸ್’ನಲ್ಲಿ ಈ ವಿಚಾರವನ್ನು ತಿಳಿಸಿದ್ದಾರೆ.

ಸಂವಿಧಾನ ಸಭೆಯು ಸಂವಿಧಾನವನ್ನು ಅಂಗೀಕರಿಸಿ ನವೆಂಬರ್ 26ಕ್ಕೆ 75 ವರ್ಷ ತುಂಬಲಿದ್ದು, ಸಂವಿಧಾನ ಭವನದ ಸೆಂಟ್ರಲ್ ಹಾಲ್‌ನಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಗುವುದು ಎಂದಿದ್ದಾರೆ.

ತಿರುನೆಲ್ವೇಲಿ: ದಲಿತ ಯುವಕನ ಮೇಲೆ ಹಲ್ಲೆ

ವೇಗದ ಚಾಲನೆ ಪ್ರಶ್ನಿಸಿದ್ದಕ್ಕೆ ಪ್ರಭಾವಿ ಜಾತಿಯ ಹತ್ತು ಯುವಕರ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಚೆನ್ನೈ: ಅಜಾಗರೂಕತೆಯ ವಾಹನ ಚಾಲನೆ ಪ್ರಶ್ನಿಸಿದ್ದಕ್ಕೆ ಆರಂಭವಾದ ಜಗಳದಲ್ಲಿ ಪರಿಶಿಷ್ಟ ಜಾತಿಯ 17 ವರ್ಷದ ಯುವಕನಿಗೆ, ಪ್ರಭಾವಿ ಮರವರ ಜಾತಿಯ ಯುವಕರ ಗುಂಪು ಮಚ್ಚುಗಳು ಹಾಗೂ ಬಿಯರ್‌ನ ಖಾಲಿ ಬಾಟಲಿಗಳಿಂದ ತೀವ್ರವಾಗಿ ಹಲ್ಲೆ ಮಾಡಿದ ಕೃತ್ಯ ತಿರುನೆಲ್ವೇಲಿಯಲ್ಲಿ ನಡೆದಿದೆ

ಪಟ್ಟಣದ ಮೇಲಪಟ್ಟಂನಲ್ಲಿ ಯುವಕನ ಮನೆಯಲ್ಲಿಯೇ ಹಲ್ಲೆ ನಡೆದಿದ್ದು, ಗಂಭೀರ ಸ್ವರೂಪದಲ್ಲಿ ಗಾಯಗೊಂಡಿರುವ ಯುವಕ ಮನೋಜ್‌ಕುಮಾರ್ ಎಂಬಾತನನ್ನು ತಿರುನೆಲ್ವೇಲಿಯ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

ಈತ ದ್ವಿತೀಯ ವರ್ಷದ ಪಾಲಿಟೆಕ್ನಿಕ್ ವಿದ್ಯಾರ್ಥಿ. ತಂದೆ ಚಿನ್ನದೊರೈ ಮೇಸ್ತ್ರಿ ಆಗಿದ್ದು, ತಾಯಿ ಸುಗಂತಿ ಸ್ಥಳೀಯ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡುತ್ತಾರೆ ಕೃತ್ಯ ನಡೆದಾಗ ಇಬ್ಬರೂ ಕೆಲಸಕ್ಕೆ ಹೋಗಿದ್ದರು.

ದೌರ್ಜನ್ಯ ತಡೆ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ತಿರುಮಲೈ ಕೋಜುಂದುಪುರಂ ಗ್ರಾಮದ ಸುಮಾರು 10 ಜನರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸದ್ಯ, ನಾಲ್ವರನ್ನು ಬಂಧಿಸಲಾಗಿದೆ. ತಲೆಮರೆಸಿಕೊಂಡಿರುವ ಇತರರ ಬಂಧನಕ್ಕೆ ಶೋಧ ನಡೆದಿದೆ ಎಂದೂ ತಿಳಿಸಿದ್ದಾರೆ.

ರಾಜ್ಯದಲ್ಲಿ ಮರವರ, ಅಗಮುಂಡೈಯರ ಮತ್ತು ಕಲ್ಲರ ಜಾತಿಯವರು ಒಬಿಸಿ ವರ್ಗದಲ್ಲಿ ಬರಲಿದ್ದು, ಒಟ್ಟಾಗಿ ಮುಕುಲೇತರರು ಎಂದು ಗುರುತಿಸಲಾಗುತ್ತದೆ. ತಮಿಳುನಾಡಿನ ಕೇಂದ್ರ ಮತ್ತು ದಕ್ಷಿಣ ಪ್ರಾಂತ್ಯದಲ್ಲಿ ಈ ವರ್ಗದವರು ಪ್ರಾಬಲ್ಯ ಹೊಂದಿದ್ದಾರೆ. ರಾಜಕೀಯವಾಗಿಯೂ ಪ್ರಬಲರಾಗಿದ್ದಾರೆ.

ಮನೋಜ್ ಕುಮಾರ್ ಸೋಮವಾರ ಮಧ್ಯಾಹ್ನ ಮನೆಗೆ ಬರುವಾಗ ಕಾರೊಂದು ಹತ್ತಿರವೇ ಹಾದುಹೋಗಿದೆ. ಆಗ ಕಾರಿನಲ್ಲಿದ್ದವರಿಗೆ ಜಾಗ್ರತೆಯಿಂದ ಚಾಲನೆ ಮಾಡಲು ಎಚ್ಚರಿಸಿದ್ದಾನೆ. ಇದೇ ಜಗಳಕ್ಕೆ ನಾಂದಿಯಾಗಿದೆ. ಮಧ್ಯಪ್ರವೇಶಿಸಿದ್ದ ಸ್ಥಳೀಯರು ಜಗಳ ಬಿಡಿಸಿ ಕಳುಹಿಸಿದ್ದರು ಎಂದು ಪೊಲೀಸರು ತಿಳಿಸಿದರು.

ಆದರೆ, ಒಂದು ಗಂಟೆಯ ಬಳಿಕ ಒಂಬತ್ತು ಜನರ ಗುಂಪು ವಿದ್ಯಾರ್ಥಿಯ ಮನೆಗೇ ನುಗ್ಗಿದ್ದು, ಮಚ್ಚು ಮತ್ತು ಗಾಜಿನ ಬಾಟಲಿಗಳಿಂದ ಮನಸೋಇಚ್ಛೆ ಹಲ್ಲೆ ಮಾಡಿದ್ದು, ತೀವ್ರವಾಗಿ ರಕ್ತಸ್ರಾವವಾಗಿದೆ. ಆರು ಯುವಕರು ಎರಡು ಬೈಕ್‌ಗಳಲ್ಲಿ ಗ್ರಾಮಕ್ಕೆ ಬರುತ್ತಿರುವುದು ಸ್ಥಳೀಯ ಸಿ.ಸಿ.ಟಿ.ವಿ ಕ್ಯಾಮೆರಾವೊಂದರಲ್ಲಿ ಸೆರೆಯಾಗಿದೆ.

ಯುವಕನ ತಾಯಿ ಸುಗಂತಿ ಅವರು, ‘ಪರಿಶಿಷ್ಟರಿಗೆ ನಿತ್ಯ ತಾರತಮ್ಯವಾಗುತ್ತಿದೆ. ನನ್ನ ಮಗ ಮಾಡಿದ ತಪ್ಪೇನು? ಖಾಲಿ ಬಾಟಲಿಯಿಂದ ಹಲ್ಲೆ ಮಾಡಿದ್ದು ತಲೆ, ಕಾಲಿಗೆ ತೀವ್ರ ಪೆಟ್ಟಾಗಿದೆ. ಅವರು ಮನುಷ್ಯರಾ? ಮಗ ಮತ್ತು ಅವರಿಗೆ ಹಳೆ ವೈರತ್ವವೂ ಇರಲಿಲ್ಲ. ನಮ್ಮಂತವರಿಗೆ ರಕ್ಷಣೆ ಎಲ್ಲಿದೆ’ ಎಂದು ಪ್ರಶ್ನಿಸಿದರು.

ತಿರುನೆಲ್ವೇಲಿ ಜಿಲ್ಲೆಯಲ್ಲಿ ಕೆಲ ವರ್ಷಗಳಿಂದ ಜಾತಿ ಆಧಾರಿತ ಕಲಹಗಳು ಕಾಲೇಜು ತರಗತಿಗಳ ಒಳಗೆ ಮತ್ತು ಹೊರಗೆ ಹೆಚ್ಚುತ್ತಿವೆ. ತಿರುನೆಲ್ವೇಲಿ, ತೂತುಕುಡಿ, ತೆಂಕಾಸಿ ಜಿಲ್ಲೆಗಳ ಬಹುತೇಕ ಎಲ್ಲ ಗ್ರಾಮಗಳ ಸಾರ್ವಜನಿಕ ಸ್ಥಳಗಳಲ್ಲಿ ಜಾತಿ ಸೂಚಕ ಬಾವುಟಗಳು ಗಮನಸೆಳೆಯುತ್ತವೆ.

ಉತ್ಸವ–ನೃತ್ಯ ವಾರಾಣಸಿಯ ತುಳಸಿ ಘಾಟ್‌ನಲ್ಲಿ ಕಲಾವಿದರೊಬ್ಬರು ‘ನಾಗ ನಾಥೈಯ ಲೀಲಾ’ ಉತ್ಸವದ ಅಂಗವಾಗಿ ಮಂಗಳವಾರ ಪ್ರದರ್ಶನ ನೀಡಿದರು ಪಿಟಿಐ ಚಿತ್ರ

ಅಮೆರಿಕ: ತುರುಸಿನ ಮತದಾನ

ಕಮಲಾ ಹ್ಯಾರಿಸ್– ಡೊನಾಲ್ಡ್ ಟ್ರಂಪ್ ನಡುವೆ ಜಿದ್ದಾಜಿದ್ದಿನ ಪೈಪೋಟಿ

ವಾಷಿಂಗ್ಟನ್ (ಎಪಿ/ಪಿಟಿಐ): ಜಗತ್ತಿನ ಅತಿದೊಡ್ಡ ಆರ್ಥಿಕತೆ ಮತ್ತು ಪ್ರಬಲ ಮಿಲಿಟರಿ ಶಕ್ತಿ ಎನಿಸಿರುವ ಅಮೆರಿಕದ ಮುಂದಿನ ಅಧ್ಯಕ್ಷರ ಆಯ್ಕೆಗೆ ಮಂಗಳವಾರ ನಡೆದ ಮತದಾನದಲ್ಲಿ ಕೋಟ್ಯಂತರ ಮಂದಿ ತಮ್ಮ ಹಕ್ಕು ಚಲಾಯಿಸಿದರು.

ಅಮೆರಿಕದ ಮತದಾರರು ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಅವರಿಗೆ ಮತ್ತೊಂದು ಅವಕಾಶ ನೀಡುವರೇ ಅಥವಾ ಹಾಲಿ ಉಪಾಧ್ಯಕ್ಷೆ ಮತ್ತು ಡೆಮಾಕ್ರಟಿಕ್ ಪಕ್ಷದ ಕಮಲಾ ಹ್ಯಾರಿಸ್ ಅವರನ್ನು ಗೆಲ್ಲಿಸುವರೇ ಎಂಬ ಪ್ರಶ್ನೆಗೆ ಮುಂದಿನ ಕೆಲವು ದಿನಗಳಲ್ಲಿ ಉತ್ತರ ಸಿಗಲಿದೆ. ಇವರಿಬ್ಬರ ನಡುವಣ ಜಿದ್ದಾಜಿದ್ದಿನ ಸ್ಪರ್ಧೆಯಿಂದಾಗಿ ಈ ಬಾರಿಯ ಅಧ್ಯಕ್ಷೀಯ ಚುನಾವಣೆ ಭಾರಿ ಕುತೂಹಲ ಕೆರಳಿಸಿದೆ.

ಅಮೆರಿಕದಾದ್ಯಂತ ಬೆಳಿಗ್ಗೆ 6ಕ್ಕೆ ಮತದಾನ ಪ್ರಕ್ರಿಯೆಗೆ ಚಾಲನೆ ದೊರೆಯಿತು. ಕೆಲವು ಮತಗಟ್ಟೆಗಳ ಎದುರು ಬೆಳಿಗ್ಗೆಯಿಂದಲೇ ಮತದಾರರ ಉದ್ದನೆಯ ಸಾಲುಗಳು ಕಂಡುಬಂದವು. ಉತ್ತರ ಕೆರೊಲಿನಾದ ಬ್ಲ್ಯಾಕ್ ಮೌಂಟೇನ್ ಪಟ್ಟಣದಲ್ಲಿ ಪ್ರವಾಹ ಪರಿಸ್ಥಿತಿ ಇರುವುದರಿಂದ ಟೆಂಟ್‌ಗಳನ್ನು ಹಾಕಿ ತಾತ್ಕಾಲಿಕ ಮತದಾನ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಪೆನ್ಸಿಲ್ವೇನಿಯಾದ ಎರೀ ಪಟ್ಟಣದ ಮತಗಟ್ಟೆಗಳ ಮುಂದೆಯೂ ಸರತಿಯ ಸಾಲು ಕಂಡುಬಂತು.

ಟ್ರಂಪ್ ಮತ್ತು ಕಮಲಾ ನಡುವೆ ಸಮಬಲದ ಪೈಪೋಟಿ ನಡೆಯಲಿದೆ ಎಂದು ಬಹುತೇಕ ಚುನಾವಣಾ ಪೂರ್ವ ಸಮೀಕ್ಷೆಗಳು ಹೇಳಿವೆ. ಮತದಾನಕ್ಕೂ ಮುನ್ನಾದಿನವಾದ ಸೋಮವಾರ ಇವರಿಬ್ಬರೂ ಪೆನ್ಸಿಲ್ವೇನಿಯಾ ರಾಜ್ಯದಲ್ಲಿ ಮತದಾರರನ್ನು ಸೆಳೆಯಲು ಕೊನೆಯ ಹಂತದ ಕಸರತ್ತು ನಡೆಸಿದರು.

ಪೆನ್ಸಿಲ್ವೇನಿಯಾ ಒಳಗೊಂಡಂತೆ ಏಳು ‘ಬ್ಯಾಟಲ್‌ಗ್ರೌಂಡ್ ರಾಜ್ಯ’ಗಳು ಎನಿಸಿರುವ ಅರಿಜೋನಾ, ಜಾರ್ಜಿಯಾ, ಮಿಷಿಗನ್, ವಿಸ್ಕನ್‌ಸ್ಕಿನ್, ನೆವಾಡ ಮತ್ತು ಉತ್ತರ ಕೆರೊಲಿನಾ ರಾಜ್ಯಗಳು ಇಬ್ಬರ ಪಾಲಿಗೂ ನಿರ್ಣಾಯಕ ಎನಿಸಿವೆ. ಅಮೆರಿಕದ 50 ರಾಜ್ಯಗಳಲ್ಲಿ ಈ ಏಳು ರಾಜ್ಯಗಳ ಮತದಾರರನ್ನು ಹೊರತುಪಡಿಸಿ ಹೆಚ್ಚಿನ ರಾಜ್ಯಗಳ ಮತದಾರರು ಒಂದೇ ಪಕ್ಷಕ್ಕೆ ಮತ ಹಾಕುತ್ತಾ ಬಂದಿದ್ದಾರೆ.

ಅಮೆರಿಕದ ಜನಗಣತಿ ಬ್ಯೂರೊ ಪ್ರಕಾರ, 15.5 ಕೋಟಿ ಅಮೆರಿಕನ್ನರು ಮತದಾನ ಮಾಡಲು ಅರ್ಹರಾಗಿದ್ದಾರೆ. 8.2 ಕೋಟಿಗೂ ಹೆಚ್ಚು ಮಂದಿ ಆನ್‌ಲೈನ್ (ಮೇಲ್-ಇನ್ ವೋಟಿಂಗ್) ಮೂಲಕ ತಮ್ಮ ಹಕ್ಕು ಚಲಾಯಿಸಿದ್ದಾರೆ ಎಂದು ಫ್ಲಾರಿಡಾ ವಿ.ವಿ ನೀಡಿರುವ ಅಂಕಿ ಅಂಶಗಳು ಹೇಳಿವೆ. ಉಳಿದವರು ಮಂಗಳವಾರ ಮತದಾನ ಕೇಂದ್ರಗಳಿಗೆ ತೆರಳಿ ಮತ ಚಲಾಯಿಸಿದರು.

ಕಮಲಾ ಹ್ಯಾರಿಸ್ ಅವರು ಈ ಹಿಂದೆಯೇ ಆನ್‌ಲೈನ್‌ನಲ್ಲಿ ಮತ ಹಾಕಿದ್ದರೆ, ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ಫ್ಲಾರಿಡಾದಲ್ಲಿ ಮತ ಚಲಾಯಿಸಿದರು.

ಹ್ಯೂಸ್ಟನ್‌ನಲ್ಲಿ ಭಾರಿ ಮಳೆಯ ನಡುವೆಯೂ ಜನರು ಮತ ಚಲಾಯಿಸಲು ಸಾಲುಗಟ್ಟಿ ನಿಂತಿದ್ದರು ಎಎಫ್‌ಪಿ ಚಿತ್ರ

ಕಮಲಾ ಹ್ಯಾರಿಸ್ ಗೆದ್ದರೆ...

- ಅಧ್ಯಕ್ಷ ಸ್ಥಾನಕ್ಕೇರಿದ ಮೊದಲ ಮಹಿಳೆ ಎಂಬ ಇತಿಹಾಸ ಸೃಷ್ಟಿಸುವರು
- ಈ ಹುದ್ದೆಗೇರಿದ ಮೊದಲ ವರ್ಣೀಯ ಮತ್ತು ದಕ್ಷಿಣ ಏಷ್ಯಾ ಮೂಲದ ಮಹಿಳೆ ಎನಿಸಿಕೊಳ್ಳುವರು
- ಕಳೆದ 32 ವರ್ಷದಲ್ಲಿ ಹಾಲಿ ಉಪಾಧ್ಯಕ್ಷ ಸ್ಥಾನದಲ್ಲಿರುವವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದಿಲ್ಲ. ಕಮಲಾ ಗೆದ್ದರೆ ಆ ಸಾಧನೆ ತಮ್ಮದಾಗಿಸಿಕೊಳ್ಳುವರು

ಡೊನಾಲ್ಡ್ ಟ್ರಂಪ್ ಗೆದ್ದರೆ...

- ಅಧ್ಯಕ್ಷರಾಗಿ ಆಯ್ಕೆಯಾದ ಅತ್ಯಂತ ಹಿರಿಯ ಅಭ್ಯರ್ಥಿ ಎನಿಸಿಕೊಳ್ಳುವರು
- ಕಳೆದ 132 ವರ್ಷಗಳಲ್ಲಿ ಒಮ್ಮೆ ಸೋತು, ಮತ್ತೊಂದು ಅವಧಿಗೆ ಸ್ಪರ್ಧಿಸಿ ಯಾರೂ ಗೆದ್ದಿಲ್ಲ. ಟ್ರಂಪ್ ಗೆದ್ದರೆ ಹೊಸ ಇತಿಹಾಸ ನಿರ್ಮಾಣವಾಗಲಿದೆ
- ಗಂಭೀರ ಅಪರಾಧ ಪ್ರಕರಣದಲ್ಲಿ ತಪ್ಪಿತಸ್ಥನಾದ ವ್ಯಕ್ತಿ ಮೊದಲ ಬಾರಿಗೆ ಅಧ್ಯಕ್ಷ ಹುದ್ದೆ ಅಲಂಕರಿಸಿದಂತಾಗಲಿದೆ

ಆಂಧ್ರ ಪ್ರದೇಶದ ಗೃಹ ಸಚಿವೆ ವಂಗಲಪೂಡಿ ಅನಿತಾ ಪ್ರತಿಕ್ರಿಯೆ

‘ಡಿಸಿಎಂ ಹೇಳಿಕೆ ಸಕಾರಾತ್ಮಕವಾಗಿ ಸ್ವೀಕಾರ’

ಅಮರಾವತಿ (ಪಿಟಿಐ): ‘ನನ್ನ ಕಾರ್ಯವೈಖರಿ ಕುರಿತು ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ನೀಡಿರುವ ಹೇಳಿಕೆಯನ್ನು ನಾನು ಸಕಾರಾತ್ಮಕವಾಗಿ ಸ್ವೀಕರಿಸುತ್ತೇನೆ’ ಎಂದು ಆಂಧ್ರ ಪ್ರದೇಶ ಗೃಹ ಸಚಿವೆ ವಂಗಲಪೂಡಿ ಅನಿತಾ ಮಂಗಳವಾರ ಹೇಳಿದರು.

ರಾಜ್ಯದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಹಾಗೂ ಅತ್ಯಾಚಾರದಂಥ ಪ್ರಕರಣಗಳು ಹೆಚ್ಚಾಗಿವೆ ಎಂದು ಅನಿತಾ ಅವರ ಕಾರ್ಯವೈಖರಿಯನ್ನು ಟೀಕಿಸಿ ಪವನ್ ಕಲ್ಯಾಣ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದರು.

ಟಿಡಿಪಿ, ಬಿಜೆಪಿ ಹಾಗೂ ಜನಸೇನಾ ಪಕ್ಷಗಳ ಮೈತ್ರಿ ಸರ್ಕಾರ ಆಂಧ್ರ ಪ್ರದೇಶದಲ್ಲಿದೆ. ತಮ್ಮದೇ ಸರ್ಕಾರದ ಸಚಿವರೊಬ್ಬರ ಕಾರ್ಯವೈಖರಿ ಕುರಿತು ಬಹಿರಂಗವಾಗಿ ಪವನ್ ಕಲ್ಯಾಣ್ ಅವರು ನೀಡಿರುವ ಕಟು ಹೇಳಿಕೆಯು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ಅನಂತಪುರದಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿರುವ ಅನಿತಾ, ‘ಪವನ್ ಅವರೊಂದಿಗೆ ಶೀಘ್ರದಲ್ಲಿಯೇ ಚರ್ಚಿಸುತ್ತೇನೆ’ ಎಂದರು.

‘ಪವನ್ ಕಲ್ಯಾಣ್ ಅವರು ನನ್ನ ಕೆಲಸಕ್ಕೆ ಅನುಕೂಲವಾಗುವ ರೀತಿಯಲ್ಲೇ ತಮ್ಮ ಮಾತುಗಳ ಮೂಲಕ ಹೇಳಿದ್ದಾರೆ. ಇನ್ನಷ್ಟು ಉತ್ತಮವಾಗಿ ಕೆಲಸ ಮಾಡುವಂತೆ ಆಗ್ರಹಿಸಿದ್ದಾರೆ’ ಎಂದರು.

‘ಗೃಹ ಸಚಿವೆಯಾಗಿ ನನಗೆ ನನ್ನ ಜವಾಬ್ದಾರಿಗಳು ತಿಳಿದಿವೆ ಮತ್ತು ಯಾವ ರೀತಿ ಕೆಲಸ ಮಾಡಬೇಕು ಎಂದೂ ತಿಳಿದಿದೆ. ಪವನ್ ಕಲ್ಯಾಣ್ ಅವರು ನನ್ನನ್ನು ವಿಫಲ ಸಚಿವೆ ಎಂದೇನೂ ಬಿಂಬಿಸಿಲ್ಲ’ ಎಂದರು.

ಪವನ್ ಕಲ್ಯಾಣ್ ಹೇಳಿದ್ದೇನು?



ರಾಜ್ಯದ ಕಾನೂನು ಸುವ್ಯವಸ್ಥೆ ಕುರಿತು ಜನರು ನಮ್ಮನ್ನು ಹೋದಲ್ಲೆಲ್ಲಾ ಟೀಕಿಸುತ್ತಿದ್ದಾರೆ. ಕರ್ತವ್ಯ ನಿರ್ವಹಿಸದಂತೆ ಪೊಲೀಸರನ್ನು ಯಾರು ತಡೆಯುತ್ತಿದ್ದಾರೆ? ಯಾವುದಾದರು ಆರೋಪಿಯನ್ನು ಪ್ರಕರಣದಿಂದ ಕೈಬಿಡುವಂತೆ ನಾನು ಶಿಫಾರಸು ಮಾಡಿದ್ದೇನೆಯೇ? ನನ್ನ ಬಳಿಯೇ ಗೃಹ ಸಚಿವಾಲಯ ಇದ್ದಿದ್ದರೆ ಪರಿಸ್ಥಿತಿಯು ಸಂಪೂರ್ಣವಾಗಿ ಬೇರೆಯದೇ ಆಗಿರುತ್ತಿತ್ತು. ನಾನು ಪಂಚಾಯತ್ ರಾಜ್ ಸಚಿವ ಮಾತ್ರ. ನಾನು ನಿಮಗೆ ಹೇಳುತ್ತಿದ್ದೇನೆ, ನಿಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿ. ಪರಿಸ್ಥಿತಿ ಬದಲಾಗದಿದ್ದಲ್ಲಿ ನಿಮ್ಮ ಕೆಲಸವನ್ನು ನಾನೇ ಕೈಗೆತ್ತಿಕೊಳ್ಳಬೇಕಾದ ಕಾಲ ಬರಬಹುದು. ಅಪರಾಧಿಗಳಿಗೆ ಯಾವುದೇ ಜಾತಿ, ಧರ್ಮ ಇರುವುದಿಲ್ಲ

ಪವನ್ ಕಲ್ಯಾಣ್, ಆಂಧ್ರ ಪ್ರದೇಶ ಉಪಮುಖ್ಯಮಂತ್ರಿ

ತೆಲಂಗಾಣ: ನವಗ್ರಹ ಮೂರ್ತಿಗಳ ಧ್ವಂಸ

ಪ್ರಜಾವಾಣಿ ವಾರ್ತೆ/ಪಿಟಿಐ

ಹೈದರಾಬಾದ್: ಹನುಮಾನ್ ದೇವಾಲಯದ ನವಗ್ರಹ ಮೂರ್ತಿಗಳನ್ನು ಧ್ವಂಸಗೊಳಿಸಿರುವ ಘಟನೆ ರಂಗಾರೆಡ್ಡಿ ಜಿಲ್ಲೆಯ ಶಂಷಾಬಾದ್‌ನಲ್ಲಿ ನಡೆದಿದೆ.

ಸೋಮವಾರ ತಡರಾತ್ರಿ ಈ ಘಟನೆ ನಡೆದಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ.

ಪ್ರಕರಣ ಸಂಬಂಧ ಒಬ್ಬನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಮೂರ್ತಿಗಳನ್ನು ಧ್ವಂಸಗೊಳಿಸಿರುವ ವಿಚಾರ ತಿಳಿಯುತ್ತಿದ್ದಂತೆ ಸ್ಥಳೀಯ ಹಿಂದೂ ಸಂಘಟನೆಗಳು ಹಾಗೂ ಬಿಜೆಪಿ ಕಾರ್ಯಕರ್ತರು ದೇವಾಲಯದ ಬಳಿ ಜಮಾಯಿಸಿ, ಪ್ರತಿಭಟನೆ ನಡೆಸಿದರು.

‘ದೇವಾಲಯದಲ್ಲಿನ ಮೂರ್ತಿಗಳನ್ನು ಭಗ್ನಗೊಳಿಸಿರುವ ವಿಚಾರವನ್ನು ಭಕ್ತರೊಬ್ಬರು ಮಂಗಳವಾರ ಮುಂಜಾನೆ ತಿಳಿಸಿದರು. ಬಳಿಕ ಸ್ಥಳಕ್ಕೆ ತೆರಳಿ ನೋಡಿದಾಗ ಐದು ಮೂರ್ತಿಗಳನ್ನು ಧ್ವಂಸಗೊಳಿಸಲಾಗಿತ್ತು’ ಎಂದು ದೇವಾಲಯದ ಅರ್ಚಕರು ಪ್ರತಿಕ್ರಿಯಿಸಿದ್ದಾರೆ.

ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ದಾಳಿ ನಡೆಸಿರುವ ಶಂಕೆ ಮೇಲೆ 50 ವರ್ಷದ ಮಾನಸಿಕ ಅಸ್ವಸ್ಥ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದೆ. ಪರಿಸ್ಥಿತಿ ಶಾಂತವಾಗಿದೆ ಎಂದು ಶಂಷಾಬಾದ್ ಡಿಸಿಪಿ ಬಿ.ರಾಜೇಶ್ ತಿಳಿಸಿದ್ದಾರೆ.

ಬಿಜೆಪಿ ಕಿಡಿ: ಮೂರ್ತಿಗಳು ಧ್ವಂಸಗೊಂಡಿರುವ ವಿಡಿಯೊವನ್ನು ತೆಲಂಗಾಣ ಬಿಜೆಪಿಯು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದು, ತೆಲಂಗಾಣದ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿಕಾರಿದೆ.

‘ಮತ್ತದೇ ದುರಂತದ ದಿನ. ಕಾಂಗ್ರೆಸ್ ಆಡಳಿತದಲ್ಲಿ ಮತ್ತೊಂದು ಪವಿತ್ರ ಹಿಂದೂ ದೇವಾಲಯವನ್ನು ಅಪವಿತ್ರಗೊಳಿಸಲಾಗಿದೆ. ತುಷ್ಟೀಕರಣದ ರಾಜಕೀಯಕ್ಕೆ ಜೋತು ಬಿದ್ದಿರುವ ಕಾಂಗ್ರೆಸ್, ದೇವಾಲಯಗಳ ಮೇಲೆ ದಾಳಿ ಮಾಡಿದವರ ಬಗ್ಗೆ ಕುರುಡಾಗಿ ವರ್ತಿಸುತ್ತಿದೆ. ಅವರನ್ನು ಬಂಧಿಸಿ ಶಿಕ್ಷಿಸದೆ, ಇಂತಹ ಕೃತ್ಯಗಳನ್ನು ಮುಂದುವರಿಸುವಂತೆ ಹುರಿದುಂಬಿಸುತ್ತಿದೆ’ ಎಂದು ಆಪಾದಿಸಿದೆ.

ರಾಜ್ಯ ಶಾಸನಸಭೆ: ಕಣದಲ್ಲಿ ಭಾರತೀಯ ಅಮೆರಿಕನ್ನರು

ವಾಷಿಂಗ್ಟನ್ (ಪಿಟಿಐ): ಭಾರತೀಯ ಮೂಲದ 30ಕ್ಕೂ ಅಧಿಕ ಮಂದಿ ಅಮೆರಿಕದಲ್ಲಿ ಸ್ಥಳೀಯ ಸಂಸ್ಥೆಗಳು ಮತ್ತು ರಾಜ್ಯ ಶಾಸನಸಭೆಗಳ ಚುನಾವಣಾ ಕಣದಲ್ಲಿದ್ದಾರೆ. ಇದು ಅಮೆರಿಕ ರಾಜಕಾರಣದ ಮುಖ್ಯವಾಹಿನಿಯ ಭಾಗವಾಗಲು ಭಾರತೀಯ ಅಮೆರಿಕನ್ನರಲ್ಲಿ ಹೆಚ್ಚುತ್ತಿರುವ ಆಸಕ್ತಿಯನ್ನು ತೋರಿಸುತ್ತದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಭಾರತೀಯ ಅಮೆರಿಕನ್ನರು ಹೆಚ್ಚಿನ ಸಂಖ್ಯೆಯಲ್ಲಿ ಕಣಕ್ಕಿಳಿದಿರುವ ರಾಜ್ಯವೆಂದರೆ ಕ್ಯಾಲಿಫೋರ್ನಿಯಾ. ಅದ್ನಾ ಚಿಸ್ತಿ ಅವರು ಡಿಸ್ಟ್ರಿಕ್ಟ್11ರಲ್ಲಿ ಕೌಂಟಿ ಸೂಪರ್‌ವೈಸರ್ ಸ್ಥಾನಕ್ಕೆ ಹಾಗೂ ಆಲಿಯಾ ಚಿಸ್ತಿ ಅವರು ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಸಿಟಿ ಕಾಲೇಜ್ ಬೋರ್ಡ್ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದಾರೆ. ದರ್ಶನಾ ಪಟೇಲ್ ಅವರು ರಾಜ್ಯ ಶಾಸನಸಭೆಗೆ ಕಣದಲ್ಲಿದ್ದಾರೆ.

ನಿಕೋಲ್ ಫೆರ್ನಾಂಡೆಜ್ (ಸ್ಯಾನ್ ಮಟೆವೊ ಸಿಟಿ ಕೌನ್ಸಿಲ್), ನಿತ್ಯಾ ರಾಮನ್ (ಲಾಸ್ ಏಂಜಲೀಸ್ ಸಿಟಿ ಕೌನ್ಸಿಲ್), ರಿಚಾ ಅವಸ್ತಿ (ಫಾಸ್ಟರ್ ಸಿಟಿ ಕೌನ್ಸಿಲ್) ಮತ್ತು ಸುಖ್‌ದೀಪ್ ಕೌರ್ (ಎಮೆರ್‌ವಿಲ್ ಸಿಟಿ ಕೌನ್ಸಿಲ್) ಅವರು ವಿವಿಧ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ.

ತಾರಾ ಶ್ರೀಕೃಷ್ಣನ್ ಅವರು ಕ್ಯಾಲಿಫೋರ್ನಿಯಾ ರಾಜ್ಯ ಶಾಸನ ಸಭೆಗೆ ಆಯ್ಕೆ ಬಯಸಿ ಡಿಸ್ಟ್ರಿಕ್ಟ್ 26ರಿಂದ ಸ್ಪರ್ಧಿಸುತ್ತಿದ್ದಾರೆ. ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಸುಮಾರು 9 ಲಕ್ಷದಷ್ಟು ಭಾರತೀಯ ಅಮೆರಿಕನ್ನರು ನೆಲಸಿದ್ದಾರೆ.

ಅರಿಜೋನಾದಿಂದ ಪ್ರಿಯಾ ಸುಂದರೇಶನ್ ಹಾಗೂ ಪೆನ್ಸಿಲ್ವೇನಿಯಾದಿಂದ ಆನಂದ್ ಪಾಠಕ್, ಅನ್ನಾ ಥಾಮಸ್, ಅರವಿಂದ್ ವೆಂಕಟ್ ಮತ್ತು ನಿಕಿಲ್ ಅವರು ರಾಜ್ಯ ಶಾಸನಸಭೆಗೆ ಆಯ್ಕೆ ಬಯಸಿದ್ದಾರೆ.

ಒಹಿಯೊ, ನ್ಯೂಯಾರ್ಕ್, ಟೆಕ್ಸಾಸ್ ಮತ್ತು ವಾಷಿಂಗ್ಟನ್‌ನಲ್ಲೂ ಸ್ಥಳೀಯ ಸಂಸ್ಥೆ ಮತ್ತು ರಾಜ್ಯ ಶಾಸನಸಭೆಗೆ ಆಯ್ಕೆ ಬಯಸಿ ಹಲವು ಭಾರತೀಯ ಅಮೆರಿಕನ್ನರು ಕಣದಲ್ಲಿದ್ದಾರೆ.

ಗೆಲುವಿಗಾಗಿ ತಮಿಳುನಾಡಿನ ತುಳಸೇಂದ್ರಪುರ ನಿವಾಸಿಗಳ ಪ್ರಾರ್ಥನೆ

ಕಮಲಾ ಪೂರ್ವಜರ ಊರಲ್ಲಿ ಪೂಜೆ

ತುಳಸೇಂದ್ರಪುರ (ತಮಿಳುನಾಡು) (ರಾಯಿಟರ್ಸ್): ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿರುವ ಹಾಲಿ ಉಪಾಧ್ಯಕ್ಷೆ, ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರ ಗೆಲುವಿಗೆ ತಮಿಳುನಾಡಿನ ತುಳಸೇಂದ್ರಪುರದಲ್ಲಿ ಮಂಗಳವಾರ ವಿಶೇಷ ಪೂಜೆ ನಡೆಯಿತು.

ಗ್ರಾಮದ ದೇವಸ್ಥಾನದಲ್ಲಿ ಗ್ರಾಮಸ್ಥರು ಆಯೋಜಿಸಿದ್ದ ಪೂಜೆಯಲ್ಲಿ ಸ್ಥಳೀಯರು ಹಾಗೂ ಕೆಲವು ಪ್ರವಾಸಿಗರು ಪಾಲ್ಗೊಂಡರು. ಕಮಲಾ ಹ್ಯಾರಿಸ್ ಅವರ ಅಜ್ಜ ಪಿ.ವಿ.ಗೋಪಾಲನ್ ಅವರು (ತಾಯಿ ಡಾ. ಶ್ಯಾಮಲಾ ಗೋಪಾಲನ್ ಅವರ ತಂದೆ) ತುಳಸೇಂದ್ರಪುರ ಗ್ರಾಮದವರು. ಇಲ್ಲಿ ಹುಟ್ಟಿ ಬೆಳೆದಿದ್ದ ಅವರು ಬಳಿಕ ಚೆನ್ನೈಗೆ ಸ್ಥಳಾಂತರಗೊಂಡಿದ್ದರು.

ವಿಶೇಷ ಪೂಜೆಯಲ್ಲಿ ‘ಕಮಲಾ ಹ್ಯಾರಿಸ್ ಗೆಲ್ಲಲಿ’ ಎಂದು ಪ್ರಾರ್ಥಿಸಲಾಯಿತು. ಪೂಜೆಯಲ್ಲಿ ಪಾಲ್ಗೊಂಡವರಿಗೆ ಅರ್ಚಕರು ಕುಂಕುಮ ಪ್ರಸಾದ ನೀಡಿದರು. ದೇವಾಲಯದ ಜೀರ್ಣೋದ್ಧಾರಕ್ಕಾಗಿ ದೇಣಿಗೆ ನೀಡಿದವರ ಹೆಸರನ್ನು ಕಲ್ಲಿನಲ್ಲಿ ಕೆತ್ತಲಾಗಿದ್ದು, ಅದರಲ್ಲಿ ಕಮಲಾ ಹ್ಯಾರಿಸ್ ಮತ್ತು ಪಿ.ವಿ. ಗೋಪಾಲನ್ ಅವರ ಹೆಸರುಗಳೂ ಇವೆ.

‘ಕಮಲಾ ನಮ್ಮವರೇ ಆಗಿದ್ದು, ಅವರು ಗೆಲ್ಲಬೇಕು’ ಎಂದು ಸ್ಥಳೀಯ ಮುಖಂಡ ಸುಧಾಕರ್ ಹೇಳಿದರು. ‘ಅವರ ಗೆಲುವು ಘೋಷಣೆಯಾದ ಬಳಿಕ ವಿಶೇಷ ಪೂಜೆ ಸಲ್ಲಿಸುತ್ತೇವೆ ಹಾಗೂ ಅನ್ನಸಂತರ್ಪಣೆ ಏರ್ಪಡಿಸಲು ನಿರ್ಧರಿಸಿದ್ದೇವೆ’ ಎಂದರು.

ಮಂಗಳವಾರ ನಡೆದ ಪೂಜೆಯಲ್ಲಿ ಬ್ರಿಟನ್‌ನ ಒಬ್ಬ ಮತ್ತು ಅಮೆರಿಕದ ಇಬ್ಬರು ಪ್ರಜೆಗಳು ಪಾಲ್ಗೊಂಡರು. ‘ನಾನು ಕಮಲಾ ಅವರ ಅಭಿಮಾನಿ. ಅವರ ಪೂರ್ವಜರ ಗ್ರಾಮವನ್ನು ನೋಡಲು ಇಲ್ಲಿಗೆ ಬಂದಿದ್ದೇನೆ’ ಎಂದು ವಾಷಿಂಗ್ಟನ್‌ನ ಸಿಯಾಟಲ್‌ನ ನಿವಾಸಿ, ಈಗ ಚೆನ್ನೈನಲ್ಲಿ ನೆಲೆಸಿರುವ ಡೆವೊನಿ ಇವಾನ್ಸ್ ತಿಳಿಸಿದರು.

2020ರಲ್ಲಿ ಕಮಲಾ ಅವರು ಅಮೆರಿಕದ ಉಪಾಧ್ಯಕ್ಷೆಯಾಗಿ ಆಯ್ಕೆಯಾಗಿದ್ದ ಸಂದರ್ಭದಲ್ಲಿ ತುಳಸೇಂದ್ರಪುರ ಗ್ರಾಮ ಎಲ್ಲರ ಗಮನ ಸೆಳೆದಿತ್ತು. ಅಂದು ಇಲ್ಲಿನ ಗ್ರಾಮಸ್ಥರು ಪಟಾಕಿ ಸಿಡಿಸಿ ಸಂಭ್ರಮಿಸಿದ್ದರು.

ಗೋಪಾಲನ್ ಮಗಳಾದ ಡಾ.ಶ್ಯಾಮಲಾ ಗೋಪಾಲನ್ ಅವರು ಜಮೈಕಾದ ಡೊನಾಲ್ಡ್ ಹ್ಯಾರಿಸ್ ಅವರನ್ನು ಮದುವೆಯಾಗಿದ್ದರು. ಈ ದಂಪತಿಗೆ ಇಬ್ಬರು (ಕಮಲಾ ಹ್ಯಾರಿಸ್, ಮಾಯಾ ಹ್ಯಾರಿಸ್) ಹೆಣ್ಣು ಮಕ್ಕಳಿದ್ದಾರೆ. ಕಮಲಾ ಅವರು ಐದು ವರ್ಷದವರಿದ್ದಾಗ ತಮ್ಮ ತಾಯಿ ಜತೆ ಚೆನ್ನೈಗೆ ಬಂದಿದ್ದಾಗ ತುಳಸೇಂದ್ರಪುರಕ್ಕೂ ಭೇಟಿ ಕೊಟ್ಟಿದ್ದರು.

ತುಳಸೇಂದ್ರಪುರದ ದೇವಸ್ಥಾನದಲ್ಲಿ ನಡೆದ ಪೂಜೆಯಲ್ಲಿ ಸ್ಥಳೀಯರ ಜತೆ ವಿದೇಶಿಯರೂ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು ಪಿಟಿಐ ಚಿತ್ರ

ಖಾಸಗಿ ಸ್ವತ್ತು ಸಮುದಾಯದ್ದಲ್ಲ

ಒಂದನೇ ಪುಟದಿಂದ...

‘ಸಂವಿಧಾನದ 39(ಬಿ) ವಿಧಿಯಲ್ಲಿ ಉಲ್ಲೇಖಿಸಿರುವಂತೆ, ‘ಸಮುದಾಯದ ಭೌತಿಕ ಸಂಪತ್ತು’ ಎಂಬ ಪದವು ಖಾಸಗಿ ಒಡೆತನದಲ್ಲಿರುವ ಸಂಪನ್ಮೂಲಗಳನ್ನು ಒಳಗೊಂಡಿದೆಯೇ ಎಂಬ ಪ್ರಶ್ನೆ ನ್ಯಾಯಪೀಠದ ಮುಂದಿದೆ. ಹೌದು ಎಂಬುದು ಈ ಪ್ರಶ್ನೆಗೆ ಸೈದ್ಧಾಂತಿಕವಾಗಿ ನೀಡುವ ಉತ್ತರವಾಗಿದೆ. ಈ ಪದವು ಖಾಸಗಿ ಒಡೆತನದ ಸಂಪನ್ಮೂಲಗಳನ್ನೂ ಒಳಗೊಳ್ಳುತ್ತದೆ’ ಎಂದು ಪೀಠವು ಬಹುಮತದ ತೀರ್ಪಿನಲ್ಲಿ ಹೇಳಿದೆ.

‘ಖಾಸಗಿ ಒಡೆತನದ ಸಂಪನ್ಮೂಲ ಕೂಡ ಸಮುದಾಯದ ಭೌತಿಕ ಸಂಪತ್ತು ಎಂಬುದನ್ನು ವ್ಯಾಪಕ ಅರ್ಥದಲ್ಲಿ ಬಳಸಬಹುದೆಂದು ಕರ್ನಾಟಕ ವರ್ಸಸ್ ರಂಗನಾಥ ರೆಡ್ಡಿ ಪ್ರಕರಣದಲ್ಲಿ ನ್ಯಾ. ಕೃಷ್ಣ ಅಯ್ಯರ್ ನೀಡಿರುವ ತೀರ್ಪಿನಲ್ಲಿ ಹೇಳಿದ್ದಾರೆ. ಹಾಗೆಯೇ ಸಂಜೀವ್ ಕೋಕ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ ವರ್ಸಸ್ ಭಾರತ್‌ಕೋಕಿಂಗ್‌ಕೋಲ್‌ಲಿ.(1983) ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಕೂಡ ಇದೇ ಅರ್ಥದಲ್ಲಿ ಈ ವಿಧಿಯನ್ನು ವ್ಯಾಖ್ಯಾನಿಸಿದ್ದನ್ನೂ ಒಪ್ಪುವುದು ಸಾಧ್ಯವಿಲ್ಲ’ ಎಂದು ಪೀಠ ಹೇಳಿದೆ.

ಮಹಾರಾಷ್ಟ್ರ ವಸತಿ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ–1976ರ 8–ಎ ಅಧ್ಯಾಯವು ಖಾಸಗಿ ಸ್ವತ್ತು-ಗಳನ್ನು ಸ್ವಾಧೀನಪಡಿಸಿಕೊಳ್ಳಲು ಅವಕಾಶ ನಿಡುತ್ತದೆ. ಇದನ್ನು ಪ್ರಶ್ನಿಸಿ, ಆಸ್ತಿಗಳ ಮಾಲೀಕರ ಸಂಘವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

‘ಅಯ್ಯರ್ ಕುರಿತ ಹೇಳಿಕೆ ಅನಪೇಕ್ಷಿತ’

ಒಂದನೇ ಪುಟದಿಂದ...

‘ಸರ್ಕಾರದ ಆರ್ಥಿಕ ನೀತಿಗಳಲ್ಲಿ ಭಾರಿ ಬದಲಾವಣೆಗಳಾಗಿವೆ ಎಂದ ಮಾತ್ರಕ್ಕೆ ಈ ಹಿಂದಿನ ನ್ಯಾಯಮೂರ್ತಿಗಳಿಂದ ಸಂವಿಧಾನಕ್ಕೆ ಅನ್ಯಾಯವಾಗಿದೆ ಎಂದು ಹೇಳುವುದು ಸರಿಯಲ್ಲ’ ಎಂದೂ ಹೇಳಿದ್ದಾರೆ.

‘ನ್ಯಾಯಮೂರ್ತಿ ಅಯ್ಯರ್ ಸಿದ್ಧಾಂತ ಕುರಿತಂತೆ ವ್ಯಕ್ತವಾದ ಹೇಳಿಕೆಗೆ ನನ್ನ ಬಲವಾದ ಅಸಮ್ಮತಿಯನ್ನು ಈ ವೇಳೆ ದಾಖಲಿಸುತ್ತೇನೆ’ ಎಂದು ನ್ಯಾಯಮೂರ್ತಿ ಧುಲಿಯಾ ಹೇಳಿದ್ದಾರೆ.

ರಣಜಿ ಕ್ರಿಕೆಟ್: ಮಯಂಕ್ ಪಡೆ– ಬಂಗಾಳ ಮುಖಾಮುಖಿ ಇಂದಿನಿಂದ • ಹೊಸ ಪ್ರತಿಭೆಗಳ ಮೇಲೆ ಭರವಸೆ

ಮತ್ತೊಂದು ಗೆಲುವಿಗೆ ಕರ್ನಾಟಕದ ತುಡಿತ

• ಗಿರೀಶ ದೊಡ್ಡಮನಿ

ಕರ್ನಾಟಕದ ಬೌಲರ್‌ಗಳಿಗೆ ಬೌಲಿಂಗ್ ಕೋಚ್ ಮನ್ಸೂರ್ ಅಲಿ ಖಾನ್ (ಎಡದಿಂದ ಮೂರನೇಯವರು) ಮಾರ್ಗದರ್ಶನ ನೀಡಿದರು ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ದನ್

ಬೆಂಗಳೂರು: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ಕ್ರಿಕೆಟ್ ತಂಡದವರು ಮಂಗಳವಾರ ಬೆಳಿಗ್ಗೆ ಅಭ್ಯಾಸ ಮಾಡುತ್ತಿದ್ದ ಚಿನ್ನಸ್ವಾಮಿ ಕ್ರೀಡಾಂಗಣದ ನೆಟ್ಸ್‌ನಲ್ಲಿ ವೇಗಿ ವಿದ್ವತ್ ಕಾವೇರಪ್ಪ ಕಾಣಿಸಿಕೊಂಡರು. ಬುಧವಾರ ಇಲ್ಲಿ ಆರಂಭವಾಗಲಿರುವ ಬಂಗಾಳ ವಿರುದ್ಧದ ಪಂದ್ಯದಲ್ಲಿ ಕರ್ನಾಟಕದ ಬೌಲಿಂಗ್ ಹೊಣೆ ಹೊತ್ತ ಯುವ ಬೌಲರ್‌ಗಳೊಂದಿಗೆ ಮತ್ತು ಸ್ನೇಹಿತರೊಂದಿಗೆ 'ಕುಶಲೋಪರಿ' ನಡೆಸಿ ಹೊರನಡೆದರು.

ಸಿ ಗುಂಪಿನಲ್ಲಿ ನಾಲ್ಕನೇ ಪಂದ್ಯ ಆಡಲಿರುವ ಕರ್ನಾಟಕ ತಂಡವು ಈಗ ಅನನುಭವಿ ವೇಗಿಗಳ ದಂಡಿನೊಂದಿಗೆ ಕಣಕ್ಕಿಳಿಯಬೇಕಿದೆ. ಗಾಯದಿಂದ ಚೇತರಿಸಿಕೊಳ್ಳುತ್ತಿರುವ ವಿದ್ವತ್ ಅವರ ಸಲಹೆಗಳು ಈ ನವಪ್ರತಿಭೆಗಳಿಗೆ ಲಭಿಸಿರಬಹುದು. ಅವರಿನ್ನೂ ಎನ್‌ಸಿಎನಲ್ಲಿ ತಮ್ಮ ಗಾಯಕ್ಕೆ ಆರೈಕೆ ಪಡೆಯುತ್ತಿದ್ದಾರೆ.

ಕಳೆದ ಪಂದ್ಯಗಳಲ್ಲಿ ವಿದ್ವತ್ ಗೈರು ಹಾಜರಿಯಲ್ಲಿ ಹೊಣೆ ನಿಭಾಯಿಸಿದ್ದ ವೈಶಾಖ ವಿಜಯಕುಮಾರ್ ಈಗ ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿರುವ ಭಾರತ ತಂಡದಲ್ಲಿದ್ದಾರೆ. ಪ್ರಸಿದ್ಧ ಕೃಷ್ಣ ಕೂಡ ಭಾರತ ತಂಡದೊಂದಿಗೆ ಇದ್ದಾರೆ. ಅದರಿಂದಾಗಿ ಈಗ ವಾಸುಕಿ ಕೌಶಿಕ್ ಒಬ್ಬರೇ ಹೆಚ್ಚು ಅನುಭವಿಯಾಗಿರುವ ಬೌಲರ್. ಅವರನ್ನು ಬಿಟ್ಟರೆ ವಿದ್ಯಾಧರ ಪಾಟೀಲ ಕೆಲವು ಪಂದ್ಯಗಳನ್ನು ಆಡಿದ್ದಾರೆ. ಇದರಿಂದಾಗಿ ಅಭಿಲಾಷ್ ಶೆಟ್ಟಿ ಪದಾರ್ಪಣೆ ಅವಕಾಶ ಪಡೆಯುವ ಸಾಧ್ಯತೆ ಹೆಚ್ಚಿದೆ.

'ಅಭಿಲಾಷ್ ಅವರನ್ನು ಗಂಭೀರವಾಗಿ ಗಮನಿಸುತ್ತಿದ್ದೇವೆ. ಎಡಗೈವೇಗಿಯಾಗಿರುವ ಅವರು ಉತ್ತಮವಾಗಿ ಆಡಬಹುದು. ಕೌಶಿಕ್ ಅವರು ತಮ್ಮ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದಾರೆ. ವಿದ್ಯಾಧರ (ಪಾಟೀಲ) ಕೂಡ ತಿಮ್ಮಪ್ಪಯ್ಯ ಟ್ರೋಫಿ ಟೂರ್ನಿಯಲ್ಲಿ ಉತ್ತಮವಾಗಿ ಆಡಿದ್ದರು. ಅಲ್ಲದೇ ನಮ್ಮ ಬಳಗದಲ್ಲಿ ಯಶೋವರ್ಧನ್ ಪರಂತಾಪ್ ಇದ್ದಾರೆ. ಅವರು ವೇಗದ ಬೌಲಿಂಗ್ ಆಲ್‌ರೌಂಡರ್ ಆಗಿದ್ದಾರೆ' ಎಂದು ತಂಡದ ಕೋಚ್ ಯರೇ ಗೌಡ ಹೇಳಿದರು.

ಬಂಗಾಳ ತಂಡದ ವೃದ್ಧಿಮಾನ್ ಸಹಾ (ಎಡ) ಅವರನ್ನು ಆಲಂಗಿಸಿ ಅಭಿನಂದಿಸಿದ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್

ಸದ್ಯದ ಸನ್ನಿವೇಶದಲ್ಲಿ ಕರ್ನಾಟಕಕ್ಕೆ ನಾಕೌಟ್ ಹಾದಿಯು ಸುಲಭವಾಗಿಲ್ಲ. ಆದ್ದರಿಂದ ಈಗ ಯಾವುದೇ ಹೊಸ ಪ್ರಯೋಗ ನಡೆಸುವುದು ತುಸು ಸವಾಲಿನದ್ದಾಗಬಹುದು. ಆದರೆ ಈ ಸವಾಲು ಎದುರಿಸುವುದು ತಂಡಕ್ಕೆ ಅನಿವಾರ್ಯವಾಗಿದೆ. ಏಕೆಂದರೆ; ಟೂರ್ನಿಯ ಮೊದಲೆರಡು ಪಂದ್ಯಗಳು ಮಳೆಗೆ ಕೊಚ್ಚಿ ಹೋಗಿದ್ದರಿಂದ ಒಟ್ಟು 2 ಅಂಕಗಳು ಮಾತ್ರ ಸಿಕ್ಕಿದ್ದವು. ಪಟ್ನಾದಲ್ಲಿ ನಡೆದಿದ್ದ ಮೂರನೇ ಪಂದ್ಯದಲ್ಲಿ ಬಿಹಾರ ವಿರುದ್ಧ ಜಯಿಸಿದ್ದು ಕರ್ನಾಟಕ ತಂಡದಲ್ಲಿ ಜೀವಸೆಲೆ ತುಂಬಿದೆ. ಒಟ್ಟು 8 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೇರಿದೆ. ಕೇರಳ (8) ಮತ್ತು ಹರಿಯಾಣ (13) ಕ್ರಮವಾಗಿ ಎರಡು ಮತ್ತು ಒಂದನೇ ಸ್ಥಾನದಲ್ಲಿವೆ. ಆದ್ದರಿಂದ ಕರ್ನಾಟಕ ತಂಡವು ಮುಂದಿನ ಎಲ್ಲ ಪಂದ್ಯಗಳನ್ನು ಜಯಿಸಿದರೆ ಹಾದಿ ಸುಗಮ.

ಮುಖ್ಯಾಂಶಗಳು

- ವೈಶಾಖ ವಿಜಯಕುಮಾರ್, ವಿದ್ವತ್ ಕಾವೇರಪ್ಪ ಅಲಭ್ಯ
- ಬಂಗಾಳ ತಂಡದಲ್ಲಿ ಅಭಿಮನ್ಯು, ಮುಕೇಶ್ ಗೈರು
- ಅಭಿನವ್ ಮನೋಹರ್, ಸ್ಮರಣ್ ಮೇಲೆ ಭರವಸೆ

ಬ್ಯಾಟಿಂಗ್‌ನಲ್ಲಿಯೂ ತಂಡಕ್ಕೆ ನಿಕಿನ್ ಜೋಸ್, ನಾಯಕ ಮಯಂಕ್ ಮತ್ತು ಅನುಭವಿ ಮನೀಷ್ ಪಾಂಡೆ ಅವರೇ ದೊಡ್ಡ ಆಸರೆಯಾಗಬೇಕು. ಈ ವಿಭಾಗದಲ್ಲಿ ದೇವದತ್ತ ಪಡಿಕ್ಕಲ್ ಇಲ್ಲದಿರುವ ಕೊರತೆಯನ್ನು ನೀಗಿಸುವುದು ಹೊಸ ಪ್ರತಿಭೆ ಆರ್. ಸ್ಮರಣ್ ಅವರಿಗಿರುವ ಹೊಣೆ. ಬೀಸುಹೊಡೆತಗಳ ಆಟಗಾರ ಅಭಿನವ್ ಮನೋಹರ್ ಅವರು ಮಧ್ಯಮ ಕ್ರಮಾಂಕಕ್ಕೆ ಬಲ ತುಂಬುವ ಕಾರ್ಯ ಮಾಡಬೇಕಿದೆ. ಉಳಿದಂತೆ ಸ್ಪಿನ್ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಮತ್ತು ಹಾರ್ದಿಕ್ ರಾಜ್ ಅವರ ಮೇಲೆ ವಿಶ್ವಾಸವಿಡಬಹುದು. ಶ್ರೇಯಸ್, ಅಭಿನವ್ ಅವರು ಪಟ್ನಾದ ಪಂದ್ಯದಲ್ಲಿ ಉತ್ತಮವಾಗಿ ಆಡಿದ್ದರು. ಸ್ಪಿನ್ನರ್ ಮೊಹಸೀನ್ ಖಾನ್ ಕೂಡ ಭರವಸೆ ಮೂಡಿಸಿದ್ದರು.

ಬಂಗಾಳ ತಂಡದಲ್ಲಿಯೂ ಇಂತಹದೇ ವರ್ತಮಾನಗಳಿವೆ. ಪ್ರಮುಖ ಬ್ಯಾಟರ್ ಅಭಿಮನ್ಯು ಈಶ್ವರನ್ ಮತ್ತು ವೇಗಿ ಮುಕೇಶ್ ಕುಮಾರ್ ಅವರು ಭಾರತ ಎ ತಂಡದಲ್ಲಿ ಆಡುತ್ತಿದ್ದಾರೆ. ಆದ್ದರಿಂದ ಈ ಪಂದ್ಯಕ್ಕೆ ಅವರು ಲಭ್ಯರಿಲ್ಲ. ಅನುಭವಿ ವೃದ್ಧಿಮಾನ್ ಸಹಾ ಇರುವುದು ತಂಡಕ್ಕೆ ಬಲ.

ಅಂಕಪಟ್ಟಿಯಲ್ಲಿ ಬಂಗಾಳ ತಂಡವು ಕರ್ನಾಟಕದ ನಂತರದ ಸ್ಥಾನದಲ್ಲಿದೆ. ಕಳೆದ 3 ಪಂದ್ಯಗಳಲ್ಲಿಯೂ ಮಳೆಯ ಆಟವೇ ಹೆಚ್ಚು ನಡೆದು ಡ್ರಾ ಆದವು. ಅದರಿಂದಾಗಿ ಅನುಸ್ಟುಪ್ ಮಜುಂದಾರ್ ಬಳಗವು ಜಯಕ್ಕಾಗಿ ಕಾತರಿಸಿದೆ.

ಕರ್ನಾಟಕ ತಂಡವು ಬಂಗಾಳದ ವಿರುದ್ಧ ರಣಜಿ ಪಂದ್ಯ ಜಯಿಸಿ ದಶಕವಾಗಿದೆ. 2014–15ರಲ್ಲಿ ಗೆದ್ದ ನಂತರ 2019ರಲ್ಲಿ ಕೋಲ್ಕತ್ತದಲ್ಲಿ ಸೋತಿತ್ತು. ಆ ಸೋಲಿಗೆ ಈಗ ಮುಯ್ಯಿ ತೀರಿಸಿಕೊಳ್ಳುವ ಸಮಯ ಬಂದಿದೆ.

ಬಲಾಬಲ (ರಣಜಿ)

ಪಂದ್ಯ	16
ಕರ್ನಾಟಕ ಜಯ	4
ಬಂಗಾಳ ಜಯ	5
ಡ್ರಾ	7

ಪಂದ್ಯ ಆರಂಭ: ಬೆಳಿಗ್ಗೆ 9.30

ಬಂಗಾಳ ಎದುರು ಕರ್ನಾಟಕ ಜಯ

ವರ್ಷ	ತಾಣ	ಅಂತರ
1941-42	ಕೋಲ್ಕತ್ತ	17 ರನ್
1978-79	ಬೆಂಗಳೂರು	236 ರನ್
1995-96	ಬೆಂಗಳೂರು	ಇನಿಂಗ್ಸ್–29 ರನ್
2014-15	ಕೋಲ್ಕತ್ತ	9 ವಿಕೆಟ್

ಅಂಕಿ ಸಂಖ್ಯೆ: ಚನ್ನಗಿರಿ ಕೇಶವಮೂರ್ತಿ

ಮುಂಬೈ ತಂಡಕ್ಕೆ ಮರಳಿದ ಶ್ರೇಯಸ್

ಮುಂಬೈ (ಪಿಟಿಐ): ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು ಮುಂಬೈ ತಂಡಕ್ಕೆ ಮರಳಿದ್ದಾರೆ. ಬುಧವಾರ ಆರಂಭವಾಗಲಿರುವ ಎ ಗುಂಪಿನ ಪಂದ್ಯದಲ್ಲಿ ಒಡಿಶಾ ಎದುರು ಅವರು ಆಡಲಿದ್ದಾರೆ. ಆದರೆ ಪೃಥ್ವಿ ಶಾ ಅವರನ್ನು ಕೈಬಿಡಲಾಗಿದೆ.

ತ್ರಿಪುರಾ ಎದುರು ನಡೆದಿದ್ದ ಕಳೆದ ಪಂದ್ಯದಲ್ಲಿ ಶ್ರೇಯಸ್ ಆಡಿರಲಿಲ್ಲ. ವೈಯಕ್ತಿಕ ಕಾರಣಗಳಿಂದಾಗಿ ಅವರು 'ರಜೆ' ಪಡೆದಿದ್ದರು.

ಆರಂಭಿಕ ಬ್ಯಾಟರ್ ಪೃಥ್ವಿ ಅವರನ್ನು ತ್ರಿಪುರ ಪಂದ್ಯಕ್ಕೂ ಕೈಬಿಡಲಾಗಿತ್ತು. ಅಜಿಂಕ್ಯ ರಹಾನೆ ತಂಡದ ನಾಯಕರಾಗಿ ಮುಂದುವರಿದಿದ್ದಾರೆ.

ಜೆದ್ದಾದಲ್ಲಿ ಐಪಿಎಲ್ ಮೆಗಾ ಬಿಡ್ 24ರಿಂದ

ನವದೆಹಲಿ (ಪಿಟಿಐ): ಸೌದಿ ಅರೇಬಿಯಾದ ಜೆದ್ದಾದಲ್ಲಿ ಇದೇ 24 ಮತ್ತು 25 ರಂದು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೆಗಾ ಹರಾಜು ನಡೆಯಲಿದೆ.

ಈ ಬಿಡ್ ಪ್ರಕ್ರಿಯೆಯಲ್ಲಿ ಒಟ್ಟು 1524 ಕ್ರಿಕೆಟಿಗರು ಕಣದಲ್ಲಿದ್ದಾರೆ. ಅವರಲ್ಲಿ 1165 ಮಂದಿ ಭಾರತದ ಆಟಗಾರರಿದ್ದಾರೆ. ಈ ಪಟ್ಟಿಯಲ್ಲಿ 320 ಮಂದಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದವರು ಮತ್ತು 1224 ಮಂದಿ ಅನ್‌ಕ್ಯಾಪ್ಡ್ ಆಟಗಾರರು ಇದ್ದಾರೆ. 30 ಅಸೋಸಿಯೇಟೆಡ್ ರಾಷ್ಟ್ರಗಳ ಆಟಗಾರರು ಕೂಡ ಇದರಲ್ಲಿದ್ದಾರೆ. ಅದರಲ್ಲಿ ಅಮೆರಿಕ, ನೆದರ್ಲೆಂಡ್ಸ್, ಕೆನಡಾ, ಇಟಲಿ, ಯುಎಇ ಮತ್ತು ಸ್ಕಾಟ್ಲೆಂಡ್ ಆಟಗಾರರು ಸೇರಿದ್ದಾರೆ.

ಕ್ಯಾಪ್ಡ್ ಆಟಗಾರರಲ್ಲಿ ಭಾರತದ 48 ಮಂದಿ ಇದ್ದಾರೆ. 965 ಅನ್‌ಕ್ಯಾಪ್ಡ್ ಆಟಗಾರರೂ ಇದ್ದಾರೆ. ಸೋಮವಾರ ಆಟಗಾರರ ನೋಂದಣಿ ಮುಕ್ತಾಯವಾಗಿದೆ. ಅದರಲ್ಲಿ ವಿದೇಶದ 409 ಆಟಗಾರರು ಇದ್ದಾರೆ. ಎರಡನೇ ಬಾರಿ ಐಪಿಎಲ್ ಬಿಡ್ ಪ್ರಕ್ರಿಯೆಯು ವಿದೇಶದಲ್ಲಿ ನಡೆಯುತ್ತಿದೆ. ಹೋದ ವರ್ಷ ದುಬೈನಲ್ಲಿ ಆಯೋಜನೆಯಾಗಿತ್ತು.

ಕೆ.ಎಲ್.ರಾಹುಲ್

ಐಪಿಎಲ್‌ನಲ್ಲಿರುವ ಪ್ರತಿ ತಂಡವೂ ಗರಿಷ್ಠ 25 ಆಟಗಾರ ರನ್ನು (ರಿಟೇನಡ್ ಆಟಗಾರರನ್ನು ಸೇರಿಸಿ) ಸೇರಿಸಿಕೊಳ್ಳಬಹುದು. ಈ ಬಾರಿ ಬಿಡ್‌ನಲ್ಲಿ 204 ಆಟಗಾರರ ಖರೀದಿಗೆ ಅವಕಾಶ ವಿದೆ. ಸದ್ಯ ಎಲ್ಲ 10 ತಂಡಗಳು ಒಟ್ಟು 46 ಆಟಗಾರರನ್ನು ರಿಟೇನ್ ಮಾಡಿಕೊಂಡಿವೆ.

ಈ ಬಿಡ್‌ನಲ್ಲಿ ರಿಷಭ್ ಪಂತ್, ಕೆ.ಎಲ್. ರಾಹುಲ್, ಶ್ರೇಯಸ್ ಅಯ್ಯರ್ ಸೇರಿ ಹಲವು ಖ್ಯಾತನಾಮ ಆಟಗಾರರು ಲಭ್ಯರಿದ್ದಾರೆ.

ಹಾಕಿ : ಕರ್ನಾಟಕಕ್ಕೆ ಸುಲಭ ಜಯ

ಚೆನ್ನೈ (ಪಿಟಿಐ): ಕರ್ನಾಟಕ ತಂಡವು ಸೀನಿಯರ್ ಪುರುಷರ ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಚಂಡಿಗಢ ವಿರುದ್ಧ ಮಂಗಳವಾರ 5–1 ಗೋಲುಗಳ ಗೆಲುವು ದಾಖಲಿಸಿತು. ಇದು ಕರ್ನಾಟಕ ತಂಡಕ್ಕೆ ಎರಡನೆ ಗೆಲುವು.

ಡಿ ಗುಂಪಿನ ಪಂದ್ಯದಲ್ಲಿ ಕರ್ನಾಟಕ ಪರ ಮೊಹಮ್ಮದ್ ರಾಹೀಲ್ ಮೌಸಿನ್ (41 ಮತ್ತು 48ನೇ ನಿ), ಸೂರ್ಯ ಎನ್.ಎಂ (10ನೇ ನಿ), ಭರತ್ ಮಹಾಲಿಂಗಪ್ಪ ಕುರ್ತಕೋಟಿ (19ನೇ ನಿ) ಮತ್ತು ಮಂಜೀತ್ (59ನೇ ನಿ) ಗೋಲು ಹೊಡೆದರು.

ದೆಹಲಿ 6–0 ಗೋಲುಗಳಿಂದ ಜಮ್ಮು ಮತ್ತು ಕಾಶ್ಮೀರ ವಿರುದ್ಧ, ಉತ್ತರಾಖಂಡ ತಂಡ 5–0 ರಿಂದ ತ್ರಿಪುರ ವಿರುದ್ಧ, ಬಂಗಾಳ ತಂಡ 10–0ರಿಂದ ಅಸ್ಸಾಂ ವಿರುದ್ಧ ಜಯ ಗಳಿಸಿದವು.

2036ರ ಒಲಿಂಪಿಕ್ಸ್: ಐಒಸಿಗೆ 'ಆಸಕ್ತಿ ಪತ್ರ' ಸಲ್ಲಿಸಿದ ಭಾರತ

ನವದೆಹಲಿ (ಪಿಟಿಐ): 2036ರ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಆತಿಥ್ಯ ವಹಿಸುವ ಬಯಕೆ ವ್ಯಕ್ತಪಡಿಸಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ 'ಭವಿಷ್ಯದ ಆತಿಥ್ಯ ಆಯ್ಕೆ ಆಯೋಗ'ಕ್ಕೆ (ಫ್ಯೂಚರ್ ಹೋಸ್ಟ್ ಕಮಿಷನ್) ಭಾರತವು 'ಆಸಕ್ತಿ ಪತ್ರ' ಸಲ್ಲಿಸಿದೆ.

ಐಒಸಿ ಜೊತೆ ತಿಂಗಳುಗಳ ಕಾಲ ಅನೌಪಚಾರಿಕ ಮಾತುಕತೆಗಳ ನಂತರ ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ಅಕ್ಟೋಬರ್ 1ರಂದು ಈ ಪತ್ರವನ್ನು ಸಲ್ಲಿಸಿದೆ ಎಂದು ಕ್ರೀಡಾ ಸಚಿವಾಲಯದ ಮೂಲವೊಂದು ತಿಳಿಸಿದೆ. ಆ ಮೂಲಕ ಆತಿಥ್ಯ ವಹಿಸುವ ಪ್ರಯತ್ನದಲ್ಲಿ ಮೊದಲ ಹೆಜ್ಜೆ ಇಟ್ಟಿದೆ.

'ಈ ಬೃಹತ್ ಅವಕಾಶವು, ಭಾರಿ ಪ್ರಮಾಣದಲ್ಲಿ ಅನುಕೂಲಗಳನ್ನು ಮಾಡಿಕೊಡಲಿದೆ. ದೇಶದ ಆರ್ಥಿಕ ಪ್ರಗತಿ, ಸಾಮಾಜಿಕ ಉನ್ನತಿ ಮತ್ತು ಯುವ ಸಬಲೀಕರಣಕ್ಕೆ ಅನುವು ಮಾಡಿಕೊಡಲಿದೆ' ಎಂದು ಮೂಲ ತಿಳಿಸಿದೆ.

2036ರ ಒಲಿಂಪಿಕ್ಸ್ ಆತಿಥ್ಯ ವಹಿಸುವ ಸರ್ಕಾರದ ಬಯಕೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷ ಮೊದಲ ಬಾರಿ ವ್ಯಕ್ತಪಡಿಸಿದ್ದರು.

ಮುಂದಿನ ವರ್ಷದ ಐಒಸಿ ಚುನಾವಣೆಯ ಬಳಿಕವಷ್ಟೇ ಆತಿಥ್ಯ ನಿರ್ಧಾರ ಆಗಲಿದೆ. ಸೌದಿ ಅರೇಬಿಯಾ, ಕತಾರ್ ಮತ್ತು ಟರ್ಕಿ ಸಹ 2036ರ ಕ್ರೀಡೆಗಳ ಆತಿಥ್ಯ ವಹಿಸಲು ಭಾರತಕ್ಕೆ ಪೈಪೋಟಿ ನೀಡಲಿವೆ. ಆತಿಥ್ಯ ನಿರ್ಧರಿಸುವ ಮೊದಲು ಪೈಪೋಟಿಯಲ್ಲಿರುವ ರಾಷ್ಟ್ರಗಳಲ್ಲಿ ಐಒಸಿಯು ಕಾರ್ಯ ಸಾಧ್ಯತಾ ಅಧ್ಯಯನ ಕೈಗೊಳ್ಳಲಿದೆ.

ಯು ಮುಂಬಾಗೆ ಮಣಿದ ಡೆಲ್ಲಿ ದಬಾಂಗ್

ಪ್ಯಾಂಥರ್ಸ್‌ಗೆ ರೋಚಕ ಗೆಲುವು

ಹೈದರಾಬಾದ್ (ಪಿಟಿಐ): ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಮಂಗಳವಾರ ಇಲ್ಲಿ ನಡೆದ ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಯು.ಪಿ. ಯೋಧಾಸ್ ವಿರುದ್ಧ ರೋಚಕ ಜಯ ಸಾಧಿಸಿತು.

ಲೀಗ್ ಹಂತದ 35ನೇ ಪಂದ್ಯದಲ್ಲಿ ಪ್ಯಾಂಥರ್ಸ್ ತಂಡವು 33–30ರಿಂದ ಗೆದ್ದಿತು. ಪಂದ್ಯದ ಅಂತಿಮ ಕ್ಷಣದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿದ ಮಾಜಿ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಯೋಧಾಸ್ ತಂಡವನ್ನು ಮಣಿಸಿತು. ಮೂರು ಪಂದ್ಯಗಳ ನಂತರ ಮತ್ತೆ ಜಯದ ಹಾದಿಗೆ ಮರಳಿತು. ಯೋಧಾಸ್ ತಂಡದ ಭರತ್ (7 ಅಂಕ), ಹಿತೇಶ್ (5 ಅಂಕ), ನಾಯಕ ಸುಮಿತ್ (5 ಅಂಕ) ಅಂಕ ಗಳಿಸಿದರು. ಅತ್ತ ಪ್ಯಾಂಥರ್ಸ್ ಪರ ನೀರಜ್ ನರ್ವಾಲ್ (9 ಅಂಕ), ರೇಜಾ (5 ಅಂಕ) ಮತ್ತು ಅರ್ಜುನ್ ದೇಶ್ವಾಲ್ (5 ಅಂಕ) ಗಮನ ಸೆಳೆದರು.

ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ 35ನೇ ನಿಮಿಷದಲ್ಲಿ ಮಹೇಂದರ್ ಸಿಂಗ್ ಮತ್ತು ಭರತ್ ಅವರನ್ನು ಔಟ್ ಮಾಡಿದ ನೀರಜ್ ಜೈಪುರ ಹೋರಾಟವನ್ನು ಮತ್ತೆ 27-27ರ ಸಮಸ್ಥಿತಿಗೆ ತಂದರು. ಹೀಗಾಗಿ ಪಂದ್ಯ ತೀವ್ರ ರೋಚಕ ಘಟ್ಟಕ್ಕೆ ಹೋಯಿತು. 38ನೇ ನಿಮಿಷದಲ್ಲಿ ಎರಡನೇ ಬಾರಿ ಯೋಧಾಸ್ ತಂಡವನ್ನು ಆಲೌಟ್ ಮಾಡಿದ ಜೈಪುರ, 32-28ರಲ್ಲಿ ಮುನ್ನಡೆ ಸಾಧಿಸಿ ಗೆಲುವಿನತ್ತ ಮುನ್ನಡೆಯಿತು.

ದಿನದ ಮತ್ತೊಂದು ಪಂದ್ಯದಲ್ಲಿ ಯು ಮುಂಬಾ ತಂಡವು 32–26ರಿಂದ ಡೆಲ್ಲಿ ದಬಾಂಗ್ ತಂಡವನ್ನು ಸೋಲಿಸಿತು.

ಪ್ರೊ ಕಬಡ್ಡಿ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ಮತ್ತು ಯು.ಪಿ. ಯೋಧಾಸ್ ಆಟಗಾರರ ಪೈಪೋಟಿ

PRO KABADDI

ಜಾಂಗ್ರಾಗೆ ವಿಶ್ವ ಬಾಕ್ಸಿಂಗ್ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ವೃತ್ತಿಪರ ಬಾಕ್ಸರ್ ಮನ್‌ದೀಪ್ ಜಾಂಗ್ರಾ ಅವರು ಕೇಮನ್ ಐಲ್ಯಾಂಡ್‌ನಲ್ಲಿ ಸೋಮವಾರ ನಡೆದ ಸೆಣಸಾಟದಲ್ಲಿ ಬ್ರಿಟನ್‌ನ ಕಾನರ್ ಮೆಕಿಂಟೋಷ್ ಅವರನ್ನು ಸೋಲಿಸಿ ಡಬ್ಲ್ಯುಬಿಸಿ ವಿಶ್ವ ಬಾಕ್ಸಿಂಗ್ ಫೆಡರೇಷನ್‌ನ ಸೂಪರ್ ಫೆದರ್‌ವೇಟ್ ಚಾಂಪಿಯನ್ ಪಟ್ಟಕ್ಕೇರಿದರು.

31 ವರ್ಷ ವಯಸ್ಸಿನ ಮನ್‌ದೀಪ್ ಅವರು ಒಲಿಂಪಿಕ್ಸ್ ಮಾಜಿ ಬೆಳ್ಳಿ ಪದಕ ವಿಜೇತ ರಾಯ್ ಜೋನ್ಸ್ ಜೂನಿಯರ್ ಅವರಿಂದ ತರಬೇತಿ ಪಡೆಯುತ್ತಿದ್ದು, ವೃತ್ತಿಪರ ಬಾಕ್ಸಿಂಗ್‌ನಲ್ಲಿ ಒಮ್ಮೆ ಮಾತ್ರ ಸೋಲನುಭವಿಸಿದ್ದಾರೆ. ಮೆಕಿಂಟೋಷ್ ವಿರುದ್ಧ ಸೆಣಸಾಟದ ಬಹುತೇಕ ಸುತ್ತುಗಳಲ್ಲಿ ಅವರು ಮೇಲುಗೈ ಸಾಧಿಸಿದರು. ಮನ್‌ದೀಪ್ ನಡೆಸಿದ ಪ್ರಹಾರಗಳ ವೇಗಕ್ಕೆ ಹೊಂದಿಕೊಳ್ಳಲು ಬ್ರಿಟನ್‌ನ ಬಾಕ್ಸರ್ ಪರದಾಡಿದರು.

'ಇದು ನನ್ನ ಬದುಕಿನ ಅತಿ ದೊಡ್ಡ ಗೆಲುವು. ನನ್ನ ಪ್ರಾಯೋಜಕರು, ಕೋಚ್ ರಾಯ್ ಜೋನ್ಸ್, ಸಹಾಯಕ ಕೋಚ್‌ಗಳಿಗೆ ಧನ್ಯವಾದ ಅರ್ಪಿಸುವೆ' ಎಂದು ಅವರು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಈ ಸಾಧನೆಗಾಗಿ ನಾನು ವರ್ಷಗಳ ಕಾಲ ಕಠಿಣ ಶ್ರಮ ಹಾಕಿದ್ದೆ. ದೇಶಕ್ಕೆ ಹೆಮ್ಮೆ ಮೂಡಿಸುವಲ್ಲಿ ಸಫಲನಾಗಿದ್ದಕ್ಕೆ ಸಂತಸವಿದೆ' ಎಂದು ಹರಿಯಾಣದ ಬಾಕ್ಸರ್ ತಿಳಿಸಿದ್ದಾರೆ. 2021ರಲ್ಲಿ ವೃತ್ತಿಪರರಾದ ಅವರು, ತಮ್ಮ ಈ ಸಾಧನೆಯು ಇನ್ನಷ್ಟು ಬಾಕ್ಸರ್‌ಗಳಿಗೆ ವೃತ್ತಿಪರರಾಗಲು ಪ್ರೇರಣೆಯಾಗಲಿದೆ' ಎಂಬ ವಿಶ್ವಾಸ ವ್ಯಕ್ತಪಡಿಸಿದರು.

'ನಮ್ಮ ದೇಶದ ಬಾಕ್ಸರ್‌ಗಳು ಉತ್ತಮವಾಗಿದ್ದಾರೆ. ಅವರಲ್ಲಿ ಪ್ರತಿಭೆಗೆ ಕೊರತೆಯಿಲ್ಲ. ಅವರಿಗೆ ಉತ್ತಮ ಪ್ರಮೋಟರ್‌ಗಳು ಮತ್ತು ಮ್ಯಾನೇಜರ್‌ಗಳು ದೊರೆತರೆ ಅವರೂ ವಿಶ್ವ ಚಾಂಪಿಯನ್ನರಾಗಬಹುದು' ಎಂದು ಜಾಂಗ್ರಾ ಹೇಳಿದರು.

ವೃತ್ತಿಪರರಾದ ಮೇಲೆ 12 ಸೆಣಸಾಟಗಳಲ್ಲಿ ಅವರು 11 ರಲ್ಲಿ ಗೆದ್ದಿದ್ದಾರೆ. ಏಳರಲ್ಲಿ ನಾಕೌಟ್ ಗೆಲುವು ಪಡೆದಿದ್ದಾರೆ. ಅಮೆಚೂರ್ ಆಗಿಯೂ ಅವರ ಸಾಧನೆ ಉತ್ತಮವಾಗಿದ್ದು 2014ರ ಗ್ಲಾಸ್ಗೊ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

ಸಂಕ್ಷಿಪ್ತ ಸುದ್ದಿ

9ನೇ ಸ್ಥಾನಕ್ಕೇರಿದ ಹರ್ಮನ್‌ಪ್ರೀತ್

ದುಬೈ (ಪಿಟಿಐ): ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮಂಗಳವಾರ ಪ್ರಕಟವಾದ ಐಸಿಸಿ ಮಹಿಳೆಯರ ಏಕದಿನ ಕ್ರಿಕೆಟ್ ರ್‍ಯಾಂಕಿಂಗ್ ಬ್ಯಾಟರ್‌ಗಳ ಪಟ್ಟಿಯಲ್ಲಿ ಜಂಟಿ ಒಂಬತ್ತನೇ ಸ್ಥಾನಕ್ಕೇರಿದ್ದಾರೆ. ಸ್ಮೃತಿ ಮಂದಾನ ನಾಲ್ಕನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಭಾರತದ ಸ್ಪಿನ್ನರ್ ದೀಪ್ತಿ ಶರ್ಮಾ ಬೌಲರ್‌ಗಳ ಪಟ್ಟಿಯಲ್ಲಿ ಎರಡನೇ ಸ್ಥಾನ ಇನ್ನಷ್ಟು ಬಲಪಡಿಸಿಕೊಂಡರು.

ಅಥ್ಲೀಟ್ ಕೊಲೆ: ಇಬ್ಬರಿಗೆ ಜೈಲು ಶಿಕ್ಷೆ

ನೈರೋಬಿ (ಎಎಫ್‌ಪಿ): ಯುಗಾಂಡಾದ ಒಲಿಂಪಿಕ್ ಅಥ್ಲೀಟ್ ಬೆಂಜಮಿನ್ ಕಿಪ್ಲಾಗಟ್ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಕೆನ್ಯಾದ ನ್ಯಾಯಾಲಯ ಮಂಗಳವಾರ ಇಬ್ಬರಿಗೆ 35 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿದೆ.

ಸ್ಟೀಪಲ್‌ಚೇಸ್ ಓಟಗಾರ, 34 ವರ್ಷ ವಯಸ್ಸಿನ ಕಿಪ್ಲಾಗಟ್ ಅವರನ್ನು 2023ರ ಡಿಸೆಂಬರ್‌ನಲ್ಲಿ ಇರಿದು ಕೊಲೆ ಮಾಡಿದ್ದ ಪ್ರಕರಣದಲ್ಲಿ ಉಸುರು ಖಲುಮಿ (30) ಮತ್ತು ಡೇವಿಡ್ ಎಕೈ ಲೋಕೆರೆ (25) ಅವರನ್ನು ದೋಷಿಗಳೆಂದು ಎಲ್ಡೊರೆಟ್‌ನ ಹೈಕೋರ್ಟ್ ವಿಚಾರಣೆಯ ನಂತರ ತೀರ್ಪು ನೀಡಿದೆ.

ಮ್ಯಾಚ್ ಫಿಕ್ಸಿಂಗ್: 24 ಆಟಗಾರರಿಗೆ ನಿಷೇಧ

ನವದೆಹಲಿ (ಪಿಟಿಐ): ಮ್ಯಾಚ್ ಫಿಕ್ಸಿಂಗ್ ಆರೋಪದ ಮೇಲೆ ಮೂರು ಕ್ಲಬ್‌ಗಳು, 24 ಆಟಗಾರರು ಮತ್ತು ಮೂವರು ಕ್ಲಬ್ ಅಧಿಕಾರಿಗಳಿಗೆ ಮಿಜೋರಾಂ ಫುಟ್‌ಬಾಲ್ ಸಂಸ್ಥೆ (ಎಂಎಫ್‌ಎ) ನಿಷೇಧ ಹೇರಿದೆ.

ಮಿಜೋರಾಂ ಪ್ರೀಮಿಯರ್ ಲೀಗ್‌ನಲ್ಲಿ ಪಂದ್ಯಗಳ ಫಲಿತಾಂಶದ ಮೇಲೆ ಪ್ರಭಾವ ಬೀರಿದ ಆರೋಪದ ಮೇಲೆ ಮೂರು ಕ್ಲಬ್‌ಗಳಾದ ಸಿಫ್ಹಿರ್ ವೆಂಗ್ಲುನ್ ಎಫ್‌ಸಿ, ಎಫ್‌ಸಿ ಬೆಥ್ಲೆಹೆಮ್ ಮತ್ತು ರಾಮ್‌ಲುನ್ ಅಥ್ಲೆಟಿಕ್ ಎಫ್‌ಸಿ ತಂಡಗಳಿಗೆ ಮೂರು ವರ್ಷ ನಿಷೇಧ ವಿಧಿಸಲಾಗಿದೆ.

ಎಟಿಪಿ ಫೈನಲ್ಸ್: ಹಿಂದೆ ಸರಿದ ಜೊಕೊವಿಚ್

ಬೆಲ್‌ಗ್ರೇಡ್, ಸರ್ಬಿಯಾ, (ಪಿಟಿಐ): ಗಾಯದ ಸಮಸ್ಯೆಯಿಂದ ಬಳಲುತ್ತಿರುವ ಸರ್ಬಿಯಾದ ಟೆನಿಸ್ ತಾರೆ ನೊವಾಕ್ ಜೊಕೊವಿಚ್ ವರ್ಷಾಂತ್ಯದ ಎಟಿಪಿ ಫೈನಲ್ಸ್‌ನಿಂದ ಹಿಂದೆ ಸರಿದಿದ್ದಾರೆ.

ಭಾನುವಾರ ಇಟಲಿಯ ಟ್ಯೂರಿನ್‌ನಲ್ಲಿ ಎಟಿಪಿ ಫೈನಲ್ಸ್ ಆರಂಭವಾಗಲಿದೆ. ಈ ಕೂಟದಲ್ಲಿ ಜೊಕೊವಿಚ್ ದಾಖಲೆಯ ಏಳು ಬಾರಿ ಪ್ರಶಸ್ತಿ ಗೆದ್ದಿದ್ದಾರೆ. ಕಳೆದ ವರ್ಷ ಇಟಲಿಯ ಯಾನಿಕ್ ಸಿನ್ನರ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದಿದ್ದರು.

ಅಂಧರ ಕ್ರಿಕೆಟ್: ಮೈಸೂರು ಶಾಲೆ ಚಾಂಪಿಯನ್

ಮೈಸೂರು: ಆತಿಥೇಯ ಸಮರ್ಥನಂ ಟ್ರಸ್ಟ್ ಮೈಸೂರು ತಂಡವನ್ನು 10 ವಿಕೆಟ್ ಅಂತರದಿಂದ ಸೋಲಿಸಿದ ಮೈಸೂರು ಅಂಧರ ಶಾಲೆ ತಂಡವು ಕರ್ನಾಟಕ ರಾಜ್ಯ ಟಿ10 ಅಂಧರ ಕ್ರಿಕೆಟ್ ಟೂರ್ನಿಯಲ್ಲಿ ಟ್ರೋಫಿ ತನ್ನದಾಗಿಸಿಕೊಂಡಿತು.

ಇಲ್ಲಿನ ಜೆಎಸ್‌ಎಸ್ ಕ್ರಿಕೆಟ್ ಮೈದಾನದಲ್ಲಿ ಮಂಗಳವಾರ ನಡೆದ ಫೈನಲ್ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಸಮರ್ಥನಂ ಟ್ರಸ್ಟ್ ಮೈಸೂರು 10 ಓವರ್‌ಗಳಲ್ಲಿ 3 ವಿಕೆಟ್‌ಗೆ 108 ರನ್ ಗಳಿಸಿತು.

ಆರಂಭಿಕ ಬ್ಯಾಟರ್ ಭಾಸ್ಕರ್ 34 ಎಸೆತದಲ್ಲಿ 7 ಬೌಂಡರಿ ಸಹಿತ 65 ರನ್ ಹೊಡೆದರು. ಹುಸೇನ್ 32 ರನ್ ಗಳಿಸಿದರು. ಅಂಧರ ಶಾಲೆ ತಂಡವು 9.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ ಗುರಿ ತಲುಪಿತು. ಸುಬ್ರಮಣಿ 47 ರನ್ ಕಲೆಹಾಕಿದರೆ, ಎ.ಎಸ್. ಅಭಿ 40 ರನ್ ಗಳಿಸಿ ಗೆಲುವಿಗೆ ಜೊತೆಯಾದರು.

'ಬಿ1' ವಿಭಾಗದಲ್ಲಿ ಹಾವೇರಿ ತಂಡದ ಸಂಜೀವಯ್ಯ, 'ಬಿ2' ವಿಭಾಗದಲ್ಲಿ ಮೈಸೂರು ಅಂಧರ ಶಾಲೆಯ ಎ.ಎಸ್. ಅಭಿ, 'ಬಿ3' ವಿಭಾಗದಲ್ಲಿ ಇದೇ ತಂಡದ ಸುಬ್ರಮಣಿ ಸರಣಿ ಶ್ರೇಷ್ಠ ಆಟಗಾರ ಪ್ರಶಸ್ತಿಗೆ ಭಾಜನರಾದರು.

ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ (ಕೆಸಿಎಬಿ) ಹಾಗೂ ಸಮರ್ಥನಂ ಅಂಗವಿಕಲರ ಸಂಸ್ಥೆಯು ಈ ಟೂರ್ನಿಯನ್ನು ಜಂಟಿಯಾಗಿ ಆಯೋಜಿಸಿದ್ದವು.

ನೆಟ್ಟಕಲ್ಲಪ್ಪ ರಾಷ್ಟ್ರಮಟ್ಟದ ಈಜು 9ರಿಂದ; ಸ್ಕಿನ್ಸ್ ಸ್ಪರ್ಧೆ ಪ್ರಮುಖ ಆಕರ್ಷಣೆ

ಕಣಕ್ಕಿಳಿಯಲಿರುವ 300 ಈಜುಪಟುಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರವು (ಎನ್‌ಎಸಿ) ನವೆಂಬರ್ 9 ಹಾಗೂ 10ರಂದು ಮೂರನೇ ವರ್ಷದ 'ನೆಟ್ಟಕಲ್ಲಪ್ಪ ರಾಷ್ಟ್ರಮಟ್ಟದ ಈಜು ಕೂಟ' ಆಯೋಜಿಸಲಿದೆ.

ಪದ್ಮನಾಭ ನಗರದಲ್ಲಿರುವ ಎನ್‌ಎಸಿ ಈಜುಕೊಳದಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಬೇರೆ ಬೇರೆ ರಾಜ್ಯಗಳ 300 ಈಜುಪಟುಗಳು ಭಾಗವಹಿಸಲಿದ್ದಾರೆ. ಅದರಲ್ಲಿ ಕಳೆದೆರಡು ವರ್ಷ ಗಮನ ಸೆಳೆದಿದ್ದ ಸ್ಕಿನ್ಸ್ ವಿಭಾಗದ ಸ್ಪರ್ಧೆಗಳು ಈ ಸಲವೂ ಆಯೋಜನೆಗೊಳ್ಳಲಿವೆ.

'ಈಜುಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ನಗರದಲ್ಲಿ 2012ರಲ್ಲಿ ಎನ್‌ಎಸಿ ಆರಂಭಿಸಲಾಗಿದೆ. ಕಳೆದೆರಡು ವರ್ಷವೂ ಉತ್ತಮ ಸಂಖ್ಯೆಯಲ್ಲಿ ಈಜುಪಟುಗಳು ಭಾಗವಹಿಸಿದ್ದರು. ಈ ಬಾರಿಯೂ ಕರ್ನಾಟಕದ ನೂರಕ್ಕೂ ಹೆಚ್ಚು ಸ್ಪರ್ಧಿಗಳು ಇದ್ದಾರೆ. ಕೇರಳ, ತಮಿಳುನಾಡು, ಹರಿಯಾಣ, ಗುಜರಾತ್, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳ ಈಜುಪಟುಗಳು ಭಾಗವಹಿಸಲಿದ್ದಾರೆ' ಎಂದು ಕೇಂದ್ರದ ಮುಖ್ಯಸ್ಥ ಡಾ.ವರುಣ್ ನಿಜಾವನ್ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಈ ಚಾಂಪಿಯನ್‌ಷಿಪ್ ಒಟ್ಟು ₹ 10 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ. ಈಜು ಕ್ರೀಡೆ ಮತ್ತು ಈಜುಪಟುಗಳಿಗೆ ಉತ್ತಮ ಪ್ರೋತ್ಸಾಹ ನೀಡುವುದು ನಮ್ಮ ಧ್ಯೇಯ' ಎಂದರು.

ಬೆಂಗಳೂರಿನಲ್ಲಿ ಮಂಗಳವಾರ ನೆಟ್ಟಕಲ್ಲಪ್ಪ ಈಜು ಸ್ಪರ್ಧೆಗಳ ಪತ್ರಿಕಾಗೋಷ್ಠಿಯಲ್ಲಿ ಕೋಚ್ ಶರತ್ ಚಂದ್ರ, ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್ ಮುಖ್ಯಸ್ಥ ವರುಣ್ ನಿಜಾವನ್ (ಎಡದಿಂದ ಎರಡನೇಯವರು), ಕೋಚ್ ಅಂಕುಶ್ ಕಣಬರಕರ್, ಜಿಜೇಶ್ ಜಯನ್ ಅವರು ಪೋಸ್ಟರ್ ಬಿಡುಗಡೆ ಮಾಡಿದರು ಪ್ರಜಾವಾಣಿ ಚಿತ್ರ

'ಒಲಿಂಪಿಯನ್ ಧಿನಿಧಿ ದೇಸಿಂಗು ಈ ಕೂಟದ ಪ್ರಮುಖ ಆಕರ್ಷಣೆಯಾಗಿದ್ದಾರೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಈಜುಪಟುಗಳಾದ ಅಕ್ಷಜಾ ಠಾಕೂರಿಯಾ, ಹಷಿಕಾ ರಾಮಚಂದ್ರ, ಹರ್ಷಿತಾ ಜಯರಾಮ್, ಅನುಮತಿ ಚೌಗುಲೆ, ಎಸ್. ದರ್ಶನ್, ಎಸ್. ದಕ್ಷಣ್, ಎಸ್. ಲಕ್ಷ್ಯ, ಬಿ ಜತೀನ್, ಎ.ಕೆ. ಲಿನೇಶಾ, ಎಸ್. ಸುನೀಶ್, ಎಸ್. ಉನ್ನಿಕೃಷ್ಣನ್, ಸಮರ್ಥ್ ಗೌಡ, ವಿಹಿತಾ ನಯನಾ, ಆಕಾಶ್ ಮಾನ್ ಅವರು ಭಾಗವಹಿಸುವರು' ಎಂದು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದ ಕೋಚ್ ಶರತ್ ಚಂದ್ರ ಹೇಳಿದರು.

'ಅತ್ಯಂತ ರೋಚಕ ಮತ್ತು ಕಠಿಣ ಸ್ಪರ್ಧಾತ್ಮಕವಾದ ಸ್ಕಿನ್ಸ್ (SKINS) ಪೈಪೋಟಿ ಈ ಸಲವೂ ಇರಲಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಇದು ಅತ್ಯಂತ ಜನಪ್ರಿಯ ಮಾದರಿಯಾಗಿದೆ. ಅದರಲ್ಲಿಯೂ ಯುರೋಪ್‌ನಲ್ಲಿ ಹೆಚ್ಚು ನಡೆಯುವ ಸ್ಪರ್ಧೆಯಾಗಿದೆ. ಭಾರತದಲ್ಲಿ ಮೊದಲಿಗೆ ಈ ಮಾದರಿಯನ್ನು ಆಯೋಜಿಸಿದ ಹೆಗ್ಗಳಿಕೆ ನಮ್ಮದಾಗಿದೆ. ಟಿ20 ಕ್ರಿಕೆಟ್ ನಲ್ಲಿರುವಂತಹ ರೋಚಕತೆ ಸ್ಕಿನ್ಸ್‌ನಲ್ಲಿದೆ. 50 ಮೀಟರ್ಸ್ ವಿಭಾಗದ ಸ್ಪರ್ಧೆಗಳಲ್ಲಿ ಸ್ಕಿನ್ಸ್ ನಡೆಯುತ್ತದೆ. ಈಜುಪಟುಗಳ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಕ್ಕೆ ಸವಾಲೊಡ್ಡುವ ಸ್ಪರ್ಧೆ ಇದು' ಎಂದು ವಿವರಿಸಿದರು.

'ಇದಲ್ಲದೇ 100 ಮೀಟರ್ಸ್, 200 ಮೀಟರ್ಸ್ ಮತ್ತು 400 ಮೀಟರ್ಸ್ ವಿಭಾಗಗಳ ಲಾಂಗ್ ಕೋರ್ಸ್ ಸ್ಪರ್ಧೆಗಳು ನಡೆಯಲಿವೆ. ಇದರಿಂದಾಗಿ ಈ ಈಜು ಕೂಟವು ವೈವಿಧ್ಯಮಯವಾಗಿದೆ' ಎಂದು ತಿಳಿಸಿದರು.

'ನ. 9ರಂದು ಸಂಜೆ 5 ಗಂಟೆಗೆ ಒಲಿಂಪಿಯನ್ ಈಜುಪಟು ನಿಶಾ ಮಿಲೆಟ್ ಅವರು ಕೂಟವನ್ನು ಉದ್ಘಾಟಿಸುವರು. ಎರಡೂ ದಿನವೂ ಬೆಳಿಗ್ಗೆ 10 ರಿಂದ ರಾತ್ರಿ 7ರವರೆಗೆ ಈಜು ಸ್ಪರ್ಧೆಗಳು ನಡೆಯಲಿವೆ' ಎಂದರು.

ಸುದ್ದಿಗೋಷ್ಠಿಯಲ್ಲಿ ಕೋಚ್‌ಗಳಾದ ಅಂಕುಶ್, ಜಿಜೇಶ್ ಹಾಜರಿದ್ದರು.

ಎನ್‌ಎಸಿ ಕುರಿತು: ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕಾ ಸಮೂಹದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಕೆ.ಎ. ನೆಟ್ಟಕಲ್ಲಪ್ಪ ಅವರು ಕರ್ನಾಟಕದ ಕ್ರೀಡೆಗೆ ನೀಡಿದ ಕೊಡುಗೆ ಅಪಾರ. ಬ್ಯಾಡ್ಮಿಂಟನ್, ಮೌಂಟೆನರಿಂಗ್ ಮತ್ತು ಅಥ್ಲೆಟಿಕ್ಸ್ ಸೇರಿದಂತೆ ಹಲವು ಸಂಸ್ಥೆಗಳಿಗೆ ನೆರವಾಗಿದ್ದರು.

2012ರಲ್ಲಿ ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್ ಆರಂಭವಾಯಿತು. ಈಜು ಕ್ರೀಡೆಗೆ ಇದುವರೆಗೆ ಮಹತ್ವದ ಕಾಣಿಕೆಗಳನ್ನು ನೀಡಿದ ಹೆಗ್ಗಳಿಕೆ ಈ ಸಂಸ್ಥೆಯದ್ದು.